ಸಾಹಿತ್ಯ ಭಂಡಾರ

ಹುಬ್ಬಳ್ಳಿ 1954

ಬಾಳಿನ ಗಿಡ

ಎಂ. ಹರಿದಾಸರಾಯರು

ಸಾಹಿತ್ಯ ಭಂಡಾರ ಹುಬ್ಬಳ್ಳಿ

R. Ramachandra
I. U. C.

ೂವತ್ತೊಂದನೆಯ ಪ್ರಕಟನೆ:

ಬಾಳಿನ ಗಿಡ

ಸ್ವತಂತ್ರ ಸಾಮಾಜಿಕ ಕಾದಂಬರಿ

ರಾಷ್ಟ್ರಕವಿ ಶ್ರೀಮಾನ್ ಗೋವಿಂದ ಪೈಗಳವರ
ಮುನ್ನುಡಿಯೊಂದಿಗೆ

ಬರೆದವರು:
ಎಂ. ಹರಿದಾಸರಾಯ

ಈ ಕಾ
ಯೋ ಇಲ್ಲ
ದ ಗೋ

ಸಾಹಿತ್ಯ ಭಂಡಾರ, ಹುಬ್ಬಳ್ಳಿ

ತ್ತೊಂದನೆಯ ಪ್ರಕಟನೆ:

ಬಾಳಿನ ಗಿಡ

ಸ್ವತಂತ್ರ ಸಾಮಾಜಿಕ ಕಾದಂಬರಿ

ರಾಷ್ಟ್ರಕವಿ ಶ್ರೀಮಾನ್ ಗೋವಿಂದ ಪೈಗಳವರ
ಮುನ್ನುಡಿಯೊಂದಿಗೆ

ಬರೆದವರು:
ಎಂ. ಹರಿದಾಸರಾಯ

ಸಾಹಿತ್ಯ ಭಂಡಾರ, ಹುಬ್ಬಳ್ಳಿ

ಬೆಲೆ ೨-೮-೦

ಪ್ರಕಾಶಕರು :
ಮ. ಗೋವಿಂದರಾಯರು
ಸಾಹಿತ್ಯ ಭಂಡಾರ
ಹುಬ್ಬಳ್ಳಿ

ಮೊದಲನೆಯ ಮುದ್ರಣ: ೧೯೪೯
ಎರಡನೆಯ ಮುದ್ರಣ: ೧೯೫೪

ಮು
ಮೋಹರೆ ಹ
ಸಂಯುಕ್ತ ಕನಾ

ಮುನ್ನುಡಿ

ಇದೊಂದು ಕಾದಂಬರಿ ಅಥವಾ ಉದ್ದವಾದ ಕಟ್ಟುಕಥೆ. ಉದ್ದವಾದ ಕಥೆಗೆ ಕಾದಂಬರಿ ಎಂಬ ಹೆಸರು ಹೇಗೆ ಬಂತು? ಎಂದರೆ, ಕ್ರಿ. ಶ. ೭ ನೆಯ ಶತಮಾನದಲ್ಲಿ ಹರ್ಷರಾಜನ ಸಮಸಾಮಯಿಕನಾಗಿದ್ದ ಸಂಸ್ಕೃತ ಗದ್ಯ-ಪದ್ಯ ಮಹಾಕವಿಯಾದ ಬಾಣನು ಕಾದಂಬರಿ ಎಂಬ ಹೆಸರಿನ ಅದೊಂದು ಉದ್ದವಾದ ಕಾಲ್ಪನಿಕ ಗದ್ಯಕಥೆಯನ್ನು ರಚಿಸಿದನು. ಆ ತನಕ ಸಂಸ್ಕೃತ ಸಾಹಿತ್ಯದಲ್ಲಿ ವಿಧವಿಧದ ಗದ್ಯಪದ್ಯ ಪ್ರಬಂಧಗಳಿದ್ದರೂ ಕಟ್ಟುಕಥೆ ಇರಲಿಲ್ಲ. ಆ ಕಾರಣದಿಂದ ಅಂದು ಮೊದಲ್ಗೊಂಡು ಉದ್ದವಾದ ಕಟ್ಟುಕಥೆಗೆ ಕಾದಂಬರಿ ಎಂದು ಹೆಸರಾಯಿತು.

ಬಾಣನ ಸಂಸ್ಕೃತ ಕಾದಂಬರಿಯನ್ನು ನಾಗವರ್ಮನು ಚಂಪೂರೂಪದಲ್ಲಿ ಕನ್ನಡಿಸಿದುದಲ್ಲದೆ, ಕನ್ನಡದಲ್ಲೇ ನೇಮಿಚಂದ್ರನ (ಕ್ರಿ. ಶ. ೧೧೭೦) ಲೀಲಾವತಿ ಎಂಬ ಚಂಪೂ ಕಾದಂಬರಿಯೂ ಇದೆ. ಆ ಬಳಿಕ ಕಲಾವತೀ ಪರಿಣಯ (ಕ್ರಿ. ಶ. ೧೮೦೦) ಎಂಬ ಗದ್ಯ ಕಾದಂಬರಿಯೂ ಇದೆ. ಆ ಮೇಲಣ ಕೆಂಪುನಾರಾಯಣನ ಮುದ್ರಾಮಂಜೂಷವನ್ನೂ (ಕ್ರಿ. ಶ. ೧೮೨೩) ಒಂದು ಮಾದರಿಯಾಗಿ ಕಾದಂಬರಿ ಎನ್ನಬಹುದು. ಕ್ರಿ. ಶ. ೧೯೦೦ರ ವರೆಗೆ ಕನ್ನಡದಲ್ಲಿ ಇವಲ್ಲದೆ ಬೇರೆ ಕಾದಂಬರಿಗಳು ಇದ್ದಂತೆ ತೋರುವುದಿಲ್ಲ.

ಆದರೆ ಈ ಕಾದಂಬರಿಯ ಬಿತ್ತು ಮೂಲ ಸಂಸ್ಕೃತವಾಗಲಿ ಕನ್ನಡವಾಗಲಿ ಕಾದಂಬರಿಯಿಂದ ಪಡೆದುದಲ್ಲ. ಬಹುಮುಖವಾದ ಪಾಶ್ಚಾತ್ಯ ಕಾದಂಬರಿಯ ನಿವಿಧ ಜಾತಿಗಳಲ್ಲಿ ಯಾವೊಂದು ಬಗೆಯಿಂದ ಹುಟ್ಟಿರಬೇಕು.

ಮೇ[illegible] ಈ ಕಾದಂಬರಿಯಲ್ಲಿ ಕಥೆ ಎಂಬಷ್ಟರ ಮಟ್ಟಿನ ಕಥೆ ಇಲ್ಲ; ಅಥವಾ ಅಕ[illegible]ಯೇ ಇಲ್ಲವೆಂದರೂ ನಡೆದೀತು. ಉಪಾಧ್ಯಾಯವೃತ್ತಿಯಿಂದ ನಿವೃತ್ತ ಬಾ[illegible] ಗೋವಿಂದರಾಯ ಎಂಬವನೊಬ್ಬನು ತುಳುನಾಡಿನ ಕರೆನಾಡಿನ

ಉಡುಪಿಯ ನೆರೆಯ ಬೈಲೂರಲ್ಲಿ ಇದ್ದ ತನ್ನ ಮನೆಯನ್ನು ಬಿಟ್ಟು ಪಶ್ಚಿಮ ಗಟ್ಟಗಳ ತೀರ ಉಪತ್ಯಕಾ ಪ್ರದೇಶದಲ್ಲಿ ತುಳುನಾಡಿನಲ್ಲೇ ಉಳ್ಳ ಬಂಗಾಡಿಯಲ್ಲಿ ನೆಲಸಿ, ಅಲ್ಲಿಯ ಕಾಡನ್ನು ಹಸನಾಗಿ ಆರಂಭಮಾಡಿ, ಏನೂ ಬೆಳೆಯದ ಆ ಬಂಜರಲ್ಲಿ ಹುಲುಸಾದ ಬೈಲು, ಬೆಟ್ಟು, ಬಾಗ್ಯಾತುಗಳನ್ನು ನಿರ್ಮಿಸಿದ ಕಥೆ. ಕಥೆಯ ಕಾಲಮಾನವನ್ನು ಲೆಕ್ಕಿಸಿದರೆ, ಅದು ಪ್ರಾರಂಭಿಸುವಾಗ ಗೋವಿಂದರಾಯನಿಗೆ ಸರಕಾರದ ಲೆಕ್ಕದಂತೆ ೫೫ ವರ್ಷ ತುಂಬಿ ಆತನು ಕೆಲಸದಿಂದ ನಿವೃತ್ತನಾಗಿದ್ದನಷ್ಟೇ. ಆದರೆ ನಿಜವಾಗಿ ಆತನು ಅದಕ್ಕೂ ೩ ವರ್ಷಕ್ಕೆ ಹಿರಿಯುವನು; ಅಂದರೆ ಆಗ್ಗೆ ಆತನ ನೇರಾದ ವಯಸ್ಸು ೫೮ ವರ್ಷ. ಅಲ್ಲಿಂದ ಕೆಲವೇ ತಿಂಗಳಲ್ಲಿ ಆತನು ಬೈಲೂರಿನಿಂದ ಬಂಗಾಡಿಗೆ ಹೊರಟದ್ದು ೧೯೩೪ನೆಯ ಮೇ ತಿಂಗಳಲ್ಲಿ. ಆತನು ಕಾಲವಾದುದು ಹಾಗೂ ಆದರೊಂದಿಗೆ ಕಾದಂಬರಿಯೂ ಮುಗಿವುದು ೧೯೪೭ ನೆಯ ಆಗೋಸ್ತು ತಿಂಗಳಲ್ಲಿ, ನಮಗೆ ಸ್ವಾತಂತ್ರ್ಯ ದೊರೆತ ಕೆಲವೇನೋ ದಿನಗಳಲ್ಲಿ. ಆಗ್ಗೆ ಆತನಿಗೆ ಸುಮಾರು ೭೦ ರ ಪ್ರಾಯ. ಅಂದರೆ ಈ ಕಥೆಯ ಕಾಲಮಾನ ಹೆಚ್ಚುಕಡಿಮೆ ೧೨-೧೩ ವರ್ಷವಾಗಿರಬೇಕು. ಈ ಕಾದಂಬರಿಯನ್ನು ಓದುವಾಗಲಾದರೆ ಹೆಚ್ಚಾದರೆ ೧-೨ ವರ್ಷವಷ್ಟೇ ವಿನಾ ಅದಕ್ಕಿಂತ ಹೆಚ್ಚು ಹೊತ್ತು ನಡುವೆ ಸಂದಿರುವಂತೆ ಗೋಚರಿಸದು.

ಅಥವಾ ಇದು ಗೋವಿಂದರಾಯನ ಏಕಾಂಗ ಜೀವನದ ಕಥೆ, ಆತನ ನಿವೃತ್ತಾವಸ್ಥೆಯ ಕೊನೆಯ ೧೦-೧೨ ವರ್ಷಗಳ ಕಥೆ ಎಂದರೂ ಸರಿಯೇ. ಇದರಲ್ಲಿ ತುದಿಯಿಂದ ತುದಿವರೆಗೂ ಕಥೆಯಾರೆ ಉಳ್ಳ ವ್ಯಕ್ತಿಯೆಂದರೆ ಅವನೊಬ್ಬನೇ. ಮೊದಲನೆಯವನೂ ಆತ, ಆ ಮೇಲಣವನೂ ಆತ. ಕೊನೆಯವನೂ ಆತನೇ. ಮಿಕ್ಕವರೆಲ್ಲರೂ ಆತನ ಸುತ್ತುಮುತ್ತಲಿನ ಗೌಣ ಪಾತ್ರಗಳಷ್ಟೇ. ಸಂಜೆಯಲ್ಲಿ ನಡುಕೋಣೆಯಲ್ಲಿ ಹಚ್ಚಿಸಿಟ್ಟ ಒಂದು ಬತ್ತಿಯ ದೀಪದಂತೆ, ಕಥೆ ತುಂಬ ಬೆಳಕೆಂದರೆ ಗೋವಿಂದರಾಯನೇ. ಮಿಕ್ಕವರು ಆ ಬೆಳಕಿನಲ್ಲಿ ತೋಚಿ ಮಾಚುವ ನೆರಳುಗಳು. ಅವರಲ್ಲಿ ಹೆಚ್ಚುಕಡಿಮೆ ಆ ಬೆಳಕಿನಷ್ಟೇ ಉದ್ದದ ನೆರಳೆಂದರೆ, ಅಥವಾ ಆ ಬತ್ತಿಯದ್ದೇ ಖಾಸಾ ನೆರಳೆಂದರೆ ಅವನ ಹೆಂಡತಿ ಸೀತಮ್ಮ. ಉಳಿದವರು ಜ[illegible] ಕಾಣುವರು, ಕಂಡಲ್ಲಿಯೇ ಮಾಣುವರು. ರಾಜಾ ಆಗಾಗ್ಗೆ ಹೊಳೆಯುತ್ತಾನೆ, ಆದರೆ ಹೊಳೆದನೆಂಬಷ್ಟರೊಳಗೆ ಇಲ್ಲ. ಒಮ್ಮೆ ಕಂಡ ಶಿವರಾಯು

ಸಿಟ್ಟಿಗೆದ್ದು ಹೋದ ಮೇಲೆ ಅವನ ಪತ್ತೆ ಇಲ್ಲ. ಹರಿ, ಕುಲಕರ್ಣಿಯ ತಂಗಿಯನ್ನು ಒಟ್ಟುಗೂಡಿ ಬಂಗಾಡಿಗೆ ಬಂದಮೇಲೆ, ಅವರಿಗೆ ಮದುವೆ ಆಯಿತೊ, ಇಲ್ಲವೊ, ಅದೂ ಗೊತ್ತಿಲ್ಲ. ಮೋಹನ ಮೈಸೂರಲ್ಲಿ ಬಾಲ ವಿಧವೆ ಸಾವಿತ್ರಿಯನ್ನು ಮದುವೆಯಾಗಿ ಅಲ್ಲಿಯೇ ಇದ್ದುಬಿಟ್ಟ. ರಾಜನ ಹೆಂಡತಿ ಸುಭಾಷಿಣಿ ಅತ್ತೆಮಾವಂದಿರನ್ನು ಬಂಗಾಡಿಯಲ್ಲಿ ಹೊಸಮನೆಗೆ ಮುಟ್ಟಿಸಿದಮೇಲೆ ಅವಳ ಸುದ್ದಿ ಇಲ್ಲ. ಶಿವರಾಯನ ಹೆಂಡತಿಯನ್ನು ಕಂಡದ್ದೇ ಇಲ್ಲ. ಗೋವಿಂದರಾಯನ ಮಗಳಂದಿರು ಗುಲಾಬಿ ಮತ್ತು ಕಮಲಾ ತಮ್ಮ ತಾಯಿ ತಂದೆಯರು ಬೈಲೂರನ್ನುಬಿಟ್ಟು ಹೋಗುವ ಮುಂಚೆ ಅಲ್ಲಿಗೆ ಬಂದುದನ್ನು ಕಂಡುದೇ ಸರಿ. ಆ ಮೇಲೆ ಅವರ ನಾಮನೆಪ್ಪು ಇಲ್ಲ. ಹೀಗೆ ಈ ಕಥೆಯಲ್ಲಿಯ ಎಲ್ಲಾ ಪಾತ್ರಗಳ ಮುಂದನ್ನು ಕುರಿತು ಇದರಲ್ಲಿ ಹೇಳಿಲ್ಲ, ಅಲ್ಲಲ್ಲಿ ಮುಟ್ಟಿ ಬಿಟ್ಟಿದೆಯಷ್ಟೆ. ಗೋವಿಂದರಾಯನದಾದರೆ ಕಣೆಯುವನ್ನು, ಮುಖ್ಯವಾಗಿ ಆತನು ಬಂಗಾಡಿಯಲ್ಲಿ ಗೆಯ್ದು ಸಾಗುವಳಿಯನ್ನು ಕುರಿತು ಬೇಕಾದಷ್ಟು ವಿವರವಾಗಿ ಹೇಳಿದೆ.

ಇಂತಹ ಕಾದಂಬರಿಗಳೂ ಇವೆಯೇ? ಇವೆ, ಆಂಗ್ಲ ಭಾಷೆಯಲ್ಲಿ ಹಲವು ಇವೆ. ಕೆನಡಾ (Canada), ಮಡಗಾಸ್ಕರ್ (Madagascar) ಮೊದಲಾದ ಪ್ರಥಮತಃ ಅತ್ಯಲ್ಪ ಜನಸಂಖ್ಯೆಯುಳ್ಳ ಕೆಂಪು-ಕಪ್ಪು ಜನರ ಪ್ರದೇಶಗಳಲ್ಲಿ, ಆ ವರೆಗೆ ಇನ್ನೂ ನೇಗಿಲ ಗುಳ ಸೀಳಿಲ್ಲದ ಕನ್ನೆಭೂಮಿಯನ್ನು ಯೂರೋಪ್ ಖಂಡದಿಂದ ಅಲ್ಲಿಗಯ್ದಿದ ಬಿಳೀ ಮಂದಿ ಉತ್ತು ಹವಣಿಸಿ ಹುಲುಸಾದ ವಿವಿಧ ಜಾತಿಯ ಪೈರುಗಳನ್ನು ಅಲ್ಲಿಂದ ಎತ್ತಿದ ಉದ್ದುದ್ದ ಕಥೆಗಳು ಹಲವಿವೆ. ಇತ್ತೀಚೆ ಅವುಗಳ ಪೈರು ಕೊಂಚ ಕುಗ್ಗಿದೆಯಾದರೂ ೧೦೦-೧೫೦ ವರ್ಷಗಳ ಹಿಂದೆ ಆಂಗ್ಲ ಸಾಹಿತ್ಯದಲ್ಲಿ ಅಂಥಾ ಕಾದಂಬರಿಗಳು ಬೇಕಾದಷ್ಟು ಇದ್ದುವು.

ಆ ಆ ಪಾತ್ರಗಳ ಕಾರ್ಯಕಲಾಪಗಳ ಘಟನಾ ತರಂಗಗಳೊ ಇಲ್ಲವೆ ಅವರ ಮಾನಸಿಕ ವಿಚಾರಗಳ ಪರಂಪರೆಯೊ ಮೇಲುಗೆಯ್ಯಾಗಿರುವ ಕಾದಂಬರಿಗಳಲ್ಲಿ ಮನಸೋತವರು ಈ ವಿಧದ ಇಷ್ಟೂ ಅಂಕುಡೊಂಕಿಲ್ಲದೆ ಸರಳಿನ ನೆಟ್ಟನೆಯ ಕಾಲುವೆಯಂತೆ ಹರಿಯುವ ಈ ಕಥೆಯಿಲ್ಲದ ಕಥೆಯನ್ನು ಮೆಚ್ಚದಿದ್ದರೆ ಸರಿಯೇ. ಆದರೆ ಇಂತಹದನ್ನೂ ಮೆಚ್ಚುವವರು ಇದ್ದಾರೆ. ಅತ ಏವ ಇಂತಹ ಕಥೆಗೂ ಸಾಹಿತ್ಯದಲ್ಲಿ ಎಡೆಯುಂಟು. ಏಕೆಂದರೆ ಮನುಷ್ಯನ ಬಾಳ್ವೆಯಲ್ಲಿ, ಒಂದು ಕುಟುಂಬದ ಬದುಕಿನಲ್ಲಿ, ಹಿಗ್ಗುತಗ್ಗುಗಳು ಇದ್ದಿರಲೇ

ಬೇಕು, ಅಥವಾ ಅದರ ಕಥೆ ಕಾದಂಬರಿಗೆ ಸಲ್ಲದು ಎಂದು ಬಗೆದರೆ ತಪ್ಪು ಎಷ್ಟೋ ಮನುಷ್ಯರ, ಎಷ್ಟೋ ಕುಟುಂಬಗಳ, ಜೀವನದಲ್ಲಿ ಯಾವ ಬಗೆಯ ತಿರುವುಮುರುವುಗಳೂ ಏರಿಳಿತಗಳೂ ಇಲ್ಲದೆ, ಅವು ತುದಿಯಿಂದ ತುದಿವರೆಗೂ ನೇರವಾಗಿ ಒಂದೇ ಸವನೆ ಸಪಾಟವಾಗಿ ಮಟ್ಟವಾಗಿ ಇಲ್ಲವೇ? ಅಂಥವೇನ ಕಾದಂಬರಿಗೆ ಒಪ್ಪವೇ? ಈ ಕಾದಂಬರಿಯು ಗೋವಿಂದರಾಯನ ಹಾಗೂ ಅವನ ಜತೆಯು ಮಿಕ್ಕವರ ಬಾಳ್ವೆ ಆ ಮಾದರಿಯದು. ಇಂತಹದಕ್ಕೂ ಸಾಹಿತ್ಯದಲ್ಲಿ ಸ್ಥಾನವಿರಬೇಕು, ಸ್ಥಾನವಿದೆ. ಕಥೆಯ, ಕಾದಂಬರಿಯ ಮೇಲ್ಮೆ ಅದರ ಕಥೆಯಲ್ಲೇ ಅಲ್ಲ, ಅದನ್ನು ಹೇಳುವ ಜಾಣ್ಮೆಯಲ್ಲೂ ಇದೆ ಆ ಮೇರೆಗೆ ಈ ಕಾದಂಬರಿಯನ್ನು ಹೇಳಿದೆ.

ಇದರಲ್ಲಿ ತುಳುನಾಡಿನ ಸ್ಥಾನೀಯ ಬಣ್ಣ ಎದ್ದು ಮೂಡುವಂತಿದೆ ತುಳು ಮಾತುಗಳೂ ಅಲ್ಲಲ್ಲಿವೆ, ಗಾದೆಗಳೂ ಇವೆ, ಪಾಡ್ದನೆಯ ಸೊಲ್ಲೂ ಇದೆ. ಮೂವರು ಒಮ್ಮೆ ಒಟ್ಟಿಗೆ ಹೊರಡಬಾರದೆಂಬ ತುಳುನಾಡಿನ ಇತ್ತೀ ಚೆಯವರೆಗಾದರೂ ಅನುಲ್ಲಂಘನೀಯವಾದ ಕಟ್ಟಳೆ ಇದೆ. ನೆಲದಡಿಯಲ್ಲಿ ಹುಗಿದಿರುವ ಕೊಪ್ಪರಿಗೆಯ ಮೇಲ್ಮುರುಹುಗಳಾಗಿ ಮೇಲಣ ಮರಗಳಲ್ಲಿ ಮದನ ಕೈಗಳು ಇಳಿಯುತ್ತವೆಂಬುದು, ತುಳುನಾಡಿನ ಹಳ್ಳಿಗಳಲ್ಲಿ ಪ್ರಾಯಶ ಈಗಲೂ ಬಹುಮಂದಿ ನಂಬಿ ಬರುವ ಸಂಗತಿ, ಇತ್ಯಾದಿ ಇತ್ಯಾದಿ. ಏವಂಚ ಈ ಕಥೆ ತುಳುನಾಡಿನ ಅಚ್ಚಕೂಸು. ಇದರಲ್ಲಿ ಹೊರಗಣ ನೀರು ಗಾಳಿ ಗಳ ಯಾವ ಬೆರಕೆಯೂ ಇಲ್ಲ.

ಈ ಕಾದಂಬರಿಯ ರಚಕರಾದ ಶ್ರೀ ಹರಿದಾಸರಾಯರು ಕನ್ನಡ ಸಾಹಿತ್ಯದ ಆ ಆ ವಿವಿಧ ಕ್ಷೇತ್ರಗಳಲ್ಲಿ ತುಂಬ ಗೇದವರು. ಅತ ಏವ ಅವರ ದೆಂದರೆ ನುರಿತ ನುಡಿ, ಪಳಗಿದ ಕೈ. ಅವರು ಇತೋಽಪ್ಯತಿಶಯವಾದ ಸಣ್ಣ ಕಥೆಗಳನ್ನೂ ಕಾದಂಬರಿಗಳನ್ನೂ ಇತರ ಗ್ರಂಥಗಳನ್ನೂ ಬರೆವಂತೆ ಶ್ರೀ ದೇವರು ಅನುಗ್ರಹಿಸಲಿ ಎಂದು ಹಾರೈಸುತ್ತೇನೆ. ಇತಿ ಶಮ್.

ಗೋವಿಂದ ಪೈ

ಲೇಖಕನ ಅರಿಕೆ

ಮೊದಲನೆಯ ಮುದ್ರಣ

ಭಾರತದಲ್ಲಿ ಬ್ರಿಟಿಷರ ಆಳಿಕೆ ಮೊದಲಾದಂದಿನಿಂದ ಹಳ್ಳಿಯ ಜನ ಪೇಟೆ ಪಟ್ಟಣಗಳಿಗೆ ನದಿಯಂತೆ ಹರಿದು ಬರತೊಡಗಿದರು. ಶ್ರೀಮಂತರು ಸುಖ ವಿಲಾಸ ಬಯಸಿ ಬಂದರು. ಮಧ್ಯಮ ವರ್ಗದವರು ನೌಕರಿ, ಉದ್ಯೋಗ, ವ್ಯಾಪಾರಗಳನ್ನು ಅಪೇಕ್ಷಿಸಿ ನುಸುಳಿದರು. ನಾನಾ ಗ್ರಾಮ ಕೈಗಾರಿಕೆಗಳಿಂದ ಜೀವಿಸುತ್ತಿದ್ದ ಬಡವರೂ ಒಕ್ಕಲುತನದಲ್ಲುದ್ಯುಕ್ತರಾಗಿದ್ದ ರೈತರೂ ನಗರಗಳಲ್ಲಿ ಒಂದೊಂದಾಗಿ ತಲೆ ಎತ್ತಲಾರಂಭಿಸಿದ ಗಿರಣಿ ಹಾಗೂ ಕಾರ್ಖಾನೆಗಳಲ್ಲಿ ಕೂಲಿಕಾರರಾಗಿ ಸೇರಿಕೊಂಡರು. ಒಬ್ಬೊಬ್ಬರು ಒಂದೊಂದು ಕಾರಣದಿಂದ ಹಾಗೂ ಆಶೆಯಿಂದ ಹಳ್ಳಿಯನ್ನು ತೊರೆಯು ವಂತಾಯಿತು. ನಮ್ಮ ನಾಡಿನ ಇಂದಿನ ಅನೇಕ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ಮೂಲ ಇಲ್ಲಿದೆ. ಇದನ್ನರಿತಿದ್ದ ಗಾಂಧೀಜಿ ಯವರು 'ಪುನಃ ಹಳ್ಳಿಗಳಿಗೆ ಹೋಗಿ' ಎಂದು ಪದೇ ಪದೇ ಸಾರಿದು ದುಂಟು. ಅನ್ನದ ಅಭಾವ ಉಂಟಾಗಿರುವ ಈ ಕಾಲದಲ್ಲಿ, 'ಹಳ್ಳಿಗಳಿಗೆ ತಿರುಗಿರಿ. ಹೆಚ್ಚು ಆಹಾರವಸ್ತುಗಳನ್ನು ಬೆಳೆಸಿರಿ' ಎಂದು ಮುಂದಾಳು ಗಳೂ ಮುಂದಾಳುಗಳೂ ಕೂಗುತ್ತಿರುವರು. ಆದರೆ ಆ ಮಾತನ್ನು ಕೃತಿ ಯಲ್ಲಿಳಿಸುವವರು ವಿರಳ. ಮಾತಿನಷ್ಟು ಕೃತಿ ಸುಲಭವೂ ಅಲ್ಲ.

ಈ ಕಾದಂಬರಿಯಲ್ಲಿ, ಕರಾವಳಿಯಲ್ಲಿ ಹುಟ್ಟಿ ಬೆಳೆದು ದೊಡ್ಡವರಾಗಿ ಸೇವಾನಿವೃತ್ತರಾದ ಶಾಲಾ ಉಪಾಧ್ಯಾಯರೊಬ್ಬರು ಮಲೆನಾಡಿನ ಒಂದು ಹಳ್ಳಿಗೆ ತೆರಳಿ, ಕಾಡನ್ನು ಕಡಿದು ಆ ಪಡಭೂಮಿಯಲ್ಲಿ ಅಕ್ಕಿ ಕಂಗು ತೆಂಗು ಗಿಡಗಳನ್ನು ಬೆಳೆಸಿ ಬಾಳಿದುದನ್ನೇ ವರ್ಣಿಸಲಾಗಿದೆ. ಅವರು ಹಳ್ಳಿಗೆ ಅವ ರಿವರು ಹೇಳಿದರೆಂದು ತಿರುಗಿದವರಲ್ಲ. ಪರಿಸ್ಥಿತಿಯ ಒತ್ತಾಯಕ್ಕೆ ಸಿಲುಕಿ ತೆರಳಿದರು. ಮಕ್ಕಳ ಮೇಲಿನ ಪ್ರೇಮದ ಎಳೆ ಅವರನ್ನು ಅಲ್ಲಿಗೆ ಎಳೆದು

ತಂದಿತು. ಅಲ್ಲಿ ಬಂದು ಘೋರಾರಣ್ಯದ ಮಧ್ಯೆ ನೆಲೆಸಿದ ಮೇಲೆ ರೋಗ ರುಜಿನ, ಕಾಡುಪ್ರಾಣಿಗಳ ಹಾವಳಿ, ಮಕ್ಕಳ ಅಗಲಿಕೆ, ಬಡತನ ಮೊದಲಾದ ಅನೇಕ ದೈಹಿಕ ಮತ್ತು ಮಾನಸಿಕ ಕಷ್ಟಪರಂಪರೆಗಳು ಬಂದು ಒಂದರ ಮೇಲೊಂದು ಎರಗಿದರೂ ಹತಾಶರಾಗದೆ ಮಣ್ಣಿಗಂಟಿಕೊಂಡು ಅದನ್ನು ಊರ್ಜಿತಗೊಳಿಸಿದರು. ಮಕ್ಕಳ ಹಿತ ಅಭಿವೃದ್ಧಿಗಳಿಗಾಗಿ ಹಗಲಿರಳು ದುಡಿದರು. ಮಕ್ಕಳ ವಿಚಿತ್ರ ಗುಣ ಸ್ವಭಾವಗಳಿಂದ ತಮಗಾದ ದುಃಖವನ್ನು ನುಂಗಿಕೊಂಡು ಅವರ ಸುಖಕ್ಕೇ ನೆರವಾದರು. ಮಕ್ಕಳ ಹಿತ ಚಿಂತನೆಯಲ್ಲೇ ಕಾಲ ಕಳೆದು ಅವರ ಶ್ರೇಯಸ್ಸನ್ನೇ ಬಯಸಿ, ಅತ್ಯಂತ ಪ್ರೇಮಾತಿಶಯದಿಂದ ತಮ್ಮ ಜೀವನವನ್ನೇ ಧಾರೆಯೆರೆದರು. ಇಂಥ ದಿವ್ಯ ಪ್ರೇಮ, ತ್ಯಾಗ ಮತ್ತು ಸಾಹಸದ ಜೀವನವೇ 'ಬಾಳಿನ ಗಿಡ' ವಾಗಿ ಬೆಳೆದಿದೆ. ಅಂಥ ಜೀವಗಳಿಗೇ ನಿಸರ್ಗವು ಒಲಿಯುತ್ತದೆ, ದೇವರೂ ಒಲಿದಾನು.

ಮಂಗಳೂರು, ಕೊಡಗು, ಕಾರವಾಡ ಹಾಗೂ ಮೈಸೂರಿನ ಶಿವಮೊಗ್ಗ ಜಿಲ್ಲೆ ಮೊದಲಾದ ಈ ಮಲೆನಾಡು ಭಾಗಗಳಲ್ಲಿ 'ಬಾಳಿನ ಗಿಡ'ದಲ್ಲಿ ನಿರೂಪಿಸಿದಂತಹ ಅನೇಕ ಜನರುಂಟು. ಈ ಕಾದಂಬರಿಯ ನಾಯಕನು ಕಾಲ್ಪನಿಕ ವ್ಯಕ್ತಿಯಲ್ಲ. ದಕ್ಷಿಣ ಕನ್ನಡಿಗನಾದ ನಾನು ಆ ಜಿಲ್ಲೆಯ ಮಲೆನಾಡಿನಲ್ಲಿ ಆ ಜೀವವನ್ನು ಕಣ್ಣಾರೆ ಕಂಡಿದ್ದೇನೆ. ನಾನು ಬದುಕಿರುವದೆಷ್ಟು ಸತ್ಯವೊ ಅಷ್ಟೇ ಸತ್ಯ ಈ ಮಾತು. ದಕ್ಷಿಣ ಕನ್ನಡ ಜಿಲ್ಲೆಯ ಕಥೆಯಾಗಿರುವುದರಿಂದ ಆ ಜಿಲ್ಲೆಯಲ್ಲಿ ಹಾಗೂ ಆ ಮಲೆನಾಡಿನಲ್ಲಿ ಬಳಕೆಯಲ್ಲಿರುವ ಅನೇಕ 'ದೇಸಿ' ಪದಗಳನ್ನು ನಾನು ಬಳಸಿಕೊಂಡಿದ್ದೇನೆ. ಕರ್ನಾಟಕದ ಇನ್ನಿತರ ಭಾಗಗಳ ಜನರೂ ಅವುಗಳನ್ನು ಅರಿತುಕೊಳ್ಳಲೆತ್ನಿಸುವುದು ಅನುಚಿತವಲ್ಲ.

ಈ ಕಥೆಯಲ್ಲಿ ನಾಯಕ ನಾಯಕಿಯರೇ ಮುಖ್ಯ. ಹೆಚ್ಚಾಗಿ ಆದಿಯಿಂದ ಅಂತ್ಯದ ವರೆಗೆ ಅವರ ಚಿತ್ರವೇ ವಿಧ ವಿಧದ ಬಣ್ಣಗಳಿಂದ ಬಿಡಿಸಲ್ಪಟ್ಟಿದೆ. ಉಳಿದ ಪಾತ್ರಗಳು ಹಿನ್ನೆಲೆಯಲ್ಲಿವೆ, ಪೋಷಕವಾಗಿ ಅಲ್ಲಲ್ಲಿ ಸುಳಿದು ಹಾಯ್ದು ಹೋಗುತ್ತವೆ. ಇದು ಆಕಸ್ಮಿಕವಲ್ಲ. ನನ್ನ ಉದ್ದೇಶವೇ ಹಾಗಿದೆ. ಮುಖ್ಯ ಪಾತ್ರಗಳ ನಿರೂಪಣೆ, ಪೋಷಣೆಗಳು ಪರಿಪೂರ್ಣವಾಗುವಷ್ಟರಲ್ಲಿ ಕಥೆ ಬಹಳ ಬೆಳೆದುಬಿಟ್ಟಿತು. ಕೊನೆಯ ಒಂದೆರಡು ಅಧ್ಯಾಯಗಳನ್ನೂ ಸಂಕ್ಷೇಪಿಸಬೇಕಾಯ್ತು. ಹೀಗಿರುವಾಗ ಉಳಿದ ವ್ಯಕ್ತಿಗಳ ಚಿತ್ರ

ಗಳನ್ನು ಕಡೆಮುಟ್ಟಿಸಲೆತ್ನಿಸುತ್ತಿದ್ದರೆ ಕಾದಂಬರಿ ಇದರ ಎರಡು ಮೂರರಷ್ಟಾಗುತ್ತಿತ್ತು.

ಈ 'ಬಾಳಿನ ಗಿಡ' ಕಾದಂಬರಿಯ ಹನ್ನೆರಡು ಅಧ್ಯಾಯಗಳನ್ನು ಹನ್ನೆರಡು ದಿನಗಳಲ್ಲಿ ಬರೆದು ಮುಗಿಸಿದ್ದೇನೆ. ಮುಂದಿನ ಅಧ್ಯಾಯ ಬರೆದಾಗ ಹಿಂದಿನದು ಮುದ್ರಣವಾಯ್ತು. ಈ ಅವಸರದ ಕಾರಣದಿಂದ ಕೆಲವು ಮುದ್ರಣ ದೋಷಗಳು ಉಳಿದಿರುವುದನ್ನು ವಾಚಕರು ಕಡೆಗಣಿಸುವರೆಂದು ನಂಬಿದ್ದೇನೆ.

ರಾಷ್ಟ್ರಕವಿ ಶ್ರೀ ಗೋವಿಂದ ಪೈಗಳವರು ಈ ಕಾದಂಬರಿಗೆ ಅಮೂಲ್ಯವಾದ ಮುನ್ನುಡಿಯನ್ನು ಬರೆದು ನನ್ನನ್ನು ಹರಸಿದ್ದಾರೆ. ಅವರ ವಿದ್ವತ್ಪೂರ್ಣ ಮುನ್ನುಡಿ ನನ್ನ ಕೃತಿಗೊಂದು ದಿವ್ಯಾಲಂಕಾರವಾಗಿದೆ. ಅವರಿಗೆ ನಾನು ಅತ್ಯಂತ ಕೃತಜ್ಞನಾಗಿರುವೆನು.

ಹುಬ್ಬಳ್ಳಿ
೧೯೪೯ ನೇ ನವಂಬರ್ ೧೫ } ಎಂ. ಹರಿದಾಸರಾಯ

—•—

ಎರಡನೆಯ ಮುದ್ರಣ

"**ಬಾಳಿನ ಗಿಡ**" ಕನ್ನಡದಲ್ಲೊಂದು ಅತ್ಯುತ್ತಮ ಕಾದಂಬರಿಯೆಂದು ಸಾಹಿತಿಗಳಿಂದ ಮತ್ತು ವಿಮರ್ಶಕರಿಂದ ಪರಿಗಣಿಸಲ್ಪಟ್ಟಿದೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ನನ್ನ ಈ ಅಲ್ಪಕೃತಿಯನ್ನು ಮೆಚ್ಚಿ ಪಾರಿತೋಷಕವನ್ನು ಕೊಟ್ಟಿತು. ಅದಕ್ಕಾಗಿ ಗ್ರಂಥಕರ್ತನು ಸಂಘಕ್ಕೆ ತುಂಬಾ ಕೃತಜ್ಞನಾಗಿದ್ದಾನೆ. ಈಗ ಹುಬ್ಬಳ್ಳಿಯ ಸಾಹಿತ್ಯ ಭಂಡಾರವು ಇದನ್ನು ಪುನಃ ಪ್ರಕಟಿಸಲು ಮುಂದೆ ಬಂದಿದೆ. ನನ್ನ ಎಲ್ಲ ಪುಸ್ತಕಗಳಿಗೆ ಕನ್ನಡದ ಓದುಗರು ತೋರಿದ ಪ್ರೀತ್ಯಾದರಗಳಿಗೂ ಇದನ್ನು ಮತ್ತೆ ಮುದ್ರಿಸಲೊಪ್ಪಿದ ಸಾಹಿತ್ಯ ಭಂಡಾರಕ್ಕೂ ನಾನು ಋಣಿಯಾಗಿದ್ದೇನೆ. ಈ ಮುದ್ರಣದಲ್ಲಿ ಈ ಕಾದಂಬರಿಯಲ್ಲಿ ಬಳಸಿದ ಪ್ರಾದೇಶಿಕ ಶಬ್ದಗಳ ಅರ್ಥವನ್ನು ಕೊನೆಗೆ ಕೊಟ್ಟಿದೆ. ಇವೇ ಪುಟಗಳಲ್ಲಿ ಬೇರೆ ಕಡೆಗೆ ೨-೩ ತಪ್ಪು ಒಪ್ಪುಗಳನ್ನೂ ಕೊಟ್ಟಿದೆ. ಓದುಗರು ಇದರ ಉಪಯೋಗವನ್ನು ಮಾಡಿಕೊಳ್ಳಬೇಕು.

ಹುಬ್ಬಳ್ಳಿ
೧೫—೧೧—೧೯೫೩ } ಎಂ. ಹರಿದಾಸರಾಯ

ಪರಿವಿಡಿ

ತಪ್ಪು ಒಪ್ಪು

ಪುಟ	ಸಾಲು	ತಪ್ಪು	ಒಪ್ಪು
೧೯	೨೫	ಡುಂಡು	ದಂಡು
೮೪	೧೬	ಮರ್ಗಾಯಿ ಮೀನು	ಮರುವಾಯಿ ಮೀನು
೯೩	೨	ಕಡೆದರು.	ಕೆಡೆದರು.

ಬಾಳಿನ ಗಿಡ

೧

ಸಂಜೆಯ ಗಾಳಿ ಬೀಸಲಾರಂಭಿಸಿದೆ. ಮೊದಲು ಮೆಲುವಾಗಿ ಗಾಳಿ ಬಂತು, ತೆರೆತೆರೆಯಂತೆ. ಅದರ ನೈಸೋಂಕಿಗೆ ತೆಂಗಿನ ಮರಗಳ ಗರಿಗಳು ಮೆಲ್ಲಗೆ ಅಲುಗಿದವು. ಗಾಳಿಯ ಭರ ಹೆಚ್ಚಾದಂತೆ ತೋಟದಲ್ಲಿ ನಾದಲಹರಿ ಎದ್ದಿತು. ಈ ಗಾನಕ್ಕೆ ಮನಸೋತ ಗಾಳಿ, ತೆಂಗು ಕಂಗುಗಳ ಮಡಲುಗಳ ಮೇಲೆ ನಲಿಯತೊಡಗಿದೆ. ಭಕ್ತರಂತೆ ಸೋಗೆಗಳು ಸಹಸ್ರ ಚಾಮರ ಸೇವೆ ಸಲ್ಲಿಸುತ್ತಿವೆ. ಹರ್ಷದಿಂದ ತೆಂಗಿನ ಮರಗಳು ಒಂದನ್ನೊಂದು ಆಲಿಂಗಿಸುವಂತೆ ಬಾಗಿದುವು. ಗರಿಗಳ 'ಒಲಿ'ಯ ತುದಿಯಲ್ಲಿದ್ದ ಹಕ್ಕಿಗಳ ಗೂಡುಗಳು ಉಯ್ಯಾಲೆಯಂತೆ ತೂಗಲಾರಂಭಿಸಿದುವು. ಹೊಟ್ಟೆಯ ಮೊಟ್ಟೆ ಮರಿ ಜಗುಳಬಹುದೆಂಬ ಭೀತಿಯಿಂದ ಹಕ್ಕಿಗಳು ಚಿಲಿಪಿಲಿಗುಟ್ಟುತ್ತ ಸೋಗೆಯಿಂದ ಸೋಗೆಗೆ ಮರದಿಂದ ಮರಕ್ಕೆ ಹಾರತೊಡಗಿವೆ. ಗಾಳಿಯ ಸ್ಪರ್ಶಸುಖದಿಂದ ಮದವೇರಿದ ಅಳಿಲು ಇನಿಯಳನ್ನು ಕರೆಯಲು ಪ್ರೇಮಗಾನಕ್ಕೆ ತೊಡಗಿತು. ದೂರದಿಂದ ಹಾರಿಬಂದ ಕಾಗೆ ಸೋಗೆಯ ಮೇಲೆ ಕುಳಿತು ಕೊರಳು ಕೊಂಕಿಸಿ, 'ಕ್ರಾಂ, ಕ್ರಾಂ, ಕ್ರಾಂ' ಎಂದು ಸೊಲ್ಲು ಎತ್ತಿತು. 'ಕ್ರಾಂ, ಕ್ರಾಂ, ಕ್ರಾಂ!'

ಕಾಗೆಯ ರಾಗ ಕೇಳಿದ ಸೀತಮ್ಮನವರು ಮನೆಯೊಳಗಿಂದ ಹೊರಜಗಲಿಗೆ ಬಂದು ಬೆನ್ನು ಬಗ್ಗಿಸಿ, ತೋಟದ ಕಡೆ ನೋಡಿ, 'ನೆಂಟರ ಕಾಗೆ ಇನ್ನೊಮ್ಮೆ ಕೂಗೆಲ! 'ನೆಂಟರ ಕಾಗೆ ಇನ್ನೊಮ್ಮೆ ಕೂಗೆಲ' ಎಂದು ಬಯಸಿ ನುಡಿದರು. ಜಗಲಿಯಲ್ಲೇ ಗೋಡೆಗೊರಗಿ ಕನ್ನಡಕ ಹಾಕಿಕೊಂಡು ಏನನ್ನೋ ಓದುತ್ತ ಕುಳಿತಿದ್ದ ಗೋವಿಂದರಾಯರಿಗೆ ಹೆಂಡತಿಯ ಈ ಮಾತು ಕೇಳಿ ನಗು ಬಂತು. 'ಹಾಂ, ಕಾಗೆ ಶುಭಶಕುನದ ಪಕ್ಷಿ! ಅದರ ಅಂದ ಚಂದ ಬಣ್ಣಿಸಿ ಫಲವಿಲ್ಲ! ತೇಟ್ ಮದಿಮಾಳ್ ಪಕ್ಕಿ!' ಎಂದು ವ್ಯಂಗ್ಯ ಧ್ವನಿ ತೆಗೆದರು.

ಈ ಪರಿಹಾಸದ ಮಾತು ಕೇಳಿ ಸೀತಮ್ಮನವರು ಉತ್ತರ ಕೊಡದೆ ಬಿಡಲಿಲ್ಲ. 'ಕಾಗೆ ಎಂದರೆ ನಿಮಗೆಲ್ಲ ತಾತ್ಸಾರ. ಹೌದು, ಅದು ಥಳಕು ಪಳಕಿನ ಹಕ್ಕಿಯಲ್ಲ. ಆದರೆ, ಆದರ ಗುಣ ಕೋಗಿಲೆಗೂ ಬರಲಿಕ್ಕಿಲ್ಲ.

ಒಂದೊಂದು ಸಂದರ್ಭದಲ್ಲಿ ಅದು ಒಂದೊಂದು ರಾಗ ಎಳೆಯುತ್ತದೆ. ಒಂದಗಳು ಕಂಡರೆ ತನ್ನ ಬಳಗವನ್ನು ಕರೆಯಲು ಎತ್ತುವ ಸ್ವರವೇ ಬೇರೆ. ಒಂದು ಕಾಗೆ ಮರಣಹೊಂದಿದರೆ ಸಾವಿರ ಕಾಗೆಗಳು ಬಂದು ರೆಕ್ಕೆಗಳಿಂದ ಎದೆ ಎದೆ ಬಡೆದುಕೊಂಡು ಅಳುವ ಧ್ವನಿಯೇ ಇನ್ನೊಂದು ತೆರ. ನೆಂಟರು ಬರುವ ಕಾಲಕ್ಕೆ, 'ಕ್ರಾಂ, ಕ್ರಾಂ' ಎಂದು ಶೋಭಾನೆ ಹಾಡಿದರೆ, ಮರಣದ ವಾರ್ತೆ ಮುಟ್ಟುವಾಗ ಅಪಸ್ವರವನ್ನೇ ತೆಗೆಯುತ್ತದೆ. ಕತ್ತಲೆ ಕರಗಿ ಬೆಳಕು ಹರಿಯುವ ಮೊದಲೇ ಎದ್ದು ಜಗತ್ತನ್ನು ಎಚ್ಚರಿಸುವ ಕರ್ತವ್ಯಬುದ್ಧಿ ಅದಕ್ಕುಂಟು. ಅದು ಕೂಗಿದಾಗಲೇ ಬೆಳಗಾಯಿತೆಂದು ತಿಳಿದು ಮುಸುಕ ತಿಕ್ಕಲು ನಾನೂ ಏಳುತ್ತೇನೆ. ಮತ್ತೇನು, ನಮ್ಮ ಮನೆಯಲ್ಲಿ ಗಡಿಯಾರ ಇದೆಯೇನು?' ಎಂದು ಅವರು ಅಣಕಿಸಿದರು.

ಕಾಕಸ್ವರದ ಸತೀಗೀತವನ್ನು ಕೇಳಿ ಗೋವಿಂದರಾಯರಿಗೆ ಇನ್ನಷ್ಟು ನಗು ಬಂದಿತೇನೊ ನಿಜ. ಆದರೆ, 'ಗಡಿಯಾರವಿದೆಯೇನು ಮನೆಯಲ್ಲಿ?' ಎಂದು ಆಡಿದ ಕೊಂಕುನುಡಿ ಮನಸ್ಸಿಗೆ ಬರಲಿಲ್ಲ. 'ನಾನೆಲ್ಲಿ ಬಯ್ದೆ ಮಾರಾಯಿತೀ. ಕಾಗೆಯನ್ನು ಮೈನಾದಂತೆ ಗೂಡಿನಲ್ಲಿಟ್ಟು ಸಾಕಿಬಿಡು, ನನ್ನಡ್ಡಿಯಿಲ್ಲ' ಎಂದವರು ಉತ್ತರವಿತ್ತರು.

'ಸಾಕುತ್ತಿದ್ದೆನಲ್ಲ! ಉಣಲು ನಮಗೇ ಅನ್ನವಿಲ್ಲದಾಗ ಅದಕ್ಕೊಂದು ಮುಷ್ಟಿ ಅಗಳು ಎಲ್ಲಿಂದ ತರಲಿ?' ಎಂದು ಸೀತಮ್ಮವರು ಸಂಸಾರದ ಸ್ಥಿತಿಯನ್ನು ಒಂದೇ ಮಾತಿನಲ್ಲಿ ಬಣ್ಣಿಸಿ, ಒಳಗೆ ನಡೆದರು.

ಸಂಸಾರದ ಸುಖದುಃಖದ ಕರುಳಿನ ಮಾತು ಅವರ ಬಾಯಿಂದ ಜಾರಿದೊಡನೆಯೇ ಗೋವಿಂದರಾಯರು ವಿಹ್ವಲರಾದರು. ಸಂಭಾಷಣೆಯ ಕಾಲಕ್ಕೆ ಮೂಗಿನ ತುದಿಯವರೆಗೆ ಬಂದಿದ್ದ ಕನ್ನಡಕವನ್ನು ಮೆಲ್ಲಗೆ ತೆಗೆದು ಉಟ್ಟ ಬೈರಾಸಿನ ತುದಿಯಿಂದ ಅದರ ಗಾಜುಗಳನ್ನು ಮೃದುವಾಗಿ ಒರಸಿ ಮಡಚಿಟ್ಟರು. ಆ ಮೇಲೆ ಸೊಂಟಕ್ಕೆ ಸಿಕ್ಕಿಸಿದ್ದ ನಸ್ಯದ ಬುರುಡೆಯನ್ನು ತೆಗೆದು ಎಡ ಅಂಗೈಮೇಲೆ ಸುರಿದು, ಬಲಗೈ ಬೆರಳಿನಿಂದ ಚಿಟಿಕೆ ನಸ್ಯವನ್ನು ಮೂಗಿಗೇರಿಸಿ ಎಡಗೈಯಿಂದ ಮತ್ತೆ ಮೂಗನ್ನು ಒರಸಿಕೊಂಡರು. ಒಂದೆರಡು ನಿಮಿಷಗಳ ಮೇಲೆ 'ಹೊ, ಹೊ, ಹೋ!' ಎಂದು ಅವರು ಸೀನುವುದು ಅಡಿಗೆಯ ಮನೆಯವರೆಗೂ ಪ್ರತಿಧ್ವನಿಸುತ್ತಿತ್ತು.

ನಸ್ಯದ ಮಹಿಮೆ ಬಹಳ ದೊಡ್ಡದು. ಮೂಗಿನ ಸೊಳ್ಳೆಗಳು ನಸ್ಯಕ

ಬ್ರಹ್ಮರಂಧ್ರ. ಈ ನಾಳಗಳಿಗೆ ನಸ್ಯ ತುರುಕಿಸಿದೊಡನೆಯೇ ವಿದ್ಯುಚ್ಛಕ್ತಿ ಯಂತೆ ಪರಿಣಾಮ. ನರನಾಡಿಗಳಿಗೆ ಚುರುಕು ಹತ್ತಿ ಅದು ನೆತ್ತಿಗೇರಿ, ಮಿದುಳನ್ನು ಅಲುಗಿಸಿ, ಚಿತ್ತವನ್ನು ಚಿಗುರಿಸುವುದು. ಆದುದರಿಂದಲೇ ಅದನ್ನು 'ಮಿದುಳಿನ ಟಾನಿಕ್' ಎಂದು ಕರೆದವರುಂಟು. ಆಲಸಿಕೆ, ನಿದ್ದೆ, ತೂಕಡಿಕೆ ಮೊದಲಾದ ದೌರ್ಬಲ್ಯಗಳೆಲ್ಲ ಈ ದಿವ್ಯೌಷಧಿಯ ಸೇವನೆಯಿಂದ ಪರಿಹಾರ. ಅದರ ಪ್ರಭಾವದಿಂದ ಹೊಸ ಹಳೆ ಭಾವಗಳೆಲ್ಲ ಸ್ಫುರಿಸತೊಡಗುವವು. ಗೋವಿಂದರಾಯರಿಗಾದರೂ ಅಷ್ಟೆ! ಗೋಡೆಗೊರಗಿ ಕುಳಿತ ಅವರು ಹಿಂದಿನ ಮುಂದಿನ ಸ್ಮರಣೆಗಳಲ್ಲೇ ತಲ್ಲೀನರಾದರು.

ಅವರಿಗೆ ಈಗ ೫೫ ವರುಷಗಳು ದಾಟಿವೆ ಮಾತ್ರ. ಸರಕಾರದ ಲೆಕ್ಕದಂತೆ ಅಷ್ಟು. ಆದರೆ ಜಾತಕವನ್ನು ತೆಗೆದು, ಜನಿಸಿದ ಸಂವತ್ಸರ, ಮಾಸ, ನಕ್ಷತ್ರ ಗಳನ್ನು ಗುಣಿಸಿದರೆ ಮೂರು ವರುಷ ಹೆಚ್ಚಾದೀತು. ಸಣ್ಣವರಿದ್ದಾಗ ಶಾಲೆ ಯಲ್ಲಿ ಮೂರು ವರುಷ ಕಡಿಮೆ ಬರೆಸಿದ್ದರು ಅವರ ತಂದೆ. ಏಕೆಂದರೆ ಅವರು ಶಾಲೆಗೆ ಪ್ರವೇಶಿಸುವಾಗಲೇ ಹತ್ತು ಹನ್ನೆರಡು ವರುಷಗಳಾಗಿದ್ದವು. ಈಗ ಆ ವಯಸ್ಸಿನಲ್ಲಿ ಶಾಲೆಗೆ ಕಾಲಿಟ್ಟರೆ ನಕ್ಕಾರು. ನಿಜ. ನಾಲ್ಕೈದು ವರುಷ ದೊಳಗೆ ಮಕ್ಕಳನ್ನು ಶಾಲೆಗಳಿಗೆ ನೂಕಿಬಿಡುವ ತಂದೆ ತಾಯಂದಿರೇ ಹೆಚ್ಚು. 'ಅ, ಆ, ಇ, ಈ,' ಮೊದಲ್ಗೊಂಡು ಮಕ್ಕಳು ಎಲ್ಲವನ್ನೂ ಶಾಲೆಯಲ್ಲೇ ಕಲಿ ಯಬೇಕು. ಆದರೆ ೫೦-೬೦ ವರ್ಷಗಳ ಹಿಂದೆ ಹೀಗಿರಲಿಲ್ಲ. ಶಾಲೆಗಳಿದ್ದುದೇ ವಿರಳ. ನಗರಗಳಲ್ಲೂ ಒಂದೆರಡೇ ಶಾಲೆಗಳು. ಇದ್ದ ಶಾಲೆಗಳೂ ದೂರ. ವಯ ಸ್ಸಿಗೆ ಬರುವವರೆಗೆ ಉಸುಕು, ಬಳಪಗಳನ್ನು ಉಪಯೋಗಿಸಿ ಮನೆಗಳಲ್ಲೇ ಸ್ವಲ್ಪ ಕಲಿಯುತ್ತಿದ್ದುದು ರೂಢಿ. ಶಾಲೆಗೆ ಸೇರಿದಾಗ ಒಂದೆರಡು ದರ್ಜೆಗಳನ್ನು ಬಿಟ್ಟು ಮೇಲಿನ ದರ್ಜೆಗಳಿಗೆ ಅರ್ಹತೆ ಪಡೆಯುತ್ತಿದ್ದರು. ಆದರೂ ಎಂಟನೇ ಕ್ಲಾಸಿಗೆ ಬಂದಾಗ ಅನೇಕರಿಗೆ ಗಡ್ಡ ಮೀಸೆ ಬರುತ್ತಿತ್ತು. ಮೆಟ್ರಿಕ್ ವರ್ಗದಲ್ಲಿ ಭೀಮಕಾಯರನ್ನೂ ಸಂಸಾರಿಗರನ್ನೂ ಕಾಣಬಹುದಾಗಿತ್ತು. ಗೋವಿಂದ ರಾಯರಿಗೂ ಮೆಟ್ರಿಕ್ ಪರೀಕ್ಷೆ ಮುಗಿದಾಗ ೨೫ ವರುಷ ದಾಟಿತ್ತು. ಆ ಮೇಲೆ ಉದ್ಯೋಗವನ್ನಾರಂಭಿಸಿ, ಈ ೫೫ ವರುಷಗಳ ವರೆಗೂ ದುಡಿದರು. ಸರಕಾರದ ಕಾನೂನಿನನ್ವಯ ಈ ೫೫ಕ್ಕೇ ಅವರು ಸೇವಾನಿವೃತ್ತರಾದರು.

ಹಿಂದೆ ಮೆಟ್ರಿಕ್ ಪಾಸಾದವರು ಸರಕಾರದ ದೊಡ್ಡ ದೊಡ್ಡ ಹುದ್ದೇದಾರ ರಾಗಿದ್ದರು. ಕೆಲವರು ಕಲೆಕ್ಟರರಾದುದೂ ಉಂಟು. ಆದರೆ ಗೋವಿಂದ

ರಾಯರು ಫೇಲಾಗಿದ್ದುದರಿಂದ ಅವರ ಹಣೇಬರಹ ಸ್ವಲ್ಪ ಓರೆಯಾಯಿತು. ಶಾಲಾ ಉಪಾಧ್ಯಾಯರ ಕೆಲಸಕ್ಕೆ ಸೇರಿ, ಒಂದೆರಡು ವರುಷಗಳ ಮೇಲೆ ಟ್ರೇನಿಂಗ್ ಪಡೆದುಕೊಂಡು ಬಂದು ಅದೇ ಕೆಲಸದಲ್ಲಿ ಕೊನೆಯ ವರೆಗೂ ಸ್ಥಿರವಾಗಿ ನಿಂತರು. ಕೆಲಸ ಸ್ಥಿರವಾಗಿದ್ದರೂ ಒಂದೇ ಕಡೆ ಸ್ಥಿರಪಟ್ಟ ಇದ್ದಿಲ್ಲ. ಶಾಲಾ ಮಾಸ್ತರನ್ನು ಇಲ್ಲಿಂದ ಅಲ್ಲಿಗೆ ವರ್ಗಾಯಿಸಿ ಮನಬಂದಂತೆ ಕುಣಿಸುವ ಅಧಿಕಾರಿಗಳ ಆಟ ಚಲ್ಲಾಟ ಹುಚ್ಚಾಟಗಳ ಪರಂಪರೆ ಪ್ರಾಚೀನಕಾಲದಿಂದ ನಡೆದುಬಂದುದು. ಹೆಚ್ಚು ಕಡಿಮೆ ೩೦ ವರುಷಗಳ ತಮ್ಮ ಉಪಾಧ್ಯಾಯ ವೃತ್ತಿಯಲ್ಲಿ ಗೋವಿಂದರಾಯರು ಉಡುಪಿ, ಹಿರಿಯಡ್ಕ, ಮಲ್ಪೆ, ಕಟ್ಪಾಡಿ, ಕಾಪು, ಎರ್ಮಾಳ್, ಪಡುಬಿದ್ರೆ, ಶಿರ್ವ ಮೊದಲಾದ ಉಡುಪಿ ತಾಲೂಕಿನ ಎಲ್ಲ 'ಹೈಯರ್ ಎಲಿಮೆಂಟರಿ' ಶಾಲೆಗಳನ್ನು ನೋಡಿದರು. ಆಗಾಗ ತಾಲೂಕಿನಿಂದ ತಾಲೂಕಿಗೆ ನೆಗೆದುದೂ ಇದೆ. ಸೇವಾನಿವೃತ್ತರಾಗುವ ಒಂದು ವರುಷದ ಮೊದಲು ಹುಟ್ಟೂರಿಗೆ ಸಮೀಪವಿರುವ ಉಡುಪಿಗೆ ಮತ್ತೆ ಮರಳಿದರು.

ಅವರ ಹುಟ್ಟೂರು ಬೈಲೂರು. ಉಡುಪಿಯಿಂದ ಸುಮಾರು ಎರಡು ಮೈಲುಗಳ ದಾರಿ. ಸಣ್ಣ ಹಳ್ಳಿ ಬೈಲೂರು. ಪೂರ್ವದಿಂದ ಪಶ್ಚಿಮಕ್ಕೆ ಉದ್ದಕ್ಕೂ ಬತ್ತದ ಬೈಲು ಸಾಲು. ಬೈಲು ಊರು ಆಗಿದ್ದುದರಿಂದಲೇ ಹಳ್ಳಿಗೆ 'ಬೈಲೂರು' ಎಂದು ಹೆಸರು ಬಂದಂತೆ ತೋರುತ್ತದೆ. ಈ ಬೈಲುಗದ್ದೆಗಳ ಎರಡು ಅಂಚುಗಳಲ್ಲೂ ನೀರು ಹರಿವ ತೋಡುಗಳು. ಅವುಗಳ ಬದಿಗಳಲ್ಲಿ ಬೈಲಿನ ಉತ್ತರ ಮತ್ತು ದಕ್ಷಿಣದ ಉನ್ನತ ಸ್ಥಳಗಳಲ್ಲಿ ಅಲ್ಲೊಂದು ಇಲ್ಲೊಂದು ಮನೆಗಳು. ಮನೆಗಳ ಸುತ್ತುಮುತ್ತು ಬೆಟ್ಟು ಗದ್ದೆಗಳಿರುವುದೂ ಉಂಟು. ಬೆಟ್ಟುಗದ್ದೆಗಳನ್ನು ದಾಟಿದರೆ ಕುರುಚಲು ಗಿಡಗಳಿಂದ ತುಂಬಿದ ಗುಡ್ಡಗಳು. ಅದನ್ನು ದಾಟಿದರೆ ಇಂತಹದೇ ಮತ್ತೊಂದು ಹಳ್ಳಿ. ಈ ಹಳ್ಳಿಗಳಲ್ಲಿ ಹಂಚಿನ ಮನೆಗಳು ಕಡಿಮೆ. ಬಲ್ಲಾಳರ ಮನೆ, ಗುತ್ತಿನ ಸೆಟ್ಟರ ಮನೆ, ದೇವಸ್ಥಾನಗಳಿಗಷ್ಟೇ ಹಂಚು. ಉಳಿದ ಮನೆಗಳೆಲ್ಲ ಮುಳಿಹುಲ್ಲು ಅಥವಾ ಬತ್ತದ ಹುಲ್ಲುಗಳಿಂದ ಹೊದಿಸಲ್ಪಟ್ಟಿವೆ. ಗೋವಿಂದರಾಯರ ಮನೆಯ ಮಾಡಿಗೂ ಬತ್ತದ ಹುಲ್ಲೇ.

ಇದು ಅವರ ಸ್ವಂತ ಮನೆಯೇನೂ ಅಲ್ಲ. ಅವರಿಗೆ ಸ್ವಂತ ಮನೆಯಿಲ್ಲ. ಹುಟ್ಟೂರು ಬೈಲೂರೇನೋ ನಿಜ. ಅವರು ಹುಟ್ಟಿದಾಗ ಹಂಚಿನ ಸ್ವಂತ ಮನೆಯೂ ಇದ್ದಿತು. ಆದರೆ ಅವರ ಅಣ್ಣತಮ್ಮಂದಿರಿಗೆಲ್ಲ ಬುದ್ಧಿ ಬರು

ವಯಸ್ಸಿಗೆ ಹಂಚಿನ ಮನೆ ಉಳಿಯಲಿಲ್ಲ. ಹಿರಿಯರೊಂದಿಗೆ ಅವರು ಮಾಡಿದ ಆಸ್ತಿ ಪಾಸ್ತಿಯೂ ಸಾಲದ ಸಮುದ್ರದಲ್ಲಿ ಮುಳುಗಿತು. ಅಣ್ಣತಮ್ಮಂದಿರೆಲ್ಲ ಬೆಳೆದ ಮೇಲೆ ಹಕ್ಕಿಗಳಂತೆ ಒಂದೊಂದು ಕಡೆ ಹಾರಿಹೋದರು. ತಾಯಿ-ಯೊಂದಿಗೆ ಗೋವಿಂದರಾಯರು ಇದೇ ಊರಲ್ಲಿ ಇರಲು ಬಯಸಿದರು. ಆಸ್ತಿ ನುಂಗಿದ ಬಲ್ಲಾಳರು ಊರಿಂದ ಅವರನ್ನು ಓಡಿಸದೆ, ವಾಸಿಸಲು ಸಣ್ಣ ಗುಡಿಸಲನ್ನು ಕೊಡುವ ಔದಾರ್ಯ ಪ್ರದರ್ಶಿಸಿದರು. ಅವರು ಕಲಿವ ಕಾಲಕ್ಕೆ ತಾಯಿ ಒಬ್ಬೊಂಟಿಗರೇ ಈ ಮನೆಯಲ್ಲಿ ಜೀವ ಹಿಡಿದುಕೊಂಡು ಬದುಕಿದುದೂ ಉಂಟು. ಸೀತಮ್ಮ ಮನೆಗೆ ಬಂದ ಮೇಲೂ ಕೆಲವು ವರುಷಗಳ ವರೆಗೆ ಅವರು ಬದುಕಿದ್ದರು. ಮೊಮ್ಮಕ್ಕಳು ಮರಿ ಹುಟ್ಟಿ ಬೆಳೆವ ಕಾಲಕ್ಕೆ ಅವರು ಕಣ್ಮುಚ್ಚಿದರು. ಅಂದಿನಿಂದ ಸೀತಮ್ಮನವರೇ ಈ ಮನೆಯ ಒಡತಿಯಾಗಿ ಬಾಳಿ ಬದುಕುತ್ತ ಬಂದಿದ್ದಾರೆ. ಗೋವಿಂದರಾಯರಿಗೆ ಆಗಾಗ ವರ್ಗವಾಗುತ್ತಿದ್ದರೂ ಹೋದಲ್ಲಿ ಹೆಂಡತಿ ಮಕ್ಕಳು, ಗಂಟುಮೂಟೆಯನ್ನು ಕಟ್ಟಿಕೊಂಡು ಅವರು ತೆರಳುತ್ತಿದ್ದಿಲ್ಲ. ಶಾಲೆಯ ಸಮೀಪದ ದೇವಸ್ಥಾನದ ಪೌಳಿಯಲ್ಲಿ ಕಟ್ಟಿದ ಚಿಕ್ಕ ಕೋಣೆಯೊಂದನ್ನು ಹಿಡಿದು ತಾವೇ ಕೈ ಬಾಯಿ ಸುಟ್ಟುಕೊಂಡಿದ್ದರು. ವಾರದ ಕೊನೆಯ ರಜಾ ದಿನಗಳೆರಡರಲ್ಲಿ ಅವರ ಸವಾರಿ ಊರಿಗೆ ಬರುತ್ತಿತ್ತು. ಹೀಗೆ ಇಷ್ಟು ವರುಷಗಳ ವರೆಗೆ ಅವರ ಸಂಸಾರರಥ ಸಾಗಿತು.

ಇಷ್ಟರವರೆಗೆ ಚಕ್ರ ತಿರುಗಿತು, ನಿಜ. ಒಮ್ಮೊಮ್ಮೆ ಗಾಲಿ ಕೆಸರಿನಲ್ಲಿ ಹೂತುಹೋದುದೂ ಇದೆ. ಕೊರಕಲು, ಕಲ್ಲು ಮುಳ್ಳು, ಕಾಡುನಾಡು, ಏರು ತಗ್ಗುಗಳ ದಾರಿಯನ್ನು ತುಳಿಯಬೇಕಾಗಿತ್ತು. ಮಕ್ಕಳುಮರಿ, ಅವರ ವಿದ್ಯೆ, ಮದುವೆ ಮುಂಜಿ, ಹುಟ್ಟು ಸಾವುಗಳ ಸುಖ ದುಃಖದ ತೆರೆಗಳ ಇಳಿತ ಭರತಗಳನ್ನು ಅನುಭವಿಸಿದುದುಂಟು. ಸುಖದ ನೆರಳಲ್ಲಿ ದುಃಖ ಕರಿ ಮುಸು-ಕನ್ನು ಹಾಕಿಕೊಂಡೇ ಅಡಗಿ ಕಾಡುತ್ತಿತ್ತು. ಕಷ್ಟದ ಮಡುವಿನಲ್ಲಿ ತೊಳಲಿದಾಗ ಸಂತೋಷದ ಹೆಣ್ಣು ಕಣ್ಣ ಮುಂದೆ ಕುಣಿದು ಮುಗುಳು ನಗೆ ಬೀರಿ ಹರ್ಷ ನೀಡಿದುದುಂಟು. ಯಾವುದೂ ಶಾಶ್ವತವಾಗಿರಲಿಲ್ಲ. ಉದ್ಯೋಗವಿದ್ದುದೊಂದು ಸಮಾಧಾನ; ಯೌವನವಿದ್ದುದೊಂದು ಆಶೆ. ಅವುಗಳ ಬಲವೇ ಎಲ್ಲವನ್ನೂ ಸೈರಿಸುವ ಬಲ. ಅವು ಬಂಡೆಗಲ್ಲಿನಂತೆ ಅಚಲ ಧೈರ್ಯ ಉತ್ಸಾಹಗಳನ್ನು ಕೊಟ್ಟುವು. ಆದರೆ ಈಗ ಎರಡೂ ಕೈಬಿಟ್ಟಿವೆ. ತಲೆ ಹಣ್ಣಾಗಿದೆ. ಕೈಕಾಲುಗಳು ಸಣ್ಣಾಗಿವೆ. ಕಣ್ಣಿನಲ್ಲಿ ತೇಜವಿಲ್ಲ. ಮೈಯಲ್ಲಿ ರಕ್ತದ

ಛಾಯೆ ಕುಂದಿದೆ. ಮೊದಲಿನ ದಾರಿಯಲ್ಲಿ ಹತ್ತು ಮೈಲು ನಡೆದೇನು, ಹತ್ತು ವರುಷ ನಡೆದೇನು ಎಂಬ ಆತ್ಮವಿಶ್ವಾಸವಿಲ್ಲ. ಇನ್ನು ಕೆಲವು ವರುಷಗಳ ಮಾಷ್ಟ್ರ ಕೆಲಸವನ್ನೇ ಮುಂದರಿಸುವುದು ದುಸ್ತರವಿದ್ದಿಲ್ಲ. ದೊಡ್ಡ ದರ್ಜೆಗಳಲ್ಲದಿದ್ದರೆ ಬಾಲಕ ಕೀಲಕ ದರ್ಜೆಯ ಹುಡುಗರಿಗೆ 'ಕಾ, ಕಾ' ಹೇಳಿ ಕೊಡಬಹುದಿತ್ತು. ಆದರೆ ೫೫ ಕ್ಕೆ ನಿವೃತ್ತಿ ಎಂಬ ಕಾನೂನನ್ನು ಮಾಡಿ ಹಾಕಿದ್ದಾರಲ್ಲ! ೫೫ ನೇ ವಯಸ್ಸಿಗೆ ಮನುಷ್ಯ ಮುಟ್ಟಿದೊಡನೆಯೇ ಆವನಿಗೆ ಅಪ್ಪಣೆ! ಅವನನ್ನು ಉದ್ಯೋಗದಿಂದ ನೂಕಿಬಿಡುವರು. ೫೫ರ ಮೇಲೆ ಯಾವ ದಾರಿ? ಈ ಇಳಿವಯಸ್ಸಿನ ದಾರಿಹಿಡಿದಾಗ ಜೀವನಕ್ಕೆ ಯಾವ ಹೊಸ ದಾರಿ? ಯಾವ ದಾರಿ ಹಿಡಿಯಲೂ ಹಿಡಿ ಹಣ ಬೇಕು. ಜೀವನ ನಿರ್ವಾಹ ಮಾಡುವುದೇ ಶಾಲಾ ಮಾಷ್ಟ್ರಿಗೊಂದು ಅಶ್ವಮೇಧ ಯಾಗ ಮಾಡಿದಂತೆ. ಜೀವ ಉಳಿಸುವ ಪ್ರಶ್ನೆಯೇ ಬಗೆಹರಿಯದಿದ್ದಾಗ ಹಣ ಉಳಿಸುವ ಆಶೆ ಸಫಲವೆಲ್ಲಿ? ಇನ್ನಿತರ ಸರಕಾರೀ ನೌಕರರಂತೆ ಶಾಲಾ ಮಾಷ್ಟ್ರಿಗೆ ಪೆನ್ಶನ್ ಸೌಕರ್ಯವಿದ್ದರೆ ಅದೊಂದು ಮಾತು ಬೇರೆ. ಅವರ ಹಣೇಬರಹಕ್ಕೆ ಸರಿಯಾಗಿ 'ಪ್ರಾವಿಡೆಂಟ್ ಫಂಡ್'! ಅದೂ ಪೂರಾ ದೊರೆಯುತ್ತಿದ್ದರೆ ಸಾವಿರಾರು ರೂಪಾಯಿಗಳಾದರೂ ಬರುತ್ತಿತ್ತು. ಮಕ್ಕಳ ಮದುವೆ ಮುಂಜಿಗಳಿಗಾಗಿ ಆ ನಿಧಿಯಿಂದಲೇ ಸಾಲ ಪಡೆದು ತಿಂದು ತೇಗಿದುದರಿಂದ ಉಳಿದುದು ಬರೇ ಐದು ನೂರು.

ಐದು ನೂರು ಐದು ತಿಂಗಳು ಬಂದೀತೆ? ಕೂತುಂಬುವನಿಗೆ ಕುಡಿಕೆ ಹಣ ಸಾಲದು. ಹತ್ತು ಮುಡಿ ಅಕ್ಕಿ ಬೆಳೆ ಬರುವ ಒಂದು ಚಿಕ್ಕ ಆಸ್ತಿಯ ಮೇಲೆ ಇಷ್ಟೇ ಹಣ ಹಾಕಲಾದೀತೇ? ಉಡುಪಿಯ ತೆಂಕುಪೇಟೆಯಲ್ಲಾಗಲಿ, ಸಂತೆ ಕಟ್ಟೆಯಲ್ಲಾಗಲಿ ಒಂದು ಸಣ್ಣ ನಸ್ಯದ ಅಂಗಡಿ ತೆರೆಯಲು ಬರಬಹುದೇ? 'ರಾಮಕೃಷ್ಣಾ! ರಾಮಕೃಷ್ಣಾ!'

'ರಾಮಕೃಷ್ಣಾ! ಮುಕುಂದಾ, ಮಾಧವಾ, ಮಧುಸೂಧನಾ!' ಎಂದು ಎರಡೂ ಅಂಗೈಗಳನ್ನು ಕೆಳಗೆ ಮೇಲೆ ತಿರುಗಿಸುತ್ತಾ ಸೀತಮ್ಮ ಜಗಲಿಗೆ ಬಂದು, 'ಬರೇ ಅಷ್ಟೇ ಏಕೆ? ಕೈಯಲ್ಲಿ ತಾಳ ತಂಬೂರಿ ತೆಗೆದುಕೊಂಡು ಬಿಡಿ! ಪಸಂದಾಗುತ್ತದೆ' ಎಂದು ಮಾತನ್ನೆಸೆದರು.

ಗೋವಿಂದರಾಯರು ಒಮ್ಮಿಂದೊಮ್ಮೆ ಹೌಹಾರಿ, 'ಅಲ್ಲಿಗೇ ಬಂದಿದೇನೆ' ಎಂದರು.

‘ ಅದೇ ಹೇಳಿದೆನಲ್ಲ ?–ರಾಮ, ಕೃಷ್ಣಾ ಎಂದು ಬರೀ ಬಾಯಲ್ಲಿ ಆಡುತ್ತ ಕುಳಿತುಕೊಳ್ಳುವುದು ಬೇಡ; ತಾಳ, ತಂಬೂರಿಯನ್ನು ತೆಗೆದುಕೊಳ್ಳೀಂತ? ಆವಾಗಿಂದ ನಾನು ಒಳಗಿಂದಲೇ ಇಣಕಿ ನೋಡುತ್ತಿದ್ದೇನೆ! ಆಕಾಶವೇ ಕಳಚಿ ಬಿದ್ದವರಂತೆ ತಲೆ ಮೇಲೆ ಕೈ ಇಟ್ಟುಕೊಂಡು ಯೋಚಿಸುತ್ತಿದ್ದಾರೆ! ಏನು ಅಂಥಾ ಮಹಾ ಯೋಚನೆ ? ’

‘ ಅದನ್ನೇ ಯೋಚಿಸುತ್ತಿದ್ದೇನೆ; ಏನು ಮಾಡೋಣ, ಎಲ್ಲಿಗೆ ಹೋಗೋಣ ಎಂದು! ಎಲ್ಲಕ್ಕೂ ನೀನೊಬ್ಬಳಿದ್ದೀಯಲ್ಲ ಮಾರಾಯಿತಿ? ಅದೇ ಬಂದಿರುವುದು ಪೇಚು. ’

‘ ಹೋ, ಹೋ! ನನ್ನಿಂದ ನಿಮಗೆ ಪೇಚು. ನಾನು ಅಡ್ಡ ಬಂದೆ ಅಲ್ಲ! ಅದಕ್ಕಾಗಿ ಇಷ್ಟು ಚಿಂತೆ! ನನಗೇನು ಮಕ್ಕಳುಮರಿ ಇಲ್ಲವೆಂದು ತಿಳಿದಿರೇನು ? ’

‘ ಹೋ, ಹೋ! ಇದ್ದಾರೆ. ಅತಿರಥರು, ಮಹಾರಥರು, ಕುಂಭಕರ್ಣ, ವಿಭೀಷಣರು! ತೊಲೆಭಾರ ತೂಗಿಸಿದ್ದಾರೆ ನಿನಗೆ! ’

‘ ಕುಂಭವಿರಲಿ, ಕರ್ಣನಿರಲಿ; ತೊಲೆಭಾರ ತೂಗಿಸಬೇಕೆಂದು ನಾನು ಇಷ್ಟರವರೆಗೆ ಬಯಸಿಲ್ಲ. ಇನ್ನು ಬಯಸುವುದೂ ಇಲ್ಲ. ದೊಡ್ಡ ಮಗ ರಾಜ ಇದ್ದಾನೆ. ಅವನ ಹೆಂಡತಿ ಮಕ್ಕಳ ಚಾಕರಿ ಮಾಡಿದರೆ ಒಂದು ಮುಷ್ಟಿ ಅನ್ನ ಹಾಕದೆ ಇರಲಾರ. ’

‘ ಎಲ್ಲ ನಾಲ್ಕು ದಿನ! ’

‘ ನಾಲ್ಕು ದಿನ ಇರಲಿ, ಆರು ದಿನ ಇರಲಿ. ಅವನು ಒದ್ದು ಹೊರಗೆ ಹಾಕುವತನಕ ಹೋಗುವುದಿಲ್ಲ. ಹೊರಗೆ ಹಾಕಿದಾಗ ನೋಡಿಕೊಂಡ. ಶಿವರಾಯನಲ್ಲಿ ನಾಲ್ಕು ದಿನ ತೆರಳುತ್ತೇನೆ. ‘ ಮನೆಯೊಳಗೆ ಯಾರೂ ಇಲ್ಲ. ಹೆಂಡತಿಯೊಬ್ಬಳೇ. ಬಾರಮ್ಮ ’ ಎಂದು ಈಗಲೇ ಅವನು ಬಾಯಿ ಬಾಯಿ ಬಿಡುತ್ತಿದ್ದಾನೆ. ’

‘ ಅವನಾ ? ಪಕ್ಕಾ ವ್ಯಾಪಾರಿ. ಕಾಸಿಗೆ ಕಾಸು ಗಂಟುಹಾಕುವವನು! ’

‘ ಅಷ್ಟೊತ್ತಿಗೆ ಹರಿಗೆ ಪರೀಕ್ಷೆ ಮುಗಿದು ಏನಾದರೂ ಕೆಲಸ ದೊರೆತೀತು! ಮೋಹನನೂ ದೊಡ್ಡವನಾಗುತ್ತಾನೆ. ’

‘ ‘ ಅಂತೂ ಮನಸ್ಸಿನೊಳಗೆ ಬಹಳ ಮಂಡಿಗೆ ತಿನ್ನುತ್ತಿದ್ದೀ. ‘ ಆದರೆ ಹೋದರೆ ಹತ್ತೀ ಬೆಳೆದರೆ ’ ಎಂಬ ಗಾದೆ ನಿಂಗೊತ್ತಿಲ್ಲ. ’ ’

' ಗೊತ್ತಿಲ್ಲವೆಂದು ನೀವು ತಿಳಿದುಕೊಂಡಿದ್ದೀರಿ. ಎಲ್ಲ ಗೊತ್ತಿದೆ. ನನಗೆ ಸುಮ್ಮಗೆ ೫೦ ವರುಷ ಆಗಿಲ್ಲ. ನಾಲ್ಕು ಗಂಡು, ಎರಡು ಹೆಣ್ಣು ಮಕ್ಕಳು ದಾರಿಯಲ್ಲಿ ಸಿಕ್ಕಿಲ್ಲ. ಅವನ್ನು ಒಬ್ಬರ ಕೈಗೆ ಹಾಕಿದ ಮಾತ್ರಕ್ಕೆ ಕರುಳು ಕಡಿಯಲಿಲ್ಲ. ಗುಲಾಬಿ ಮನೆಯಲ್ಲಿ ಹತ್ತು ದಿನಗಳಿದ್ದರೆ ಇನ್ನೊಂದು ಹತ್ತು ದಿನ ಕಮಲೆ ಮನೆಗೆ ಹೊಕ್ಕಿದರೆ ತಪ್ಪೇನು? ನನ್ನ ಬಗೆಗೆ ನೀವು ಗುರು-ಗುಂಜಿಯಷ್ಟೂ ವ್ಯಸನಪಡಬೇಡಿ. ನೋಡಿ! ಬಂದಿರುವುದು ನಿಮಗೆ ಪಜೀತಿ. ' ಕೈಯಲ್ಲಿ ಕಾಸಿಲ್ಲ; ಮೈಯಲ್ಲಿ ಬಲವಿಲ್ಲ ' ಎಂದೆನ್ನುತ್ತಾರಲ್ಲ ಪುರಂದರದಾಸರು ! '

ದಾಸರ ಹಾಡಿನ ಈ ಪಲ್ಲವಿ ಕೇಳಿ ಗೋವಿಂದರಾಯರು ಮುಗುಳು ನಕ್ಕರು. ' ಕೈಯಲ್ಲಿ ಕಾಸಿಲ್ಲಂತ ಹಂಗಿಸಬೇಡ ನೋಡು. ಫಂಡಿನ ಹಣ ಬಂದಿದೆ. ಸಂತೆಕಟ್ಟೆಯಲ್ಲೊಂದು ನಸ್ಯದ ಅಂಗಡಿ ತೆರೆದುಬಿಡುತ್ತೇನೆ. '

" ನಸ್ಯದ ಅಂಗಡಿ ತೆರೆಯುತ್ತೀರಿ! ನಾನು ಜೀವದಿಂದಿರುವವರೆಗೆ ಅದೆಲ್ಲ ಸುಳ್ಳು. ಲಗ್ನವಾಗಿ ಇಷ್ಟು ವರುಷವಾದರೂ ಒಂದು ಬಳೆ ಮಾಡಿಸಿಲ್ಲ. ' ಫಂಡಿನ ಹಣ ಬರಲಿ, ಮಾಡಿಸುತ್ತೇನೆ ' ಎಂದು ಹಿಂದೊಮ್ಮೆ ಹೇಳಿದ್ದಿರಿ."

' ಆಯ್ತು. ಪಸಂದ್ ಆಯ್ತು. ಫಂಡಿನ ಹಣದಿಂದ ನಿನಗೆ ನಾಲ್ಕು ಬಳೆ ಮಾಡಿಸಿದರಾಯ್ತು ! ನಿನಗೆ ಇನ್ನು ಯೌವನ ಉಕ್ಕುತ್ತದೆ! ಮೊನ್ನೆ ಮೊನ್ನೆ ಲಗ್ನ ಆಗಿದೆ! ಇದ್ದ ಆರು ಕಾಸು ನಿನಗೆ ಕೊಡುತ್ತೇನೆ; ನೀನು ಮಕ್ಕಳ ಮನೆಗೆ ಹೋಗುತ್ತೀ. ಮತ್ತೆ ನಾನೆಲ್ಲಿ ಕಾಶಿಗೆ ಹೋಗಲಿ? '

' ಕಾಶಿಗೆ ಹೋಗುತ್ತೀರಾ? ಉಡುಪಿಯಲ್ಲಿ ಒಬ್ಬಳು ಕಾಶಿ ಇದ್ದಾಳಲ್ಲ! ' ಸೀತಮ್ಮನವರು ಹೇಳಿ ನಕ್ಕರು.

'' ಹೌದು. ನೀನು ಹೇಳಿದುದು ನಿಜ! ' ಎಂದು ಗೋವಿಂದರಾಯರು ಪುನಃ ಒಂದು ಚಿಟಿಕೆ ನಸ್ಯ ಏರಿಸಿ ಹೇಳಿದರು–'' ಹಾಂ ! ಆ ಕಾಶಿ ಕತೆ ನಿನಗೆ ಹೇಳಿಲ್ಲ ನೋಡು. ಮರೆತು ಬಿಟ್ಟೆ. ಮೊನ್ನೆ ಆದಿತ್ಯವಾರ ನಾನು ಶ್ರೀಕೃಷ್ಣ ದೇವಸ್ಥಾನದಿಂದ ಅದೇ ದಾರಿಯಿಂದ ಬಂದೆ. ನಸ್ಯ ಬೇಕಾಗಿತ್ತು. ಅವಳ ಅಂಗಡಿಗೆ ತೆರಳಿದೆ. ಮಾತಿಗೆ ಮಾತು ಬಂದಾಗ, ' ಮಾಸ್ಟ್ರೆ, ನಿಮಗೆ ಪೆನ್ಸಿಲ್ ಆಗಿದೆಯಂತಲ್ರಿ ಹೌದೇನ್ರೀ? ' ಎಂದು ಕೇಳಿದಳು. ' ಹೌದು, ಕಾಶಮ್ಮ. ಬರೆಯಲಿಕ್ಕೆ ಬೂಕೂ ಇಲ್ಲ. ಏನು ಮಾಡೋಣ? ಬೇರೆ ಕೆಲಸವೂ ಇಲ್ಲ ' ಎಂದೆ.''

ಸೀತಮ್ಮನವರಿಗೆ ನಗು ತಡೆಯಲಾಗಲಿಲ್ಲ. ಸೆರಗಿನ ತುದಿಯನ್ನು ಬಾಯಿಗೆ ತಂದುಕೊಂಡರು.

ಗೋವಿಂದರಾಯರು ನಗುವಿನ ನಡುವೆ ಮಾತು ಮುಂದುವರಿಸಿ– "ಕಾಶಮ್ಮ! ನಸ್ಯ ಕೊಡುವ ಕೆಲಸ ನನಗೆ ಕೊಟ್ಟುಬಿಡು. ನನಗೂ ಹೊತ್ತು ಹೋಗುವುದಿಲ್ಲ' ಎಂದೆ. 'ಅದಕ್ಕೇನಡ್ಡಿ ಮಾಷ್ಟ್ರೇ? ನನಗೆ ಪರಮಗುಣ' ಎಂದು ಬಾಯಿ ಆಗಲಿಸಿದಳು."

ಸತೀತ್ವದ ಅಸೂಯೆಯ ಕಿಡಿ ಸೀತಮ್ಮನವರ ಎದೆಯಲ್ಲಿ ಒಂದು ಕ್ಷಣ ಮಿಂಚಿ, 'ಊಟಕ್ಕೆ ಅವಳಲ್ಲೇ ಹೋಗಬೇಕಾದೀತು' ಎಂದರು.

'ಹಾಂ! ಅದಕ್ಕೇಕೆ ಚಿಂತೆ ಶ್ರೀಕೃಷ್ಣನಿರುವತನಕ! ದಿನಾ ಭೋಜನ ಶಾಲೆಗೆ ತೆರಳಿದರಾಯಿತು.'

'ನಿಮ್ಮೊಡನೆ ಮಾತನಾಡುತ್ತ ಕುಳಿತರೆ ಮಂಗು ಮದಿಮಾಳಾದಿತು! ಬೇಳೆ ಬೇಯಿಸಲು ಹಾಕಿ ಬಂದಿದ್ದೇನೆ. ಏನಾಯಿತೋ ಏನೋ?' ಎಂದುಸುರಿ ಸೀತಮ್ಮ ಒಳಗೆ ಹೊರಳುವಷ್ಟರಲ್ಲಿ 'ಅಮ್ಮಾ! ಅಮ್ಮಾ! ಯಾರೋ ಬರುತ್ತಿದ್ದಾರೆ' ಎಂದು ಕೂಗುತ್ತಾ ಎಂಟು ಹತ್ತು ವರುಷದ ಮೋಹನ ಓಡಿ ಬಂದ.

'ಯಾರೊ? ಯಾರು?' ಎಂದು ಸೀತಮ್ಮನವರು ಜಗಲಿಯ ಅಂಚಿಗೆ ಬಂದು ನಿಲುಕಿದರು. ಗೋವಿಂದರಾಯರು ಒಳಗೆ ತೆರಳಿ ಸಣ್ಣ ಧೋತರವನ್ನುಟ್ಟುಕೊಳ್ಳುತ್ತಾ ಅಂಗಳದ ವರೆಗೆ ಬಂದರು. ಅಂಗಳದ ಮುಂದೆ ತೆಂಗು ಕಂಗುಗಳ ಸಣ್ಣ ತೋಟ. ಅವುಗಳ ಒಳಗಿಂದ ಆಚೆಯ ಬತ್ತದ ಬೈಲನ್ನು ಕಾಣಲು ಸಾಧ್ಯ. ಬೇಸಿಗೆಯಾಗಿದ್ದುದರಿಂದ ಗದ್ದೆಯಲ್ಲಿ ಬತ್ತದ ಬೆಳೆಯಿದ್ದಿಲ್ಲ, ಕೊಯ್ದ ಬತ್ತದ ಬುಡಗಳಷ್ಟೇ ಇವೆ. ಆದುದರಿಂದ ಗದ್ದೆಯ ಒಣಗಿದ ಹುಣಿಯ ಮೇಲಿಂದ ಜನ ಬರುತ್ತಿದ್ದುದು ಗೋವಿಂದರಾಯರ ಮನೆಯಂಗಳ ದಿಂದಲೇ ಕಾಣಲು ಶಕ್ಯ. ಅವರೂ ಕಂಡರು. ಮೋಹನ ಹೇಳಿದಂತೆ ಯಾರೋ ನಡೆದು ಬರುತ್ತಿದ್ದರು. ದೊಡ್ಡ ಆಳು. ಧೋತರದ ಚುಂಗು ಕಾಲಿನ ಪಾದದ ವರೆಗೂ ಹರಿಹಾಯುತ್ತಿದೆ. ಮೇಲೆ ಕೋಟು. ತಲೆಯ ಮೇಲೆ ಏನೂ ಇಲ್ಲ. ಅವನ ಬೆನ್ನ ಹಿಂದೆ ಟ್ರಂಕು ಮತ್ತು ಹಾಸಿಗೆಯನ್ನು ಹೊತ್ತುಕೊಂಡು ಬರುವ ಆಳು. ಈ ದೃಶ್ಯವನ್ನು ನೋಡಿದ ಸೀತಮ್ಮನವರು, "ಬಹುಶಃ ರಾಜ ಬಂದಾ ಎಂದು ತೋರುತ್ತದೆ. ನಡಿಗೆ ಮಾತ್ರ ಹಾಗೇ ಇದೆ. ಮುಂಜಾನೆಯಿಂದ

ಕಾಗೆ ಕೂಡಾ ‘ ಕ್ರಾಂ. ಕ್ರಾಂ’ ಎಂದು ಕರೆಯುತ್ತಿತ್ತು ’’ ಎಂದರು.

‘ ನಿನಗದೇ ಚಿಂತೆ. ನಾನು ಮೊದಲೇ ಹೇಳಿದ್ದೆನಲ್ಲ? ಈಗ ಆವನು ಬರಲು ರಜೆ ಇದೆಯೇನು ? ಬಂದರೆ ಹೆಂಡತಿ ಮಕ್ಕಳನ್ನು ಯಾಕೆ ಬಿಟ್ಟು ಬರುತ್ತಾನೆ? ನಿನ್ನದು ಅಧಿಕ ಪ್ರಸಂಗ’ ಎಂದು ಗೋವಿಂದರಾಯರು ಪ್ರತ್ಯುತ್ತರ ಕೊಟ್ಟರು. ಮೋಹನ ಮಾತ್ರ ನೋಡುತ್ತ ನಿಂತಿರದೆ ತೋಟ-ದೊಳಗಿಂದ ನುಸುಳಿ, ಬೈಲು ಸೇರಿದ. ಕೆಲವು ನಿಮಿಷಗಳಾದ ಮೇಲೆ ಜೀವ ಬಿಡುವವರಂತೆ ಶ್ವಾಸಬಿಡುತ್ತಾ ಓಡಿಬಂದು ‘ ದೊಡ್ಡಣ್ಣ ಬಂದ. ಹೌದು, ದೊಡ್ಡಣ್ಣ !’ ಎಂದುಸುರಿದ. ‘ ಹಾಲನ್ನು ಒಲೆಯಮೇಲಿಟ್ಟು ತರುತ್ತೇನೆ’ ಎಂದು ಸೀತಮ್ಮನವರು ನಾಲ್ಕು ಹೆಜ್ಜೆಗಳಲ್ಲೇ ಮನೆ ಸೇರಿದರು. ಅವರು ಹಾಲು ಹೊರಗೆ ತರುವುದಕ್ಕೂ ‘ ಏನಮ್ಮ ?’ ಎಂದು ಮಗ ಕೇಳುವುದಕ್ಕೂ ಸರಿಹೋಯ್ತು.

೨

ರಾಜ ಅವರ ಹಿರಿ ಮಗ. ರಾಘವ, ರಾಘವೇಂದ್ರ ಮೊದಲಾದವುಗಳೆಲ್ಲ ಎಳೆ ವಯಸ್ಸಿನ ಅವನ ಸರ್ವನಾಮಗಳು. ಶಾಲೆಯಲ್ಲಿ ಹೆಸರು ದಾಖಲು ಮಾಡಿಸಿದುದು ಮಾತ್ರ ರಾಘವೇಂದ್ರನೆಂದು. ಆದರೆ ನಾಮಕರಣ ಮಾಡಿ ದಂದಿನಿಂದಲೂ ಅಚ್ಚುಮೆಚ್ಚಿಂದ ‘ ರಾಜಾ ’ ಎಂದೇ ಕರೆಯುತ್ತಿದ್ದಾರೆ. ಅವನಿ ಗೀಗ ಮೂವತ್ತು ವರುಷವಾಗಿದ್ದರೂ ‘ ರಾಜಾ ’ ಎಂದು ಸಂಬೋಧಿಸಲು ಗೋವಿಂದರಾಯರಿಗೆ ಸಂಕೋಚವಾಗುವುದಿಲ್ಲ. ಮಗ ತನಗಿಂತ ಒಂದು ಮೊಳ ಎತ್ತರ, ಎರಡಂಗುಲ ದಪ್ಪ ಬೆಳೆದು ತಂದೆಯ ಸರಿಸಾಟಿಯಾಗಿದ್ದರೂ ‘ ರಾಜಾ’ ಎಂದು ಕರೆಯಲು ಸೀತಮ್ಮನವರಿಗೆ ಲಜ್ಜೆಯಾಗುವುದಿಲ್ಲ. ಅವನು ಮನೆಗೆ ಬಂದ ಮೇಲೆ, ‘ ರಾಜಾ ! ರಾಜಾ !’ ಎಂದಂದುಕೊಂಡು ನೂರು ಸಲ ಮನೆಯ ಒಳಗಿಂದ ಹೊರಗೆ ಹೊರಗಿಂದ ಒಳಗೆ ಸುತ್ತಿ ಸುಳಿದರು. ‘ ಮಾಣಿ ವಿಜಯ ಹೇಗಿದ್ದಾನೆ? ಪೊಟ್ಟು ಪೊಟ್ಟು ಮಾತನಾಡುತ್ತಾನೋ ?’ ಎಂದು ಒಮ್ಮೆ ಕೇಳುವರು. ‘ ಸುಭಾಷಿಣಿ ಚೆನ್ನಾಗಿದ್ದಾಳಾ ? ಬಂದಾಗ ಆವಳನ್ನು ಕರೆದುಕೊಂಡು ಬರಬಹುದಿತ್ತು !’ ಎಂದು ಮತ್ತೊಮ್ಮೆ ಸೊಸೆಯ ಮಾತನ್ನೆ

ತ್ತುವರು. ತಾಯಿ ಮಗನದೇ ರಾಮಾಯಣ. ಅಣ್ಣ ತಂದಿದ್ದ ಕಲ್ಲುಸಕ್ಕರೆ ದ್ರಾಕ್ಷಿಗಳನ್ನು ಮಂಗನಂತೆ ಬಾಯಿತುಂಬಾ ತುರುಕಿಸಿಕೊಂಡ ಮೋಹನ ಅತ್ತಿಂದಿತ್ತ ಕುಣಿಯುತ್ತಿದ್ದ. ಗೋವಿಂದರಾಯರಿಗೆ ನಸ್ಯದ ಹಂಬಲು. ಹಳೇ ಬುರುಡೆಗಳಲ್ಲಿ ಅವನು ತಂದ ಪೊಟ್ಟಣ ಬಿಚ್ಚಿ ತುಂಬಿಸಲು ಆರಂಭಿಸಿದರು. ಒಂದು ಚಿಟಿಕೆ ಏರಿಸಿ, 'ಅವ್ವಲ್! ಅವ್ವಲ್ ಪುಡಿ! ಉಡುಪಿದ್ದಲ್ಲ. ಇಲ್ಲಿ ಹೊಗೆಸೊಪ್ಪು ಕರಿ ಮಾಡಿಬಿಡುತ್ತಾರೆ. ಸರಿಯಾಗಿ ತುಪ್ಪ ಸುಣ್ಣವನ್ನು ಬೆರ ಸುವುದಿಲ್ಲ. ಎಲ್ಲಿ ಮಂಗಳೂರಿಂದ ತಂದೆಯಾ?' ಎಂದು ನಡುವೆ ಪ್ರಶ್ನಿಸಿದರು.

'ಹೌದು. ಅವಳೂ ತವರುಮನೆಗೆ ತೆರಳದೆ ಬಹಳ ಸಮಯವಾಗಿತ್ತು. ಮಗುವನ್ನು ನೋಡಬೇಕೆಂದು ಅಲ್ಲಿ ಬಹಳ ಆಸೆಪಡುತ್ತಿದ್ದರು. ಹೇಗೂ ನಾಲ್ಕು ದಿನ ರಜೆ ತೆಗೆದುಕೊಂಡಿದ್ದೆ. ಒಬ್ಬಳನ್ನೇ ಬಿಟ್ಟು ಬರುವುದರ ಬದಲು ಮಂಗಳೂರಿಗೆ ಕಳಿಸಿಬಂದೆ.'

'ನಾಲ್ಕೇ ದಿನ ರಜೆ?' ಎಂದು ಸೀತಮ್ಮನವರು ಉದ್ಗಾರ ತೆಗೆದರು.

'ಅಯ್ಯೋ! ಅಷ್ಟು ದೊರೆತುದೂ ಪುಣ್ಯ. ಒಂದು ಕ್ಷಣ ಪುರುಸೊತ್ತಿಲ್ಲ. ಯಾವಾಗಲೂ ಸರ್ಕೀಟ್. ಒಂದು ವಾರ ಬೆಳ್ತಂಗಡಿಯಲ್ಲಿದ್ದರೆ ಮೂರು ವಾರ ಹಳ್ಳಿಗಳಲ್ಲಿ ಸಂಚಾರ.'

'ಅಂಥ ಕೆಲಸವೇನು' ಎಂದು ಯಾರೂ ಕೇಳಲಿಲ್ಲ. ರಾಜನ ಕೆಲಸದ ಆದಿಪುರಾಣಗಳೆಲ್ಲ ಅವರಿಗೆ ಗೊತ್ತು. ಮೊದಲು ಅವನು ತಾಲೂಕು ಪಂಚಾ ಯತ್ ಬೋರ್ಡ್ ಇಲಾಖೆಯಲ್ಲಿ ಗುಮಾಸ್ತನಾಗಿದ್ದ. ಆ ಮೇಲೆ ಪಂಚ್ಯಾತ್ ಸುಪರ್‌ವೈಜರ್ ಕೆಲಸ ಲಭಿಸಿತು. ಪುತ್ತೂರು ತಾಲೂಕಿನ ಬೆಳ್ತಂಗಡಿ ಅವನ ಕೇಂದ್ರ. ಅದರ ಸುತ್ತುಮುತ್ತಲಿನ ಹಳ್ಳಿಗಳೆಲ್ಲ ಅವನ ಕಾರ್ಯಕ್ಷೇತ್ರ. ಈ ಸಣ್ಣ ಪಟ್ಟಣಕ್ಕೆ ಪುತ್ತೂರು ಮಂಗಳೂರಿಂದ ಮೋಟಾರ್ ಸೌಕರ್ಯವಿದೆ. ಬೆಳ್ತಂಗಡಿ ಮಾರ್ಗವಾಗಿ ಚಾರ್ಮಾಡಿ ವರೆಗಿನ ಘಾಟಿಗೆ ಮೋಟಾರ್ ಲೈನ್ ಕೂಡಾ ಇದೆ. ಬೆಳ್ತಂಗಡಿಯಿಂದ ಚಾರ್ಮಾಡಿಗೆ ತೆರಳುವ ದಾರಿಯಲ್ಲೇ ಉಜ್ರೆ, ನಿಡಿಗಲ್, ಮುಂಡಾಜೆಗಳು ಸಿಗುವವು. ಅವು ಹಳ್ಳಿಗಳೆಂದರೆ ಹಳ್ಳಿಗಳಲ್ಲ, ಪೇಟೆಗಳೆಂದರೆ ಪೇಟೆಗಳಲ್ಲ. ರಸ್ತೆಯ ಬದಿಯಲ್ಲಿ ಸಾಲಾಗಿ ಹತ್ತೈವತ್ತು ಅಂಗಡಿ ಮತ್ತು ಮನೆಗಳು, ಅಷ್ಟೆ. ಈ ಮಂಗಳೂರು ಚಾರ್ಮಾಡಿ ರಾಜ ಮಾರ್ಗದ ತೆಂಕು ದಿಕ್ಕಿನಲ್ಲಿ ನೆರಿಯ, ಧರ್ಮಸ್ಥಳ ಊರುಗಳು. ಬಡಗು ಬದಿಯಲ್ಲಿ ಪಶ್ಚಿಮಘಟ್ಟಗಳ ಸಾಲು; ಮತ್ತು ಈ ಸಾಲಿನಲ್ಲಿ ಕುದುರೆಮುಖ,

ಎಳ್ನೀರ್‌ಘಾಟಿ ಮತ್ತು ಬಲ್ಲಾಳ ರಾಯದುರ್ಗ ಈ ಮೂರು ಉನ್ನತ ಶಿಖರಗಳು. ಅವುಗಳ ನೆರಳಲ್ಲಿ ಬೆಳೆದಿರುವ ನಾವೂರು, ಇಂದಬೆಟ್ಟು, ಬಂಗಾಡಿ, ಮಿತ್ತಬಾಗಿಲ್, ಕಡಿರುದ್ಯಾವರ ಗ್ರಾಮಗಳು. ದೂರದಿಂದ ಕಂಡಾಗ ಎಲ್ಲ ಮಲೆನಾಡು. ಆದರೆ ಒಳಗೆ ನುಸುಳಿದಾಗ ಕಾಡಿನ ಮಧ್ಯೆ ಬೈಲು ಹಳ್ಳಿಗಳಿವೆ. ಈ ಹಳ್ಳಿಗಳಲ್ಲಿ ಪಂಚಾಯತ್ ಬೋರ್ಡುಗಳನ್ನು ಸ್ಥಾಪಿಸುವುದು ಸುಪರ್‌ವೈಜರರ ಕಾರ್ಯ. ಅವುಗಳ ಆಡಳಿತೆಯ ಮೇಲ್ತನಿಖೆಯ ಹೊಣೆ ಬೇರೆ. ಶಾಲೆ, ಲೈಬ್ರರಿ, ರಸ್ತೆ ಮೊದಲಾದವುಗಳನ್ನಾರಂಭಿಸುವ ಪಂಚಾಯತ್ ಬೋರ್ಡುಗಳಿಗೆಲ್ಲ ಸಲಹೆ ಸೂಚನೆ ಕೊಡಬೇಕು. ಆದುದರಿಂದ ಸದಾ ತಿರುಗಾಟ ತಪ್ಪಿದ್ದಲ್ಲ. 'ಈ ಕೆಲಸಕ್ಕೆ ಸೇರಿದ್ದೇ ಸೇರಿದ್ದು; ಊಟವಿಲ್ಲ ನಿದ್ದೆಯಿಲ್ಲ. ಈಗ ಬಂದರು, ಮತ್ತೆ ಹೊರಟರು. ಒಂದು ವಾರ ಸಮ ನಿಶ್ಚಿಂತ ಮನೆಯಲ್ಲಿ ತಂಗಿದುದಿಲ್ಲ' ಎಂದು ಬೈಲೂರಿಗೆ ಬಂದಾಗಲೆಲ್ಲ ಸುಭಾಷಿಣಿ ಅತ್ತೆ ಮಾವಂದಿರ ಮುಂದೆ ಹೇಳಿದ್ದುಂಟು.

ಹೊತ್ತು ಮುಳುಗಿ ಕತ್ತಲಾಗುತ್ತ ಬಂತು. ಕತ್ತಲೆ ತನ್ನ ಕರಿ ಸೆರಗಿನಿಂದ ಸೂರ್ಯನನ್ನು ಮರೆಸಿ ಸುತ್ತಲೂ ಕಾಲುಚಾಚತೊಡಗಿತ್ತು. ಸೂರ್ಯನಷ್ಟೇ ಅದರದು ವಿಶ್ವಾಕಾರ. ಸೂರ್ಯನದು ಬೆಳಕಿನ ಕಿರಣ, ಕತ್ತಲೆಯ ಕಿರಣ ಕರಿದು; ಅಷ್ಟೆ. ಹೊಲ, ನೆಲ, ಬಾಂದಳವನ್ನು ಅದು ಆವರಿಸಿಬಿಡುತ್ತದೆ. ಮತ್ತೆ ಕಣ್ಣು ಸರಿ ಕಾಣಲಿಕ್ಕಿಲ್ಲವೆಂದು ಭಾವಿಸಿ ನಾಲ್ಕು ಬಾಳೆ ಎಲೆಯನ್ನು ತರಲು ಸೀತಮ್ಮನವರು ಕೈಕತ್ತಿ ಹಿಡಿದುಕೊಂಡು ತೋಟಕ್ಕೆ ಹೊರಟರು. ಅದನ್ನು ಕಂಡ ಗೋವಿಂದರಾಯರು 'ಹಾವು ಗೀವು ಇದ್ದೀತು ಮಾರಾಯಿತೀ. ನಾನೂ ಬಂದೆ' ಎಂದು ಅನುಸರಿಸಿದರು. 'ನಾನು ಇನ್ನೂ ಮಗು' ಎಂದು ಸೀತಮ್ಮನವರು ಹೇಳಿದರೂ 'ಹಾವಿಗೆ ಮಗು ದೊಡ್ಡವರೆಂಬುದಿಲ್ಲ' ಎಂದು ಉಪದೇಶದ ಮಾತುಗಳನ್ನಾಡುತ್ತಾ ಬಂದರು. ಬಾಳೆಯ ಎಲೆಗಳನ್ನು ಕೊಯ್ದು ಹೆಂಡತಿಯ ಕೈಗೆ ಕೊಟ್ಟಾಗ ಧ್ವನಿ ಇಳಿಸಿ, 'ಹೌದೇನೇ, ರಾಜ ಬಂದ ಕಾರಣ ಗೊತ್ತಾಗಲಿಲ್ಲ' ಎಂದರು.

'ಬಂದು ಮಾರಾಯ ಇನ್ನೂ ಎರಡು ಗಂಟೆ ಆಗಿಲ್ಲ. ಈಗಲೇ ತೆಗೆದಿರಾ ಅಧಿಕಪ್ರಸಂಗ? ಆದಕ್ಕೇ ನನ್ನ ಬೆನ್ನ ಹಿಂದೆ ಬಂದಿರೆಂದು ಕಾಣುತ್ತದೆ.'

'ಅಲ್ಲೇನೇ, ಬರುವುದು ಬೇಡವೆಂದು ಆಕ್ಷೇಪ ಮಾಡಿದೆನೇ ನಾನು? ಆದಕ್ಕಲ್ಲ. ನಿನಗೆ ತಿಳಿಯಲಿಲ್ಲ. ಎಲ್ಲಾದರೂ ಫಂಡಿನ ಹಣ ಕೇಳಲು

ಬಂದನೇನೋ ಎಂದು ನನ್ನ ವಿಚಾರ. ಕೇಳಿದರೆ ನಿನಗೆ ಬಳೆ ಮಾಡಿಸಲು ಹಾಕಿದ್ದೇನೆ ಎಂದುಬಿಡುತ್ತೇನೆ. ನೀನು ಬೇರೆ ಸೊಲ್ಲು ತೆಗೆಯಬೇಡ ನೋಡು.'

ಸೀತಮ್ಮನವರು ತಬ್ಬಿಬ್ಬಾಗಿ, 'ಮಕ್ಕಳಮೇಲೂ ನಿಮ್ಮದು ಸಂಶಯ' ಎಂದರು.

'ಸಂಶಯ ಅಲ್ಲೇನೇ.'

'ಮತ್ತೇನು ಉಪ್ಪು ಹಾಕಿ ನೆಕ್ಕುತ್ತೀರೇನು ಅದನ್ನು ?'

'ಛೇ, ನೀನು ಒಂದಕ್ಕೆ ಹತ್ತುಮಾತು ತೆಗೆಯುತ್ತಿ. ನಿನ್ನ ನಾಲಿಗೆ ಸ್ವಲ್ಪ ಉದ್ದ. ಏನು ನನ್ನಲ್ಲಿ ಸಾವಿರಾರು ರೂಪಾಯಿ ಇದೆಯೇನು? ಇದ್ದರೆ ಅದು ನನಗೆ ಬೇಕೇನು? ಮಕ್ಕಳಿಗಲ್ಲದಿದ್ದರೆ ಅದು ಯಾರಿಗೆ? ಆದರೆ ಈಗಲೇ ನಮ್ಮ ಕೈ ಬರಿದಾಗಬಾರದು. ನಾಳೆ ಏನಾಗುತ್ತದೆ, ಮುಪ್ಪಿನ ಕಾಲಕ್ಕೆ ಏನಾಗುತ್ತದೆಂದು ಯಾರೂ ಹೇಳಲಾರರು. ತಾಯ್ತಂದೆ ಕೈಯಲ್ಲಿ ನಾಲ್ಕಾರು ಕಾಸು ಇದ್ದರೆ ಮಕ್ಕಳಿಗೆ ಪರಿಮಳ, ನೋಡು !'

'ನೀವು ಏನು ಬೇಕಾದರೂ ಮಾಡಿಕೊಳ್ಳಿ; ನಾನು ಉಪ್ಪಿನಲ್ಲೂ ಇಲ್ಲ, ಹುಳಿಯಲ್ಲೂ ಇಲ್ಲ' ಎಂದು ಸೀತಮ್ಮನವರು ವೇದಾಂತ ತೆಗೆದರು.

ರಾಜ ಆ ಮಾತನ್ನೇ ಎತ್ತಲಿಲ್ಲ. ಊಟಕ್ಕೆ ಕುಳಿತಾಗ ಸುತ್ತಲೂ ನೋಡಿ 'ಹರಿ ಎಲ್ಲಿ ಅಪ್ಪಯ್ಯ ?' ಎಂದು ಕೇಳಿದ.

'ಹರಿಯಾ ! ಅವನ ಕಥೆ ಏನು ಹೇಳಲಿ ?' ಎಂದು ಬಡಿಸುವಾಗಲೇ ಸೀತಮ್ಮನವರು ಬಡಬಡಿಸಿದರು.

'ಏನು, ಏನಾಗಿದೆ ?' ಎಂದು ಮತ್ತೆ ಕುತೂಹಲದಿಂದ ಕೇಳಿದ ರಾಜ.

'ಆಗುವುದೇನಿಲ್ಲ. ಇಲ್ಲಿಲ್ಲದ ಕೆಲಸಗಳಲ್ಲಿ ಮಗ್ನನಾಗುತ್ತಾನೆ. ಈಗ ಬೇಸಿಗೆಯ ರಜೆ ದೊರೆತ ಮೇಲೆ ಒಂದು ದಿನ ಮನೆಯಲ್ಲಿ ಉಳಿದಿಲ್ಲ. ಒಮ್ಮೆ ಬಾರಕೂರು, ಎಲ್ಲೂರುಗಳಿಗೆ ಹೋದ. ಆ ಮೇಲೊಮ್ಮೆ ಕಾರ್ಕಳದ ಗೋಮಟೇಶ್ವರ, ಮೂಡುಬಿದರೆಯ ಸಾವಿರ ಕಂಬದ ಬಸದಿ ಕಂಡು ಬಂದ. ಈಗ ಮಲ್ಪೆ ಸಮುದ್ರದಲ್ಲಿರುವ ಟೀಪುಸುಲ್ತಾನನ ಬತ್ತೇರಿ, ಸೈಂಟ್ ಮೇರಿ ದ್ವೀಪ ನೋಡಲು ಗೆಳೆಯರೊಡನೆ ತೆರಳಿದ್ದಾನೆ' ಎಂದು ಗೋವಿಂದರಾಯರು ಉತ್ತರ ಕೊಟ್ಟರು.

'ಇದಕ್ಕೆಲ್ಲ ಕಾಸೆಲ್ಲಿ ಅವನಿಗೆ ?'

'ಕಾಸು ಕಾಂಚಾಣವಿಲ್ಲ. ನಡೆದೇ ಹೋಗುತ್ತಾರೆ. ಒಬ್ಬೊಬ್ಬರು ಒಂದೆರಡು ಸೇರು ಅಕ್ಕಿ ಕೂಡಾ ಹಿಡಿದುಕೊಂಡಿರುವರು. ಅಲ್ಲಿ ಗಂಜಿ ಬೇಯಿಸುತ್ತಾರೆ.'

'ನಮ್ಮೂರಿಗೆ ಬರಬಹುದಿತ್ತಲ್ಲ! ಬೆಳ್ತಂಗಡಿಗೆ ಬಂದಿದ್ದರೆ ಸಮೀಪವಿದ್ದ ಜುಮಾಲುಬೀಬಿಕೋಟೆ, ಕುದುರೆಮುಖ ಕಾಣಬಹುದಾಗಿತ್ತು.'

'ವರುಷಾ ಒಂದು ಕಡೆ ತೆರಳುವುದಂತೆ! ಕುದುರೆಮುಖ ಘಟ್ಟ ಹತ್ತಬೇಕೆಂದು ಈಗಲೇ ಹೇಳುತ್ತಿದ್ದಾನೆ. 'ಆಗಲಿ, ಆಗಲಿ, ಮೆಟ್ರಿಕ್ ಆಗಲಿ. ಇನ್ನೂ ಒಂದು ವರುಷವಿದೆ. ಮತ್ತೆ ಬೇಕಾದಲ್ಲಿ ಹೋಗು. ಈಗ ರಜೆಯಲ್ಲಿ ಸ್ವಲ್ಪ ಓದಿ ಕಲಿತುದನ್ನು ಗಟ್ಟಿಮಾಡಿಕೊ' ಎಂದರೆ ಮಾಣಿ ಕೇಳುವುದಿಲ್ಲ. ಯಾವಾಗ ಓದುತ್ತಾನೋ ಬರೆಯುತ್ತಾನೋ ನಮಗೆ ಒಂದೂ ಗೊತ್ತಾಗುವುದಿಲ್ಲ. ಶಾಲೆಯಿದ್ದಾಗ ಮುಂಜಾನೆ ಎದ್ದ ಕೂಡಲೇ ಹೊರಡುವ ಗಡಿಬಿಡಿ! ಬಿಟ್ಟಮೇಲಾದರೂ ಬೇಗ ಮನೆಗೆ ಬಂದು ಓದುತ್ತಾನಾ? ಅದೂ ಇಲ್ಲ. ಕ್ರಿಕೆಟ್ ಆಡಲು ನಿಲ್ಲುತ್ತಾನೆ. ಅಜ್ಜರಕಾಡ್ ಪುಡಿ ಪುಡಿ. ಕತ್ತಲಾದ ಮೇಲೆಯೇ ಅವನ ಸವಾರಿ. ಅದೆಲ್ಲ ದೊಡ್ಡವರ ಮಕ್ಕಳಿಗೆ ಹೇಳಿದುದು, ಬೆಣ್ಣೆ ತುಪ್ಪ ತಿಂದು ಕೆಲಸವಿಲ್ಲದೆ ಬೊಜ್ಜು ಬೆಳೆಸಿದವರಿಗೆ ಕರಗಿಸಲಿಕ್ಕೆ! ನಾವು ಬಡವರು; ಹೊಟ್ಟೆಗೇ ಇಲ್ಲ. ಊದಿದರೆ ಗಾಳಿಗೆ ಹಾರುವ ಹಾಗಿದ್ದಿ, ಕ್ರಿಶ್ಚನ್ ಹೈಸ್ಕೂಲಿನಿಂದ ಮನೆಗೆ ಮೂರು ಮೈಲು ನಡೆಯುವ ದೇಹಶ್ರಮವೇ ಸಾಕು, ಎಂದರೆ ಕೇಳಲಾರ.'

'ಯಾರು ಹೆಡ್ಮಾಸ್ತ್ರು? ಸಾಲೀಸರೇನು ಈಗ?'

'ಹೌದು.'

ಆ ಮೇಲೆ ಅಕ್ಕತಂಗಿಯ ಸುಖದುಃಖ, ಗುತ್ತಿನಸೆಟ್ಟರ ಮನೆ, ಬಲ್ಲಾಳರ ಮನೆಗಳ ವಿಚಾರ, ನೆರೆಹೊರೆಯಲ್ಲಿರುವ ಮಾರ್ಪಳ್ಳಿ, ಕೆಮ್ಮಣ್ಣು, ಕೊರಂಕ್ರ-ಪಾಡಿ, ಅಲೆವೂರು ಗ್ರಾಮಗಳ ಹಿರಿಯರ ಸುದ್ದಿಗಳೆಲ್ಲವನ್ನೂ ಕೇಳಿ ತಿಳಿದುಕೊಂಡ. ಮಜ್ಜಿಗೆ ಅನ್ನ ಉಂಡು ತೃಪ್ತಿಹೊಂದುವ ಕಾಲಕ್ಕೆ, 'ನಾನೀಗ ಬಂದುದೇಕೆಂದು ನಿಮಗೆ ಗೊತ್ತಾಯಿತಾ?' ಎಂದು ಹೇಳಿ ನಕ್ಕ.

ಸೀತಮ್ಮನವರು ಅಡಿಗೆಮನೆಯಿಂದ ಊಟದ ಪಡಸಾಲೆಗೆ ಬಂದು ನಿಂತರು. ಗೋವಿಂದರಾಯರ ಕಿವಿಗಳೂ ನಿಗುರಿದವು. 'ಇಲ್ಲ, ನಮಗೆ ಗೊತ್ತಾಗಲಿಲ್ಲ' ಎಂದರವರು.

‘ ನಿಮ್ಮನ್ನೆಲ್ಲ ಕರೆದುಕೊಂಡು ಹೋಗಲು ಬಂದೆ’ ಎಂದು ರಾಜ ಮುಗುಳು ಮುಗುಳು ನಕ್ಕ.

‘ ಅಬ್ಬ ! ದೇವರು ಕಣ್ಣು ತೆರೆದ,’ ಎಂದು ಅಮ್ಮ ದೇವರಿಗೆ ಕೈ ಮುಗಿ ವಂತೆ ಜೋಡಿಸಿ, ‘ ನನಗೆ ಇಲ್ಲಿ ಜೀವಕ್ಕೆ ಬೇಸರಬಂದಿದೆ’ ಎಂದು ಉಸಿರ್ಗರೆದರು. ಭೂಮಿಯ ಗುರುತ್ವ ಆಕರ್ಷಣಶಕ್ತಿಯಲ್ಲದಿದ್ದರೆ ಅವರು ಆಕಾಶಕ್ಕೆ ನೆಗೆಯುತ್ತಿದ್ದರೋ ಏನೋ! ಅಷ್ಟು ಸಂತೋಷವಾಯಿತು ಅವರಿಗೆ! ಒಳಗೇ ನಿದ್ದರೂ ಹೊರಗೆ ಅದನ್ನು ತೋರಿಸದೆ ಕೈತೊಳೆಯಲೆದ್ದ ಗೋವಿಂದರಾಯರು ‘ ಹೌದಾ, ತಮಾಷೆ ಮಾಡುತ್ತಿಯಾ? ನಿಜವಾ ?’ ಎಂದು ಮತ್ತೆ ಮತ್ತೆ ಕೇಳಿದರು. ‘ ನಿಜ, ಸುಳ್ಳಲ್ಲ. ಎಲ್ಲಾ ಸವಿಸ್ತಾರ ಹೇಳುತ್ತೇನೆ’ ಎಂದು ರಾಜ ಅಂಗಳದ ತುದಿಗೆ ಬಂದು, ಬಗ್ಗಿ ಕೈತೊಳೆದುಕೊಂಡ. ತಗ್ಗಿನ ಕಸದ ಕುಪ್ಪೆಯಲ್ಲಿ ಬಾಳೆ ಎಲೆ ನೆಕ್ಕತೊಡಗಿದ್ದ ಕೊರಗರ ನಾಯಿ, ಮೈಮೇಲೆ ನೀರು ಬಿದ್ದುದರಿಂದ ಹುಲಿಯಂತೆ ಹೆದರಿಸಲು ಗುರ್ ಗುರ್ ಗುರುಗುಟ್ಟಿತು.

ಜಗಲಿಯಲ್ಲಿ ಗೋಡೆಗೊರಗಿ ಕುಳಿತ ಗೋವಿಂದರಾಯರು ಮದ್ದಲೆಯ ಮೇಲೆ ಬಡಿವಂತೆ, ನಸ್ಯದ ಬುರುಡೆಯನ್ನು ಎಡಗೈಯಲ್ಲಿ ಹಿಡಿದು ಅದರ ಮುಚ್ಚಳದ ನೆತ್ತಿಯ ಮೇಲೆ ತಟತಟ ತಟ್ಟತೊಡಗಿದರು. ಬೈರಾಸಿನಿಂದ ಮೋರೆ ಮೈಮೇಲಿನ ಬೆವರನ್ನೊರಸುತ್ತ ಗಾಳಿಗೆ ಮೈಯೊಡ್ಡಿ ಜಗಲಿಯ ಅಂಚಿನಲ್ಲಿ, ಒಂದು ಕಾಲನ್ನು ಮೆಟ್ಟಲಿನ ಮೇಲೆ ಇಳಿಬಿಟ್ಟು ಕುಳಿತ ರಾಜ, ‘ ನಾನೊಂದು ಆಸ್ತಿ ತೆಗೆದುಕೊಂಡೆ’ ಎಂದುಸುರಿದ. ತಂದೆಯ ಬಾಯಿ ಕಿವಿಯವರೆಗೂ ತೆರೆಯಿತು. ಕಿವಿ ನಿಗುರಿಸಿ ಒಳಗೆ ಗಪ್ ಚುಪ್ ಗಬ ಗಬ ಮೆಲ್ಲುತ್ತಿದ್ದ ಸೀತಮ್ಮನವರು ಒಳಗಿಂದೊಳಗೇ ನಕ್ಕರು. ಹಿರಿಯರ ಆಸ್ತಿಯಿರದ ಗೋವಿಂದರಾಯರಿಗೆ ದೊಡ್ಡ ಕೊಪ್ಪರಿಗೆಯೇ ದೊರೆತಂತಾಯಿತು. ಒಮ್ಮೆಯೇ ನೂರು ಪ್ರಶ್ನೆ ಕೇಳಲು ಅವರ ಆತುರ.

‘ ಹೌದೇನೋ ? ಎಷ್ಟು ಕೊಟ್ಟೆ ?’

‘ ಬಹಳ ಸುಲಭದಲ್ಲಿ ಸಿಕ್ಕಿತು. ಏಲಂನಲ್ಲಿ ನಿಂತು ತೆಗೆದುಕೊಂಡೆ.’

‘ ದೊಡ್ಡದಾ ?’

‘ ದೊಡ್ಡದೇ. ಸಾಧಾರಣ ೩೦ ಎಕರೆ ಉಂಟು.’

‘ ನೂರಾರು ಮುಡಿ ಅಕ್ಕಿ ಎಂದೆನ್ನು. ನಮ್ಮ ಬಲ್ಲಾಳರಿಗೂ ಅಷ್ಟಿಲ್ಲ! ಎಲ್ಲ ನಂಜವಾ ? ಪುಂಜವಾ ? ಬೈಲುಗದ್ದೆ, ಬೆಟ್ಟುಗದ್ದೆ ಕಾಡು ಬೀಡು ಎಲ್ಲ ಕೂಡಿ

ಆಷ್ಟಾಗುತ್ತದೆಯಾ ?'

'ಎಲ್ಲ ಬೈಲುಗದ್ದೆ ಮಾಡಬಹುದು. ನೇತ್ರಾವತಿ ದಡ. ವರುಷಂಪ್ರತಿ ಕಟ್ಟ ಕಟ್ಟಿ ನೀರು ತಂದರೆ ಗದ್ದೆಗಳಿಗೆಲ್ಲ ಉಣಿಸಬಹುದು. ಎಲ್ಲ ಮಾಡಬೇಕು. ಈಗ ಬರೇ ಕಾಡು. ಹಿಂದೆ, ನೂರಾರು ವರುಷಗಳ ಹಿಂದೆ, ಗದ್ದೆ, ತೋಟ, ಒಕ್ಕಲು, ಪಕ್ಕಲು ಎಲ್ಲ ಇದ್ದಿತಂತೆ. ಈಗ ಪಾಳುಬಿದ್ದ ಭೂಮಿ. ಒಂದು ಗುಡಿಸಲೂ ಇಲ್ಲ. ಈಗ ನಾನು ಸಣ್ಣ ಮನೆ ಕಟ್ಟಿಸಲು ಸುರುಮಾಡಿ ಬಂದಿದ್ದೇನೆ. ಒಂದು ಮುಖಮಂಟಪ, ಒಂದು ಪಡಸಾಲೆ, ಅಡಿಗೆ ಮನೆ, ಇಷ್ಟೆ. ಗೋಡೆಗಳೆಲ್ಲ ಮೇಲೆ ಬಂದಿವೆ. ಅಲ್ಲೇ ಪಕ್ಕಕ್ಕೆ ಬೇಕಾದ ಬಿದಿರು ಮೆಳೆಗಳಿವೆ. ಬಿದಿರನ್ನೂ ಕಡಿಸಿಹಾಕಿಸಿದ್ದೇನೆ. ಬಿದಿರು ಕಟ್ಟಿ, ಮೇಲೆ ಮಾಡು ಹೊದಿಸಿ, ಮುಳಿಹುಲ್ಲು ಅಥವಾ ಒಣ ಹುಲ್ಲು ಛಾವಣೆ ಮಾಡಿದರೆ ಆಯಿತು. ಮತ್ತೊಂದು ದನದ ಹಟ್ಟಿ, ಬಿಸಿನೀರಿನ ಕೊಟ್ಟಿಗೆ ಕಟ್ಟಿಸಬೇಕು. ಸ್ನಾನದ ಕೊಟ್ಟಿಗೆಗೇನೂ ಅಷ್ಟು ಕಷ್ಟವಿಲ್ಲ. ಒಪ್ಪತ್ತು ಮುಗಿವ ಕೆಲಸ. ನಾಲ್ಕು ಕಂಬ ಹುಗಿದು ಮೇಲೆ ಮಾಡು ಕಟ್ಟಿದರೆ ಸಾಕು. ಇದು ಎಪ್ರಿಲ್. ಜೂನ್ ಬರುವುದರೊಳಗೆ ಎಲ್ಲ ರೆಡಿಯಾಗುತ್ತದೆ. ಅಷ್ಟರೊಳಗೆ ನೀವೂ ಅಣಿಯಾದರೆ ಸರಿ. ಮತ್ತೆ ಮಳೆಗಾಲ ಬಂದುಬಿಡುತ್ತದೆ.'

ಶಾಂತ ಚಿತ್ತದಿಂದ ಆಲಿಸುತ್ತಿದ್ದ ಗೋವಿಂದರಾಯರು, 'ಎಲ್ಲ ಬೆಳ್ತಂಗಡಿಯಲ್ಲೇ ಇದೆಯೇನು ?' ಎಂದು ಪ್ರಶ್ನಿಸಿದರು.

'ಬೆಳ್ತಂಗಡಿಗೆ ಸಮೀಪ. ಹನ್ನೆರಡು ಮೈಲಿದೆ. ಬಂಗಾಡಿ.'

ಬಂಗಾಡಿ ಎಂದೊಡನೆಯೇ ಗೋವಿಂದರಾಯರ ಮೈ ಸ್ವಲ್ಪ 'ಜುಂ' ಎಂದಿತು. 'ಬಂಗಾಡಿಯಾ ? ಸುಬ್ರಮ್ಮಣ್ಯ, ಧರ್ಮಸ್ಥಳ, ಬಂಗಾಡಿಗಳೆಲ್ಲ ಜ್ವರದ ಕೊಂಪೆ ! ಅಷ್ಟು ಹಣ ಇಲ್ಲೇ ಎಲ್ಲಾದರೂ ಕರಾವಳಿಯಲ್ಲಿ ಹಾಕುತ್ತಿದ್ದರೆ ಪಸಂದ್ ಆಗುತ್ತಿತ್ತಲ್ಲ' ಎಂದವರು ಉದ್ಗರಿಸಿದರು.

ರಾಜನ ಮೋರೆ ಸ್ವಲ್ಪ ಪೆಚ್ಚಾಯಿತು. ಸ್ವಲ್ಪ ಸಿಟ್ಟಿನ ಮುಖಮುದ್ರೆಯಿಂದ ಹೇಳಿದ–'ಹೌದು. ಕರಾವಳಿಯಲ್ಲಿ ಆಸ್ತಿ ತೆಗೆದುಕೊಳ್ಳಲು ಅಷ್ಟು ಹಣ ಎಲ್ಲಿಂದ ತರಲಿ ? ಅಗ್ಗಕ್ಕೆ ಸಿಗುವ ಬಾಬತ್ತೇನು ? ತೆಗೆದುಕೊಂಡರೂ ನಾಲ್ಕು ಮರಮುಟ್ಟಿಲ್ಲ. ತೆಂಗಿನಕಾಯಿಂದ ಹಿಡಿದು ಕಟ್ಟಿಗೆಯ ವರೆಗೆ ಎಲ್ಲಕ್ಕೂ ಹಣ ಚಲ್ಲಬೇಕು. ಕರಾವಳಿ ಭೂಮಿ ಏನು ಶತಭಾಗ್ಯ ? ಅಲ್ಲಿ ಆದರೆ ಹಾಗೇನು ? ಮನೆಯ ಮುಂದೆಯೇ ಕಾಡು. ಕಟ್ಟಿಗೆಗೆ ಕಾಸು ಖರ್ಚಿಲ್ಲ. ಜ್ವರ

ವಿದೆಯೆಂದು ಅಲ್ಲಿ ಜನರೇ ಬದುಕಿಲ್ಲವೇನು? ಊರು ಬಿಟ್ಟು ಓಡಿಹೋಗಿದ್ದಾರೇನು? ಜ್ವರ ಎಲ್ಲಿಲ್ಲ? ಬರುವ ಕಾಲಕ್ಕೆ ಪೆಟ್ಟಿಗೆಯೊಳಗೆ ಅಡಗಿ ಕೂತರೂ ಜ್ವರ ಬಂದೇ ಬರುತ್ತದೆ. ಈಗ ನಾನು ಇಷ್ಟು ವರುಷ ಅಲ್ಲಲ್ಲಿ ತಿರುಗಾಡಿದ್ದೇನೆ. ಇಂದು ಧರ್ಮಸ್ಥಳವಾದರೆ ನಾಳೆ ನೆರಿಯಾ. ಹಳ್ಳಿ ಹಳ್ಳಿ ತಿರುಗಾಡಿದ್ದೇನೆ. ಮುಂಡಾಜೆಯಲ್ಲಿ ಸಾವಿರಾರು ಚಿತ್ಪಾವನರ ಮನೆಗಳಿವೆ. ಅಲ್ಲಿ ಬಸ್ಸಿನಿಂದ ಇಳಿದರೆ ಮನೆಯ ವರೆಗೂ ಪಂಚ್ಯಾಯ್ತ್ ರಸ್ತೆ ಇದೆ. ನಾಲ್ಕೇ ಮೈಲು ದೂರ.'

ಮಗನ ಗಟ್ಟಿಸ್ವರ ಕೇಳಿದ ಸೀತಮ್ಮನವರು ಹೊರಗೆ ಬಂದು ಕೇಳುತ್ತಿದ್ದರು. ಅವನು ಮುಗಿಸಿದ ಮಾತನ್ನು ಅವರು ಮುಂದುವರಿಸಿದರು–'ಬಂಗಾಡಿಯಾದರೇನು? ಬ್ರಹ್ಮಾವರ ಆದರೇನು? ಇನ್ನು ನಮಗೆ ಯೌವನ ಬರುವುದಿಲ್ಲ. ಮುಪ್ಪಿನ ಪ್ರಾಯಕ್ಕೆ ಮಕ್ಕಳೊಡನೆ ಇರುವುದೇ ಪರಮಗುಣ. ಇಲ್ಲಿದ್ದರೆ ಇರುವ ಸುಖವಾದರೂ ಅಷ್ಟರಲ್ಲೇ ಇದೆ. ಬಿಸಿನೀರು ಕಾಯಿಸಲಿಕ್ಕೆ ಒಂದು ಮಡಲಿಗೂ ಗತಿಯಿಲ್ಲ. ತೋಟದಲ್ಲಿ ಬಿದ್ದ ಒಂದು ಮಡಲು ಹೆಕ್ಕಿದರೆ 'ತಾರ್‌ಪೂರ್' ಎಂದು ಕಣ್ಣು ಕೆಂಪಗೆ ಮಾಡುತ್ತಾರೆ. ಮರದ ಕೆಳಗೆ ಬಿದ್ದ 'ಬೆಜೆಕ್ರೆ' ತಂದು ಕಾಯಿಸಬೇಕು. ನನಗಂತೂ ಸಾಕು ಸಾಕಾಗಿದೆ, ನೋಡು ರಾಜಾ.'

'ಅಮ್ಮ! ಇಲ್ಲಿ ಇಷ್ಟಾದರೂ ಇದೆ. ಕೆಲವು ಕಡೆ ಉರಿಸಲು ಇಷ್ಟೂ ಸಿಗುವುದಿಲ್ಲ. ಸುಮ್ಮನೆ ಕರಾವಳಿ, ಕರಾವಳಿ ಎಂದು ಅಂಟಿಕೊಂಡಿದ್ದಾರೆ. ಒಪ್ಪೊತ್ತಿಗಿದ್ದರೆ ಇಪ್ಪೊತ್ತಿಗಿಲ್ಲ.'

ಗಾಳಿ ಯಾವ ಕಡೆ ಬೀಸತೊಡಗಿತೆಂಬುದನ್ನು ಕಂಡುಕೊಂಡ ಗೋವಿಂದರಾಯರು ಮೆಲ್ಲಗೆ ನಸ್ಯದ ಡಬ್ಬಿಗೆ ಕೈಹಾಕಿದರು. ಮತ್ತೊಂದು ಚಿಟಿಕೆ ಮೂಗಿನ ಸೊಳ್ಳೆಗಳಿಗೆ ತುಂಬಿಸಿ ಹೇಳಿದರು–'ರಾಜಾ! ನೀನು ಹೇಳುವುದೆಲ್ಲ ಸತ್ಯ. ನಾನೇನು ವಿರುದ್ಧ ಮಾತನಾಡಿಲ್ಲ. ಆದರೆ ನಾವೆಲ್ಲ ಕರಾವಳಿಯಲ್ಲಿ ಹುಟ್ಟಿ ಬೆಳೆದವರು! ಕರಾವಳಿ ಗಾಳಿ ಸೇದಿ, ನೀರು ಕುಡಿದೇ ದೊಡ್ಡವರಾದವರು. ಬದುಕಿದಷ್ಟು ದಿನ ಇನ್ನು ಬದುಕುವಂತಿದೆಯೇನು? ನಮ್ಮಪ್ಪಯ್ಯ ಅರುವತ್ತಕ್ಕೆ ಕಣ್ಣು ಮುಚ್ಚಿದರು. ನಾನು ಆ ವಯಸ್ಸಿಗೆ ಸಮೀಪಿಸಿದ್ದೇನೆ. ಅಲ್ಲಿಯ ಹವೆ ಹಿಡಿದೀತೇನೋ ಎಂದು ನನ್ನ ಸಂಶಯ. ಅಷ್ಟೇ.'

'ಹವೆ ಏನು ಮಾಡುತ್ತದೆ ನಾವು ಜಾಗ್ರತೆಯಿಂದ ಇದ್ದರೆ? ಅನ್ನ

ಪಾನದ ಮಟ್ಟಿಗೆ ಸ್ವಲ್ಪ ಜಾಗ್ರತೆ ಮಾಡಿದರೆ ಸರಿ. ಸಿಕ್ಕ ಸಿಕ್ಕದು ತಿಂದ ಅಜೀರ್ಣದಿಂದ ಜ್ವರ ಬರುತ್ತದೆ. ಆದು ಅಲ್ಲಿದ್ದರೂ ಸಮ, ಇಲ್ಲಿದ್ದರ ಸಮ. ಒಂದು ವೇಳೆ ಜ್ವರ ಬಂದರೆ ಡಾಕ್ಟರರೇ ಇಲ್ಲವೆ? ಔಷಧಿಯೆ ಇಲ್ಲವೆ?' ಎಂದು ರಾಜ ಸಮದಾಯಿಸಿದ.

'ಹೌದಾ ರಾಜಾ! ನಮ್ಮ ಹರಿಗೆ ತೊಂದರೆಯಾಯಿತಲ್ಲ!' ಎಂ ಸೀತಮ್ಮನವರು ಕಳವಳ ವ್ಯಕ್ತಪಡಿಸಿದರು.

'ಹರಿಗೆ ಇನ್ನೊಂದು ವರುಷವಲ್ಲ ಮೆಟ್ರಿಕ್ ಮುಗಿಯಲಿಕ್ಕೆ! ಒಂ ವರುಷದ ಮಟ್ಟಿಗೆ ಗುಲಾಬಿ ಮನೆಯಲ್ಲಿ ಇರಲಿ. ತಮ್ಮನಿಗೆ ಅಷ್ಟು ಉಪಕಾ ಮಾಡಲಿಕ್ಕಿಲ್ಲೇನು? ಅವರಿಗೇ ಊಟದ ಬಾಬ್ತು ಏನಾದರೂ ಕೊಟ್ಟ ಸರಿ. ಮೋಹನನನ್ನು ಬೆಳ್ತಂಗಡಿ ಶಾಲೆಗೆ ಹಾಕಿದರಾಯ್ತು.'

ಈ ಮಾತಿನಿಂದ ಸೀತಮ್ಮನವರ ಮನಸ್ಸಿಗೆ ಸಮಾಧಾನವಾಯ್ತು ಮಲಗಲು ಸಿದ್ಧತೆಗಾಗಿ ಅವರು ಒಳಹೊರಗೆ ಹೋಗಲಾರಂಭಿಸಿದರ ಮುಂಡಗೆ ಒಲಿಯ ಚಾಪೆ, ತಲೆದಿಂಬು, ಜಮಖಾನ ಜಗಲಿಗೆ ತಂದಿಟ್ಟರ 'ರಾತ್ರಿ ಬಹಳ ಆಯ್ತು. ಈಗ ಮಲಗಿಕೊಳ್ಳೋದು. ಬೆಳಿಗ್ಗೆ ಮಾ ನಾಡೋಣ' ಎಂದು ಗೋವಿಂದರಾಯರು ಚಾಪೆ ಬಿಡಿಸಿದರು. ಚಾಪೆಮೇ ತನ್ನ ಬೆಡ್ಡಿಂಗ್ ಬಿಡಿಸಿ ರಾಜನೂ ಒರಗಿದ. ಆದರೆ, ತನ್ನ ಪ್ರಶ್ನೆಗೆ ಅಪ್ಪಯ ನಿಂದ ಸಮರ್ಪಕ ಉತ್ತರ ಬಾರದಿದ್ದುದನ್ನು ಕಂಡು ಅವನಿಗೆ ಸ್ವಲ್ಪ ಬೇಸ ವಾಯಿತು. 'ಬರುತ್ತೀರೋ ಇಲ್ಲವೋ?' ಸ್ಪಷ್ಟ ಕೇಳಿ ಬಿಡಬೇಕೆಂ ಒಮ್ಮೆ ಅವನಿಗೆನ್ನಿಸಿತು 'ಛೇ, ಹಾಗೆ ಕೇಳಬಾರದು' ಎಂದು ಮತ್ತೊಮ್ಮೆ ಮನಸ್ಸನ್ನು ಬಿಗಿಹಿಡಿಯುತ್ತಿದ್ದ. ಇಲ್ಲಿ ಆಸ್ತಿ ಪಾಸ್ತಿ, ಬದುಕು ಭಾಗ್ಯವಿ ಇಂದೇನೋ ಮುಂದೇನೋ? ಹೀಗಿದ್ದರೂ ಅವರು ಯಾಕೆ ಹಿಂಜರಿಯುತ್ತಿದ ರೆಂದು ಅವನಿಗೆ ಅರ್ಥವಾಗಲೊಲ್ಲದು. ಬಾರದಿದ್ದರೆ ಮುಂದೆ ಹೇಗೆ? ಬಂ ರೇನು ಮಾಡಬೇಕೆಂಬ ವಿಚಾರಗಳಿಂದ ಒಂದು ಮಗ್ಗುಲಿಂದ ಮತ್ತೊಂದ ಅವನು ಹೊರಳುತ್ತಿದ್ದ. ಹಾಲಿಗೆ ಹೆಪ್ಪಿಕ್ಕುವುದು, ಪಾತ್ರೆಪಡಗ ಇದ್ದ ಸ್ಥ ದಲ್ಲಿ ಇಡುವುದು ಮೊದಲಾದ ಸೀತಮ್ಮನವರ ಕೆಲಸ ಇನ್ನೂ ಮುಗಿದಿರಲಿ ಪಾತ್ರೆಗಳ ದಡಬಡ ಶಬ್ದ ಹೊರತು ಮಿಕ್ಕ ಎಲ್ಲ ಕಡೆಗಳಲ್ಲೂ ಶಾಂತತೆ. ' ಲೇ ಲೇ ಲಾ॥ ಎಂಚಿ ಪೊರ್ಲುದ ಮದ್ಮಾಯೆ ಮುದ್ಮಾಳ್‌ಲಾ ॥' ಎಂ ಪಾಡ್ದನ ಹೇಳುತ್ತ ನಡುನಡುವೆ 'ಕೇಹೆ ಕೇಹೆ' ಎಂದು ಕೂಗುತ್ತ ಬೈಲಿನ

ಯಾರೊ ಬರುತ್ತಿದ್ದರು. ಮಲಗಿದ್ದ ರಾಜ ಏನೋ ಸ್ಮರಿಸಿಕೊಂಡು, 'ಅಮ್ಮಾ! ಅದು ಯಾರು ರಾಮ ನಾಯ್ಕನಾ?' ಎಂದು ಕೇಳಿದ. 'ಹೌದು. ಕುಡಿದು ಪಾಡ್ದನ ಹೇಳುತ್ತಾ ಬರುತಿದ್ದಾನೆ. ದಿನಾ ಇದ್ದದ್ದೇ. ಒಂದೊಂದು ದಿನ ಮಧ್ಯರಾತ್ರಿಯಾಗುತ್ತದೆ. ಬರುವಾಗ ಒಮ್ಮೆ ಗದ್ದೆಯಲ್ಲೇ ಸ್ಮೃತಿತಪ್ಪಿ ಬಿದ್ದಿದ್ದ. ಅವನಿಗೆ ಭೂತದ್ದೂ ಹೆದರಿಕೆ ಇಲ್ಲ, ಹಾವಿದ್ದೂ ಇಲ್ಲ.'

'ಇನ್ನೂ ಇದ್ದಾನಾ ಅವನು?'

'ಅವನಿಗೇನಾಗಿದೆ ಮಂಡೆಮಾರಿ? ಕಲ್ಲು ಗುಂಡಿನ ಹಾಗೆ ಇದ್ದಾನೆ. ಕಣ್ಣು ಮಾತ್ರ ಸ್ವಲ್ಪ ಮಂದವಾಗಿದೆ.'

ಮುಂದೆ ರಾಜ ನಿದ್ದೆಹೋದ. ಒಂದೆಡೆ ಬಸ್ ಪ್ರಯಾಣದ ಆಯಾಸ, ಇನ್ನೊಂದೆಡೆ ನಡೆದುಬಂದ ಶ್ರಮ. ಇದರಿಂದ ಅವನಿಗೆ ಗಾಢನಿದ್ದೆ ಹತ್ತಿತು. ಎಚ್ಚರವಾದುದು ಮುಂಜಾನೆಯೇ. ಗೋವಿಂದರಾಯರ ಧ್ವನಿಗೆ ಎದ್ದ. ಬೆಳಗಿನ ಜಾವದಲ್ಲೇ ಎದ್ದು ನಸ್ಯ ಏರಿಸಿ, 'ಏಳು ನಾರಾಯಣನೆ ಏಳು ಲಕ್ಷ್ಮೀರಮಣ! ಏಳು ಕಮಲಾಕ್ಷ ಕಮಲನಾಭ' ಎಂದವರು ಉದಯ ರಾಗಕ್ಕೆ ಆರಂಭಿಸಿದ್ದರು. ಸೇವಾನಿವೃತ್ತರಾಗಿ ಮನೆಯಲ್ಲಿ ವಾಸಿಸಲಾರಂಭಿಸಿ ದಂದಿನಿಂದ ಉದಯರಾಗದ ಮೋಹ ವಿಶೇಷವಾಗಿದೆ ಅವರಿಗೆ. ವಯಸ್ಸಾಗುತ್ತ ಬಂದಂತೆ ನಿದ್ದೆಯೂ ಕಡಿಮೆ. ಬೇಸಿಗೆಗೆ ಬೆಳಿಗ್ಗೆ ತಂಪಾದ ಕಡಲುಗಾಳಿಯೂ ಬೀಸುತ್ತದೆ. ಕರಾವಳಿ ಹಳ್ಳಿಗಳಲ್ಲಿ ಒಕ್ಕಲಿಗರು ನಾಲ್ಕು ಜಾವವಿರುವಾಗಲೇ ಎದ್ದು ಕೊಳಕೆ ಮಜಲುಗಳಿಗೆ ಏತದಿಂದ ನೀರು ಎತ್ತುವ 'ಟ್ರ್ರಯಿಂ, ಟ್ರ್ರಯಿಂ' ಧ್ವನಿಯೂ ಅಲ್ಲಲ್ಲಿ ಕೇಳಿಸುತ್ತದೆ. ಜಾವಜಾವಕ್ಕೆ ಕೆಲವ ಕೋಳಿ ಗಳು ಬೆಳಗುಮುಂಜಾನೆ ಗಂಟಲು ಹರಿವಂತೆ ಕೂಗುವವು. ಒಂದು ಕೆಲೆದೊಡ ನೆಯೇ ಮತ್ತೊಂದಕ್ಕೆ ರಾವು. ಒಂದು ಮನೆಯಲ್ಲಿ ಕೂಗಾಟ ಕೇಳಿದೊಡ ನೆಯೇ ಮತ್ತೊಂದು ಮನೆಯ ಹುಂಜಗಳಿಗೆ ವೈರ ಉಕ್ಕುತ್ತದೆ. ಮನೆಯಿಂದ ಮನೆಗೆ ವ್ಯಾಪಿಸಿ ಹಳ್ಳಿಗೆ ಹಳ್ಳಿಗೇ ಕೋಳಿಗಳ ಬಳಗ ಜಾಗೃತವಾಗುತ್ತದೆ. ಅವುಗಳ ಗಂಟಲು ನೋವಾದಾಗ ಮರಗಳ ಮರೆಯಲ್ಲಿ ಅಡಗಿ ಬೆಳಕನ್ನು ಇಣಿಕಿ ನೋಡುತ್ತಿದ್ದ ಕಾಗೆಗಳ ಸರ್ತಿ. ಕೊಕ್ಕುಗಳನ್ನು ಸೋಗೆಗಳ ದುಂಡುಗಳಿಗೆ ತಿಕ್ಕಿ, ತೀಡಿ ಹರಿತಗೊಳಿಸುವ ಕಾಗೆಗಳನ್ನು ಕಂಡರೆ ಮೊಟ್ಟೆ ಮರಿಯಿದ್ದ ಹಕ್ಕಿಪಕ್ಕಿಗಳಿಗೆ ದಿಗಿಲು. 'ನಮಗೂ ಎಚ್ಚರವಿದೆ' ಎಂದು ಎಚ್ಚರಿಕೆ ಕೊಡಲು ಅವು ಕೂಡಾ ಚಿಲಿಪಿಲಿಗುಟ್ಟುವವು. ಹೀಗಾಗಿ ನಿಸರ್ಗವೇ ಚೇತನ

ಸ್ವರೂಪವಾಗಿ ನಾದಲೋಲವಾಗಿ ಪರಿಣಮಿಸುವಾಗ ಗೋವಿಂದರಾಯರಿಗ ಎಚ್ಚರವಾಗುವುದರಲ್ಲಿ ಆಶ್ಚರ್ಯವೇನೂ ಇಲ್ಲ.

'ಏಳು ನಾರಾಯಣ! ಏಳು ಲಕ್ಷ್ಮೀರಮಣ! ಏಳು ಬೆಳಗಾಯಿತು ಏಳು' ಎಂದು ಅವರು ರಾಗ ಆರಂಭಿಸಿದಾಗ 'ಏಳು ಸೀತಾ ಏಳು || ಬೆಳ ಗಾಯಿತು ಏಳು' ಎಂದು ಹೇಳಿ ತಮ್ಮನ್ನು ತಟ್ಟಿ ಕರೆದಂತಾಗುತ್ತದ ಸೀತಮ್ಮನವರಿಗೆ. ಅವರೂ ಎದ್ದು ರಾತ್ರಿ ಬೆಂದ ಅನ್ನ ಬಗ್ಗಿಸಿ ಇಳಿಸಿದ ತಿಳಿಯಾದ ತೆಳಿಗೆ ಕೊಬ್ಬರೆಹಿಂಡಿ ಬೆರಸಿ ಭಾಗೀರಥಿಯ ಮುಂದಿಡುವರು. ಅದು ಬೋಗುಣಿಯನ್ನು ನೆಕ್ಕಿ ನಾಲಿಗೆ ಚಪ್ಪರಿಸುತ್ತದೆ. ಅದು ಹುಲ್ಲು ಜಗಿವಾಗ ಪಾತ್ರೆ ತಿಕ್ಕುವ ಒಲೆ ಮತ್ತು ಅಡಿಗೆ ಮನೆಗೆ ಸೆಗಣಿ ನೀರು ಕಲಡಿಸಿ ಪಾಳೆಯ ಕಡ್ಡಿಯಿಂದ ಸಾರಿಸಿ ಶುದ್ಧಮಾಡುವ ಅವರ ಕೆಲಸ ಮುಗಿಯುತ್ತದೆ. ಒಲೆಯ ಮೇಲೆ ಒಂದೆಡೆ ಮೂಣಿಗೆ ಗಂಜಿಗೆ ಗಡಿಗೆಯಿಟ್ಟು, ಮತ್ತೊಂದೆಡೆ ಕಾಫಿಗೆ ತಪ್ಪಲೆ ಇಟ್ಟು, ಹಾಲಿಗಾಗಿ ಪುನಃ ಅವರು ಭಾಗೀರಥಿ ಇದ್ದಲ್ಲಿಗೆ ಬರುತ್ತಾರೆ. ರಾಯರು ತೋಟಕ್ಕೆ ಹೋಗಿ ಉದುರಿದ ಮಾವಿನ ಎಲೆಯಿಂದ ಹಲ್ಲುಜ್ಜಿ, ಮುಖಮಜ್ಜನ ಮಾಡಿಕೊಂಡು ಬರುವಾಗ ಕಾಫಿ ತಯಾರ್. ಇಂದು ಹೇಗೂ ಮಗ ಬಂದ ಉತ್ಸಾಹ ಬೇರೆ. ರಾತ್ರಿ ಮಲಗುವ ಮೊದಲೇ ಗಡುಗುಡು ಕಡೆಯುವ ಕಲ್ಲು ತಿರುಗಿಸುತ್ತಿದ್ದರು. ಬೆಳಗಾಗುವ ಹೊತ್ತಿಗೆ ದೋಸೆ ಕಾಫಿ ಸಿದ್ಧವಾದುದನ್ನು ಕಂಡ ರಾಜ ಆಶ್ಚರ್ಯದಿಂದ 'ಅಮ್ಮಾ ನೀನೊಂದು ಯಂತ್ರ' ಎಂದು ನಕ್ಕು ನುಡಿದ.

'ಜರ್ಮನ್ ಯಂತ್ರ! ಜರ್ಮನ್' ಎಂದು ಗೋವಿಂದರಾಯರು ಮಾತಿಗ ಮಾತು ಕೂಡಿಸಿ ದೋಸೆ ನುಂಗಿದರು. ಅವರ ವಿನೋದಲಹರಿ ಕಂಡು ರಾಜ ನಿಗೆ ಜೀವ ಮರಳಿ ಬಂದಂತಾಯ್ತು. ಅವರು ಕಾಫಿ ತಿಂಡಿ ತೀರಿಸಿ ಹೊರ ಹೋದಮೇಲೂ ಅವನು ಮಣೆ ಬಿಟ್ಟೇಳಲಿಲ್ಲ. 'ಭೀಮನ ಹೊಟ್ಟೆಗೆ ಕಾಸಿ ಮಜ್ಜಿಗೆಯಂತೆ. ಎರಡು ಮೂರು ನನಗೆಲ್ಲಿ ಸಾಕು? ಭಾಗೀರಥಿಯ ಮೊಸರ ತಿನ್ನದೆ ಬಹಳ ಸಮಯವಾಯ್ತು' ಎಂದು ಬೇಡಿ ಹಾಕಿಸಿಕೊಂಡ. 'ಏನ ಮಾಡುವುದು ಮಗನೇ? ನೀನು ಎರಡು ತಿಂಗಳು ಮೊದಲೇ ಬರಬೇಕಿತ್ತು ಕೈಮುಳುಗುವವರೆಗೆ ಸುರಿಯುತ್ತಿದ್ದೆ. ಹೊತ್ತಿಗೆ ಒಂದೊಂದು ತಂಬಿ ಕೊಡುತ್ತಿದ್ದಳು ಭಾಗೀರಥಿ. ಈಗ ಬಚ್ಚಿದೆ. ಅದಾದರೂ ಏನು ಕೊಟ್ಟೀತು ಗದ್ದೆಯಲ್ಲಿ ಹಸುರು ಹುಲ್ಲು ಒಂದು ಕುಸುರಿಲ್ಲ. ಹಿಂಡಿ, ಗಂಜಿಯ ಬ

ದಿಂದಲೇ ಕಾಫಿ, ಮಜ್ಜಿಗೆಗೆ ತತ್ವಾರವಾಗಿಲ್ಲ. ಇನ್ನೊಂದು ಮೂರು ತಿಂಗಳು. ಮತ್ತೆ ಕರು ಹಾಕುತ್ತದೆ' ಎಂದ ಸೀತಮ್ಮನವರು, 'ನಿಮ್ಮಲ್ಲಿ ಕರೆಯುವುದಿದೆಯೇನು?' ಎಂದು ಪ್ರಶ್ನಿಸಿದರು.

'ಇಲ್ಲ. ಮನೆಕೆಲಸವೇ ಅವಳಿಗೆ ಸಾಕಾಗುತ್ತದೆ. ಮತ್ತೆ ದನದ ಸೇವೆ ಯಾರು ಮಾಡಬೇಕು? ಹಾಲು ಕೊಂಡುಕೊಳ್ಳುವುದು.'

'ಕೊಂಡ ಹಾಲಲ್ಲಿ ಏನು ಮೊಸರಾದೀತು? ಕಣ್ಣೀರೆ!'

'ಇನ್ನೇನು ಭಾಗೀರಥಿಯೇ ಬರುತ್ತಾಳಲ್ಲ ನಮ್ಮಲ್ಲಿಗೆ' ಎಂದ ರಾಜ ಅತ್ತಿತ್ತ ನೋಡಿ, ಕುಗ್ಗಿದ ಧನಿಯಲ್ಲಿ, 'ಅಮ್ಮಾ, ಮತ್ತೇನೆಂದರು ನಿನ್ನ ಹತ್ರ?' ಎಂದು ಕುತೂಹಲದಿಂದ ಕೇಳಿದ. 'ಎನ್ನುತ್ತಾರೇನು? ಬಾರದೇ ಎಲ್ಲಿಗೆ ಹೋಗುತ್ತಾರೆ?' ಎಂದು ಆತ್ಮವಿಶ್ವಾಸದಿಂದ ನುಡಿದರು ಸೀತಮ್ಮ.

ತೃಪ್ತಿಹೊಂದಿದ ರಾಜ ಕೈತೊಳೆದು ಅಂಗಿಹಾಕಿಕೊಂಡು ಮೋಹನನನ್ನು ಕರೆದು 'ಬಾರೋ, ಬಲ್ಲಾಳರ ಮನೆಗೆ ಹೋಗಿ ಬರೋಣ. ಅವರನ್ನು ಕಾಣದೆ ಎಷ್ಟು ವರುಷವಾಯ್ತೋ ಏನೋ!' ಎಂದು ಹೊರಟ. ಲಂಗೋಟಿ ವಾಮನ ಮೋಹನ ಒಳಗೋಡಿ ಹಗ್ಗಕ್ಕೆ ಹಾಕಿದ್ದ ತಂದೆಯ ಸ್ನಾನದ ಬೈರಾಸನ್ನು ಸೊಂಟಕ್ಕೆ ಸುತ್ತಿಕೊಂಡು ಅಣ್ಣನ ಬೆನ್ನ ಹಿಂದೆ ಓಡಿದ. ಬಲ್ಲಾಳರ ಮನೆಯಲ್ಲಿ ಯೋಗಕ್ಷೇಮ ಮಾತನಾಡಿ ಕಾಫಿ ಕುಡಿದು ಗುತ್ತಿನ ಸೆಟ್ಟರ ಮನೆ ದಾರಿ ಹಿಡಿದರು. ಅಪರೂಪಕ್ಕೆ ಬಂದ ಮಾಷ್ಟ್ರ ಮಗನನ್ನು ಹಾಗೇ ಅವರೂ ಬಿಡುವವರಲ್ಲ. ಸಿಂಯ್ಯಾಳ ತರಿಸಿ ಸಕ್ಕರೆ ಸುರಿದು ಕೊಟ್ಟರು. ಹೊಟ್ಟೆ ಗಟ್ಟಿಯಾದುದರಿಂದ ಹರಟೆ ಮುಗಿದಾಗ ಹೊತ್ತು ನೆತ್ತಿಗೇರಿತ್ತು. ಮನೆಯಂಗಳಕ್ಕೆ ಹಿಂತಿರುಗಿದಾಗ ರಾಮನಾಯ್ಕ ಗೋವಿಂದರಾಯರೊಡನೆ ಪಟ್ಟಾಂಗ ಕೊಚ್ಚುತ್ತ ಕೂತಿದ್ದ. ಎದ್ದು ಕೈಜೋಡಿಸುವಾಗಲೇ 'ಹೋ, ರಾಮ ನಾಯ್ಕನ ಸವಾರಿ!' ಎಂದು ರಾಜ ಮಾತಾಡಿಸಿದ.

'ಹೌದಯ್ಯ. ನಿನ್ನೆ ನೀವು ಬೈಲಲ್ಲಿ ಬರುವಾಗಲೇ ನೋಡಿದೆ. ನಿನ್ನೆಯೇ ಬರಬೇಕೆಂದಿದ್ದೆ.'

'ಏನೋ ಅಂಥಾ ಕೆಲಸ?'

'ಕೆಲ್ಸ ಏನು? ಕಾಫಿಗೆ ನಾಲ್ಕು ಕಾಸು ಜಾರಿಸೋಣವೆಂದು ಬಂದಿದ್ದಾನೆ ಅವನು!' ಎಂದು ಗೋವಿಂದರಾಯರು ನಗುತ್ತ ನುಡಿದರು.

'ನಿನ್ನ ಕಾಫಿ ಮಹಿಮೆ ಜೋರು! ನಿನ್ನೆ ರಾತ್ರಿ ಹನ್ನೆರಡು ಗಂಟೆಯ

ಮೇಲೆ ರಾಗ ಎಳೆಯುತ್ತ ಬರುತ್ತಿದ್ದಿಯಲ್ಲ? ಮಲಗಿಕೊಂಡವನಿಗೆ ನನಗೆ ಕೇಳಿಸುತ್ತಿತ್ತು. ಏ, ರಾಮನಾಯ್ಕ, ಇನ್ನು ಕಾಫಿ ನಿನಗೆ ಬಹಳ ವರುಷ ಸಿಗುವುದಿಲ್ಲ ನೋಡು. ಗಾಂಧಿಯವರು ದೊಡ್ಡ ಚಳುವಳಿ ಹೂಡುತ್ತಾರಂತೆ. ಗಾಂಧಿ ರಾಜ್ಯ ಬಂದಮೇಲೆ ಹೆಂಡದಂಗಡಿಗಳನ್ನೆಲ್ಲ ಮುಚ್ಚುತ್ತಾರೆ. ಕುಡಿಯುವವರನ್ನು ಜೈಲಿಗೆ ಕಳಿಸುತ್ತಾರೆ ನೋಡು.'

ಈ ಮಾತು ಕೇಳಿ ರಾಮನಾಯ್ಕನಿಗೂ ನಗು ಬಂತು. ಬಾಯ ತಂಬುಲ ಉಗುಳಿ ಬಂದು, 'ಅಯ್ಯಾ! ಅಷ್ಟರ ವರೆಗೆ ಬದುಕುತ್ತೇನಾ? ಅದೆಲ್ಲ ಸಾಯಲಿ, ಹಳೆ ಅಂಗಿ ಏನಾದರೂ ಇದ್ದರೆ........' ಎಂದು ಬಡಬಡಿಸಿದ.

'ಬಂದಾಗ ಹಳೇ ಅಂಗಿ ತಂದಿದ್ದೇನಾ ಮಾರಾಯಾ?'

'ಕಾಫಿಗೆ ಕಾಸು' ತೊಡಲಿಕ್ಕೆ ಹಳೇ ಅಂಗಿ. ಊಟ ಬೇರೆ, ಪಡಿ ಬೇರೆ ನಿನ್ನದು ನಾಯ್ಕ' ಎಂದು ನಡುವೆ ಹೇಳಿದರು ಗೋವಿಂದರಾಯರು.

ರಾಜ ಅವನ ಉತ್ತರ ಕಾಯದೆ ಹೇಳಿದ–'ಅದೆಲ್ಲ ಹೋಗಲಿ. ಸಾಯಂಕಾಲ ಐದು ಗಂಟೆಗೆ ಬಾ. ಒಂದು ಟ್ರಂಕು ಬೆಡ್ಡಿಂಗ್ ಉಡುಪಿ ವರೆಗೆ ಹೊರಬೇಕು. ನಿನಗೆ ಕಾಸು ಕೊಡೋಣ. ಮೂಗಿಗೆ ಬರುವ ವರೆಗೆ ಕುಡಿ.'

ಅದನ್ನು ಕೇಳಿದ ಗೋವಿಂದರಾಯರು ಕಳವಳದಿಂದ ಒಳಗೆ ಅಡಿಗೆ ಮನೆಯವರೆಗೂ ಬಂದು–'ಏ, ಸಾಯಂಕಾಲವೇ ಹೋಗುತ್ತಾನಂತಲ್ಲೇನೇ?' ಎಂದರು ಹೆಂಡತಿ ಮುಂದೆ.

'ಹೌದು. ನಾಲ್ಕು ದಿನ ರಜೆಯೆಂದು ಮೊದಲೇ ಹೇಳಿದ್ದನಲ್ಲ? ನೀವು 'ಹಾಂ ಹೂಂ' ಎಂದೇನೂ ಹೇಳಲಿಲ್ಲ. ಮಾಣಿ ಬೇಜಾರು ಮಾಡಿಕೊಂಡನೋ ಏನೊ?' ಎಂದು ಕೂಡಿಸಿ ನುಡಿದರು ಸೀತಮ್ಮ.

ಅದನ್ನು ಕೇಳಿ ಅವರಿಗೂ ಬೇಸರವಾಗಿ ಹೊರಗೆ ಬಂದರು. 'ಹೌದೇನೊ, ಸಾಯಂಕಾಲ ಹೋಗುವುದೆಂತಲೇ ಮಾಡಿದೆಯೇನು?' ಎಂದು ಮಗನನ್ನುದ್ದೇಶಿಸಿ ಕೇಳಿದರು. 'ಹೌದು' ಎಂದವನು ಉತ್ತರವಿತ್ತ.

'ಊರಿಗೆ ಬಂದ ಅಣ್ಣ, ತಮ್ಮಲ್ಲಿ ಬರಲಿಲ್ಲಂತ ಗುಲಾಬಿ ಕಮಲ ನೊಂದುಕೊಂಡಾರು.'

'ಕಮಲಳಲ್ಲಿ ಈ ಸಲ ಹೋಗುವುದಕ್ಕಾಗುವುದಿಲ್ಲ. ಕೇಳಿದರೆ, ಸಮಯವಿರಲಿಲ್ಲವೆಂದು ಸಮಾಧಾನ ಮಾಡಿ. ಗುಲಾಬಿಯನ್ನು ಮಾತ್ರ ಕಾಣುತ್ತೇನೆ. ಉಡುಪಿಗೆ ಹೋದವನು ಸಾಯಂಕಾಲ ಅವರಲ್ಲೆ ಉಳಿದು ಬೆಳಿಗ್ಗೆ ಮೋಟಾರ್

ಹತ್ತಿದರೆ ಸರಿ.'

'ಅದು ಸರಿ. ಮತ್ತೆ ನಾವೆಲ್ಲ ಯಾವಾಗ ಬರಬೇಕು? ಏನು ಕತೆ? ಸಾಮಾನು ಸರಂಜಾಮು ಹೇಗೆ ಸಾಗಿಸುವುದು? ಭಾಗೀರಥಿಯನ್ನೇನು ಮಾಡಬೇಕು?'

'ಅದೆಲ್ಲ ವ್ಯವಸ್ಥೆ ನಾನು ಮಾಡುತ್ತೇನೆ. ನಿನಗೇಕೆ ಚಿಂತೆ? ಹತ್ತು ಹದಿನೈದು ದಿವಸಗಳ ಮೇಲೆ ಗಾಡಿ ಕಳಿಸುತ್ತೇನೆ. ನಾನು ಬಂದರೂ ಬಂದೆ. ಇಲ್ಲದಿದ್ದರೆ ಇಬ್ಬರು ಆಳುಗಳನ್ನು ಕಳಿಸುತ್ತೇನೆ. ಒಂದು ಗಾಡಿಗಿಂತ ಹೆಚ್ಚಾದೀತೇನು ಸಾಮಾನು? ಹೇರುವುದನ್ನೆಲ್ಲ ಅದರಲ್ಲಿ ತುಂಬಿಸಿದ. ಭಾಗೀರಥಿಯನ್ನು ಹಿಂಬದಿ ಕಟ್ಟಿದ. ನೀವೆಲ್ಲ ಮೋಟಾರಿನಲ್ಲಿ ಬಂದರೆ ಸರಿ. ಮೋಟಾರಿನಲ್ಲಿ ಹಾಕುವ ಕೆಲವು ಸಾಮಾನುಗಳನ್ನು ಅದರ ಟಾಪಿನ ಮೇಲೂ ಹೇರಿದ. ಇದಕ್ಕೆಲ್ಲ ಆನೆ ಕುದುರೆ ಏನಾಗಬೇಕು?'

ಗೋವಿಂದರಾಯರು ಮತ್ತೆ ಹೆಚ್ಚು ಮಾತುಗಳನ್ನು ತೆಗೆಯಲಿಲ್ಲ. ಊಟವಾದ ಮೇಲೆ ಅನ್ನದ ಆಲಸ್ಯ ಕರಗುವವರೆಗೆ ಸ್ವಲ್ಪ ಪವಡಿಸಿದರು. ಹಾಯಾಗಿ ಸ್ವಲ್ಪ ಅಡ್ಡಬೀಳಲು ಸೀತಮ್ಮನವರಿಗೆ ಪುರುಸೊತ್ತೇ ಇಲ್ಲ. ಸಾಯಂಕಾಲ ಕಾಫಿಗೆ ಏನಾದರೂ ತಿಂಡಿ ಮಾಡಬೇಕೆಂದು ಆತುರ. ಬಾವಿ ಕಟ್ಟೆಯ ಬಳಿ ನಟ್ಟಿದ್ದ ನಾಲ್ಕು ಕೆಸುವಿನ ಎಲೆಗಳನ್ನು ಚಿವುಟಿ ತಂದು ಚೈಂ, ಚುಯಿಂ ಪತ್ರೊಡೆಗಾರಂಭಿಸಿದರು. ಅದೆಲ್ಲ ಮುಗಿದಾಗ ರಾಮನಾಯ್ಕ ಬಂದ. ಟ್ರಂಕ್ ಬೆಡ್ಡಿಂಗ್ ರಾಜ ಕಟ್ಟಿದಾಗ ಸೀತಮ್ಮನವರು ಬಂದು, 'ಇಕೋ, ವಿಜಯನಿಗೆ ನಾಲ್ಕು ಹಪ್ಪಳ!' ಎಂದು ಹೇಳಿ ನಾಲ್ಕು ಕಟ್ಟು ಹಪ್ಪಳ, ಸಾಂಬಳಗಳನ್ನು ತಂದಿಟ್ಟರು.

ರಾಮನಾಯ್ಕ ಸಾಮಾನು ಹೊತ್ತು ಹೊರಟ. ರಾಜನ ಬೆನ್ನ ಹಿಂದೆ ಮೂವರೂ ಬಂದರು. ತೋಟದ ಅಂಚಿನಲ್ಲಿ ಸೀತಮ್ಮನವರು ನಿಂತರು. 'ಮುಟ್ಟಿದ ಮೇಲೆ ಒಂದು ಕಾಗದ ಬರೆ. ಮಗು ಜಾಗ್ರತೆ. ಸುಭಾಷಿಣಿಯನ್ನು ಕೇಳಿದೆನೆಂದು ಹೇಳು' ಎಂದು ಹೇಳಿದರು. ಬೆಳ್ತಂಗಡಿಯೆಂದರೆ ಕಾಶಿ ರಾಮೇಶ್ವರದಷ್ಟು ದೂರ ಎಂದು ಅವರ ಭಾವನೆ. ಗೋವಿಂದರಾಯರು ಬೇರೆ ಮಾತುಗಳನ್ನು ತೆಗೆದರು– 'ಒಬ್ಬಳನ್ನೇ ಬಿಟ್ಟು ಬಹಳ ದಿವಸ ಹಾಗೆಲ್ಲ ಹೋಗಬೇಡ. ಪರ ಊರು; ಪರರಾಜ್ಯ. ಜೀವ ಬಿಟ್ಟುಕೊಂಡು ನಿನ್ನ ಹಾಗೆ ಈಗಿನ ಕಾಲಕ್ಕೆ ಯಾರು ಕೆಲಸ ಮಾಡುತ್ತಾರೆ? ದಕ್ಷಿಣೆಗೆ ತಕ್ಕ ಪ್ರದಕ್ಷಿಣೆ

ಹಾಕುವವರೇ ಬಹಳ. ಸರ್ಕೀಟಿಗೆ ಹೋದಾಗಲೂ ಜಾಗ್ರತೆಯಾಗಿರಬೇಕು. ಸಿಕ್ಕಸಿಕ್ಕಲ್ಲಿ ಊಟ ಮಾಡಬೇಡ' ಎಂದವರು ಉಪದೇಶಿಸಿದರು.

ಎಲ್ಲ ಮಾತಿಗೂ ಅವನದೊಂದೇ ಉತ್ತರ– 'ಹುಂ, ಹುಂ, ಹುಂ.'

ಬೈಲಿನಿಂದ ಮುಂದೆ ಬೆಟ್ಟುಗದ್ದೆಗೇರುವಲ್ಲಿ ಗೋವಿಂದರಾಯರು ನಿಂತರು. ಮೋಹನ ಸಪ್ಪೆ ಮೋರೆ ಹಾಕಿಕೊಂಡದ್ದನ್ನು ನೋಡಿದ ರಾಜ ನಾಲ್ಕಾಣೆ ಪಾವಲಿ ಅವನ ಕೈಯಲ್ಲಿಟ್ಟು, ಹಾಳುಮಾಡಬೇಡ' ಎಂದ.

ಪಾವಲಿ ಕಂಡ ಗೋವಿಂದರಾಯರು 'ಹೌದಾ ರಾಜ, ನಾನು ಹೇಳಲಿಕ್ಕೆ ಮರೆತೇಬಿಟ್ಟೆ. ಹರಿಗೆ ಅಂಗಿಯೇ ಇಲ್ಲ. ಇದ್ದುದೊಂದೂ ಹರಿದಿದೆ. ನಿನಗೆ ಪತ್ರ ಬರಿತೇನೆ ಅಂದಿದ್ದ. ಅವನು ಇದೇ ಹೊತ್ತಿಗೆ ಇಲ್ಲಿಲ್ಲ' ಎಂದು ಉದ್ಗರಿಸಿದರು. ರಾಜ ಮತ್ತೆ ಕಿಸೆಗೆ ಕೈ ತುರುಕಿಸಿ ಪಾಕೀಟು ತೆಗೆದು ಮೂರು ರೂಪಾಯಿ ಕೊಟ್ಟ.

ಅವನು ನಾಲ್ಕಾರು ಮಾರು ದೂರ ಹೋಗುವ ವರೆಗೂ ತಂದೆ ಅವನನ್ನೇ ನೋಡುತ್ತ ನಿಂತರು. ರಾಜ ಮತ್ತೆ ಹೊರಳಿ ನಿಂತು, 'ಇನ್ನು ಹತ್ತಿಪ್ಪತ್ತು ದಿವಸಗಳಿಗೆ ಗಾಡಿ ಕಳಿಸುತ್ತೇನೆ. ಮತ್ತೆ ಮಳೆಗಾಲ ಬರುತ್ತದೆ' ಎಂದು ಕೂಗಿ ಹೇಳಿದ.

'ಎರಡು ದಿನ ಬೇಗನೇ ಕಳಿಸು' ಎಂದು ಗೋವಿಂದರಾಯರು ಉತ್ತರಿಸಿದರು. ಮೋಹನ ನಾಗಾಲೋಟದಿಂದ ಮನೆಯಕಡೆ ಓಡುತ್ತಿದ್ದ. ಮನೆಗೆ ಮರಳಿದ ಗೋವಿಂದರಾಯರು ಅಂಗಳದಲ್ಲೇ ನಿಂತು ನೋಡುತ್ತಿದ್ದ ಸೀತಮ್ಮನವರನ್ನು ನೋಡಿ, 'ಇನ್ನು ಕುಣಿ, ಥೈ ಥೈ ಅಂಗಳದುಗ್ಗು' ಎಂದು ಅಣಕಿಸಿದರು.

'ನೀವು ಹೊರಡಿ ಕಾಶಿಯಾತ್ರೆಗೆ!' ಎಂದು ಹೇಳಿ ನಕ್ಕರು ಸೀತಮ್ಮ.

೩

ರಾಜನ ರಾಯಭಾರದ ಸುದ್ದಿ ಊರು ತುಂಬ ಹಬ್ಬಿತು. ಇಷ್ಟು ಬೇಗ ಪಸರಿಸಿದುದನ್ನು ಕಂಡು ಗೋವಿಂದರಾಯರಿಗೆ ಬಹಳ ಆಶ್ಚರ್ಯವಾಯಿತು.

ಇದು ತಂದೆ ಮಕ್ಕಳೊಳಗಿನ ಗುಟ್ಟು ಎಂದವರು ತಿಳಿದಿದ್ದರು. ರಾಮು ನಾಯ್ಕನೊಬ್ಬನಿಗೆ ಗೊತ್ತಾಗಲು ಸಾಧ್ಯ. ಏಕೆಂದರೆ, ಅವನು ಚಾರು ಚೂರು ಮಾತು ಕೇಳಿದ್ದ. ಟ್ರಂಕ್ ಹೊತ್ತು ಉಡುಪಿಗೆ ತೆರಳಿದಾಗ ಉಳಿದ ವಿವರ ವನ್ನು ರಾಜ ಹೇಳಿರಲೂ ಸಾಕು. ಇನ್ನು ಬಲ್ಲಾಳರಿಗೂ ಗುತ್ತಿನ ಸೆಟ್ಟರಿಗೂ ತಿಳಿಯುವ ಸಂಭವವಿದೆ. ರಾಜ ಅವರನ್ನು ಕಂಡಿದ್ದ. ಮಾತಿಗೆ ಮಾತು ಬಂದಾಗ ತನ್ನ ಹೊಸ ಆಸ್ತಿಪಾಸ್ತಿಯ ಪ್ರಸ್ತಾಪವನ್ನು ಅವನು ತೆಗೆದಿರ ಬಹುದು. ಆದರೆ ಉಳಿದವರ ಕಿವಿಗಳಿಗೆ ಬಿದ್ದ ಬಗೆ ಹೇಗೆ? ಎಲ್ಲರ ಬಾಯಲ್ಲೂ ಅದೇ ಮಾತು. ಕಂಡಕಂಡಾಗ ಎಲ್ಲರೂ ನಿಲ್ಲಿಸಿ ಕೇಳುವವರೇ. ವೆಂಕಟು, ಸೇರಿಗಾರ, ತೌಡಪೂಜಾರಿ, ಜೋಮ ಮರಕಾಲ, ವಿಲಿಯಂ ಸೋಜ, ಮೈದಿನ್‌ಸ್ಯಾಬ, ತ್ಯಾಂಪ ಪಂಬದ, ಅಕ್ಕಸಾಲಿಗ ಸುಬ್ಬ, ಗುಡಿ ಗಾರ ಗೋಪ ಎಲ್ಲರೂ, ‘ ನಿಮ್ಮ ಮಗ ಆಸ್ತಿ ಮಾಡಿದ್ದಾರಂತಲ್ರೀ ? ಎಷ್ಟು ಮುಡಿ? ಎಷ್ಟು ಕೋರ್ಜಿ ? ’ ಮೊದಲಾದ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ‘ ಅಯ್ಯಾ, ನೀವೂ ಹೋಗುತ್ತೀರಂತೆ? ನಮ್ಮ ಊರು ಬಿಡುತ್ತೀರಾ ? ಮತ್ತೆ ಬರೋದಿಲ್ಲವೇ ಸ್ವಾಮಿ ?’ ಎಂದು ಮರುಕದ ಮಾತುಗಳನ್ನಾಡುವರು.

‘ ಹೌದು, ಹೋಗುತ್ತೇವೆ. ಇಲ್ಲಾದರೂ ನಮಗೆ ಏನಿದೆ ?’ ಎಂದು ಕೆಲವರಿಗೆ ಗೋವಿಂದರಾಯರು ಉತ್ತರ ಕೊಟ್ಟರೆ, ‘ ಮಕ್ಕಳು ದೊಡ್ಡವ ರಾದ ಮೇಲೆ ಅವರ ಮಾತು ಕೇಳಬೇಕಲ್ಲ ! ಇಲ್ಲದಿದ್ದರೆ ಮುಪ್ಪಿನ ಕಾಲಕ್ಕೆ ಬಂದಾರಾ ?’ ಎಂದು ಮತ್ತೆ ಕೆಲವರನ್ನು ಸಮಾಧಾಯಿಸುವರು.

ಈ ಖಚಿತ ಮಾತುಗಳನ್ನು ಕೇಳಿ ಊರಿನ ಜನ ತಣ್ಣಗಾಗಿ ಬಿಡುವರು. ಮುಂದೆ ಅವರ ನಾಲಿಗೆಯೇ ಹೊರಳುವುದಿಲ್ಲ. ಮೋರೆ ಚಪ್ಪೆಯಾಗಿ ಬಿಡು ತ್ತದೆ. ತಮ್ಮ ಬಂಧುಬಳಗದವರೇ ಊರು ಬಿಟ್ಟು ತೊಲಗುವ ಸುದ್ದಿಯಿಂದಾ ಗುವ ವ್ಯಸನ ಅವರ ಮೋರೆಯಲ್ಲಿ ಎದ್ದು ಕಾಣತೊಡಗುತ್ತದೆ. ಈ ವ್ಯಸನದ ಚಿಹ್ನೆ ಕಂಡು ಗೋವಿಂದರಾಯರಿಗೆ ಪರಿತಾಪವಾಗುವುದು. ಹಳ್ಳಿಯ ಜನರಿಗೆ ಅವರು ಕೊಟ್ಟುದೇನೂ ಇಲ್ಲ. ಅವರಿಗೆ ಒಕ್ಕಲು ಪಕ್ಕಲು ಕೂಡಾ ಇಲ್ಲ. ಎಷ್ಟೋವೇಳೆ, ಪೇಟೆಗಿಂತ ಒಂದು ರೂಪಾಯಿ ಕಡಿಮೆ ಕ್ರಯಕ್ಕೆ ಮುಡಿ ಅಕ್ಕಿ ಹಳ್ಳಿಯಲ್ಲಿ ಅವರು ಕೊಂಡುದುಂಟು. ಮಾವಿನಹಣ್ಣಿನ ಋತುವಿನಲ್ಲಿ ಅವರ ಹುಡುಗರು ನಸುಕಿನಲ್ಲೆದ್ದು ಮಡಲಿನ ಪಂಜು ಹೊತ್ತಿಸಿಕೊಂಡು ತೆರಳಿ, ಕಾಟು ಮಾವಿನ ಮರದ ಬುಡದಲ್ಲಿ ಬಿದ್ದ ಹಣ್ಣುಗಳನ್ನು ಹೆಕ್ಕಿತಂದುದುಂಟು.

ಮಾವಿನ ಹಣ್ಣಿನ ಮರ, ಅಮಟೆ ಮರ, ಗೇರು ಹಣ್ಣಿನ ಮರ, ಹುಣಸೆ ಮರಗಳಿಗೂ ಕಲ್ಲು ಹೊಡೆದಿದ್ದರು. ಕೊಯ್ಲಿನ ಕಾಲಕ್ಕೆ ಬತ್ತದ ಸೂಡಿ ಹೊರುವ ದಿನ ಅವರ ಮಕ್ಕಳು ಗದ್ದೆಗಳಿಗೆ ಓಡಿ ಉದುರಿದ ಕೊರಳನ್ನು ಬುಟ್ಟಿಯಲ್ಲಿ ಆರಿಸಿಕೊಂಡು ಬಂದುದೂ ಇದೆ. ಸೀತಮ್ಮನವರು ಹುಡುಗಿಯ ರೊಂದಿಗೆ ಮಳೆಗಾಲ ಬೇಸಿಗೆ ಕಾಲಗಳೆಂಬ ಭೇದವಿಲ್ಲದೆ ಸದಾಕಾಲ ಗದ್ದೆ ಯಂಚು, ಹುಣಿಗಳಲ್ಲಿ ಬೆಳೆದ ಹಸುರು ಹುಲ್ಲನ್ನು ಕೆತ್ತಿ ರಾಶಿರಾಶಿಯಾಗಿ ತರುತ್ತಿದ್ದರು. ಇಷ್ಟು ವರುಷಗಳಾದರೂ ಅನ್ನಪಾನ ಸ್ನಾನಾದಿ ನಿತ್ಯ ಕರ್ಮ ಗಳಿಗೆ ಅವರು ಕಟ್ಟಿಗೆಗೂ ಕಾಸು ಕೊಟ್ಟಿಲ್ಲ. ತೆಂಗು, ಕಂಗಿನ ಮಡಲುಗಳು ಬಿದ್ದೊಡನೆಯೇ ನಡುಹಗಲೆಲ್ಲ ದರದರ ಎಳೆದೊಯ್ಯುತ್ತಿದ್ದರು. ಮನೆಯಲ್ಲಿ ಹುಡುಗ ಹುಡುಗಿಯರ ಉಪನಯನ, ಮದುವೆ ಬಂದಾಗ 'ಏ ತೌಡಾ, ಏ ಚೋಮ, ಏ ವೆಂಕಟು' ಎಂದು ಹಂಗಿನ ಒಕ್ಕಲುಗಳನ್ನು ಕರೆವಂತೆ ಕರೆದು, 'ಕಂಬ ಹುಗಿ, ಚಪ್ಪರ ಹಾಕು, ಎಲೆ ತಾ, ದಿಬ್ಬಣದೊಟ್ಟಿಗೆ ಬಾ, ಅಡಿಕೆ ಸಿಪ್ಪೆತೆಗೆ, ಸತ್ತ ದನ ಹುಗಿ' ಎಂದು ಆಜ್ಞಾಪಿಸಿದುದು ಒಂದೆರಡು ಸಲವಲ್ಲ. ಇಷ್ಟೆಲ್ಲ ಅವರಿಗೆ ತೊಂದರೆ ಕೊಟ್ಟಿರುವಾಗ ಅವರು, 'ನೆರೆಮನೆ ಹೋದರೆ ಕರು ಕಟ್ಟಲು ಜಾಗವಾಯ್ತು' ಎಂದು ಸಂತಸಪಡಬೇಕಿತ್ತು. ಅದರ ಬದಲು ಅತಿಶಯ ದುಃಖ ವ್ಯಕ್ತಪಡಿಸಲು ತೊಡಗಿದುದನ್ನು ಕಂಡು ಗೋವಿಂದ ರಾಯರು ಬೆಂದರು. ಅವರೂ ನಿಸ್ತೇಜರಾಗುತ್ತ ಬಂದರು. ಮನೆಯ ಅಂಗಳಕ್ಕೆ ಬಂದಾಗ ಮಾಡಿನಿಂದ ಹಿಡಿದು ಇಡೀ ಮನೆಯನ್ನು ನೋಡುವರು. ಜಗಲಿಗೆ ಬಂದಾಗ ಒಂದೊಂದೇ ಕಂಬವನ್ನು ಮುಟ್ಟುವರು. ಪಡುಸಾಲೆಗೆ ಬಂದಾಗ ಮೇಲಿನ ಜಂತೆಗಳನ್ನು ಲೆಕ್ಕ ಹಾಕುವರು. ಅಡಿಗೆಮನೆಗೆ ಅಕಸ್ಮಾತ್ ಕಾಲಿಟ್ಟರೆ ಸುತ್ತ ನಾಲ್ಕೂ ಗೋಡೆಗಳನ್ನು ದಿಟ್ಟಿಸುವರು. ಮನೆ ತಮ್ಮದಲ್ಲ. ತಮ್ಮದಲ್ಲದಿದ್ದರೂ ಇನ್ನೂ ಬಿಟ್ಟಿಲ್ಲ. ಆದರೂ ಬಿಟ್ಟವರಂತೆ, ಕಳೆದುಕೊಂಡವರಂತೆ ಅವರು ವರ್ತಿಸುತ್ತಿದ್ದಾರೆ.

ಮನೆ ಬಿಡುವ ಮಾತು ಬಂದಾಗ ಸೀತಮ್ಮನವರೂ ಕಣ್ಣಿಗೆ ಸೆರಗಿನ ತುದಿಯನ್ನು ತಂದುಕೊಳ್ಳುತ್ತಾರೆ. ಮನೆಯಲ್ಲಿ ಒಬ್ಬರೇ ನಿಂತಾಗ ಕುಳಿತಾಗ ಅವರಿಗೆ ಏನೇನೋ ಎನ್ನಿಸುತ್ತದೆ. ಯಾವುಯಾವುದೋ ಚಿತ್ರಗಳು ಕಣ್ಣ ಮುಂದೆ ಕಟ್ಟಿದಂತಾಗುತ್ತವೆ. ಹಿಂದೆ ಅವರು ಮೊದಲಸಲ ಕಾಲಿಟ್ಟಾಗ ಸಣ್ಣ ಹುಡುಗಿ. ವಿದ್ಯೆ ಬುದ್ಧಿ ಇದ್ದಿಲ್ಲ. ಅತ್ತೆಯೇ ತಿದ್ದಿ ದೊಡ್ಡವಳನ್ನಾಗಿ

ಮಾಡಿದರು. ಇಲ್ಲೇ ವೈನೆರೆದರು. ನಿಷೇಕಪ್ರಸ್ತವಾದುದೂ ಇದೇ ಮನೆಯಲ್ಲಿ. ಅಂದಿನಿಂದ ಒಂದು ದಿನ ತವರುಮನೆಗೆ ತೆರಳಲಿಲ್ಲ. ತಾಯಿ ತಂದೆ ಇಲ್ಲದಿದ್ದುದರಿಂದ ಹೋಗಬೇಕಾದರೂ ಎಲ್ಲಿಗೆ? ಹೇಮಾಭೀಮರಾದ ಅಣ್ಣತಮ್ಮಂದಿರಿದ್ದರೂ ಸಿರಿತನದ ಸೊಕ್ಕಿನಿಂದ ಅವರು ಬರಲಿಲ್ಲ; ಕರೆಯಲಿಲ್ಲ. ಹೀಗಾಗಿ ಗಂಡನ ಮನೆಯ ಗಂಜಿಯೇ ಲೇಸೆಂದು ಅವರು ಹೋಗಲಿಲ್ಲ. ಮಕ್ಕಳು ಮರಿ ಹುಟ್ಟಿದ ಮೇಲೆ ಹೋಗಲು ಆಗಲೂ ಇಲ್ಲ. ಬೇಗ ಬೇಗ ಹುಟ್ಟ ಮಕ್ಕಳು ಮನೆಗೆ ಒಕ್ಕಲಾದರು ಒಂದರ ಮೇಲೊಂದು ಗಂಡು. ಗಂಡು ನಾಲ್ಕಾದರೆ ಎರಡು ಹೆಣ್ಣುಗಳನ್ನೂ ದೇವರು ಕೊಟ್ಟ. ದೊಡ್ಡವನು ಒಳಹೊರಗೆ ಓಡಿದಾಗ ಸಣ್ಣವನಿಗೆ ಮಾತು ಬಂತು. ದೊಡ್ಡವಳಿಗೆ ಕಾಲು ಬಂದಾಗ ಗುಡ್ಡ ಹರಿ ಹರಿದಾಡಿದ. ಅಂಗಳದಲ್ಲೊಂದಿದ್ದರೆ ಅಡಿಗೆಮನೆಯಲ್ಲೊಂದು. ಅಂಗಡಿಗೊಂದು ತೆರಳಿದಾಗ ರಂಗಸ್ಥಳದಲ್ಲೊಂದು. ಯಾರೂ ತಪ್ಪಿರಲಿಲ್ಲ. ಯಾವಾಗಲೂ ತಪ್ಪಿರಲಿಲ್ಲ. ಮಳೆಗಾಲವಾದರೂ ಅಷ್ಟೆ, ಸೆಕೆಗಾಲವಾದರೂ ಅಷ್ಟೆ. ಮಳೆಗಾಲದಲ್ಲಿ ತಟಪಟ ನೀರು ಸೋರಿ ನೆಲ ಅಲ್ಲಲ್ಲಿ ತೂತುಬಿದ್ದರೆ ಬೇಸಿಗೆ ಕಾಲದಲ್ಲಿ ಹೊಸ ಮಣ್ಣನ್ನು ತಂದು ಸಾರಿಸಿ, ಕಲ್ಲಿನಿಂದ ತಿಕ್ಕುವರು. ನೆಲಕ್ಕೆ ಸಲ್ಲಿಸುವ ಶೋಡಷೋಪಚಾರ ಅಲ್ಲಿಗೇ ನಿಲ್ಲಲಿಲ್ಲ. ಅದರ ಮೇಲೆ ಮತ್ತೆ ಕರಿ ಬಳಿಯಲುಂಟು. ಅದರ ಮಸಿ ವೈಬಟ್ಟೆಗಳಿಗೆ ತಗಲದಂತೆ ಹುಡುಗರಿಂದ ಬಂಥದ ಕಾಯಿ ತರಿಸಿ, ಅದರ ಅಂಟುನೀರು ಚಿಮುಕಿಸಿ ಅರೆಯಬೇಕು. ಹೆಣ್ಣುಮಕ್ಕಳು ಅರಳಿದ ಮೇಲೆ ಈ ಹೊರೆ ಅವರ ಮೇಲೆಯೇ ಹೆಚ್ಚಾಗಿ ಬಿದ್ದಿತು. ಇನ್ನೂ ಲಂಗ ತೊಡಲು ಬಾರದೆ ಇದ್ದಾಗಲೇ ಗೆಣಸಿನ ಎಲೆಗಳನ್ನು ತರಿಸಿ ಅವರಿಂದ ನೆಲವನ್ನು ತಿಕ್ಕಿಸುತ್ತಿದ್ದರು. ನೀರು ಚೆಲ್ಲುವ ಅಡಿಗೆಮನೆಯೆಂದು ಬಿಟ್ಟಿರಲಿಲ್ಲ. ನಾಯಿ, ದನ ತುಳಿಯುವ ಅಂಗಳವೆಂದು ಸಸಾರ ಮಾಡಿರಲಿಲ್ಲ. ಎಲ್ಲ ಕಡೆಗಳಿಗೂ ಅವರ ಕೈ ಚಾಚಿದೆ. ಎಲ್ಲ ಕಡೆಗಳಲ್ಲೂ ಅವರ ಹೆಜ್ಜೆ ಕಾಣಿಸುತ್ತಿದೆ. ಗಂಡನ ಮನೆಗೆ ತೆರಳುವ ವರೆಗೂ ಗೆಜ್ಜೆ ಕಟ್ಟಿ ಕುಣಿವವರಂತೆ ಹಗಲೂ ಇರುಳೂ ಕೆಲಸ ಕೆಲಸವೆಂದು ಕುಣಿದುವು.

ದೊಡ್ಡ ಹುಡುಗಿ ಗುಲಾಬಿಗೆ ಇದೇ ಮನೆಯಲ್ಲಿ ತಾಳಿ ಕರಿಮಣಿ ಕಟ್ಟಿದರು. ಕಮಲೆಯನ್ನು ಕೇಳಲು ಬಂದವರು ಹದಿನೈದು ದಿವಸಗಳೊಳಗೇ ದಿಬ್ಬಣ ತಂದರು. ಒಬ್ಬಳಿಗೆ ಜಗಲಿಯಲ್ಲಿ ಧಾರೆಯೆರೆದರೆ ಮತ್ತೊಬ್ಬಳಿಗೆ ಅಂಗಳದಲ್ಲಿ ದೊಡ್ಡ ಚಪ್ಪರ ಹಾಕಿ ಗಂಡಿನ ಕೊರಳಿಗೆ ಮಾಲೆ ಹಾಕಿಸಿದರು.

ಗುಲಾಬಿ ಮದುವೆಗೆ ಊರಿನ ಸೇರಿಗಾರ ವೆಂಕಟು, ‘ಪೆ, ಪೇ, ಪೇ’ ವಾಲಗ ಊದಿದರೆ, ಕಮಲೆಯ ಲಗ್ನಕ್ಕೆ ರಾಜ ಉಡುಪಿಯಿಂದ ಬ್ಯಾಂಡಿನವರನ್ನು ಕರೆದು ತಂದ. ಕೊಟ್ಟ ಹುಡುಗೆಯರು ಕುಲದಿಂದ ಹೊರಗೆ ತೆರಳಿದಾಗ ಆದ ಕಷ್ಟ, ಹುಡುಗರ ಹೆಂಡಂದಿರು ಬಂದಾಗ ಉಳಿಯಲಿಲ್ಲ. ಶುಭಗಳಿಗೆಯಲ್ಲಿ ಸುಭಾಷಿಣಿ ಬಂದು ಮನೆಗೆ ಶೋಭೆ ತಂದಳು. ಆ ಮೇಲೆ ಶಿವರಾಯನ ಹೆಂಡತಿ ಸಗುಣ ಪ್ರಸನ್ನಳಾದಳು. ಶುಭಶೋಭನ ಕಾರ್ಯಗಳೆಲ್ಲ ಒಂದರ ಮೇಲೊಂದು ಇದೇ ಮನೆಯಲ್ಲಿ ನೆರವೇರಿತು. ಇಂಥ ಸುಂದರ ಸೌಭಾಗ್ಯ ಸೌಧವನ್ನು ತೊರೆಯಬೇಕಲ್ಲಾ ಎಂದು ಸೀತಮ್ಮನವರ ಜೀವಕ್ಕೆ ಕರಕರೆ ಯಾಗಿದೆ.

ಜೀವ ಮರಮರ ಮರುಗುತ್ತಿದ್ದಾಗಲೇ ವಾರದ ಕೊನೆಯ ದಿನ ಮಕ್ಕಳೊಂದಿಗೆ ಗುಲಾಬಿ ಉರಿಬಿಸಿಲಿಗೇ ಬಂದಳು. ಚಂದನದ ಬೊಂಬೆಗಳಂತಿರುವ ಆ ಮಕ್ಕಳನ್ನೂ ಮಗಳ ಸಣ್ಣ ಮೋರೆಯನ್ನೂ ಕಂಡು ಸೀತಮ್ಮನವರ ಕೈಕಾಲುಗಳ ಶಕ್ತಿಯೇ ಇಂಗಿತು. ‘ಅಮ್ಮಾ, ಇಷ್ಟು ದಿನ ನೆನಪಾದಾಗೆಲ್ಲ ಒಂದೊಂದೇ ನೆವ ಹೇಳಿ ನೀವಿದ್ದಲ್ಲಿ ಬರುತ್ತಿದ್ದೆ. ಬಾಯಾರಿದ್ದುದನ್ನೆಲ್ಲ ಬೇಡಿ ತಿಂದೆ. ಇನ್ನು ನಾನೆಲ್ಲಿ ಹೋಗಲಿ? ವರುಷಕ್ಕೊಮ್ಮೆಯಾದರೂ ಮೋರೆ ನೋಡುವ ಭಾಗ್ಯವುಂಟೊ ಇಲ್ಲವೋ? ನೀವು ಬರುವುದುಂಟಾ? ನಮ್ಮನ್ನು ಯಾರು ಕರೆದುಕೊಂಡು ಹೋಗುವವರು?’ ಎಂದು ಹೇಳಿ ಮಕ್ಕಳಂತೆ ಅಳ ತೊಡಗಿದಳು. ಅವಳಿಗೆ ಏನು ಹೇಳಬೇಕು? ಹೇಗೆ ಸಂತೈಸಬೇಕೆಂದು ಸೀತಮ್ಮನವರಿಗೆ ಹೊಳೆಯಲಿಲ್ಲ. ಅವರಿಗೂ ಅಳು ಬಂತು. ಮಕ್ಕಳೂ ಅಳುತ್ತ ಅವರ ಕೊರಳಿಗೆ ಬಿದ್ದುವು. ‘ಅಡಿಗೆಮನೆಯಲ್ಲಿ ಒಂದೇ ಮಗು ವನ್ನು ಬಿಟ್ಟು ಅತ್ತಿತ್ತ ಆಲೆಯಬೇಡ. ಬೆಂಕಿಕೊಳ್ಳಿ ಹಿಡಿದು ಎಳೆದೀತು’ ಎಂದು ಒಮ್ಮೆ ಮಗಳಿಗೆ ಹಿತನುಡಿದರು. ‘ಕೊರಳಿಗೆ ಚೈನ್ ಯಾಕೆ? ದೇವರು ಕೊಟ್ಟ ಸೌಂದರ್ಯವೇ ಸಾಕು. ನಮ್ಮ ಗ್ರಹಚಾರ ಬಂದಾಗ ಬೊಗ್ಗು ಎದುರಾದ ಎಂಬ ಗಾದೆ ನಿನಗೆ ಗೊತ್ತುಂಟು. ಯಾರಾದರೂ ಬಂಗಾರದ ಆಶೆಯಿಂದ ಕೊರಳಿಗೆ ಕೈ ಕೊಟ್ಟಾರು?’ ಎಂದು ಮತ್ತೊಮ್ಮೆ ಎಚ್ಚರಿಸು ವರು. ಈ ಹಿತನುಡಿ ಹತನುಡಿ ಆಡಿ, ಅವಳು ಬೇಡಿದ್ದನ್ನು ಕೊಟ್ಟು ಕಳಿಸಿದ ಒಂದೆರಡು ದಿವಸಗಳ ಮೇಲೆ ಕಮಲೆಯನ್ನು ಬಾರ್ಕೂರಿಂದ ಹರಿ ಕರೆದು ಕೊಂಡು ಬಂದ.

‘ ಊರಿಗೆ ಬಂದ ಅಣ್ಣ ನಮ್ಮ ಮನೆಗೆ ಬರಲೇಯಿಲ್ಲ. ನನಗವನ ಸೀರೆಗೀರೆ ಬೇಕಾಗಿತ್ತೇನು ? ಮೋರೆ ತೋರಿಸಬಹುದಿತ್ತಲ್ಲ ! ನಾನು ಅಂಥ ಅಪರಾಧ ಮಾಡಿದ್ದೇನು ? ಬಡವರೆಂದು ಇಷ್ಟು ತಾತ್ಸಾರ ಈಗಲೇ ’ ಎಂದು ಮೊದಲು ಸ್ವಲ್ಪ ಸಿಡುಕಿನ ನುಡಿಗಳೇ ಉದುರಿದವು.

‘ ಬಡವರು ಯಾರು ? ದೊಡ್ಡವರು ಯಾರು ? ದೊಡ್ಡವ ಅವನು, ಶ್ರೀಕೃಷ್ಣ ಪರಮಾತ್ಮ ಒಬ್ಬನೇ. ಸುಮ್ಮನೆ ಸಿಟ್ಟಾಗುತ್ತೀಯಲ್ಲ ? ಕೆಸುವಿನ ಗಿಡಕ್ಕೆ ದನ ಕಟ್ಟಿ ಬಂದ ಹಾಗೆ ಓಡಿಬಂದಿದ್ದ ಅವ. ಒಂದು ದಿನ ಪೂರಾ ಇಲ್ಲಿ ನಿಲ್ಲಲಿಲ್ಲ. ನಿನ್ನನ್ನು ಕೇಳಿದ. ನಿನಗೆ ಹೇಳಿ ಕಳಿಸೋಣವೆಂದರೆ ಹರಿ ಮನೆಯೊಳಗೆ ಇರಲಿಲ್ಲ. ಹಾಗೆ ಓಡಿ ಬರಲು ನಿನಗಾದರೂ ಸಾಧ್ಯವಿದೆಯೇನು ? ’ ಎಂದು ಸೀತಮ್ಮ ಮಗಳ ದೇಹವನ್ನೇ ದಿಟ್ಟಿಸಿದರು.

ಕಮಲೆಗೆ ಅರ್ಥವಾಯಿತು. ಅವಳ ಸಿಟ್ಟು ಇಳಿಯಿತು. ಮಾತಿನಲ್ಲಿ ದೈನ್ಯತೆ ತುಂಬಿ ಬಂತು. ‘ ಅಮ್ಮಾ, ಈ ಮೊದಲನೇ ಸಲ ನೀವಾದರೂ ಕರೆದುಕೊಂಡು ಬರುವಿರೆಂದು ನಂಬಿದ್ದೆ. ಅದು ನನ್ನ ಋಣದಲ್ಲಿಲ್ಲವೆಂದು ಕಾಣುತ್ತದೆ. ಅತ್ತೆ ನನಗೆ ಮೊದಲೇ ಇಲ್ಲ. ಏನೇನು ಅನುಭವಿಸಲು ದೇವರು ಬರೆದಿದ್ದಾನೊ ’ ಎಂದು ಹೇಳಿ ಕಣ್ಣೊರಸಿಕೊಂಡಳು. ಅದರಿಂದ ಸೀತಮ್ಮನವರಿಗೆ ಅಪಾರವಾದ ನೋವು ಉಂಟಾದರೂ ಅಳಲು ಇದು ತಕ್ಕ ಸಂದರ್ಭವಲ್ಲವೆಂಬುದು ಅವರ ತಾಯಿ ಹೃದಯಕ್ಕೆ ಹೊಳೆಯದೆ ಇರಲಿಲ್ಲ. ಹತಾಶಸ್ಥಿತಿಯಲ್ಲಿದ್ದ ಗರ್ಭಿಣಿ ಮಗಳಿಗೆ ಧೈರ್ಯದ ಹಿತವಚನದ ಅಭಯ ಕೊಡಲು ಅವರು ನಿರ್ಧರಿಸಿ ಉತ್ತರ ಕೊಟ್ಟರು. ‘ ಛೇ, ನೀನು ಹೀಗೆಲ್ಲ ಅಳಬಾರದು. ನೋಡು, ಅದರಿಂದ ನಿನ್ನ ಕೂಸಿನ ಮೇಲೂ ಪರಿಣಾಮವಾಗುತ್ತದೆ. ನಿನಗೆ ಅಂಥ ಕಷ್ಟವೇನು ? ಸೀತಾದೇವಿಯಂತೆ ಅಡವಿಪಾಲು ಮಾಡುತ್ತಾರೆಂದು ತಿಳಿದೆಯಾ ? ಅರಣ್ಯಕ್ಕಟ್ಟಿದ್ದ ದೇವಿಯನ್ನೂ ದೇವರು ಕೈ ಬಿಡಲಿಲ್ಲ; ಒಂದು ದಾರಿ ತೋರಿಸಿದ. ಹಾಗಿರುವಾಗ ಕೈ ಹಿಡಿದವನು ಏನಾದರೂ ಒಂದು ವ್ಯವಸ್ಥೆ ಮಾಡದೆ ಇರುತ್ತಾನೇನು ? ಮರುಳು ನಿನಗೆ ’ ಎಂದು ಗದರಿಸಿ ಸಮಾಧಾನ ಪಡಿಸಿದರು. ‘ ನಾವು ಹೊರಡುವವರೆಗೂ ನೀನು ಇಲ್ಲೇ ಇರು. ಗಾಡಿ ಬಂದ ದಿನವೇ ನೀನ್ನೂರಿಗೆ ಕಳಿಸುತ್ತೇನೆ. ಬಾಗೀರಥಿಯ ಕಡಸು ಕರು ನಿನಗೆ ಕೊಡಬೇಕೆಂದೇ ಸಾಕಿದ್ದೇನೆ ’ ಎಂದು ಗೆಲುವಿನ ಸುದ್ದಿ ತಿಳಿಸಿದರು ಮಗಳಿಗೆ.

ಹೀಗೆ ಹಾಂ ಹೂಂ ಎಂದು ದುಃಖದ ಬಂಡಿ ಎಳೆಯುವಾಗಲೇ ರಾಜ ಕಳಿಸಿದ ಗಾಡಿ ಬಂತು. ರಾಜ ಬಂದಿರಲಿಲ್ಲ. ಬದಲು ಇಬ್ಬರು ಆಳುಗಳನ್ನು ಕಳಿಸಿದ್ದ. ಅವನು ಕೊಟ್ಟಿದ್ದ ಪತ್ರ ಮುಟ್ಟಿಸಿ, 'ಗಾಡಿಗೆ ತುಂಬಿಸುವುದನ್ನೆಲ್ಲ ತುಂಬಿಸಿ ನೀವು ಮೋಟಾರಿನಲ್ಲಿ ಹೊರಡಬೇಕಂತೆ. ನಾವು ಹಿಂದಿನಿಂದ ಗಾಡಿ ಹೊಡೆದುಕೊಂಡು ಬರುತ್ತೇವೆ. ಅಯ್ಯ ಬೆಳ್ತಂಗಡಿಯಲ್ಲಿ ನಿಮ್ಮ ದಾರಿ ನೋಡುತ್ತಿದ್ದಾರೆ' ಎಂದೂ ಪ್ರಸ್ತಾವನೆ ಓದಿದರು.

ಆ ಮೇಲೆ ಕಾಲ ವಿಳಂಬ ಮಾಡುವಂತಿರಲಿಲ್ಲ. ಒಂದೊಂದೇ ಪಾತ್ರೆಪಡಗು, ಉದ್ಧರಣೆ, ಕೌಳಿಗೆ, ಹರಿವಾಣಗಳನ್ನು ಎಣಿಸಿ ಗೋಣಿಚೀಲಗಳಿಗೆ ತುರುಕಿಸಿ ಬಾಯಿ ಬಿಗಿದರು. ಒಂದೊಂದೇ ಗೋಣಿಚೀಲ ಬಂದು ಬಿದ್ದಂತೆ ಕಮಾನಿನ ಗಾಡಿ ತುಂಬತೊಡಗಿತು. ಅದರಲ್ಲಿ ಹೇರಿದ ವಸ್ತುಗಳು ಅಂಥಿಂಥವು ಎಂದು ಹೇಳುವುದೇ ಕಠಿನ. ಊರು ತೊರೆದು ಪರ ಊರಿಗೆ ಹೊರಡುವ ಒಂದು ಸಂಸಾರ ಕಸಕಡ್ಡಿಗೂ ಕೈಯೊಡ್ಡುತ್ತದೆ. ಬಾವಿಕಟ್ಟೆಯ ಬದಿಯಲ್ಲಿ ನೆಟ್ಟ ಕೆಸು, ಮರಸಣಿಗೆಯ ಗಿಡಗಳನ್ನು ಹಿಡಿದೆಳೆದರು ಎಂದೆನ್ನಬೇಕೆ? ತುಪ್ಪ-ಗೆಣಸು, ಮರಗೆಣಸು, ಸುವರ್ಣಗಡ್ಡೆ, ಗೆಣಸುಗಳೂ ಕಹಿಯಲ್ಲ. ಮನೆಯೊಳಗೆ ಮಳೆಗಾಲಕ್ಕೆಂದು ತೆಂಗಿನ ಒಲಿಯಲ್ಲಿ ಸುತ್ತಿ ಅಡ್ಡ ಬಿದಿರಿಗೆ ಕಟ್ಟಿದ್ದ ಸೌತೆ, ಮುಳ್ಳುಸೌತೆ, ಇಬ್ಬುಳ್ಳಿ, ಕುಂಬಳಕಾಯಿಗಳನ್ನೂ ಬಿಡುವಂತಿದ್ದಿಲ್ಲ. ಹೀರೆ, ಸೋರೆ, ಬೆಂಡೆ, ಅಳಸಂದೆ, ಹಾಗಲು, ಕುಂಬಳಗಳ ಬೀಜಗಳನ್ನೂ ಚಿಂದೆ ಬಟ್ಟೆಯಲ್ಲಿ ಸಣ್ಣ ಸಣ್ಣ ಗಂಟು ಕಟ್ಟಿ ಹಂಡೆಯೊಳಗಿಟ್ಟರು. ಮಲ್ಲಿಗೆ, ಬಯ್ಯ ಮಲ್ಲಿಗೆ, ದುಂಡುಮಲ್ಲಿಗೆ, ಗುಂಡುಮಲ್ಲಿಗೆ, ಚೆಂಡು ಗೊಂಡೆ ಮಲ್ಲಿಗೆಗಳ ಗಿಡ ಬೀಜಗಳನ್ನೂ ಸೀತಮ್ಮ ಮರೆಯಲಿಲ್ಲ. ತಮ್ಮ ಮನೆಯಲ್ಲಿದ್ದ, ನೆರೆಯಲ್ಲಿದ್ದ, ಊರಿನಲ್ಲಿದ್ದ ಕೈಗೆ ಸಿಗುವ, ಬಾಯಿಗೆ ಬರುವ ಗಿಡ ಬೀಜಗಳನ್ನೂ ಬಿಡಲಿಲ್ಲ. ತುಳಸಿ, ತೆಂಗು, ಬಾಳೆ ಸಸಿಗಳನ್ನೂ ಕಟ್ಟಿ ಗಾಡಿಯಲ್ಲೆಸೆದರು. ಗಾಡಿಯಲ್ಲಿ ಹೇರಿದ ಸಾಮಾನು ಸರಂಜಾಮುಗಳನ್ನು ಕಂಡರೆ ದೇಶ ಬಿಟ್ಟು ದೇಶಕ್ಕೆ ವಲಸೆ ತೆರಳುವ ಪ್ರಾಚೀನ ಆರ್ಯರ ಒಂದು ಕುಟುಂಬವೆಂದು ಭಾಸವಾಗುತ್ತಿತ್ತು.

೧೯೩೩ನೇ ಮೇ ಶುಕ್ಲಪಕ್ಷದ ಶುಭದಿವಸ, ಶುಭಮುಹೂರ್ತದಲ್ಲಿ ಸಾಯಂಕಾಲ ಪಯಣಕ್ಕೂ ಅವರು ಸಿದ್ಧರಾದರು. ರಾತ್ರಿ ಅವರೆಲ್ಲ ಉಡುಪಿಯಲ್ಲಿ ತಂಗಿ ಮರುದಿನ ಮುಂಜಾನೆ ಬಸ್ ಹತ್ತುವುದೆಂದು ನಿಶ್ಚಯ ಮಾಡಿದ್ದರು. ನಿತ್ಯಕರ್ಮದ ದೇವರ ಪೆಟ್ಟಿಗೆ, ಉಡುಗೆ ತೊಡುಗೆಗಳ ಟ್ರಂಕ್ ಮತ್ತು

ಹಾಸಿಗೆಗಳನ್ನು ಗಾಡಿಯವರು ಉಡುಪಿಯಲ್ಲಿ ಒಪ್ಪಿಸಬೇಕೆಂದೂ ತಿಳಿಸಿದರು. ಅಕ್ಕನ ಮನೆ ತೋರಿಸಲು ಗಾಡಿಯವರೊಂದಿಗೆ ಹರಿ ಮೊದಲೇ ಹೊರಟ. 'ಮೂವರು ಒಮ್ಮೆ ಹೊರಡಬಾರದಂತೆ. ನೀನು ಉಡುಪಿ ವರೆಗೆ ಬಾ. ಅಕ್ಕನ ಮನೆಯಲ್ಲಿ ಎರಡು ದಿನ ಇದ್ದು ಹೋಗು. ಹಡೆವ ಕಾಲಕ್ಕೆ ಒಂದು ತಿಂಗಳಾದರೂ ನಿನ್ನನ್ನು ನೋಡಿಕೊಳ್ಳಲು ಅವಳಿಗೆ ಒತ್ತಾಯ ಮಾಡುತ್ತೇನೆ. ಕರು ಈಗ ಬಲ್ಲಾಳರ ಮನೆಯಲ್ಲಿರಲಿ. ನೀನು ಊರಿಗೆ ಮರಳಿದ ಮೇಲೆ ಹೊಡೆಸಿಕೊಂಡು ಹೋಗು' ಎಂದು ಸೀತಮ್ಮನವರು ಕಮಲೆಯನ್ನು ಸಂಗಡ ಕರೆದುಕೊಂಡರು.

ಮನೆಗೆ ಸರಪಳಿ ಸಿಕ್ಕಿಸಿ ಹೊರಡುವಾಗ ಸೀತಮ್ಮನವರಿಗೆ ಅಳು ಉಕ್ಕಿ ಬಂತು. ಅಂಗಳದಲ್ಲಿ ತುಳಸಿಕಟ್ಟೆಗೆ ಪ್ರದಕ್ಷಿಣೆ ಬಂದು, ದೈವ ದೇವರನ್ನು ಸ್ಮರಿಸಿ ಸಾಷ್ಟಾಂಗ ನಮಸ್ಕರಿಸಿ ಎದ್ದಾಗ ಗೋವಿಂದರಾಯರ ಕಣ್ಣುಗಳಲ್ಲಿ ಕಂಬನಿ ತುಂಬಿತ್ತು. ಅಂಗಳದಲ್ಲಿ ರಾಮನಾಯ್ಕ, ತೌಡ, ಸುಬ್ಬ ಹಾಗೂ ಅವರ ಹೆಂಡತಿಯರು ತಮ್ಮ ಮರಿಮಕ್ಕಳೊಂದಿಗೆ ಕಣ್ಣೊರಸುತ್ತ ನಿಂತಿದ್ದರು. 'ಅಯ್ಯ, ಮುಂದಿನ ವರುಷ ಉಡುಪಿ ಪರ್ಯಾಯಕ್ಕಾದರೂ ನಮ್ಮ ಊರಿಗೆ ಬನ್ನಿ' ಎಂದು ಎಲ್ಲರೂ ಹೇಳುವವರೇ. 'ಹಡೆದ ಎರಡು ಹೆಣ್ಣುಗಳಿವೆಯಲ್ಲ? ಅವನ್ನು ನೋಡಬೇಕಾದರೂ ಬಂದೇ ಬರುತ್ತೇನೆ' ಎಂದು ಸೀತಮ್ಮನವರು ನುಡಿದು ಭರವಸೆ ಕೊಟ್ಟರು. 'ನೀವು ಸ್ವಲ್ಪ ಮುಂದಕ್ಕೆ ನಡೆಯಿರಿ. ಬಲ್ಲಾಳರ ಮನೆಯ ದಾರಿಯಿಂದ ಬರುತ್ತೇನೆ' ಎಂದು ಗೋವಿಂದರಾಯರು ಅಡ್ಡ ತಿರುಗಿದರು. ಅಂಗಳಕ್ಕೆ ಬಂದು ನಿಂತಿದ್ದ ಬಲ್ಲಾಳರನ್ನು ಕಂಡೊಡನೇ ಗೋವಿಂದರಾಯರಿಗೆ ದುಃಖವನ್ನು ತಡೆಯಾಗಲಿಲ್ಲ. 'ಈ ಊರಿನ ಋಣ, ಈ ನೀರಿನ ಋಣ ಕಡಿಯಿತು ಬಲ್ಲಾಳ್ರೇ' ಎಂದು ಅವರು ಮರುಗಿದರು.

'ಛೇ ಮಾಷ್ಟ್ರೇ, ನೀವು ಅಳಬಾರದು. ವಯಸ್ಸಾದ ಮೇಲೆ ಮಕ್ಕಳನ್ನು ಆಶ್ರಯಿಸುವುದು ಪರಮಗುಣ. ಅದಕ್ಕಾಗಿ ನೀವು ಆನಂದಪಡಬೇಕು. ನೀವು ನಿಶ್ಚಿಂತೆಯಿಂದಿರಿ. ಮಕ್ಕಳು ದುಡಿದುಹಾಕುತ್ತಾರೆ. ನಮಗೆ ಯಾವ ಊರಾದರೇನು? ಯಾವುದು ಶಾಶ್ವತ? ನಮ್ಮ ಹಿರಿಯರು ಇಲ್ಲಿಗೆ ಎಲ್ಲಿಂದ ಬಂದರೆಂದು ನಮಗೆ ಗೊತ್ತಿದೆಯೇನು? ಎಲ್ಲ ಪರಮಾತ್ಮನ ಲೀಲೆ. ಕುಣಿಸುವವನು ಅವನು. ಕುಣಿಯುವ ಕರ್ಪೂರದ ಗೊಂಬೆಗಳು ನಾವು. ಅದಕ್ಕೆ ಚಿಂತೆ ಮಾಡಬಾರದು' ಎಂದು ದುಃಖಶಮನದ ಮಾತುಗಳನ್ನಾಡಿದರು.

'ಬಲ್ಲಾಳ್ರೇ, ನಾನಾಗಲೀ ನಮ್ಮ ಮಕ್ಕಳಾಗಲೀ ಏನಾದರೂ ಕಾಯಾ ವಾಚಾ ಮನಸಾ ತಪ್ಪು ಮಾಡಿದ್ದರೆ ಕ್ಷಮಿಸಿ.'

ಪ್ರತಿ ನಮಸ್ಕಾರ ಮಾಡಿದ ಬಲ್ಲಾಳರಿಗೂ ಕಣ್ಣಲ್ಲಿ ನೀರು ಬಂತು. ಗೋವಿಂದರಾಯರಿಗಿಂತ ವಯಸ್ಸಿನಲ್ಲೂ ಅವರು ಸ್ವಲ್ಪ ಹಿರಿಯರು. 'ತಪ್ಪು ನಿಮ್ಮಿಂದಾಗಿಲ್ಲ, ನಿಮ್ಮ ಮಕ್ಕಳಿಂದಲೂ ಆಗಿಲ್ಲ. ದೇವರು ನಿಮಗೆ ಮುತ್ತಿನಂತಹ ಮಕ್ಕಳನ್ನು ದಯಪಾಲಿಸಿದ್ದಾನೆ. ಅವರಿಗೆ ಉತ್ತರೋತ್ತರ ಅಭಿವೃದ್ಧಿಯಾಗುತ್ತದೆ' ಎಂದು ಬಲ್ಲಾಳರು ಬಂದು ಆಲಂಗಿಸಿದರು.

ವೇಳೆಯಾದುದರಿಂದ ಗೋವಿಂದರಾಯರು ಹೊರಟು ಹೆಂಡತಿ ಮಕ್ಕಳನ್ನು ಕೂಡಿಕೊಂಡರು. ದಾರಿಯುದ್ದಕ್ಕೂ ಅಲ್ಲಲ್ಲಿ ಬೆಟ್ಟು ಗದ್ದೆಗಳ ಮೇಲೆ ಹೆಂಗಸರು ಮಕ್ಕಳೊಂದಿಗೆ ನಿಂತು ಸೀತಮ್ಮನವರನ್ನು ಮಾತನಾಡಿಸುತ್ತಿದ್ದರು. ಉಡುಪಿಗೆ ಬಂದಾಗ ಸಂಜೆಯಾಗಿತ್ತು. ಅಲ್ಲಿ ಉಳಿದು ಮುಂಜಾನೆ ಮುಂದಿನ ಪ್ರಯಾಣ ಬೆಳೆಸಿದರು. ಗಾಡಿ ಮಾತ್ರ ಅಂದು ರಾತ್ರಿಯೇ ಹೊರಟಿತ್ತು. ಬೇಸಿಗೆಕಾಲವಾಗಿದ್ದುದರಿಂದ ಎತ್ತಿನ ಗಾಡಿಗಳನ್ನು ಹಗಲಿಗೆ ಹೊಡೆಯುವುದು ಕಡಿಮೆ. ರಾತ್ರಿಯೇ ಅವುಗಳ ಪಯಣ. ಹಗಲಿಗೆ ಎಲ್ಲಾದರೂ ಮರಗಳ ನೆರಳಲ್ಲಿ ತಂಗಿ ಗಂಜಿ ಬೇಯಿಸಿ, ಉಪ್ಪು ಹುಳಿ ಮೆಣಸು ಕೊಬ್ಬರಿಗಳ ಚಟ್ನಿ ಅರೆದು ಉಣ್ಣುವರು. ಎತ್ತುಗಳಿಗೆ ಹುಲ್ಲೇ ಆಹಾರ. ಗಾಡಿಯ ಹಿಂಬದಿ ಕಟ್ಟಿದ್ದ ಭಾಗೀರಥಿಗಂತೂ ಇದು ಹೊಸ ಅನುಭವ. ಮೊದಲು ಅದು ಎತ್ತುಗಳಂತೆ ಭರದಿಂದ ನಡೆಯಲು ಸಮ್ಮತಿಸಲೇ ಇಲ್ಲ. ಮನೆಯ ಸವಿ ತಿಂಡಿಗಳ, ಕರುಗಳ ಸ್ಮರಣೆಯಾಗಿ ಹಿಂದೆ ಹಿಂದೆ ಎಳೆಯಲು ಯತ್ನಿಸುತ್ತಿತ್ತು. ರಸ್ತೆಯ ಅಕ್ಕಪಕ್ಕದಲ್ಲಿದ್ದ ಗುಡ್ಡ, ಗದ್ದೆಗಳಿಗೆ ಓಡಲು ಆತುರಪಡುತ್ತಿತ್ತು. ಒಬ್ಬ ಆಳು ಚಬುಕ ಹಿಡಿದು ಅದರ ಬೆನ್ನಹಿಂದೆ ಬರಬೇಕಾಯ್ತು. ಒಂದೇ ರಾತ್ರಿಯ ಪಯಣಕ್ಕೆ ಅದರ ಕಾಲುಗಳು ಸೋತುವು. ಎತ್ತುಗಳಂತೆ ಅದರ ಪಾದಗಳಿಗೆ ಲಾಳ ಬಿಗಿದದ್ದೂ ಇಲ್ಲ. ಅದರ ಕಣ್ಣುಗಳಲ್ಲಿ ನೀರು ಸುರಿಯುತ್ತಿತ್ತು. ನೀರಬೈಲೂರಿಗೆ ಮೋಟಾರ್ ಬಂದಾಗ ರಸ್ತೆಯ ಬದಿಯಲ್ಲಿ ಬಿಚ್ಚಿಬಿಟ್ಟಿದ್ದ ಗಾಡಿಯ ಹಿಂಬದಿ ಭಾಗೀರಥಿ ಮಲಗಿದ್ದುದನ್ನು ಸೀತಮ್ಮನವರು ಬಸ್ಸಿನಿಂದ ಇಣಿಕಿ ನೋಡಿದರು. ಅದಕ್ಕೂ ಗುರುತು ಸಿಕ್ಕು ಅದು ಎದ್ದು 'ಅಮ್ಮಾ ಅಮ್ಮಾ' ಎಂದು ಮೊರೆಯಿಟ್ಟಿತು. 'ಅಮ್ಮಾ, ದನ ಬಹಳ ಹೆದರಿದೆ. ಎಲ್ಲಿಗೋ ಕರೆದೊಯ್ಯುತ್ತಿದ್ದಾರೆಂದು ಭಾವಿಸಿ ಬರಲು ಕೇಳ

ಲ್ಲೊಲ್ಲದು. ಇನ್ನೂ ನಾಲ್ಕು ರಾತ್ರಿಯ ಪಯಣವಿದೆ. ಕಾರ್ಕಳ, ಮೂಡು ಬಿದರೆ, ವೇಣೂರು, ಬೆಳ್ತಂಗಡಿ, ನಾಲ್ಕು ರಾತ್ರಿ ನಾಲ್ಕು ಹಗಲು. ಏನು ಮಾಡುತ್ತದೋ ಏನೋ?' ಎಂದು ಆಳುಗಳು ಬಂದು ಅರುಹಿದರು.

'ಒಂದು ದಿನ ತಡವಾದರೂ ಚಿಂತೆಯಿಲ್ಲ. ಓಡಿಸಬೇಡಿ. ಹೊಡೆಯ ಬೇಡಿ. ಗಬ್ಬದ್ದು. ಓಲೆ ಬೆಲ್ಲ ಒಂದು ಕಟ್ಟು ತೆಗೆದು ಹಿಡಿದುಕೊಳ್ಳಿ. ಅದನ್ನು ಕೈಯಲ್ಲಿ ಹಿಡಿದುಕೊಂಡರೆ ಬಸ್ರೂರು ವರೆಗೂ ಮಗುವಿನಂತೆ ಬರುತ್ತದೆ' ಎಂದು ಸೀತಮ್ಮನವರು ಒಂದು ಉಪಾಯವನ್ನು ತಿಳಿಸಿದರು. ಬಸ್ಸಿನಿಂದ ಇಳಿದು ಬಾಗೀರಥಿಯ ಮೋರೆ, ಕುತ್ತಿಗೆಗಳ ಮೇಲೆ ಕೈಯಾಡಿಸಿ, ಮೈದಡವಿ, 'ಅಮ್ಮ, ನಿನ್ನನ್ನು ಕಾಪು ಮಾರಿಯಮ್ಮನಿಗೆ ಬಲಿಕೊಡಲು ಅವರು ಒಯ್ಯುವುದಿಲ್ಲ. ಕಟುಕರಿಗೂ ನಾವು ಕೊಟ್ಟಿಲ್ಲ. ನಮ್ಮ ಊರಿಗೇ ಕರೆದೊಯ್ಯುತ್ತಿದ್ದೇವೆ' ಎಂದು ಸಂತೈಸುವ ನಾಲ್ಕು ಮೋಹದ ಮಾತುಗಳ ನ್ನಾಡಿ ಹೊರಟರು.

ನಿಶ್ಚಿತ ದಿನ ಹೊರಡಲು ಮೊದಲೇ ತಿಳಿಸಿದ್ದ ರಾಜ ಅಂದು ಬಸ್ ಬರುವ ಒಂದು ಗಂಟೆ ಮೊದಲೇ ಸ್ಟ್ಯಾಂಡಿನಲ್ಲಿ ಹಾಜರಾಗಿದ್ದ. ಒಂದು ಬಸ್ ಬುಸು ಗುಟ್ಟುತ್ತ ಬಂದು ನಿಂತೊಡನೆಯೇ ಅದಕ್ಕೆ ಪ್ರದಕ್ಷಿಣೆ ಬಂದು ಹಣಕಿ ಹಣಕಿ ನೋಡುವುದು ಅವನ ಕೆಲಸ. ಬರುವ ಬಸ್ ಒಂದೆರಡೇ. ಉಡುಪಿ ಕಾರ್ಕಳ ಮಾರ್ಗದಿಂದ, ಮೂಲ್ಕಿ ಮೂಡುಬಿದರೆ ಲೈನಿನಿಂದ, ಮಂಗಳೂರು ಬಂಟ್ವಾಳ ದಾರಿಯಿಂದ, ಪುತ್ತೂರು ಉಪ್ಪಿನಂಗಡಿ ಕಡೆಯಿಂದ ಚಾರ್ಮಾಡಿಘಾಟಿಗೆ ಬೆಳ್ತಂಗಡಿ ಮೂಲಕವೇ ಬಸ್‌ಗಳು ಓಡಾಡುತ್ತವೆ. ಅನೇಕ ಕಂಪನಿ ಗಳಿದ್ದುದರಿಂದ ಚಲಿಸುವ ಬಸ್ಸುಗಳೂ ಅಸಂಖ್ಯವೇ. ಒಮ್ಮೊಮ್ಮೆ ನಿಶ್ಚಿತ ವೇಳೆಗೆ ನಿರೀಕ್ಷಿಸುವುದರಲ್ಲೂ ಅರ್ಥವಿಲ್ಲ. ಪೋಲೀಸ್ ಅಥವಾ ಇನ್ನಿತರ ಸರಕಾರೀ ಅಧಿಕಾರಿಗಳಿಗಾಗಿ, ಅವರ ಹೆಂಡಿರು ಮಕ್ಕಳಿಗಾಗಿ ಬಸ್ ಅವರ ಮನೆಗಳಿಗೆ ದಾರಿಬಿಟ್ಟು ನಡೆಯುವುದು. ಅವರ ಮನೆಗಳ ಮುಂದೆ ಅರ್ಧ ಮುಕ್ಕಾಲು ಗಂಟೆ ನಿಲ್ಲುವುದೂ ಸೇವಾಧರ್ಮ. ಇಲ್ಲದಿದ್ದರೆ ಕಂಪನಿ ಡೈರೆಕ್ಟರರಿಗೆ ಅರ್ಜಿ ಬರೆಯಲು ಅಥವಾ ಡ್ರೈವರರ ಲೈಸನ್ಸ್ ಕ್ಯಾನ್ಸಲ್ ಮಾಡಲು ಅವರು ಹಿಂಜರಿಯುವುದಿಲ್ಲ. ಆದುದರಿಂದ ಕೆಂಪು ಮುಂಡಾಸು ಅಥವಾ ಪಟ್ಟೆವಾಲರನ್ನು ದೂರದಿಂದ ಕಂಡೊಡನೆಯೇ ಬಸ್ಸಿನ ವೇಗ ಕಡಿಮೆ ಯಾಗಿ ಹೊತ್ತಿಗೆ ಮುಟ್ಟುವುದಿಲ್ಲ. ಹೀಗಾಗಿ ಬಸ್ ತಡವಾದ ದಿನ ಬೆಳ್ತಂಗ

ಡಿಯ ಕಮ್ತಿ ಏಜಂಟರು ರಾಘವೇಂದ್ರರಾಯರಂತಹ ತಮ್ಮ ವಿಶ್ವಾಸಿ ಮಿತ್ರರ ಮುಂದೆ, 'ಕಿತೇಂ, ತೂಂ ಕಸಲೆ ಉಲ್ರೈತಾ? ನಿಮಗೆಷ್ಟು ಸಾರಿ ಹೇಳಲಿ ರಾಘವೇಂದ್ರರಾಯರೇ? ಬಸ್ ಚಾ ಕುಡಿಯಲು ಹಾಟೇಲಿಗೆ ಹೋಯ್ತುಂತ ಹೇಳಿದರೆ ನೀವು ನಂಬುತ್ತೀರಾ? ಇನ್‌ಸ್ಪೆಕ್ಟರರ ಹೆಂಡತಿ ಲಂಗ ಬಿಚ್ಚಿ ಲಂಗ ಹಾಕಿಕೊಳ್ಳುವಾಗ ಹೊತ್ತಾಯಿತೆಂದು ಹೇಳಲಿಕ್ಕಾಗುತ್ತದೆಯೇ? ಮೂಡುಬಿದರೆಯ ಹತ್ರ, ಪೆಟ್ರೋಲಿನಲ್ಲಿ ಕಸ ಬಂತು ಎಂದು ಚಲನ್‌ನಲ್ಲಿ ಬರೆದುಬಿಟ್ಟರೆ ಸರಿ. ಕಿತೇಂ?' ಎಂದು ನುಡಿದು ನಗುವರು.

ಅವರು ಗಹಗಹಿಸುತ್ತಿದ್ದಾಗಲೇ ಉಡುಪಿಯ ಮೋಟಾರ್ ಬಂದಿತು. ದೂರದಿಂದಲೇ ಗೋವಿಂದರಾಯರ ಮುಂಡಾಸನ್ನು ಗುರುತಿಸಿದ ರಾಜ 'ಬಂದರು, ಬಂದರು' ಎಂದು ತನ್ನಷ್ಟಕ್ಕೆ ಆಡಿಕೊಳ್ಳುತ್ತಾ ಎದ್ದುನಿಂತು ತಾನಿದ್ದೇನೆಂದು ತಿಳಿಸಲು ಚಪ್ಪಾಳೆ ಹೊಡೆದ. 'ಬೆಳ್ತಂಗಡಿ. ಇಳಿಯಿರಿ, ಇಳಿಯಿರಿ' ಎಂದು ಗೋವಿಂದರಾಯರು ಹೆಂಡತಿ ಕಡೆ ನೋಡಿ ನುಡಿದರು. 'ಸೋಡಾ ಲೆಮನ್ ಕ್ರಶ್; ಸೋಡಾ ಲೆಮನ್ ಕ್ರಶ್; ಬೀಡಾ ಬೀಡಿ ಸಿಗರೇಟು; ಬೀಡಾ ಬೀಡಿ ಸಿಗರೇಟು; ಆರೇಂಜ್ ಅನಾನಾಸ್ ಬಾಳೆಹಣ್ಣು; ಆರೇಂಜ್ ಅನಾನಾಸ್ ಬಾಳೇಹಣ್ಣು' ಎಂದು ಮೂರು ನಾಲ್ಕು ಹುಡುಗರು ಬಸ್ಸಿನ ಸುತ್ತಲೂ ಸುತ್ತಿ ಕೂಗತೊಡಗಿದರು. ಮೋಹನನ ಬಾಯಲ್ಲಿ ನೀರೂರಿತು. ತಾಯಿಯ ಸೀರೆ ಹಿಡಿದೆಳೆಯುತ್ತ ಸೋಡಾ ಬೇಡಿದ– 'ಇಲ್ಲೇ ಅಣ್ಣನ ಮನೆಯಿದೆ. ಊಟದ ಹೊತ್ತು. ಈಗ ಯಾಕೆ ನಿನಗೆ ಸೋಡಾ?' ಎಂದು ಅವರು ಕಣ್ಣು ಕೆಂಪಗೆ ಮಾಡಿದರೂ ರಾಜ ಕೇಳಿ ಕೊಡಿಸಿದ. 'ವಿಜಯ ಎಲ್ಲಿ?' ಎಂದು ಕೇಳಿದರು ಸೀತಮ್ಮ. 'ಕರೆದುಕೊಂಡು ಬರಲಿಲ್ಲ. ಬಸ್ ಲೇಟಾಗುತ್ತದೆ ಎಂದು ಹೇಳಿ ಬಿಟ್ಟು ಬಂದೆ' ಎಂದ ರಾಜ. ಟ್ರಂಕ್ ಹಾಸಿಗೆಗಳನ್ನು ಪೇದೆಯ ತಲೆಯ ಮೇಲೆ ಹೊರಿಸಿ ತನ್ನ ಬಾಡಿಗೆ ಮನೆಗೆ ಕರೆದುಕೊಂಡು ನಡೆದ.

ಊಟ ಉಪಚಾರ ಮುಗಿದ ಬಳಿಕ ಬಂಗಾಡಿಗೆ ತೆರಳುವ ವಿಷಯದ ಬಗೆಗೆ ತಂದೆ ಮಗ ಚರ್ಚಿಸಿದರು. 'ಬಂಟ್ವಾಳಕ್ಕೆ ಅಕ್ಕಿ ಹೇರಿಕೊಂಡು ಹೋದ ಅನೇಕ ಗಾಡಿಗಳು ಮರಳಿ ಬರುತ್ತವೆ. ರಾತ್ರಿ ಇಲ್ಲಿ ಗಾಡಿಯಲ್ಲಿ ಮಲಗಿಕೊಂಡರೆ ಬೆಳಗಾಗುವಾಗ ಬಂಗಾಡಿಗೆ ಮುಟ್ಟುತ್ತದೆ. ನಾವೂರು ಮಿತ್ತಬಾಗಿಲ್ ರಸ್ತೆಯೂ ಅಷ್ಟು ಪಡ್ಪೋಶಿ ಅಲ್ಲ. ಆದರೆ ನೇತ್ರಾವತಿ ಹೊಳೆ

ಮಾತ್ರ ದಾಟಬೇಕಾಗುತ್ತದೆ. ನಿಮಗೆ ಇಷ್ಟವಿಲ್ಲದಿದ್ದರೆ ಮುಂಡಾಜೆ ವರೆಗೆ ಬಸ್ಸಿನಿಂದಲೇ ತೆರಳಿ ಮುಂದೆ ನಾಲ್ಕು ಮೈಲು ಗಾಡಿ ಗೊತ್ತುಮಾಡೋಣ' ಎಂದು ರಾಜ ವಿವರಿಸಿದ.

'ಗಾಡಿ ಪ್ರಯಾಣ ಬೇಡ ರಾಜ. ಗಾಡಿ ಅತ್ತಿತ್ತ ವಾಲುತ್ತ ಹೋದಾಗ ಮೈ ಗುದ್ದಿದಂತಾಗುತ್ತದೆ. ಒಂದು ಹೊಳೆಯೂ ಇದೆಯೆನ್ನುತ್ತಿ. ಅದಕ್ಕಿಂತ ಮುಂಡಾಜೆಯಿಂದ ನಾಲ್ಕು ಮೈಲು ನಡೆಯುವುದೇ ಲೇಸು. ನಮ್ಮ ಸಾಮಾನು ಬಹಳವಿಲ್ಲ. ಮುಂಡಾಜೆಯಲ್ಲಿ ಯಾರಾದರೂ ಆಳು ದೊರೆತರೆ ತಲೆ ಮೇಲೆ ಹೊರಿಸಿದ' ಎಂದರು ಗೋವಿಂದರಾಯರು.

'ಹಾಗಿದ್ದರೆ ಈಗಲೇ ಹೊರಡಬೇಕು' ಎಂದು ರಾಜ ಹೇಳಿದುದು ಸುಭಾಷಿಣಿಯ ಕಿವಿಗೆ ಬಿದ್ದುದರಿಂದ ಅವಳು ಆಕ್ಷೇಪಿಸಿದಳು. 'ಬಿಸಿಲಿಗೆ ಈಗ ಬಂದಿಳಿದಿದ್ದಾರಷ್ಟೆ. ಈಗಲೇ ಹೊರಡಿಸಿ! ಇಂದು ಇಲ್ಲೇ ಉಳಿದು ನಾಳೆ ಹೊರಟರೆ ಏನಾಗುತ್ತದೆ?' ಎಂದವಳು ಗಂಡನ ಮುಂದೆ ನುಡಿದಳು.

'ನಾಳೆ ಮಂಗಳವಾರ' ಎಂದರು ಗೋವಿಂದರಾಯರು. ಸುಭಾಷಿಣಿಯ ಮೋರೆ ಚಿಕ್ಕದಾದುದನ್ನು ಕಂಡ ರಾಜ, 'ಆದಕ್ಕೇಕೆ ಚಿಂತೆ? ನೀನೂ ಹೊರಟುಬಿಡು. ಹೇಗೂ ನಾನಲ್ಲಿ ಎರಡು ದಿವಸ ಇರುತ್ತೇನೆ. ನಾನು ಹಿಂದೆ ಬಂದಾಗ ಬಾ' ಎಂದು ಸಂತೈಸಿದ.

ತಂದೆ ಮಕ್ಕಳು ತಾಯಿ ಸೊಸೆ ಮುಂಡಾಜೆಯಲ್ಲಿಳಿದು ಬಂಗಾಡಿಯ ರಸ್ತೆ ಹಿಡಿದರು. ಬಂಗಾಡಿ ಬಡಗು ದಿಕ್ಕಿನಲ್ಲಿದೆ. ಮುಂಡಾಜೆಯಿಂದ ಅಲ್ಲಿಗೆ ಎತ್ತಿನ ಗಾಡಿ ತೆರಳುವ ರಸ್ತೆಯನ್ನು ಕಡೆದಿರುವರು. ಹೆಬ್ಬಾವಿನಂತೆ ರಸ್ತೆ ಕಾಡಿನ ನಡುವೆ ನುಸುಳಿದೆ. ಇಕ್ಕೆಲಗಳಲ್ಲಿ ಸಣ್ಣ ಸಣ್ಣ ಗುಡ್ಡಗಳು. ಮುಂಡಾಜೆಯ ಸಮೀಪ ರಸ್ತೆಯ ಅಕ್ಕ ಪಕ್ಕಗಳಲ್ಲಿರುವ ಗುಡ್ಡಗಳಲ್ಲಿ ಕುರಿಚಲು ಗಿಡಗಳು. ಅಲ್ಲೊಂದು ಇಲ್ಲೊಂದು ದೊಡ್ಡ ಮರ. ಆದರೆ ಮುಂದೆ ನಡೆದಂತೆ ಈ ಕಾಡು ಸಮೃದ್ಧವಾಗಿದೆ. ಎಷ್ಟು ನಡೆದರೂ ರಸ್ತೆಯ ಇಬ್ಬದಿಗಳಲ್ಲಿ ಒಂದು ಮನೆಯಾಗಲಿ ಒಂದು ಅಂಗಡಿಯಾಗಲಿ ಇಲ್ಲ. ಗೋವಿಂದರಾಯರಿಗೆ ಸ್ವಲ್ಪ ಭಯವೂ ಆಯಿತು. 'ಅರಣ್ಯ ಆರಂಭವಾಯಿತೇನು?' ಎಂದವರು ಪ್ರಶ್ನಿಸಿದರು.

'ಛೇ, ಅರಣ್ಯ ಇಷ್ಟು ಸಮೀಪವಿಲ್ಲ. ಇವೆಲ್ಲ ಏನು ಮಹಾ? ಈ ರಸ್ತೆಯ ಅಕ್ಕ ಪಕ್ಕದ ಕಾಡುಗಳು ಒಂದು ಫರ್ಲಾಂಗು ಕೂಡಾ ಅಗಲವಿಲ್ಲ. ಅವುಗಳ

ಆಚೆ ಈಚೆ ಬೈಲು ಹಳ್ಳಿಗಳೂ ಮನೆಗಳೂ ಇವೆ. ಪಂಚ್ಯಾಯತ್ ರಸ್ತೆಯನ್ನು ಇಬ್ಬದಿಯ ಹಳ್ಳಿಗಳ ಮಧ್ಯೆ ಕಡಿದಿದ್ದಾರೆ, ಅಷ್ಟೆ. ಇನ್ನೂ ಅರಣ್ಯದ ಬುಡಕ್ಕೆ ಹತ್ತು ಹದಿನೈದು ಮೈಲುಗಳಿವೆ. ನೋಡಿ, ಅದು ಪಶ್ಚಿಮ ಘಟ್ಟದ ಸಾಲು. ಬಂಗಾಡಿಯಲ್ಲಿ ಅದು ಮುಮ್ಮೂಲೆಯಾಗಿದೆ. ಪಶ್ಚಿಮ ಮೂಲೆಯಲ್ಲಿರುವುದೇ ಕುದುರೆಮುಖ ಪರ್ವತಾವಳಿ. ಅವುಗಳಲ್ಲಿ ಹಿರಿದೇ ಕುದುರೇಮುಖ. ಇನ್ನೊಂದು, ಸರಿಯಾಗಿ ನಮ್ಮ ಎದುರಿಗೆ ಕಾಣಿಸುವುದು ಎಳ್ನೀರ್ ಘಟ್ಟ. ಬಲಬದಿಯಲ್ಲಿ ಮಲೆತು ನಿಂತಿರುವ ಬೆಟ್ಟ ಬಲ್ಲಾಳರಾಯ ದುರ್ಗ.'

ರಾಜ ಕೈತೋರಿಸಿ ವರ್ಣಿಸುವಾಗ ಎಲ್ಲರ ದೃಷ್ಟಿ ಆ ಪರ್ವತ ಶಿಖರಗಳ ಕಡೆಗೆ ಹರಿಯಿತು. ದೂರದಲ್ಲಿ ಇವು ಹಿಮಗಿರಿಗಳಂತೆ ಕಾಣಿಸಿದುವು. ಅವುಗಳ ಶಿಖರಗಳ ಮೇಲೆ ಬಂದು ಎರಗಿದ ಬಿಳಿ ಮೋಡಗಳು ಹಿಮರಾಶಿಯಂತೆ ಕಂಗೊಳಿಸಿದುವು. ಶಿಖರಗಳ ಮೈಯೆಲ್ಲ ಹಚ್ಚಹಸುರು.

'ಆ ಪರ್ವತಗಳ ಮೇಲೂ ಹಸುರು ಹುಲ್ಲು ಬೆಳೆದಿದೆಯಲ್ಲ?' ಎಂದರು ಸೀತಮ್ಮ.

'ಹೌದು. ಶಿಖರದ ತುದಿಯಲ್ಲಿಯೂ ಹುಲ್ಲಿದೆ. ಗಿರಿಯಿಂದ ಕೆಳಗೆ ಇಳಿದಂತೆ ದಟ್ಟವಾಗಿದೆ. ಇನ್ನೂ ಕೆಳಗಿಳಿದರೆ ಅಲ್ಲಲ್ಲಿ ಕಣಿವೆಗಳೂ ಕಣಿಗಳೂ ಇವೆ. ಕಣಿವೆಗಳಲ್ಲಿ ಬೆಳೆದ ಕಾಡು ಪರ್ವತದ ಮೇಲೆ ಏರುತ್ತ ಏರುತ್ತ ಅದನ್ನು ನುಂಗಲೆತ್ನಿಸುತ್ತದೆ. ಪರ್ವತದ ತಪ್ಪಲು ಹಾಗೂ ಬುಡಪ್ರದೇಶದಲ್ಲಿ ಘೋರಾರಣ್ಯ. ಈ ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಹೆಚ್ಚುಕಡಿಮೆ ಅರಣ್ಯ ೨೦ ಮೈಲುಗಳ ಆಗಲವಾದೀತು.'

'ಹೌದಾ ರಾಜಾ, ಅಷ್ಟು ದೊಡ್ಡ ಅರಣ್ಯವಾ?'

'ಅಷ್ಟು ದೊಡ್ಡದು. ಉದ್ದ ಎಷ್ಟಿದೆಯೆಂದು ತಿಳಿದಿದ್ದೀ? ಸಾವಿರ ಮೈಲುಗಳಾದೀತು. ಮುಂಬಯಿಯಿಂದ ಕನ್ಯಾಕುಮಾರಿಯ ವರೆಗೂ ನೀಡಿದೆ. ಆಗುಂಬೆ, ಚಾರ್ಮಾಡಿ, ಸುಬ್ರಮಣ್ಯ ಮೊದಲಾದವುಗಳೆಲ್ಲ ಇದೇ ಸಾಲಿನಲ್ಲಿವೆ.'

'ಅಬ್ಬಾ, ದೇವರ ವಿಚಿತ್ರ ಸೃಷ್ಟಿಯೆ? ಇಂಥ ಘೋರಾರಣ್ಯದಲ್ಲೇ ನಳದಮಯಂತಿ ಸಿಕ್ಕಿರಬೇಕು' ಎಂದು ಉದ್ಗರಿಸಿದ ಸೀತಮ್ಮನವರು ದಮಯಂತಿಯನ್ನು ನುಂಗಲೆತ್ನಿಸಿದ ಹೆಬ್ಬಾವಿನ ಸ್ಮರಣೆಯಿಂದ, 'ಈ ಅರಣ್ಯದಲ್ಲಿ ಹೆಬ್ಬಾವೂ ಇದೆಯೇನು?' ಎಂದು ಕುತೂಹಲದಿಂದ ಕೇಳಿದರು.

'ಉಂಟೇನೆಂದು ಕೇಳುತ್ತೀಯಾ? ಎಲ್ಲ ಉಂಟು. ಹೆಬ್ಬಾವಿದೆ. ಆನೆ,

ಕರಡಿ, ತೋಳ, ಹುಲಿ ಹುಲ್ಲೆ ಎಲ್ಲ ಉಂಟು. ಕಾಡಿನಲ್ಲಿ ಅವುಗಳದೇ ರಾಜ್ಯ. ಒಂದೆರಡು ವಿಧದ ಪ್ರಾಣಿಗಳೇನು? ಒಂದೊಂದು ಜಾತಿಯಲ್ಲಿ ಮತ್ತೆ ಸಣ್ಣ ದೊಡ್ಡ ಅನೇಕ ಉಪಜಾತಿ. ಬಲಿಪ ಎಂಬ ಒಂದು ಹುಲಿ ನನ್ನಷ್ಟು ಎತ್ತರ, ನನ್ನ ಎರಡರಷ್ಟು ಉದ್ದವಿದೆ. ಒಮ್ಮೆ ಬಂದರೆ ಹತ್ತಿಪ್ಪತ್ತು ದನಗಳನ್ನು ಅಪ್ಪಳಿಸಿಬಿಡುತ್ತದೆ. ದೊಡ್ಡ ಎಮ್ಮೆಯನ್ನು ಬೆನ್ನ ಮೇಲೆ ಹಾಕಿಕೊಂಡು ಓಡಾಡುತ್ತದೆ.'

ಹುಲಿಯ ವರ್ಣನೆ ಕೇಳಿದ ಸೀತಮ್ಮನವರಿಗೆ ಭಾಗೀರಥಿಯ ನೆನಪಾಯ್ತು. 'ಹಟ್ಟಿಗೆ ಗೋಡೆ ಕಟ್ಟಿಸಿದ್ದೀಯಾ?' ಎಂದವರು ಪ್ರಶ್ನಿಸಿದರು.

'ನೀವು ಈಗಲೇ ಅತ್ತೆಯವರನ್ನು ಹೆದರಿಸಿ ಬಿಡಿ' ಎಂದು ಸುಭಾಷಿಣಿ ನುಡಿದು ಕಡೆಗಣ್ಣಿನಿಂದ ಗಂಡನನ್ನು ನೋಡಿದಳು.

'ಹಾಂ, ಹೆದರಿದರೆ ಆಗುತ್ತದೇನು? ಹೆದರಬೇಕೇಕೆ? ಮನುಷ್ಯ ಯಾವ ಪ್ರಾಣಿಗೂ ಹೆದರುವುದಿಲ್ಲ. ಎಲ್ಲ ಮನುಷ್ಯನಿಗೆ ಅಂಜುವವು. ಆ ಘೋರಾರಣ್ಯದಲ್ಲೂ ಮಲೆಕುಡಿಯರೆಂಬ ಒಂದು ಜಾತಿಯ ಹಿಂದುಳಿದ ಜನ ವಾಸಿಸುತ್ತಾರೆ. ಆನೆ ಬಂದರೂ ಅವರು ಹೆದರುವುದಿಲ್ಲ. ಆನೆ ಕರಡಿ ಹುಲಿ ಎಲ್ಲ ಕಡೆ ಇರುವುದೂ ಇಲ್ಲ. ಸಣ್ಣ ಸಣ್ಣ ಕಾಡಿನಲ್ಲಿ ಅವುಗಳ ಸಂತಾನವಿಲ್ಲ. ನೆರಿಯ ಕಾಡಿನಲ್ಲಿ ಆನೆಯಿದೆ. ದಟ್ಟ ಅಡವಿಯಲ್ಲಿ ಅವೆಲ್ಲ ಅಲೆಯುತ್ತವೆ. ಬೈಲು ಹಳ್ಳಿಗಳಿಗೆ ಇಳಿಯುವುದೇ ಅಪರೂಪ. ಇಳಿಯಬೇಕಾದ ಅವಶ್ಯಕತೆಯೂ ಅವುಗಳಿಗಿಲ್ಲ. ಕಾಡಿನಲ್ಲಿ ತಿಂದು ತೇಗಲು ಅವುಗಳಿಗೆ ಕಡಿಮೆಯೇ?' ಎಂದು ರಾಜ ಭಯನಿವಾರಣೆಗೊಳಿಸಿ, ಅಕ್ಕ ಪಕ್ಕದ ಕಾಡುಗಳ ಕಡೆಗೆ ಕೈ ತೋರಿಸುತ್ತ 'ಇಂಥ ಕಾಡುಗಳಲ್ಲೆಲ್ಲ ಹುಲಿಗಳಿವೆಯೇನು? ಹುಲ್ಲೆ ಮೊಲಗಳಿರಬಹುದು. ಕಟ್ಟಿಗೆಗಾಗಿ ಹಳ್ಳಿಯ ಜನ ಈ ಕಾಡನ್ನು ಇನ್ನೆಷ್ಟು ದಿನ ಬಿಟ್ಟಾರು?' ಎಂದುಸುರಿದ.

'ಕಾಡು, ಕಟ್ಟಿಗೆ' ಎಂಬ ಮಾತು ಆಲಿಸಿ ಸೀತಮ್ಮನವರ ಕಿವಿ ಅರಳಿತು. 'ಹೌದು, ಏನು ಕಟ್ಟಿಗೆ? ಎಷ್ಟು ಅನುಕೂಲ! ಕರಾವಳಿಯಲ್ಲಿರುತ್ತಿದ್ದರೆ ಅದರ ಸಂತಾನ ಉಳಿಯುತ್ತಿದ್ದಿಲ್ಲ' ಎಂದು ಆಶ್ಚರ್ಯ ವ್ಯಕ್ತಪಡಿಸಿದರು. 'ಸಂತಾನ' ಎಂಬ ಅತ್ತೆ ಮಾತು ಕೇಳಿ ಸುಭಾಷಿಣಿ ನಕ್ಕಳು.

ಆ ಮಾತು, ಈ ಮಾತು, ಸುಖದುಃಖದ ಮಾತು, ನಕ್ಕುನಗಿಸುವ ಮಾತುಗಳಲ್ಲಿ ಕಾಲ್ನಡಿಗೆಯ ಆಯಾಸ ಗೊತ್ತಾಗಲಿಲ್ಲ. ಮೈಲುಕಲ್ಲುಗಳ

ನ್ನೆಷ್ಟು ದಾಟಿ ಬಂದೆನೆಂದು ನೋಡಲೂ ಇಲ್ಲ. ‘ಇನ್ನು ಬಹಳ ದೂರವಿಲ್ಲ. ಒಂದು ಕೂಗಿನ ಅಳತೆ’ ಎಂದು ನಂಬಿಸುತ್ತ ರಾಜ ಕರೆದುಕೊಂಡು ಬಂದ. ಅವನು ಒಂದೆಡೆ ನಿಂತು, ‘ಹಾಂ, ಆಯ್ತು. ಇಲ್ಲಿಗೆ ನಾಲ್ಕು ಮೈಲುಗಳಾದವು. ಈ ಕಾಸರಕನ ಮರವೇ ಮುಂಡಾಜೆಯಿಂದ ಇಲ್ಲಿಗೆ ನಾಲ್ಕನೇ ಮೈಲುಕಲ್ಲು. ಇಲ್ಲಿ ತಿರುಗಿದರೆ ಸರಿ. ಅಕೋ, ಆ ಮುಳಿಹುಲ್ಲು ಮನೆಯೇ ನಮ್ಮದು. ಬಂತು, ಬಂತು’ ಎಂದು ಹೇಳಿ ಒಳದಾರಿ ಹಿಡಿದ. ಮನೆಯು ಸಮೀಪ ಬಂದಂತೆ ‘ಓ ಬೋರಗೌಡಾ, ಓ ಅಹ್ಮದ್ ಬ್ಯಾರಿ’ ಎಂದು ಕೂಗಿ ಕರೆಯತೊಡಗಿದ.

ಮುಖಮಂಟಪಕ್ಕೆ ಬಂದು, ‘ಅಯ್ಯಬ್ಬ’ ಎಂದು ಕುಳಿತ ಗೋವಿಂದ ರಾಯರು ಮುಂಡಾಸನ್ನು ಬಿಚ್ಚಿ ಅದರ ಚುಂಗಿನಿಂದಲೇ ಮುಖ ಮೈಯಲ್ಲಿ ಒಡೆದು ಹರಿಯುತ್ತಿದ್ದ ಬೆವರನ್ನೊರಸಿಕೊಂಡರು. ‘ನಾವು ಬೇಗ ಹೊರಟ ದ್ದುದೇ ಒಳ್ಳೆಯದಾಯ್ತು. ಕತ್ತಲೆ ಕವಿಯುವುದರೊಳಗೆ ಮನೆ ಮುಟ್ಟಿದೆವು. ಕತ್ತಲೆಯಾಗುತ್ತಿದ್ದರೆ ಮೋಹನ, ವಿಜಯ ನಡೆಯುತ್ತಿದ್ದಿಲ್ಲ. ದಾರಿಯೂ ಕಾಣುತ್ತಿದ್ದಿಲ್ಲ. ಇದೊಂದು ದೊಡ್ಡ ದಂಡಕಾರಣ್ಯ’ ಎಂದು ನಿಟ್ಟುಸಿರು ಬಿಟ್ಟರು.

ಸುಭಾಷಿಣಿ ಕೇಳಿ ಕೇಳದವರಂತೆ ನಟಿಸಿದಳು.

೪

ಭೂಮಿತಾಯಿಯ ಮೈಮೇಲಿನ ಕತ್ತಲೆಯ ಪರೆ ಹರಿದು ತಿಳಿಬೆಳಕಿನ ಪ್ರಕಾಶ ಹರಿದಾಗ ಪಡಸಾಲೆಯಲ್ಲಿ ಮಲಗಿದ್ದ ಗೋವಿಂದರಾಯರು ಕಣ್ಣೆವೆ ಗಳನ್ನು ತೆರೆದರು. ಬಸ್ಸಿನ ಪ್ರಯಾಣದ ಆಯಾಸದ, ನಾಲ್ಕು ಮೈಲು ಕಾಡು ಗುಡ್ಡಗಳನ್ನೇರಿ ನಡೆದ, ಬಳಲಿಕೆಗಳಿಂದ ಅವರಿಗೆ ಗಾಢನಿದ್ದೆ ಹತ್ತಿತ್ತು. ರಾತ್ರಿ ಚಾಪೆಯಲ್ಲಿ ಒರಗಿದ್ದ ಅವರಿಗೆ ಬಹಳ ಹೊತ್ತಿನ ವರೆಗೆ ಕಣ್ಣು ಜೊಂಪು ಹಿಡಿದಿರಲಿಲ್ಲ. ಪರಸ್ಥಳವಾದುದರಿಂದ ಒಮ್ಮೊಮ್ಮೆ ಕೆಲವರಿಗೆ ನಿದ್ದೆ ಹತ್ತದಿರು ವುದು ಸಹಜವೇ. ಅದಲ್ಲದೆ, ಮನೆಯ ಸುತ್ತು ಮುತ್ತು ಹಾಗೂ ದೂರದಿಂದ ಚಿತ್ರವಿಚಿತ್ರವಾದ ಕೂಗುಗಳೂ ಅವರಿಗೆ ಕೇಳಿಸಿದವು. ಕಾಡಿನ ವನ್ಯಜಂತು ಗಳ ಸ್ವರವೇ ಇರಬೇಕೆಂದು ಅವರು ತರ್ಕಿಸಿದ್ದರು. ಆದರಿಂದ ಅವರು

ಮೊದಲು ನಿದ್ರಾಪರವಶವಾಗಲಿಲ್ಲ. ಬೆಳಗಿನ ಜಾವಕ್ಕೆ ಮಾತ್ರ ನಿದ್ದೆಯ ಅಮಲು ಏರಿತು. ಅದನ್ನು ಬಿಡಿಸಲು ಕರಾವಳಿ ಹಳ್ಳಿಗಳಂತೆ ನಾಯಿ ಬಗುಳಿದುದೂ ಕೇಳಿಸಲಿಲ್ಲ. ಕಾಗೆಗಳ 'ಕಾ ಕಾ' ಸ್ವರವೂ ಇರಲಿಲ್ಲ. ಕೋಳಿಗಳ ಸದ್ದಿಲ್ಲ. ಆದುದರಿಂದ ನಸುಕಿನಲ್ಲೇಳಲಿಲ್ಲ. ಮತ್ತು ಉದಯರಾಗವೂ ತಪ್ಪಿತು. ತಪ್ಪಿಗೆ ಪ್ರಾಯಶ್ಚಿತ್ತ ಮಾಡುವವರಂತೆ, 'ನಾರಾಯಣ, ನಾರಾಯಣ' ಎಂದು ಉಚ್ಚರಿಸುತ್ತ ಮುಖಮಂಟಪಕ್ಕೆ ಬಂದರು. ರಾಜ ಇದ್ದಿರಲಿಲ್ಲ. ಅಲ್ಲಿಂದ ಅಡಿಗೆಮನೆಗೆ ತೆರಳಿದರು.

"ರಾಜ ಮೈ ಮೈ ಕಾಣುವ ಹೊತ್ತಿಗೇ ಹಾಸಿಗೆ ಬಿಟ್ಟಿದ್ದ. 'ಬೋರಗೌಡ, ಅಹ್ಮದ್‌ಬ್ಯಾರಿಗಳನ್ನು ಕಂಡು ಈಗ ಬರುತ್ತೇನೆ. ನಾನು ಅತ್ತ ಹೋದಂದಿನಿಂದ ಅವರು ಕೆಲಸಕ್ಕೆ ಬಂದಂತೆ ತೋರುವುದಿಲ್ಲ. ಬರುವಾಗ ಹಾಲನ್ನು ತರುತ್ತೇನೆ ಕಾಫಿಗೆ' ಎಂದು ತಿಳಿಸಿ ಹೋದ. ಈಗ ಬಂದಾನು" ಎಂದು ಸೀತಮ್ಮ ನುಡಿದರು.

ಅಲ್ಲಿಂದ ಅಂಗಳಕ್ಕೆ ಇಳಿದ ಗೋವಿಂದರಾಯರು ಹೊಸ ವ್ಯಕ್ತಿಯನ್ನು ನಖಶಿಖಾಂತ ನೋಡುವಂತೆ ಈ ಹೊಸ ಮನೆಯನ್ನು ದಿಟ್ಟಿಸಿದರು. ಪುನಃ ಏನೋ ನೆನಪಾದಂತಾಗಿ ಅಡಿಗೆ ಮನೆಗೆ ಬಂದರು. ಅಲ್ಲಿಂದ ಪಡುಸಾಲೆಗೆ ಕಾಲಿಟ್ಟು ಗೋಡೆ ಮಾಡುಗಳನ್ನು ನೋಡಿ ಪುನಃ ಮುಖಮಂಟಪಕ್ಕೆ ಹೊರಟರು. ಮನೆಯನ್ನು ತೆಂಕು ಬಡಗಾಗಿಯೇ ಕಟ್ಟಿದ್ದರು. ಮನೆಯ ಬಾಗಿಲು ಬಡಗು ದಿಕ್ಕಿಗಿದ್ದುದರಿಂದ ಅವರಿಗೆ ಸ್ವಲ್ಪ ಸಮಾಧಾನವಾಯ್ತು. ಗೋಡೆ ಮಾತ್ರ ಮಣ್ಣಿನದು. ಅಡ್ಡ ತೊಲೆ, ಜಂತೆ, ಕಂಬ, ಕುತ್ತಿಕಂಬಗಳಿಗೆ ಸಿಗಿದ ತೇಗು ಅಥವಾ ಸಾಗುವಾನಿ ಹಾಕಿಲ್ಲ. ಕಾಡಿನಿಂದ ಈಗ ಕಡಿದು ತಂದು, ನಾಲ್ಕೂ ಬದಿಗಳನ್ನು ಮಡುವಿನಿಂದ ಕೆತ್ತಿ ಜೋಡಿಸಿದಂತಿದೆ. ಕೆಲವು ತೊಲೆಗಳ ಬದಿಗಳನ್ನೂ ಕಡೆದಿರಲಿಲ್ಲ. ತೊಗಟೆಯನ್ನಷ್ಟೆ ಸುಲಿದಿರುವರು. ಒಣಗಿದ ಸಿಪ್ಪೆ ಅಲ್ಲಲ್ಲಿ ಬಟ್ಟೆಯ ಮೇಲಿನ ಕಪ್ಪು ಮುದ್ರೆಯಂತೆ ಕಾಣುತ್ತಿದೆ. ಮಾಡಿಗೆ ಬಿದಿರಿನ ಅಸ್ಥಿಪಂಜರ. ಉದ್ದಕ್ಕೆ ತೊಡೆಯಷ್ಟು ದಪ್ಪದ ಬಿದಿರು. ಅಡ್ಡಕ್ಕೆ ಹಾಕಿದ ಬಿದಿರುಗಳನ್ನೆಲ್ಲ ಸಿಗಿದಿರುವರು. ಎರಡನ್ನು ಜೋಡಿಸಲು ಹುರಿಹಗ್ಗವನ್ನೂ ಉಪಯೋಗಿಸಿರಲಿಲ್ಲ. ಕಾಡಿನಲ್ಲಿ ದೊರೆವ ಬೀಳುಗಳನ್ನೇ ಬಿಗಿದಿದ್ದರು. ಈ ಬಿದಿರಿನ ಗೂಡಿನ ಮೇಲೆ ಕರಾವಳಿಯಂತೆ ಮಡಲಿನ ಹೊದಿಕೆ ಹಾಸಿರಲಿಲ್ಲ. ಬರೇ ಮುಳಿಹುಲ್ಲು ಛಾವಣಿ ಮಾಡಿರುವರು. ಹೀಗಾಗಿ ಅಲ್ಲಲ್ಲಿ ಬೆಳಕು,

ಮನೆಯೊಳಗೆ ಅಡಗಲೆತ್ನಿಸುತ್ತಿರುವ ಕತ್ತಲೆಯನ್ನು ಹಣಕಿ ಹಣಕಿ ನೋಡು ತ್ತದೆ. ಗಾಳಿಗೆ ಅಲ್ಲಲ್ಲಿ ಮುಳಿಹುಲ್ಲೂ ಹಾರಿಹೋಗಿದೆ. ಮುಳಿಹುಲ್ಲಿನಲ್ಲಿರುವ ಹುಳುಹುಪ್ಪಡಿಗಳನ್ನು ಹಿಡಿದು ನುಂಗಲು ಹಕ್ಕಿಪಕ್ಕಿಗಳೂ ಕೆಲವೆಡೆ ಕೊಕ್ಕು ಕಾಲುಗಳಿಂದ ಕುಕ್ಕಿ, ಕೆದರಿವೆ. 'ಮಳೆ ಬಂದರೆ ತಟಕು ನೀರು ಹೊರಗೆ ಹರಿಯಲಿಕ್ಕಿಲ್ಲ' ಎಂದು ತಮ್ಮ ಮನಸ್ಸಿನಲ್ಲೇ ಅಂದುಕೊಂಡರು ಅವರು.

ಮುಖಮಂಟಪದಲ್ಲಿ ನಿಂತಾಗ ಇದಿರಿಗೆ ಅಂಗಳದ ಅಂಚಿನಲ್ಲಿ ಮತ್ತೊಂದು ಸಣ್ಣ ಗುಡಿಸಲು ಅವರಿಗೆ ತೋರಿತು. ಪ್ರಾಯಶಃ ಹಟ್ಟಿಯಿರಬೇಕೆಂದು ಊಹಿಸಿ ಅದನ್ನು ಪರಿಕಿಸಲು ಇಳಿದು ಬಂದರು. ಹೌದು, ಹಟ್ಟಿ. ಪೂರ್ವ ಪಶ್ಚಿಮಕ್ಕೆ ಉದ್ದ ಒಂದು 'ಹಾಲ್'. ಮುಖಮಂಟಪಕ್ಕೆ ಇದಿರಾಗಿ ತೆಂಕು ಮುಖವಾಗಿದೆ. ತೆಂಕು ಮುಖವಾಗಿಯೇ ಬಾಗಿಲು. ಆದರೆ ಈ ಗೋಡೆಯನ್ನು ಮಾಡಿಗೆ ನಿಲುಕುವ ವರೆಗೂ ಏರಿಸಿಲ್ಲ. ಮಾಡಿಗೆ ಎರಡು ಮೊಳದಷ್ಟು ಸ್ಥಳ ಬಿಟ್ಟಿರುವರು. ಈ ಖಾಲಿ ಸ್ಥಳದಲ್ಲಿ ಒಂದೊಂದು ಮೊಳ ದೂರದಲ್ಲೊಂದರಂತೆ ಗೋಡೆಯಲ್ಲಿ ಬಿದಿರನ್ನು ಹುಗಿದಿರುವರು. ಹುಗಿದ ಬಿದಿರಿನ ತುದಿ ಮಾಡಿನ ಬಿದಿರಿಗೆ ಜೋಡಿಸಲ್ಪಟ್ಟಿದೆ. ಈ ನೀಟ ಬಿದಿರುಗಳಿಗೆ ಬಿದಿರಿನ ಸಲಿಕೆಗಳನ್ನು ಅಡ್ಡ ಹೊಡೆದಿರುವರು. ಗಾಳಿ ಪ್ರವೇಶಕ್ಕೆ ಅನುಕೂಲವೆ. ದನಗಳ ಪ್ರವೇಶಕ್ಕೆ ಪೂರ್ವದಲ್ಲಿ ಒಂದೇ ಬಾಗಿಲು. ಪಶ್ಚಿಮದಲ್ಲಿ ಒಂದು ಕಿಟಕಿ. ಹಿಂಬದಿಯ ಗೋಡೆ ಮಾಡನ್ನೂ ಮುಟ್ಟುತ್ತದೆ. ಮತ್ತು ಅಲ್ಲಿ ಒಂದು ಕಿಟಕಿಯನ್ನೂ ಇಟ್ಟಿಲ್ಲ. ದನಕರುವಿಲ್ಲದಿದ್ದುದರಿಂದ ಹಟ್ಟಿಗೆ ಸೊಪ್ಪುಸದೆ ಬಿದ್ದಿಲ್ಲ. ದನ ಗಳನ್ನು ಕಟ್ಟಲು ಮಾತ್ರ ಕೆಲವು ದುಂಡಗಿನ ಗೂಟಗಳನ್ನು ಹುಗಿದಿರುವರು. ದನಗಳ ಮೋರೆ ಎಟಕುವಲ್ಲಿ ನೆಲವನ್ನು ಮಣ್ಣಿನಿಂದ ಏರಿಸಿ ಬೈಹುಲ್ಲು ಹಾಕಲು ಬೈಪಣೆ ಮಾಡಿರುವರು. ನೀರು ಅಕ್ಕಚ್ಚು ಕುಡಿಯಲು ಅಲ್ಲಲ್ಲಿ ಮಣ್ಣಿನ ಮರಾಯಿಗಳನ್ನೂ ಕುತ್ತಿಗೆಯ ವರೆಗೆ ಹೂಳಿರುವರು. 'ಹಟ್ಟಿ ಭದ್ರವಿದೆ' ಎಂದು ಅದರ ಬಾಗಿಲನ್ನೆಳೆದುಕೊಂಡು ಅಂಗಳಕ್ಕೆ ಬಂದಾಗ ಬಿಸಿ-ನೀರು ಕೊಟ್ಟಿಗೆಯಲ್ಲಿ ಉರಿ ಊದುತ್ತಿದ್ದ ಸೀತಮ್ಮನವರು ಕಂಡು, 'ಮನಸ್ಸಿಗೆ ಬಂತೇನು?' ಎಂದು ಕೇಳಿದರು.

'ನೀನು ಬಯಸಿದ ಹಾಗೆ ಭದ್ರವಿದೆ. ಅದರೊಳಗೆ ಭಾಗೀರಥಿಯಿದ್ದಷ್ಟು ದಿನ ಹುಲಿ ಬಾಯಿಗೆ ಬೀಳಲಾರದು' ಎಂದುತ್ತರವಿತ್ತರು.

ಬಾವಿಯಿಂದ ನೀರುಸೇದಿ ಹಂಡೆಗೆ ತುಂಬಿಸುತ್ತಿದ್ದ ಸುಭಾಷಿಣಿ ಈ

ಮಾತು ಕೇಳಿ ಕಿಸಕ್ಕನೆ ನಕ್ಕಳು.

ನಗುತ್ತ ಬಂದ ಗೋವಿಂದರಾಯರು 'ಬಾವಿ ಮನೆಯ ಪಶ್ಚಿಮಕ್ಕಾಯಿತು; ಅಡ್ಡಿಯಿಲ್ಲ. ನೀರು ಮೇಲಕ್ಕಿದೆಯೋ?' ಎಂದು ಪ್ರಶ್ನಿಸುತ್ತ ಅದಕ್ಕೆ ಉತ್ತರ ಕಾಯದೆ, 'ಆಂ, ನೀರು ಒಂದು ಆಳು ಇಲ್ಲದಿದ್ದರೂ ಬಾವಿ ಆಳವಿಲ್ಲ' ಎಂದು ಸಮಾಧಾನ ವ್ಯಕ್ತಪಡಿಸಿದರು.

ಬಾವಿಕಟ್ಟೆಯ ಸಮೀಪ ನಾಲ್ಕು ಕಂಬಗಳನ್ನು ಹುಗಿದು ಮಾಡು ಕಟ್ಟಿದ್ದ ಸ್ನಾನದ ಕೊಟ್ಟಿಗೆಯನ್ನು ಕಂಡ ಗೋವಿಂದರಾಯರು 'ಇದು ಮಾತ್ರ ಯದ್ವಾತದ್ವಾ ಆಗಿದೆ' ಎಂದು ಅನ್ನದಲ್ಲಿ ಕಲ್ಲು ಬಂದವರಂತೆ ಬಾಯಿ ಅಗಲಿಸಿದರು.

ಹೊಗೆ ತುಂಬಿದ ಕಣ್ಣನ್ನು ಸೀರೆಯ ಸೆರಗಿಂದ ಒರಸುತ್ತ ಸೀತಮ್ಮ ಮೋರೆ ಹೊರಳಿಸಿ ಕೇಳಿದರು—'ಏನು ಯದ್ವಾತದ್ವಾ?'

'ಈ ಕೊಟ್ಟಿಗೆ!'

'ಯಾಕೆ, ಏನಾಗಿದೆ?'

'ಏನಾಗಿದೆ? ಬರಿಬತ್ತಲೆ!'

'ಅದಕ್ಕೂ ಗೋಡೆ ಮೆತ್ತಬೇಕಾಗಿತ್ತೆಂದು ನಿಮ್ಮ ಅಭಿಪ್ರಾಯವೇನು?'

'ಗೋಡೆ ಅಲ್ಲದಿದ್ದರೆ ನಾಲ್ಕು ಮಡಲಾದರೂ ಕಟ್ಟಬೇಕಿತ್ತು. ಇಲ್ಲದಿದ್ದರೆ ಹೆಂಗಸರ ಜಲಕ್ರೀಡೆ ನಡೆದಾಗ ದೇವೀ ದರ್ಶನವಾದೀತು.'

ಗೋವಿಂದರಾಯರ ಈ ವಿನೋದದ ಮಾತನ್ನು ಕೇಳಿ ಅತ್ತೆ ಸೊಸೆಗೆ ನಗೆ ಬಂದಿತು. ಸುಭಾಷಿಣಿ ತಲೆ ತಗ್ಗಿಸಿ ಸೆರಗಿನ ತುದಿಯನ್ನು ಬಾಯಲ್ಲಿ ಕಚ್ಚಿಕೊಂಡಳು. 'ಇದು ಕರಾವಳಿಯಲ್ಲ. ಮಡಲು ಸಮೀಪ ಸಿಗುವುದಿಲ್ಲವೆಂದು ತೋರುತ್ತದೆ. ಅದೇ ಆಗಬೇಕೆಂದೇನು? ಬಿದಿರಿನ ಸಲಿಕೆ ಕಟ್ಟಿ ಗಿಡಗಳ ಅಡರ್ ಚುಚ್ಚಿದರೂ ಸಾಕು. ಇಲ್ಲಿ ಅಂಥಾ ರಂಭೆ ಊರ್ವಶಿಯರು ಯಾರಿದ್ದಾರೆ? ಶುಭಾ ನಾಳೆ ಗಂಡನೊಡನೆ ಹೊರಟಳು. ನಾನೊಬ್ಬಳಲ್ಲ ಮುದುಕಿ!' ಎಂದರು ಸೀತಮ್ಮನವರು.

'ಮುದುಕಿಯಿರಲಿ ಮೇನಕೆಯಿರಲಿ, ಎಲ್ಲ ಒಂದೇ' ಎಂದು ಉತ್ತರಿಸುತ್ತ ಮತ್ತೂ ನಾಲ್ಕು ಹೆಜ್ಜೆ ದೂರ ನಡೆದರು ಗೋವಿಂದರಾಯರು. ಅಂಗಳದ ಅಂಚಿಗೇ ಗಿಡಮರಗಳು ಬೆಳೆದಿದ್ದುವು. ಅವುಗಳ ಎಡೆಯಿಂದ ನುಸುಳಿ ಎಲ್ಲ ನೋಡಿ ಬರಬೇಕೆಂದು ಅವರ ಆತುರ. ಆದರೆ ಹುಲಿ ಹುಲ್ಲೆಯಿದ್ದೀತೆಂದು

ಅಂಜಿ ಅಲ್ಲೇ ನಿಂತರು. ರಾತ್ರಿ ಏನೇನೋ ಅಪಸ್ವರ ತೆಗೆದುದೂ ಅವರ ನೆನಪಿಗೆ ಬಂತು. ಈ ನಿರ್ಜನ ಪ್ರದೇಶದಲ್ಲಿ ದುಷ್ಟ ಮೃಗಗಳೂ ಇರಬಹುದೆಂದು ಅವರು ನಂಬಿ ಮತ್ತೆ ಅಂಗಳದ ಮಧ್ಯಕ್ಕೆ ಬಂದು ನಾಲ್ಕೂ ಕಡೆ ನೋಡತೊಡಗಿದರು.

ಮನೆಯ ಹಿಂಬದಿ ದಕ್ಷಿಣ ದಿಕ್ಕಿನಲ್ಲಿ ಹೆಮ್ಮರಗಳ ಕಾಡು. ಪಶ್ಚಿಮದಲ್ಲಿ ಅವುಗಳ ಗಾತ್ರ ಸ್ವಲ್ಪ ಕಡಿಮೆ. ಆದರೆ ದೂರದಲ್ಲಿ ದಿಗಂತದ ಅಂಚು ಕಾಣಿಸುವ ವರೆಗೂ ಅನೇಕ ಸಣ್ಣ ದೊಡ್ಡ ಗುಡ್ಡಗಳೂ ಅವುಗಳಲ್ಲಿ ಬೆಳೆದಿರುವ ಅರಣ್ಯವೂ ಗೋಚರವಾಗುತ್ತದೆ. ಮನೆಯ ಪೂರ್ವಕ್ಕೆ ಮುಂಡಾಜೆಯಿಂದ ಬಂದ ರಸ್ತೆ. ಅದರ ಆಚೆ ಮಗ್ಗುಲಲ್ಲಿ ಸಣ್ಣ ಸಣ್ಣ ಗುಡ್ಡಗಳು. ಅವುಗಳನ್ನು ದಾಟಿದರೆ ಬೃಹದಾಕಾರವಾಗಿ ದೂರದಲ್ಲಿ ತಲೆಯೆತ್ತಿ ನಿಂತಿರುವ ಬಲ್ಲಾಳರಾಯನ ದುರ್ಗ. ಅದೇ ಪರ್ವತ ಮುಮ್ಮೂಲೆಯಾಗಿ ಉತ್ತರದಲ್ಲಿ ಎಳ್ನೀರ್ ಘಾಟಿಯೆಂದೂ ವಾಯುವ್ಯದಲ್ಲಿ ಕುದುರೆಮುಖವೆಂದೂ ಹೆಸರು ಪಡೆದಿರುವುದು. ಕುದುರೆಮುಖ ಪರ್ವತ ರಾಕ್ಷಸಾಕಾರದ ಒಂದು ಮಹಾ ಬೆಟ್ಟವಾಗಿದ್ದರೂ ಅದರ ತುತ್ತತುದಿಯಲ್ಲಿ ಅನೇಕ ಪ್ರತ್ಯೇಕ ಶಿಖರಗಳಿವೆ. ಹಸುರು ಸೀರೆಯ ಸೆರಗನ್ನು ತಲೆಯ ಮೇಲೂ ಎಳೆದುಕೊಂಡವು ಕೆಲವು. ಕೆಲವು ಶಿಖರಗಳ ಮೇಲ್ಬುದಿ ಉರಿದು ಹೋಗಿರುವುದರಿಂದ ಕೋಡುಗಲ್ಲುಗಳೇ. ಒಂದಕ್ಕೆ ಮತ್ತೊಂದರೊಡನೆ ಸ್ಪರ್ಧಿಸುವ ಹುಮ್ಮಸ್ಸು. ಅವುಗಳಲ್ಲಿ ಎರಡು ಗಿರಿಗಳು ದೊಡ್ಡವು. ಕುಮಾರಿ ಭೂಮಿಯ ಕುಚದ್ವಯಗಳಂತೆ ಅವು ಮನಮೋಹಕವಾಗಿವೆ. ಈ ಗಿರಿಗಳ ಮಧ್ಯೆ ಮಧ್ಯೆ ಕಣಿವೆ. ಅವುಗಳಲ್ಲಿ ವನಶ್ರೀ. ದೇವಲೋಕದಿಂದ ಹತ್ತಿಯ ಗಂಟುಗಳನ್ನೇ ಬಿಚ್ಚಿ ಎಸೆದರೋ ಎಂಬಂತೆ ಹೆರೆಹೆರೆಯಾಗಿ ಬಿಳಿ ಮೋಡ ಇಳಿದು ಗಿರಿಯನ್ನು ಮುಚ್ಚಲೆತ್ನಿಸುತ್ತಿತ್ತು. ಈ ಅನುಪಮ ಗಿರಿವನ ಸೌಂದರ್ಯಶ್ರೀಯನ್ನು ಕಂಡು ಗೋವಿಂದರಾಯರು ಬೆಪ್ಪು ಬೆರಗಾದರು. ಮುಖಮಂಟಪಕ್ಕೆ ಬಂದು ಅಲ್ಲಿಟ್ಟಿದ್ದ ಒಂದು ಮುರುಕು ಕುರ್ಚಿಯ ಮೇಲೆ ಕುಳಿತು ನಸ್ಯವೇರಿಸಿ ಪರ್ವತಗಳ ಕಡೆ ಮತ್ತೆ ನೋಡತೊಡಗಿದರು.

ಅತ್ತೆಸೊಸೆಗೆ ಇದನ್ನೆಲ್ಲ ನೋಡಲು ಅವಕಾಶವಿರಲಿಲ್ಲ. ಮನೆಯ ಸ್ವಚ್ಛತೆಯ ಕಡೆಗೆ ಅವರ ಲಕ್ಷ್ಯ. ಹಾರೆ, ಪಿಕ್ಕಾಸು, ಕೊಡಲಿ, ಮಡು, ಕತ್ತಿ, ಬೆತ್ತದ ಬುಟ್ಟಿಗಳನ್ನೆಲ್ಲ ಮನೆಯೊಳಗೇ ಒಟ್ಟಲಾಗಿದ್ದಿತು. ಒಂದೊಂದಾಗಿ ಅವುಗಳನ್ನು ಮೋಹನ ಹೊತ್ತು ಹೊರಗಿಟ್ಟ. ಆ ಮೇಲೆ ಕಸ ಹೆಕ್ಕಲು

ಆರಂಭ. ಮುಳಿಹುಲ್ಲಿನ ಚೂರುಗಳೂ ಯಥೇಚ್ಛವಾಗಿ ಬಿದ್ದಿದ್ದುವು. ನೆಲಕ್ಕೆ ಸಿಮೆಂಟ್ ಹಾಕಿದ್ದರೂ ನಯವಿರಲಿಲ್ಲ. ಗೋಡೆಗೆ ಬಳಿದಿದ್ದ ಸುಣ್ಣ ಅಲ್ಲಲ್ಲಿ ಮುದ್ದೆ ಮುದ್ದೆಯಾಗಿ ಬಿದ್ದು ನೆಲದ ಬಣ್ಣ ಕೆಡಿಸಿತ್ತು. ಅದನ್ನೆಲ್ಲ ತೆಗೆದು ಅತ್ತೆ ಕಸಗುಡಿಸಿದಾಗ ಸೊಸೆ ಬಾಲ್ದಿಯಲ್ಲಿ ನೀರು ತಂದು, ಒದ್ದೆಬಟ್ಟೆ ಯಿಂದ ನೆಲವನ್ನೊರಸಿದಳು. ಉಂಡು ಬಂದುದರಿಂದ ಬಂದ ರಾತ್ರಿ ಅವರು ಅಡಿಗೆ ಮಾಡಿದ್ದಿಲ್ಲ. ಈಗ ಬೇಕಲ್ಲವೆ? ಆದರೆ, ಅಡಿಗೆಮನೆಯಲ್ಲಿ ಒಲೆಯೇ ಇರಲಿಲ್ಲ. ನಾಲ್ಕು ಕಲ್ಲುಗಳನ್ನಿಟ್ಟು ಬೆಂಕಿ ಹೊತ್ತಿಸಿದ್ದುದು ಕಾಣುತ್ತಿತ್ತು. ಸಮೀಪ ಕೆಲವು ಮಣ್ಣಿನ ಗಡಿಗೆಗಳೂ ಗೆರಟೆಯ ಸೌಟುಗಳೂ ಬಿದ್ದಿದ್ದವು. ಮೋಹನ ಅವನ್ನೆಲ್ಲ ಹೊರಗೆಸೆದ. ಹೊಸ ಒಲೆ ಹೂಡಲು ಸೀತಮ್ಮನವರ ಹಂಚಿಕೆ. ಮೋಹನ ಹಾರೆಯಿಂದ ಮಣ್ಣನ್ನಗೆದ. ಸುಭಾಷಿಣಿ ನೀರೆರೆದಳು. ಸೀತಮ್ಮನವರು ಮಣ್ಣನ್ನು ಕಲಸಿ, ಮುದ್ದೆ ಮಾಡಿ ಅಡಿಗೆ ಮನೆಗೆ ತಂದು ಮೆತ್ತಿ ಒಲೆಯ ಆಕಾರ ತಂದರು. ನಿತ್ಯದ ಅತ್ಯಗತ್ಯದ ಕೆಲವು ಪಾತ್ರೆ ಪಡಗ ಅವರು ತಂದುದರಿಂದ ಸುಭಾಷಿಣಿ ಅವನ್ನು ತೊಳೆದೂ ಇಟ್ಟಿದ್ದಳು. ಭಾಗೀ ರಥಿ ಬಂದಿಲ್ಲವಾದುದರಿಂದ ಶುದ್ಧಕ್ಕೆ ಸೆಗಣಿನೀರೇ ಇಲ್ಲ. ದೇವರ ಪೆಟ್ಟಿಗೆ ಯಲ್ಲಿ ತುಂಬಿದ್ದ ತುಳಸಿ ಕುಡಿಗಳನ್ನೇ ತೆಗೆದು ಮನೆಗೆಲ್ಲ ತೀರ್ಥ ಚಿಮುಕಿಸಿ ದರು. ಹಸಿ ಒಲೆಯ ಮೇಲೆಯೇ ಬಿಸಿ ನೀರು ಕುದಿಸಲು ಹೊಸ ಪಾತ್ರೆ ಯನ್ನಿಟ್ಟರು ಸೀತಮ್ಮ. ರಾಜ ಬರುವುದೊಂದೇ ಬಾಕಿ ಕಾಫಿಪುಡಿ ಸುರಿಯಲು.

ರಾಜ ಬರುವಾಗ ತಂಬಿಗೆ ತುಂಬ ಹಾಲಿನೊಂದಿಗೆ ಬಾಳೆ ಹಣ್ಣು ಗಳನ್ನೂ ತಂದ. ಹಿಂದಿನಿಂದ ಬೋರಗೌಡ ಬೆನ್ನ ಮೇಲೆ ಗೋಣಿಯನ್ನು ಹಾಕಿಕೊಂಡು ಮುಖಮಂಟಪದಲ್ಲಿಳಿಸಿ 'ಅಯ್ಯಬ್ಬ' ಎಂದು ನಿಟ್ಟುಸಿರು ಬಿಟ್ಟ. ಗೋಣಿಯಲ್ಲಿ ಅಕ್ಕಿ, ನಾಲ್ಕಾರು ತೆಂಗು, ಕುಂಬಳಗಳಿದ್ದವು. ಅಡಿಗೆ ಮನೆಗೊಯ್ಯಲು ಬಂದ ತಾಯಿಯನ್ನು ಕಂಡು ರಾಜ ಹೇಳಿದ— 'ಅಮ್ಮಾ, ಈಗ ಇಷ್ಟಿದೆ, ಒಳಗಿಡು. ಕಾಫಿ ಕುಡಿದು ಇಲ್ಲೇ ಬಂಗಾಡಿ ಪೇಟೆಗೆ ಹೋಗಿ ಬರುತ್ತೇವೆ. ಒಂದು ವಾರದ ಮಟ್ಟಿಗೆ ಉಪ್ಪು, ಹುಳಿ, ಮೆಣಸು, ಜಿನಸು ಎಷ್ಟು ಬೇಕಾದೀತೆಂದು ಹೇಳಿ ಬಿಡು. ಮತ್ತೆ ಬೆಳ್ತಂಗಡಿಗೆ ಗಾಡಿ ಬಂದಾಗ ನಿಲ್ಲಿಸಿ ಮಳೆಗಾಲಕ್ಕೆ ಬೇಕಾದ್ದನ್ನೆಲ್ಲ ಅದರಲ್ಲಿ ಹೇರಿ ಕಳಿಸುತ್ತೇನೆ.'

'ಆಗಲಿ, ಆಗಲಿ. ಕಾಫಿಕುಡಿದಾಗಲಿ. ಬಿಸಿ ನೀರು ಸಿದ್ಧವಾಗಿದೆ.

ಒಂದೇ ನಿಮಿಷ' ಎಂದು ಒಳಗೆ ಜಿಗಿದರು ಸೀತಮ್ಮ.

'ಕೆಲಸಗಾರರು ಒಬ್ಬರೂ ಇಲ್ಲ. ವೈಗಳ್ಳರು. ಕೂಲಿಗೆ ಮಾತ್ರ ನನ್ನ ತಲೆ ಕಂಡರೆ ಓಡಿಬರುತ್ತಾರೆ' ಎಂದು ಮುಖಮಂಟಪದಲ್ಲಿ ಕುಳಿತಿದ್ದ ತಂದೆಗೆ ಕೇಳಿಸುವಂತೆ ರಾಜ ನುಡಿದು ಬೋರನ ಕಡೆ ಹೊರಳಿ, 'ಬೋರಾ, ನೀನು ಒಂದಿಷ್ಟು ಬಿಸಿನೀರು ಕುಡಿದು ಆ ಅಹ್ಮದಬ್ಯಾರಿ, ತುಕ್ರಪೂಜಾರಿ ಅವರನ್ನೆಲ್ಲ ಕರೆದುಕೊಂಡೇ ಬಾ. ಅಯ್ಯ ಬಂದಿದ್ದಾರೆ; ಹಿಂದಿನ ಬಾಕಿ ತೀರಿಸಿ ಬಿಡುತ್ತಾರೆಂದು ಹೇಳು. ಮಧ್ಯಾಹ್ನದ ಮೇಲೆ ಈ ಮನೆಯ ಬಡಗುದಿಕ್ಕಿನ ಸ್ಥಳಕ್ಕೆ ಬೆಂಕಿ ಕೊಡೋಣ. ಮತ್ತೆ ನೀನೂ ತಪ್ಪಿಸಬೇಡ' ಎಂದು ನುಡಿದ.

ಬೆಂಕಿ ಹಚ್ಚುವ ಈ ಕೆಲಸವೇನೆಂದು ಗೋವಿಂದರಾಯರಿಗೆ ಅರ್ಥವಾಗ ಲಿಲ್ಲ. ಅವರು ಸ್ವಲ್ಪ ಗಾಬರಿಯಾಗಿ ಕೇಳಿದರು—'ಎಲ್ಲಿಗೆ ಬೆಂಕಿ? ಯಾವ ಸ್ಥಳಕ್ಕೆ?'

ಇದೇ ನಮ್ಮ ಕಾಡಿಗೆ. ಈ ಹಟ್ಟಿಯಿಂದ ಆಚೆ ಇರುವ ಸ್ಥಳಕ್ಕೆಲ್ಲ ಬೆಂಕಿ ಕೊಡಬೇಕಾಗಿದೆ. ಎರಡು ತಿಂಗಳ ಹಿಂದೆ ದೊಡ್ಡ ದೊಡ್ಡ ಮರ ಗಳನ್ನೆಲ್ಲ ಕಡಿದು ಸ್ವಲ್ಪ ಕಾಡು ಸಫಾಯಿ ಮಾಡಿದ್ದೇವೆ. ಆದರೂ ಕಾಡಿ ನಲ್ಲಿ ಕಾಲಿಡುವುದೇ ಕಷ್ಟ. ಎದೆಯುಷ್ಟು ಎತ್ತರ ಮುಳಿಹುಲ್ಲೂ ಬೆಳೆದಿದೆ. ವರುಷಂಪ್ರತಿ ಒಮ್ಮೆ ಬೆಂಕಿ ಕೊಡಲೇಬೇಕು. ಮುಳಿಯೊಂದಿಗೆ ಕಸಕಡ್ಡಿ, ತರಗೆಲೆ ಎಲ್ಲ ಸುಟ್ಟು ಬೂದಿಯಾಗುವುದು.'

'ಗಾಳಿಗೆ ಕಿಡಿ ಮನೆಕಡೆ ಹಾರಿದರೆ?' ಎಂದು ಕಳವಳಪಟ್ಟರು ತಂದೆ.

'ಹಾಗೇನಾಗುವುದಿಲ್ಲ. ಆಚೆ ಹೊಳೆಯಿದೆ. ಮೂರು ಬದಿಯಲ್ಲಿ ದರೆ ಯಿದೆ. ಉರಿ ಮೇಲಕ್ಕೇಳಲು ಗಿಡಗಳು ಬಿಡುವುದೇ ಇಲ್ಲ. ಕರಾವಳಿ ಯಂತೆ ಬೆಂಕಿ ಪ್ರಜ್ವಲಿಸುತ್ತದೆಯೆಂದು ತಿಳಿದಿರಾ? ಅಲ್ಲಿಷ್ಟು ಇಲ್ಲಿಷ್ಟು ಸುಡುತ್ತದೆ. ಮರಗಳಡಿಗೆ ತಾಗುವುದೇ ಇಲ್ಲ. ನಾನೆಲ್ಲ ತೋರಿಸುತ್ತೇನೆ. ಕಾಫಿ ಆಗಲಿ. ಆ ಮೇಲೆ ಬಂಗಾಡಿ ಪೇಟೆಗೂ ಹೋಗಿ ಬರೋಣ' ಎಂದು ಸಂತೈಸಿದ.

ಅವನ ಮಾತು ಮುಗಿಯುವುದರೊಳಗೆ ಎರಡೆರಡು ಬಾಳೆಹಣ್ಣು ಕಾಫಿ ಬಂತು. 'ನಿಮಗೆಲ್ಲ ಹಸಿವೆ ಆಗಿದೆಯೇನೋ? ತಿಂಡಿಗೆ ಏನಿಲ್ಲ. ಮಧ್ಯಾಹ್ನ ಅಡಿಗೆ ಬೇಗನೇ ಮಾಡುತ್ತೇನೆ. ಜಿನಸು ತರಲು ಹೊತ್ತು ಮಾಡಬೇಡ'

ಎಂದು ಮಗನ ಮುಂದೆ ಸೀತಮ್ಮ ನುಡಿದರು. ಕಾಫಿ ಕುಡಿದು ತನ್ನಷ್ಟೇ ಉದ್ದವಿರುವ ಒಂದು ಕೋಲನ್ನು ಹಿಡಿದು ರಾಜ ಹೊರಟ. ಗೋವಿಂದ ರಾಯರು ಅಂಗಿ, ಕೋಟು, ರುಮಾಲುಗಳನ್ನು ಧರಿಸಿದರು. ತಂದೆ ಮಗ ಮುಖಮಂಟಪದಿಂದ ಇಳಿದು ರಸ್ತೆಯಿಂದ ಮನೆಗೆ ಬರುವ ಪೂರ್ವದಿಕ್ಕಿನ ದಾರಿಹಿಡಿದು ಅಗಳು ದಾಟಿದ ಮೇಲೆ ಅದರ ಬದಿಯಲ್ಲೇ ತೆಂಕು ಬದಿಗೆ ತಿರುಗಿದರು. ರಾಜ ಒಂದೊಂದೇ ಮಾತು ಆರಂಭಿಸಿದ—

"ನೋಡಿ, ನಮ್ಮ ಈ ಆಸ್ತಿ ತೆಂಕು ಬಡಗಾಗಿದೆ. ಅಗಲ ಅರ್ಧ ಫರ್ಲಾಂಗು. ತೆಂಕು ಬಡಗು ಪೂರ್ವ ಬದಿಗಳಲ್ಲಿ ಅಗಳು ಹಾಕಿಸಿದ್ದೇನೆ. ಪಶ್ಚಿಮದಲ್ಲಿ ನೇತ್ರಾವತಿ, ಆಸ್ತಿಯುದ್ದಕ್ಕೂ ಬಡಗಿನಿಂದ ತೆಂಕು ಮುಖವಾಗಿ ಹರಿಯುತ್ತಿದೆ. ಈ ಅಗಳು ಪೂರ್ವದ್ದು. ಈ ಬದಿಯಲ್ಲೇ ಮನೆ. ಮನೆಯ ತೆಂಕು ಬದಿಯಲ್ಲಿರುವ ಈ ಕಾಡು ಹತ್ತು ಎಕರೆ ಆಗಬಹುದು. ಇದನ್ನು ಮಾತ್ರ ಸದ್ಯ ಮುಟ್ಟುವಂತಿಲ್ಲ. ಗದ್ದೆ ತೋಟ ಮಾಡಿದಾಗ ಸೊಪ್ಪು ಸೌದೆಗಳು ಬೇಕೇ ಬೇಕು.'

ಅಷ್ಟರಲ್ಲಿ 'ಅಪ್ಪಯ್ಯ, ಕರಡಿ! ಕರಡಿ!' ಎಂದು ಮೋಹನ ಹಿಂದಿನಿಂದ ಕೂಗಿದ. ತಂದೆ ಮಗ ಹಾವು ಮೆಟ್ಟಿದವರಂತೆ ಹೌಹಾರಿ ಹೋದರು. 'ಎಲ್ಲಿ? ಎಲ್ಲಿ?' ಎಂದವರು ಏಕಕಾಲಕ್ಕೆ ಕಣ್ಣರಳಿಸಿ ನೋಡುತ್ತ ಕೇಳಿದರು. ಮೋಹನ ಮುಂದಿದ್ದ ಹೆಮ್ಮರವನ್ನು ತೋರಿಸಿದ. ಅದು 'ಘೂಂ, ಘೂಂ' ಎಂದು ಕೂಗಿ ಮತ್ತೊಂದು ಮರಕ್ಕೆ ನೆಗೆಯಿತು. ನೋಡಿದ ರಾಜನಿಗೆ ನಗು ಬಂದಿತು. 'ಅದು ಕರಡಿಯಲ್ಲ ಮುಜ್ಜು, ದೊಡ್ಡ ಕಪ್ಪು ಮಂಗ' ಎಂದ. ಗೋವಿಂದರಾಯರು ಮಾತ್ರ ರೇಗಿ 'ನೀನು ಯಾಕೆ ಬಂದೆ? ನಮಗೊಂದು ಬಾಲವೇನು? ನಾವು ಕಾಡಿನಲ್ಲೆಲ್ಲ ನುಸುಳುತ್ತೇವೆ. ಇಲ್ಲಿ ಹಾವುಗಳೂ ಉಂಟು. ನಡಿ, ನಡಿ' ಎಂದು ಗದರಿಸಿದರು. ಮೋಹನ ಸಣ್ಣ ಮೋರೆ ಮಾಡಿಕೊಂಡು ಮನೆಗೆ ಮರಳಿದ.

ತಂದೆ ಮಗ ಮತ್ತೆ ಹೋದ ದಾರಿಯಿಂದಲೇ ಮರಳಿ ಮನೆಯ ಅಂಗಳಕ್ಕೆ ಬಂದು ಬಿಸಿ ನೀರಿನ ಕೊಟ್ಟಿಗೆಯ ದಾರಿಯಿಂದ ಪಶ್ಚಿಮದ ಕಡೆ ಕಾಡಿಗೆ ನುಸುಳಿದರು. ಅರ್ಧ ಫರ್ಲಾಂಗು ದೂರದಲ್ಲಿ ಮಾತ್ರ ಹೆಮ್ಮರಗಳು ಸಾಲಾಗಿ ಬೆಳೆದು ನಿಂತಿದ್ದುವು. ರಾಜ ಕೈ ತೋರಿಸಿ 'ಇದೇ ನೇತ್ರಾವತಿ' ಎಂದ. ಗೋವಿಂದರಾಯರು ಬಗ್ಗಿ ನೋಡಿ, 'ನೀರು ಬಹಳವಿಲ್ಲ' ಎಂದರು.

'ಈಗ ಬೇಸಿಗೆ. ಇಷ್ಟೇ ನೀರು. ಆದರೆ ಮಳೆಗಾಲದಲ್ಲಿ ತುಂಬಿ ಬಿಡುತ್ತದೆ. ಆಗ ಅದರ ಅವತಾರ ನೋಡಬೇಕು. ದಾಟಲೂ ಸಾಧ್ಯವಿಲ್ಲ.'

'ದೋಣಿಗಳಿಲ್ಲವೇನು?'

'ದೋಣಿ? ದೋಣಿ ಹಾಯಿಸಲು ಒಯ್ಲು ಬಿಟ್ಟೀತಾ? ದೋಣಿಯೂ ಸಿಗಲಿಕ್ಕಿಲ್ಲ; ದೋಣಿಯವನೂ ಜೀವದಿಂದ ಬದುಕಲಾರ. ನೀರು ಕೆಳಮುಖವಾಗಿ ರಭಸದಿಂದ ಹರಿಯುತ್ತಿದೆ. ದೋಣಿಯನ್ನು ಬಂಡೆಗಲ್ಲುಗಳಿಗೆ ಅಪ್ಪಳಿಸಿ ಬಿಡುವುದು. ಮಲೆಯಲ್ಲಿ ಬಿದ್ದ ದೊಡ್ಡ ದೊಡ್ಡ ಮರಗಳೂ ತೇಲುತ್ತ ಬರುತ್ತವೆ. ಯಾರಿಗೆ ಜೀವ ಬೇಡಾಗಿದೆ?'

'ಮತ್ತೆ ಮಳೆಗಾಲದಲ್ಲಿ ದಾಟುವುದು ಹೇಗೆ?'

'ನೆರೆ ಬಂದಾಗ ದಾಟುವಂತಿಲ್ಲ. ಈಚೆಯವರು ಈಚೆ, ಆಚೆಯವರು ಆಚೆ. ನೆರೆ ನೀರು ಬಹಳ ದಿನ ಉಳಿಯುವುದಿಲ್ಲ. ದಾಟಬಹುದು. ದಾಟಿದವರೂ ಇದ್ದಾರೆ. ಆದರೆ ಇಲ್ಲಿ ಶಕ್ಯವಿಲ್ಲ. ನದಿಯ ಮೇಲೆ ಮೂಲಕ್ಕೆ ಇನ್ನೂ ಹತ್ತು ಹನ್ನೆರಡು ಮೈಲು ತೆರಳಿ ದಾಟುತ್ತಾರೆ. ಎಲ್ಲ ಸ್ಥಳಗಳಲ್ಲಿ ಹೊಳೆಗೆ ಇಳಿಯುವಂತಿಲ್ಲ.'

ಸ್ವಲ್ಪ ಹೊತ್ತು ಗೋವಿಂದರಾಯರು ಮೌನ. ಹೊಳೆಯ ಕಡೆಯೇ ಅವರ ದೃಷ್ಟಿ. ಹೊಳೆಯ ಮಧ್ಯೆ ಅಲ್ಲಲ್ಲಿ ಬಂಡೆಗಲ್ಲುಗಳು. ಈ ಕಲ್ಲುಗಳ ಎಡೆಯಲ್ಲಿ ಚಿಕ್ಕ ಚಿಕ್ಕ ಗಿಡಗಳು ಬೆಳೆದಿವೆ. ಕಲ್ಲುಗಳ ಎಡೆಗಳಿಂದ ಝುಳು ಝುಳು ನೀರು ಹರಿಯುತ್ತಿದೆ. ಹೊಳೆಯ ಮಧ್ಯದಲ್ಲಿ ಈಗಲೂ ನೀರಿಗೆ ಸ್ವಲ್ಪ ರಭಸವಿದೆ. ಹೊಳೆ ಆಳವಿದ್ದುದು ಅವರ ದೃಷ್ಟಿಗೆ ಬಿದ್ದುದರಿಂದ 'ಈ ಹೊಳೆಗೆ ಕಟ್ಟ ಕಟ್ಟುವುದು ಹೇಗೆ? ಪಾತಾಳದಲ್ಲಿದೆ ನೀರು! ನೀರು ಮೇಲಕ್ಕೇರಿ ಈ ಭೂಮಿಗೆ ಹರಿದೀತಾ?' ಎಂದು ಪ್ರಶ್ನಿಸಿದರು.

'ಹಾಂ, ಇಲ್ಲಿ ಕಟ್ಟ ಹಾಕುವುದಿಲ್ಲ. ಹಾಕಲಿಕ್ಕೆ ಶಕ್ಯವೂ ಇಲ್ಲ. ಇನ್ನೂ ಮೇಲಕ್ಕೆ ಇದರ ಮೂಲದ ಕಡೆ ಇನ್ನು ಒಂದು ಮೈಲು ತೆರಳಬೇಕು. ಅಲ್ಲಿ ಕಟ್ಟ ಕಟ್ಟಲು ಸಾಧ್ಯ. ಹಿಂದಿನ ಕಾಲದಲ್ಲಿ ಅಲ್ಲೇ ಕಟ್ಟುತಿದ್ದರಂತೆ.'

'ಯಾರು ಕಟ್ಟಿದ್ದರು ಹಿಂದೆ?'

'ಓಹೋ, ಅದನ್ನು ನಿಮಗೆ ಹೇಳಲಿಲ್ಲ. ಇದು ಪಾಳು ಭೂಮಿ. ನೂರಾರು ವರುಷಗಳ ಹಿಂದೆ ಯಾರೋ ಹೆಬ್ಬಾರರು ಇಲ್ಲಿ ವಾಸಿಸುತಿದ್ದರಂತೆ. ಒಕ್ಕಲುಗಳೂ ಇದ್ದುವು. ಜರಿದ ಮನೆಗಳ ಕುರುಹೂ ಅಲ್ಲಲ್ಲಿ ಕಾಣಿಸುತ್ತಿದೆ.

ನೀರು ಹರಿದು ಬರುತ್ತಿದ್ದ ತೋಡೂ ಉಂಟು. ಈಗ ಮಣ್ಣು ತುಂಬಿದೆ. ಕಟ್ಟೆ ಕಟ್ಟುವಾಗ ತೋಡು ಕೆರೆಸಬೇಕು.'

ಮಾತನಾಡುತಿದ್ದಂತೆ ರಾಜ ಮನೆಯ ಬಡಗು ದಿಕ್ಕಿಗೆ ತಂದೆಯನ್ನು ಕರೆದುಕೊಂಡು ಹೊರಟ. ಮನೆಯ ಈ ಬಡಗು ಪ್ರದೇಶದಲ್ಲಿ ಹೊಳೆ ವರೆಗಿನ ಅಡ್ಡ ಆಗಲ ಒಟ್ಟು ೨೦ ಎಕರೆ ಭೂಮಿ. ಕಾಡು ಬೆಳೆದಿದ್ದರೂ ಮನೆಯ ಹಿಂಬದಿ ತೆಂಕು ಬದಿಯಲ್ಲಿರುವಷ್ಟು ದಟ್ಟಡವಿ ಅಲ್ಲ. ಅಲ್ಲಲ್ಲಿ ದೊಡ್ಡ ದೊಡ್ಡ ಕಾಡುಮರಗಳನ್ನು ಕಡಿದೊಗೆದಿದ್ದರು. ಎಲೆಗಳೆಲ್ಲ ಒಣಗಿ ಆದರ ಬಡಕಲು ಕಟ್ಟಿಗೆ ಮಾತ್ರ ಉಳಿದಿತ್ತು. ಉಳಿದುದೆಲ್ಲ ಹತ್ತುಹನ್ನೆರಡಡಿ ಎತ್ತರದ ಕುಂಕಾಲ್, ಕರ್ಮಾರ್, ಸರೋಳಿಗೆ, ಆಲ ಪಾಲ. ಮತ್ತಿ, ಮರುವ, ಬಣಪ, ಕಾಸರಕ ಮೊದಲಾದ ಕಾಡುಮರಗಳೂ ಇವೆ. ಮಧ್ಯೆ ಮಧ್ಯೆ ವಿಶಾಲವಾದ ಬಯಲು ಪ್ರದೇಶವೂ ಇದೆ. ಆದರಲ್ಲಿ ಲಂತಾನದಂತಹ ಸಣ್ಣ ಸಣ್ಣ ಪೊದೆ ಪೊದರುಗಳೂ ಮುಳ್ಳುಗಿಡಗಳೂ ಬೆಳೆದಿವೆ. ಮಿಕ್ಕಿದುದೆಲ್ಲ ಹುಲ್ಲು. ಹುಲ್ಲು ಮಾತ್ರ ಎಲ್ಲಿ ನೋಡಿದರಲ್ಲಿ ಕಾಲನ್ನು ತಡೆಯುತ್ತದೆ. ಹಸುರು ಹುಲ್ಲು, ಕುಸುರು ಹುಲ್ಲು, ಮುಳಿಹುಲ್ಲು, ಆನೆಹುಲ್ಲು, ಎಲ್ಲ ಹುಲ್ಲಿನ ಪ್ರಪಂಚ. ಜರಿದ ಮನೆಗಳ ಕಲ್ಲು ಮಣ್ಣುಗಳನ್ನೂ ಈ ಹುಲ್ಲು ಮುಚ್ಚಿರುವು ದನ್ನು ಅವರು ಕಂಡರು. ಈ ಮನೆಗಳ ಅಕ್ಕಪಕ್ಕದಲ್ಲಿ ಅಲ್ಲಲ್ಲಿ ಒಂದೆರಡು ಮಾವು, ಹಲಸು ಮರಗಳೂ ಇದ್ದುವು. 'ಮರ ಕಡಿವಾಗ ಈ ಜಾತಿ ಮರ ಗಳನ್ನು ಕಡಿದಿಲ್ಲವಲ್ಲ!' ಎಂದು ಗೋವಿಂದರಾಯರು ಶಂಕೆ ತೆಗೆದರು.

'ಇಲ್ಲ. ಅವುಗಳನ್ನೆಲ್ಲ ಮುಟ್ಟಬಾರದೆಂದು ಆಳುಗಳಿಗೆ ಹೇಳಿದ್ದೆ. ಕಡಿ ದಿಲ್ಲ. ಹಲಸು, ಹೆಬ್ಬಲಸು, ಓಟೆಹುಳಿ, ಚಳ್ಳಂಗಾಯಿ, ಮೃಗನಹುಳಿ ಮರ ಗಳೂ ಆನೇಕ ಉಂಟು' ಎಂದುತ್ತರವಿತ್ತು ರಾಜ, 'ಇಲ್ಲಿ ನೋಡಿ ಈ ಕಲ್ಲು ಗಳನ್ನು. ಇದೇನು ಭೂತದ ಕಲ್ಲುಗಳೇ ಹೇಗೆ?' ಎಂದು ಕೈ ತೋರಿಸಿದ.

ಗೋವಿಂದರಾಯರು ಬಗ್ಗಿ ನೋಡಿದರು. ಅತ್ತಿತ್ತ ನೋಡಿ ಸುತ್ತು ಮುತ್ತಲಿನ ವಾತಾವರಣವನ್ನು ಪರಿಕಿಸಿದರು. ಕಲ್ಲುಗಳ ಬದಿಗಳಲ್ಲಿ ಬೆಳೆದ ಮರಬಳ್ಳಿಗಳನ್ನು ದಿಟ್ಟಿಸಿದರು. 'ಇರಬೇಕು. ಭೂತದ ಕಲ್ಲುಗಳೇ. ಒಕ್ಕಲು ಗಳು ಇದ್ದುವೆಂದು ನೀನು ಹೇಳಿದೆಯಲ್ಲ? ಅವರು ಆರಾಧಿಸಿರಬೇಕು ಇವು ಗಳನ್ನು' ಎಂದು ಗಂಭೀರವಾಗಿ ನುಡಿದರು.

'ಒಂದು ನಾಗಕಲ್ಲುಗಳ ಬನವೂ ಇದೆ' ಎಂದು ರಾಜ ಸ್ಮರಿಸಿ ನುಡಿದು

ಅಲ್ಲಿಯ ವರೆಗೆ ದಾರಿ ತೋರಿದ. ಬನ ದೊಡ್ಡದು. ಸೂರ್ಯನ ಕಿರಣಗಳು ನುಸುಳುವಂತಿರಲಿಲ್ಲ. ನಾಗಕಲ್ಲುಗಳೂ ಒಂದೆರಡಲ್ಲ, ಹತ್ತಿಪ್ಪತ್ತು. ಮಣ್ಣಿನಲ್ಲಿ ಅವು ಅರ್ಧಮರ್ಧ ಹುಗಿದು ಹೋಗಿವೆ. ಕಾಣುವ ಭಾಗಗಳ ಮೇಲೂ ಪಾಚಿ ಹೆಪ್ಪುಗಟ್ಟಿದೆ. ಕೆಲವು ಕಲ್ಲುಗಳು ಅಡ್ಡಾದಿಡ್ಡಿಯಾಗಿ ಬಿದ್ದಿವೆ. ಅವುಗಳ ಮೇಲೆ ಬನದ ಎಲೆಗಳು ಉದುರಿವೆ. ಆ ಎಲೆಗಳನ್ನು ಕೈಯಿಂದ ಹಿಡಿದು ಕೋಲಿನಿಂದ ಅತ್ತಿತ್ತ ಸರಿಸಲು ಬಯಸಿ ರಾಜ ಬಳಿಗೆಹೋದ. 'ಬೇಡ,ಬೇಡ. ಹಾವುಗೀವು ಇದ್ದೀತು ಬಿಲಗಳಲ್ಲಿ. ಮುಟ್ಟಬೇಡ' ಎಂದು ಗೋವಿಂದ ರಾಯರು ತಡೆದರು. 'ಎಲ್ಲಿಯ ಹಾವು?' ಎಂದು ಬಾಯಲ್ಲಿ ನುಡಿದರೂ ರಾಜ ನಿಗೆ ಮುಟ್ಟಲು ಧೈರ್ಯ ಬರಲಿಲ್ಲ. ಗೋವಿಂದರಾಯರ ಮುಖಮುದ್ರೆ ಮಾತ್ರ ಬಹಳ ಗಂಭೀರವಾಗಿತ್ತು. ಕೈಜೋಡಿಸಿ, ಕಣ್ಮುಚ್ಚಿ ಏನೇನೋ ಎಂದರು ಮಂತ್ರ. ಅಲ್ಲಿಂದ ಮರಳಿದ ಮೇಲೂ ಅವರು ಮಗನ ಮಾತಿಗೆ ಸರಿಯಾದ ಉತ್ತರ ಕೊಡಲಿಲ್ಲ. ಗಮನವೆತ್ತಲೋ ಇದೆಯೆಂದು ಕಂಡುಕೊಂಡ ರಾಜ, 'ಅಪ್ಪಯ್ಯ, ಏನಾಯ್ತು? ಏನು ವಿಚಾರ?' ಎಂದು ಕುತೂಹಲದಿಂದ ಕೇಳಿದ.

'ಏನಿಲ್ಲ. ಆ ಬನ ನೋಡಿದ ಮೇಲೆ ಅಲ್ಲಿ ಕೊಪ್ಪರಿಗೆ ಇರಬೇಕೆಂದು ನನಗೆನ್ನಿಸಿತು.'

'ಕೊಪ್ಪರಿಗೆ' ಎಂಬ ಮಾತು ಅವರ ಬಾಯಿಂದ ಉದುರಿದ ಕೂಡಲೇ ರಾಜ ಗಹಗಹಿಸಿ ನಕ್ಕ. 'ಯಾರು ನಮ್ಮ ತಾತ ಹುಗಿದಿಟ್ಟಿದ್ದಾನೇನು ಈ ಕಾಡಿನಲ್ಲಿ?' ಎಂದು ಪರಿಹಾಸದ ಧ್ವನಿ ತೆಗೆದ.

'ಛೆ, ಹಾಗೆಲ್ಲ ತಮಾಷೆ ಮಾಡಬೇಡ. ನಾಗಕಲ್ಲುಗಳ ಹಿಂಬದಿಯಿದ್ದ ಆ ಮರವನ್ನು ನೋಡಿದೆಯಾ? ಅದಕ್ಕೆ ಎಷ್ಟು ಮದನ ಕೈಗಳು ಇವೆ ನೋಡು. ಅಡಿಯಲ್ಲಿ ಕೊಪ್ಪರಿಗೆ ಇದ್ದರೆ ಮಾತ್ರ ಮರಗಳಿಗೆ ಮದನ ಕೈ. ಬೇರೆ ಮರಗಳಿಗುಂಟೇನು ಹಾಗೆ? ಹಿಂದೆ ಈ ಸ್ಥಳದಲ್ಲಿ ದೊಡ್ಡ ಹೆಬ್ಬಾರ ರಿದ್ದರೆಂದು ನೀನೆ ಹೇಳಿದೆ.'

ತಂದೆಯ ಮಾತನ್ನಾಲಿಸಿದ ರಾಜ ಇದ್ದರೂ ಇರಬಹುದೆಂದು ಭಾವಿಸಿದ. ಅಲ್ಲಿಂದ ದರೆ ದಾಟಿ ನದಿ ದಂಡೆಯ ಬೆಟ್ಟು ಗದ್ದೆಗಳಲ್ಲಿ ನಡೆದು ಹೊಳೆಗೆ ಕಟ್ಟ ಹಾಕುವ ಸ್ಥಳಕ್ಕೆ ಬಂದರು. ಇಲ್ಲಿ ಹೊಳೆಯ ಮಧ್ಯದಲ್ಲಿ ಮಣ್ಣಿನ ಕುದುರು ಇದೆ. ಅದರಲ್ಲಿ ಗಿಡಮರಗಳೂ ಬೆಳೆದಿವೆ. ಹೊಳೆ ಇಬ್ಭಾಗ ವಾಗಿರುವುದರಿಂದ ಕಟ್ಟ ಕಟ್ಟಲು ಸುಲಭವೆಂದು ತರ್ಕಿಸಿದರು. ಹೊಳೆ ದಾಟಿ

ಆಚೆ ದಡದ ಬೈಲು ಸೇರಿದರು. ಕಣ್ಣು ಕಾಣುವ ವರೆಗೂ ಬೈಲು. ನೇತ್ರಾವತಿಯ ಎರಡು ದಂಡೆಗಳಲ್ಲಿ ವಿಶಾಲವಾದ ಬೈಲುಗಳು. ಈಗ ಬತ್ತದ ಪೈರಿಲ್ಲ. ನಡು ನಡುವೆ ಅಲ್ಲಲ್ಲಿ ಒಂದೊಂದು ಗುಡಿಸಲುಗಳಿವೆ.

'ಇಲ್ಲೆಲ್ಲ ಮನೆ ಮಾರು ಉಂಟು' ಎಂದರು ತಂದೆ.

'ಹೌದು. ನಮ್ಮ ಆಸ್ತಿಯಲ್ಲಷ್ಟೇ ಸ್ವಲ್ಪ ಕಾಡಿದೆ. ಅದರ ಆಚೆ ಈಚೆ ಬೈಲುಗಳಿವೆ. ಈ ಬೈಲು ಹತ್ತು ಹನ್ನೆರಡು ಮೈಲು ಉದ್ದವಿದೆ. ಬಂಗಾಡಿ ಬೈಲಿದು. ನದಿಯ ಇಮ್ಮಗ್ಗುಲಲ್ಲೂ ಬೈಲುಗಳು. ಎಳ್ನೀರ್ ಘಟ್ಟದವರೆಗೂ ಹೀಗೆಯೇ.'

'ಅಲ್ಲಿಯ ವರೆಗೆ ಹೊಳೆ ಇದೆಯಾ?'

'ಅಲ್ಲಿಂದಲೇ ಹರಿದು ಬಂದಿದೆ. ನೇತ್ರಾವತಿ ಇಲ್ಲೇ ಈ ಕುದುರೆ ಮುಖ ಪರ್ವತಗಳ ಗರ್ಭದಿಂದಲೇ ಇಳಿದು ಬಂದಿದೆ. ಅದು ಹುಟ್ಟಿದುದು ಈಚೆ ಬದಿಯಿಂದ. ಪರ್ವತದ ಆಚೆ ಬದಿಯಲ್ಲಿ ತುಂಗಾ ಮತ್ತು ಭದ್ರಾ ನದಿಗಳು ಹುಟ್ಟಿವೆ. ಆ ಹೊಳೆಗಳಿಂದ ನಮ್ಮ ಜಿಲ್ಲೆಗೆ ಪ್ರಯೋಜನ ದೊರೆತಿಲ್ಲ. ಶೃಂಗೇರಿ, ಶಿವಮೊಗ್ಗ ಮೊದಲಾದ ಘಟ್ಟದ ಮೇಲಿನ ಜನರಿಗೆ ಉಪಕಾರವಾಗಿದೆ. ನೇತ್ರಾವತಿ ನಮ್ಮ ಜಿಲ್ಲೆಯ ಭಾಗ್ಯದೇವಿ. ಇಲ್ಲಿಂದ ನಿಡಿಗಲ್, ಧರ್ಮಸ್ಥಳದ ವರೆಗೂ ತೆಂಕುಮುಖವಾಗಿ ಹರಿದು ಆ ಮೇಲೆ ಪಶ್ಚಿಮಕ್ಕೆ ತಿರುಗುವಳು. ಉಪ್ಪಿನಂಗಡಿಯಲ್ಲಿ ಕುಮಾರಧಾರಾ ಸಂಗಮ. ಅಲ್ಲಿಂದ ಬಂಟ್ವಾಳ ಕಂಡು ಮಂಗಳೂರಲ್ಲಿ ಸಮುದ್ರರಾಜನನ್ನು ಕೂಡುತ್ತಾಳೆ. ಇದರ ದಂಡೆಯಲ್ಲಿ ಎಷ್ಟು ಬೈಲು! ಎಷ್ಟು ತೋಟ! ಎಷ್ಟು ಕಡೆಗಳಲ್ಲಿ ಕಟ್ಟ ಕಟ್ಟಿ ಹೊಲಗದ್ದೆಗಳಿಗೆ ನೀರುಣಿಸುತ್ತಾರೆ! ಎಷ್ಟು ಫಲವತ್ತಾದ ಭೂಮಿಗಳಿವೆ!'

ರಾಜನ ಉಲ್ಲಾಸದ ಮಾತು ಕೇಳಿದ ತಂದೆ, 'ಕರಾವಳಿಯಲ್ಲಿ ಇಂಥ ಭೂಮಿ ದೊರಕುತ್ತಿದ್ದರೆ ಬಂಗಾರಭೂಮಿಯಾಗುತ್ತಿತ್ತು. ಈ ಮಲೆರಾಜ್ಯದಲ್ಲಿ ಆಯಿತಲ್ಲ!' ಎಂದು ಉದ್ಗರಿಸಿದರು.

ಅವನಿಗೆ ಈ ಮಾತು ರುಚಿಸಲಿಲ್ಲವೋ ಏನೋ? 'ಹೌದು ಮಲೆರಾಜ್ಯ. ಇನ್ನೆಷ್ಟು ವರುಷ ಹೀಗೆಯೇ ಇದ್ದೀತು? ನಾನು ಬೆಳ್ತಂಗಡಿಗೆ ಬಂದಾಗ ಸುತ್ತು ಮುತ್ತು ವಿಪರೀತ ಕಾಡಿತ್ತು. ಈಗ ಕಟ್ಟಿಗೆ ಕೂಡಾ ದೊರೆಯುವುದಿಲ್ಲ. ಈಗ ಜನ ಈಚೀಚೆ ಬರುತ್ತಿದ್ದಾರೆ. ಹೊಸ ಹೊಸ ರಸ್ತೆಗಳಾಗುತ್ತಿವೆ. ಈ ಮುಂಡಾಜೆ ಬಂಗಾಡಿ ರಸ್ತೆಯನ್ನು ಬೈಲುಗಳ ಅಂಚಿನಲ್ಲಿ

ಎಳ್ನೀರ್‌ವರೆಗೆ ಎಳೆದು ಘಟ್ಟದ ಮೇಲಿನ ಕಳಸಕ್ಕೆ ಮುಟ್ಟಿಸಿದರೆ ಸರಿ. ಚಾರ್ಮಾಡಿ ಮಂಗಳೂರು ರಸ್ತೆಯ ಬದಲು ಇದೇ ಮುಖ್ಯ ರಸ್ತೆಯಾಗುತ್ತದೆ. ಅದಕ್ಕಿಂತ ಇದು ಹತ್ರ. ಚಾರ್ಮಾಡಿ ಘಟ್ಟಕ್ಕಿಂತ ಎಳ್ನೀರ್ ಏರಲು ಮೋಟಾರ್‌ಗಳಿಗೆ ಸುಲಭ. ಕೊಪ್ಪ ಕಾವೇರಿಕಾನ ಮೊದಲಾದ ಕಾಫಿ ಚಾ ತೋಟಗಳೆಲ್ಲ ಇರುವುದು ಎಳ್ನೀರಿನಾಚೆಯೇ. ಈಗೆಲ್ಲ ಕೂಲಿಕಾರರು ಚಾರ್ಮಾಡಿ ಮಾರ್ಗ ಸುತ್ತಿ ಆ ತೋಟಗಳಿಗೆ ತೆರಳುವರು. ಈ ಎಳ್ನೀರ್ ಒಳದಾರಿಯಿಂದ ನಡೆಯುವವರು ವಿರಳ. ಮೋಟಾರ್ ರಸ್ತೆ ಆದ ಮೇಲೆ ಮತ್ತೇನು ಹೇಳಲಿ! ಈ ಭೂಮಿಗೆಲ್ಲ ಬಂಗಾರದ ಬೆಲೆಯೇ ಬಂದೀತು. ಈಗಾಗಲೇ ರಸ್ತೆಗೆ ಎಸ್ಟಿಮೇಟಾಗಿದೆ. ಮಾಡಿಸುವವರಿಲ್ಲ. ಸರಕಾರಕ್ಕೆ ಮಾಡಿಸಲು ಮನಸ್ಸೂ ಇಲ್ಲ. ಎಲ್ಲ ಕೆಲಸಗಳ್ಳರು, ಲಾಭಬಡಕರು. ಈಗಲ್ಲದಿದ್ದರೆ ಹತ್ತು ವರುಷಗಳ ಮೇಲಾದರೂ ಆಗದೆ ಇರಲಿಕ್ಕಿಲ್ಲ. ನೆನೆ-ಗುದಿಗೆ ಬಿದ್ದರೆ ಗಾಂಧೀ ರಾಜ್ಯ ಬಂದ ಮೇಲೆ ಬಾಕಿ ಬೀಳದು. ಅಷ್ಟರವರೆಗೆ ಸ್ವಲ್ಪ ಕಷ್ಟಪಡಬೇಕು.'

ಗೋವಿಂದರಾಯರು ಉತ್ತರವನ್ನೀಯಲಿಲ್ಲ. ಬಿಸಿಲೂ ಏರುತ್ತ ಬಂದಿತು. 'ಪೇಟೆಗೆ ಹೋಗಿ ಬರೋಣ' ಎಂದು ಅವರು ತಿಳಿಸಿದುದರಿಂದ ಹೊಳೆಯ ಆಚೆ ದಂಡೆಯಲ್ಲಿದ್ದ ಒಳದಾರಿ ಹಿಡಿದ ರಾಜ. ಒಂದರ್ಧ ಮೈಲು ಹೊಳೆ ಹರಿದಂತೆ ಅನುಸರಿಸಿ, ಮತ್ತೆ ತಿರುಗಿ ಮತ್ತೊಂದು ರಸ್ತೆಗೆ ಬಂದರು. 'ಇದು ಯಾವ ರಸ್ತೆ?' ಎಂದು ಕೇಳಿದುದಕ್ಕೆ, ಬೆಳ್ತಂಗಡಿಯಿಂದ ನಾವೂರು ಮಾರ್ಗವಾಗಿ ಬಂದ ಈಚೆಯ ರಸ್ತೆ' ಎಂದು ರಾಜ ತಿಳಿಸಿದ. ಆ ಮೇಲೆ ಆ ರಸ್ತೆ ಹಿಡಿದೇ ಅರ್ಧ ಮೈಲು ಸಾಗಿದರು. ರಸ್ತೆಯ ಬದಿಗಳಲ್ಲಿ ಅಲ್ಲಲ್ಲಿ ಒಂದೊಂದು ಗುಡಿಸಿಲುಗಳು ಕಾಣಿಸಿದುವು. ಒಂದೆಡೆ ಎರಡೂ ಮಗ್ಗುಲಲ್ಲಿ ಮನೆಗಳಿದ್ದವು. 'ಇದೇ ಬಂಗಾಡಿ ಪೇಟೆ' ಎಂದ ರಾಜ.

ಗೋವಿಂದರಾಯರಿಗೆ ಆಶ್ಚರ್ಯವಾಯ್ತು. ಎರಡು ಮೂರು ಅಂಗಡಿ ಗಳಿದ್ದಿಲ್ಲ. ರಸ್ತೆಯ ಬದಿಗೇ ಹತ್ತಿಪ್ಪತ್ತು ಮನೆಗಳು. ಒಂದು ಮನೆಯ ಪೌಳಿಗೇ 'ಬಂಗಾಡಿ ಶಾಲೆ' ಎಂದು ಬೋರ್ಡನ್ನು ತೂಗು ಹಾಕಿತ್ತು. ಒಂದು ದೇವಸ್ಥಾನದಂತೆ ತೋರುತ್ತಿತ್ತು. 'ಇದೇ ದೇವಸ್ಥಾನವೇನು?' ಎಂದು ಪ್ರಶ್ನಿಸಲು, 'ದೇವಸ್ಥಾನ ಇಲ್ಲಿಲ್ಲ. ನಮ್ಮ ಕಟ್ಟದಿಂದ ಬಡಗು ನಾಲ್ಕು ಮೈಲು ತೆರಳಿದರೆ ಕೊಲ್ಲಿ ದೇವಸ್ಥಾನವಿದೆ. ಇದು ಜೈನರ ಬಸ್ತಿ' ಎಂದು ರಾಜ

ಹೇಳಿದ. ಬಂಗಾಡಿಯು ಬಂಗ ಜೈನ ಅರಸರ ಇತಿಹಾಸವು ಗೋವಿಂದರಾಯರ ಸ್ಮರಣೆಗೆ ಬಂತು. ಶಾಲೆಯಲ್ಲಿ ಹುಡುಗರಿಗೂ ಅವರು ಅದನ್ನು ಕಲಿಸಿದ್ದರು. ಬಂಗಾಡಿ ಅವರ ರಾಜಧಾನಿ ಎಂದಿದೆ ಇತಿಹಾಸದಲ್ಲಿ. ಪ್ರಾಯಶಃ ಇದೇ ಇರ ಬೇಕೆಂದು ಅವರು ಊಹಿಸಿದರು. ಆದರೆ ಕಾಲಗತಿಗೆ ಸಿಕ್ಕು ಪಾಳುಬಿದ್ದಿದೆ ಎಂದು ಅವರು ತರ್ಕಿಸದೆ ಇರಲಿಲ್ಲ. ಈ ಯೋಚನೆಯ ಮಧ್ಯೆ ಮಾತೆತ್ತಿ, 'ಬಂಗ ಅರಸು ಕುಲದವರು ಈಗ ಇದ್ದಾರೇನು? ಅಥವಾ ಸಂತಾನ ನಿಸ್ಸಂತಾನ ವಾಗಿ ಹೋಗಿದೆಯೋ?' ಎಂದು ಕೇಳಿದರು.

'ಇದ್ದಾರೆ. ಒಂದು ಹಳೇ ಅರಮನೆಯೂ ಇದೆ. ಆದರೆ ಅದು ಹೆಸರಿಗೆ ಮಾತ್ರ; ದೊಡ್ಡ ಜಮೀನ್ದಾರರ ಮನೆಯಷ್ಟಿದೆ, ಅಷ್ಟೆ. ಅವರಲ್ಲಿ ಕೆಲವರು ಸಾವೂರು ಮೊದಲಾದ ಕಡೆ ತೆರಳಿ ಈಗ ದಿಕ್ಕಾಪಾಲಾಗಿದ್ದಾರೆ. ಈಗಿನ ಕಾಲಕ್ಕೆ ಈ ಅರಸು ಪೊಡಸುಗಳನ್ನು ಯಾರು ಕೇಳುತ್ತಾರೆ? ಕೋಟೆ ಕೊತ್ತಲ ಮಂದಿ ಮಾರ್ಬಲ ಇರುವ ವರೆಗೆಲ್ಲ ಅವರ ದರ್ಬಾರ್. ನಮ್ಮಂತೆ ಬಡತನಕ್ಕಿಳಿದ ಮೇಲೆ ದಾರಿಯಲ್ಲಿ ಹೋಗುವ ನಾಯಿಯೂ ಗುರ್ರೆನ್ನುತ್ತದೆ.'

ಅಂಗಡಿಯಲ್ಲಿ ಮನೆಯ ನಿತ್ಯಖರ್ಚಿಗೆ ಅವಶ್ಯವಿದ್ದ ಜಿನಸು ಸಾಮಾನು ಗಳನ್ನೆಲ್ಲ ಕೊಂಡುಕೊಂಡರು. ಸಾವುಕಾರ ಕಾಗದದ ತೊಟ್ಟೆ ಮಾಡಿ ಒಂದೊಂದಾಗಿ ಎಣಿಸಿ ಲೆಕ್ಕ ಗುಣಿಸಿದ. 'ಹಾ, ಬೈರಾಸ್ ಬಿಟ್ಟು ಬಂದೆವಲ್ಲ? ಇದನ್ನು ಒಯ್ಯುವ ಬಗೆ ಹೇಗೆ?' ಎಂದು ರಾಜ ಚಿಂತಿಸಿದ. ಗೋವಿಂದ ರಾಯರು ಸಣ್ಣಸಣ್ಣ ಪೊಟ್ಟಣಗಳನ್ನೆಲ್ಲ ಕೋಟಿನ ಕೆಳ ಕಿಸೆಗಳಿಗೆ ತುರುಕಿ ಸಿದರು. ತಲೆಯ ಮೇಲಿನ ಮುಂಡಾಸನ್ನು ಬಿಚ್ಚಿ ಉಳಿದುದನ್ನು ಗಂಟು ಕಟ್ಟಿ ಹೆಗಲ ಮೇಲೆ ಹಾಕಿಕೊಂಡರು. ಮತ್ತೆ ಏನೋ ನೆನಪಾಗಿ 'ಮಕ್ಕಳಿಗೆ ಒಂದು ಮುಕ್ಕಾಲಿನ ದ್ರಾಕ್ಷಿ, ಒಂದು ಮುಕ್ಕಾಲಿನ ಕಲ್ಲುಸಕ್ಕರೆ' ಎಂದು ಪುನಃ ಹೇಳಿ ತೆಗೆದುಕೊಂಡರು. ಅಂಗಡಿಯಿಂದ ಹೊರಡುವಾಗಲೇ ಸೂರ್ಯ ನೆತ್ತಿಗೇರಿದ್ದ.

'ಇನ್ನು ಅಷ್ಟು ದೂರ ನಡೆಯಬೇಕಲ್ಲ?' ಎಂದು ಬಳಲಿ ನುಡಿದ ತಂದೆಯ ಮಾತನ್ನು ಕೇಳಿ ರಾಜ, 'ಒಳದಾರಿಯಿಂದಲೇ ಮರಳೋಣ. ಈ ಬಂಗಾಡಿ ಪೇಟೆ ನೇತ್ರಾವತಿಯ ಈಚೆ ದಡದಲ್ಲಿದ್ದರೆ, ಸರೀ ಆಚೆ ದಡದಲ್ಲಿ ನಮ್ಮ ಮನೆ. ಕೆಲವು ಬೆಟ್ಟು ಗದ್ದೆಗಳನ್ನು ದಾಟಿದರೆ ಒಂದು ಸಣ್ಣ ಕಾಡು. ಕಾಡಿನ ಅಂಚಿನಲ್ಲೇ ಹೊಳೆಯಿದೆ. ನದಿಯಲ್ಲಿ ನೀರೂ ಬಹಳವಿಲ್ಲ' ಎಂದು

ಸುರಿ ಆ ದಾರಿಯಿಂದಲೇ ಕರೆದುಕೊಂಡು ಬಂದ.

ಸಾಯಂಕಾಲ ಮುಳಿಹುಲ್ಲಿಗೆ ಉರಿಹಚ್ಚಲು ಸಿದ್ಧತೆಯಾಯಿತು. ಅಂಗಳದ ಈಚೆಗೆ ಕಿಡಿ ಹಾರದಂತೆ ಕೊಡಗಳಿಂದ ತಣ್ಣೀರೆರೆದರು. ಕೊಡ ಮತ್ತು ಬಾಲ್ದಿಗಳಲ್ಲಿ ನೀರು ತುಂಬಿಸಿಕೊಂಡು ಅಂಗಳದಲ್ಲಿ ಎಲ್ಲರೂ ಎವೆಯಿಕ್ಕದೆ ನಿಂತುಕೊಂಡರು. ಮನೆಯ ಹಿಂಬದಿಯಿರುವ ಕಾದಿಟ್ಟ ಕಾಡನ್ನು ಬಿಟ್ಟು ಉಳಿದೆಲ್ಲ ಭಾಗಗಳಿಗೆ ಬೆಂಕಿ ಹಚ್ಚಲು ರಾಜನ ನಿರ್ಧಾರ. ಅಂಗಳದ ಬದಿಯಿಂದಲೇ ಉರಿಹಚ್ಚಿಬಿಟ್ಟರು. ಹೊತ್ತುತ್ತ ಹೊಗೆಯುತ್ತ ಬೆಂಕಿ ಪಶ್ಚಿಮದಲ್ಲಿ ಹೊಳೆಯುವರೆಗೂ ಹರಿಯಿತು. ಹಟ್ಟಿಯ ಹಿಂಬದಿ ಇಟ್ಟ ಕೊಳ್ಳಿ ಬಡಗು ದಿಕ್ಕನ್ನು ವ್ಯಾಪಿಸಿತು. ಮುಳಿಹುಲ್ಲು ಪಟಪಟ ಸುಟ್ಟುಸುಡುತ್ತ ಒಣಗಿದ ಭಾಗದಲ್ಲಿ ಬೇಗನೇ ಹೊತ್ತುತ್ತ ಹೋಯಿತು. ಬಿದಿರಿನ ಮೆಳೆಗಳ ಬುಡದಲ್ಲಿ ಬಿದ್ದಿದ್ದ ಚೂರುಗಳಿಗೆ ಹತ್ತಿಕೊಂಡಾಗ ನಿಟಿನಿಟಿಲ್ ಎಂಬ ಸದ್ದಾಯಿತು. ಮರಗಳಡಿಯಲ್ಲಿ ಬಿದ್ದಿದ್ದ ತರಗೆಲೆಯ ರಾಶಿಗಳು ಬಸ್ಮವಾದುವು. ನೀರಿನ ಪಸೆಯಿದ್ದ ಜಾಗದಲ್ಲಿ ಬೆಂಕಿ ನಿಂತಿತು. ಕೆಲವು ಮರಗಳಿಗೆ ಸುತ್ತಿದ್ದ ಬಳ್ಳಿಗಳು ಒಣಗಿಹೋಗಿದ್ದವು. ಬೆಂಕಿ ಅದಕ್ಕೆ ಹತ್ತಿಕೊಂಡಿದ್ದುದರಿಂದ ಮರಗಳ ತುದಿಗಳಿಗೂ ಬೆಂಕಿ ತಾಗಿದಂತೆ ತೋರಿತು. ನಡುನಡುವೆ ಆ ಬಳ್ಳಿಯ ಒಂದೊಂದೇ ತುಂಡು ತುಂಡಾಗಿ ಕೆಳಗೆ ಬೀಳುತ್ತಿತ್ತು.

‘ ಮಿಡಿತೆ ಹಾತೆ ಹಾವುಗಳೆಲ್ಲ ಈ ಬೆಂಕಿಗೆ ಬದುಕಲುಂಟಾ ? ಎಷ್ಟು ಜೀವರಾಶಿ ನಾಶವಾಯಿತೊ ಏನೋ?’ ಎಂದು ಗೋವಿಂದರಾಯರು ಚಡಪಡಿಸಿದರು.

ಹಾಗೆಲ್ಲ ದಯೆ ತೋರಿಸಿದರೆ ಈ ಮಲೆರಾಜ್ಯದಲ್ಲಿ ಮನುಷ್ಯ ಬದುಕಲಿಕ್ಕಿಲ್ಲ. ದುಷ್ಟ ಪ್ರಾಣಿಗಳು ಜೀವವನ್ನೆ ನುಂಗುವವು. ಇದೆಂತಹ ಬೆಂಕಿ ? ನೋಡಿ, ಎದುರಿಗೆ ಕಾಣುವ ಆ ಮಹಾ ಅರಣ್ಯಗಳಿಗೂ ವರುಷಂಪ್ರತಿ ಬೆಂಕಿ ಹಚ್ಚುತ್ತಾರೆ’ ಎಂದ ರಾಜ.

ಮರುದಿನ ಬೆಂಕಿ ಎಲ್ಲೆಲ್ಲಿ ಹಬ್ಬಿದೆಯೆಂದು ನೋಡಿಕೊಂಡು ಬಂದರು. ನೆಲವೆಲ್ಲ ಕರಿಯಿಂದ ಕುವರಿತ್ತು. ಕೆಲವು ಗಿಡಗಳೆಲ್ಲ ಅರ್ಧ ಸುಟ್ಟಿದ್ದವು. ಅವುಗಳ ಮೇಲ್ಭಾಗದ ಎಲೆಗಳೂ ಬಾಡಿದ್ದುವು. ಬಿದ್ದು ಒಣಗಿದ ಪೊಳ್ಳು ಮರಗಳಲ್ಲಿ ಇನ್ನೂ ಹೊಗೆಯಾಡುತ್ತಿತ್ತು. ಆದರೆ ಮುಳಿಯೆಲ್ಲ ನಾಶವಾಗಿದ್ದುದರಿಂದ ಅಲ್ಲಲ್ಲಿ ವಿಶಾಲವಾದ ಮೈದಾನು ಸ್ಥಳ ಕಾಣಿಸುತ್ತಿದೆ ಈಗ. ಪಾಳುಬಿದ್ದ ಹುಣಿಗಳನ್ನು ಗುರುತಿಸಲೂ ಸಾಧ್ಯ. ಈಗ ಕಾಡು ಅಷ್ಟು ದಟ್ಟವಾಗಿಲ್ಲ ಎಂದೆನ್ನಿ

ಸಿತು ಗೋವಿಂದರಾಯರಿಗೆ.

ಆಳುಗಳಿಗೆ ಬಾಕಿ ಹಣ ತೆತ್ತು, ಮುಂದಿನ ಕೆಲಸವನ್ನು ತಿಳಿಸಿ ರಾಜ ಹೆಂಡತಿಮಕ್ಕಳೊಂದಿಗೆ ಹೊರಟ. 'ಗಾಡಿ ಮೂರು ನಾಲ್ಕು ದಿವಸಗಳೊಳಗೆ ಬಂದೀತು. ಅದರಲ್ಲಿ ಮಳೆಗಾಲದ ಸಾಮಾನು ಕಳಿಸುತ್ತೇನೆ. ಏನಾದರೂ ಕಡಿಮೆ ಬಿದ್ದರೆ ಆಳುಗಳ ಮೂಲಕ ತರಿಸಿ. ನಿಮಗೆ ದಾರಿ ತಪ್ಪೀತು. ತಣ್ಣೀರು ಮಾತ್ರ ಕುಡಿಯಬೇಡಿ. ಇದು ಮಲೆರಾಜ್ಯ. ಒಳ್ಳೆಮೆಣಸಿನ ಬಿಸಿನೀರೇ ಉಪಯೋಗಿಸಿ. ಗಾಡಿಯೊಡನೆ ನಾನು ಬಂದರೂ ಬಂದೆ. ಏನಾದರೂ ಕೆಲಸ ಇದ್ದರೆ ಮಳೆ ಬೀಳುವುದರೊಳಗೆ ಖಂಡಿತ ಬರುತ್ತೇನೆ. ನೀವೇನೂ ಬೇಸರ ಮಾಡಬಾರದು. ಆಳುಗಳಿದ್ದಾರೆ. ಅವರ ಹೆಂಡಿರು ಮಕ್ಕಳು ಆಗಾಗ ಬರುತ್ತಾರೆ' ಎಂದು ಪದೇ ಪದೇ ರಾಜ ಹೇಳಿದ. ಅವರನ್ನು ಬೀಳ್ಕೊಡಲು ಮನೆಯ ಮೇಲಿನ ರಸ್ತೆಯ ವರೆಗೂ ಗೋವಿಂದರಾಯರು ಬಂದರು.

ಅವರನ್ನು ಹಿಂದೆ ಬಿಟ್ಟು ಬಹುದೂರ ಬಂದ ಮೇಲೆ ಸುಭಾಷಿಣಿ ಕೇಳಿದಳು– 'ಈ ದಂಡಕಾರಣ್ಯದಲ್ಲಿ ಅವರು ನೆಲಸಿಯಾರೇನು ?'

ರಾಜ ಉತ್ತರ ಕೊಡಲಿಲ್ಲ.

೫

ಮೇ ಉರುಳಿ ಜೂನ್ ತಿಂಗಳು ಅರಳಿತು. ಕರಾವಳಿ ಗಾಳಿ ಜೋರಾಗಿ ಬೀಸತೊಡಗಿತು. ಅದರೊಂದಿಗೆ ಕರಿಮೋಡ ತೆರೆತೆರೆಯಾಗಿ ಹರಿದು ಬಂತು. ಘಟ್ಟದ ಸಾಲಿನ ಉನ್ನತ ಬೆಟ್ಟಗಳು ಸಿಟ್ಟಿನಿಂದ ಎದೆ ಮರೆಸಿ ನಿಂತು ಮೋಡಗಳನ್ನು ತಡೆದು ನಿಲ್ಲಿಸಿದುವು. ಮೋಡಗಳು ದಿಕ್ಕುಗಾಣದೆ ಅಲ್ಲೇ ಹೆಪ್ಪುಗಟ್ಟಿದುವು. ತಿಳಿಬಾನು ಕರಿಮೋಡಗಳ ರಾಶಿಯಿಂದ ಮುಚ್ಚಲ್ಪಟ್ಟಿತು. ಭೂಮಿ-ತಾಯ ಮೇಲೆ ವಿಶಾಲವಾದ ಅಂತರಿಕ್ಷದಲ್ಲಿ ಯಾರೋ ಕಬ್ಬಿಣದ ಕವಚವನ್ನೇ ತೊಡಿಸಿದಂತೆ ಕಾಣಲಾರಂಭಿಸಿತು. ತನ್ಮಧ್ಯೆ ಗುಡು ಗುಡು ಗುಡುಗೂ ಗುಡುಗತೊಡಗಿತು. ನಭವೇ ಒಡೆದುಬಿದ್ದಿತೋ, ಗ್ರಹಗಳು ಬಂಡೆಗಲ್ಲುಗಳ ಮೇಲೆ ಬಡೆದುವೋ, ಕುದುರೆಮುಖದ ಕೋಡುಗಲ್ಲುಗಳನ್ನು ಉರುಳಿಸಿಬಿಟ್ಟರೊ ಎಂಬಂತೆ ಭೀಕರ ಶಬ್ದ. ಕುಡಿಮಿಂಚು, ಕೋಲ್ಮಿಂಚು, ಸರಳ್ಮಿಂಚು,

ಬಳ್ಳಿಮಿಂಚು ಜಗ್ಗನೆ ಮಿಂಚಿದುವು. ಗಾಳಿಮಳೆ, ಹನಿಹನಿ ಮಳೆ, ಜಡಿಮಳೆ, ಜಿರಾವರ್ಷಿ ಮಳೆಯೂ ಸುರಿಯತೊಡಗಿತು. ಮಳೆಗಾಲ ಆರಂಭವಾಯಿತು.

ಬಿಸಿಲಿನ ತಾಪಕ್ಕೆ ಒಣಗಿ ತುಟಿಗಳೊಡೆದ ಗದ್ದೆ ನೀರನ್ನು ಹೀರಿತು. ಭೂಮಿಯ ಬಾಯಾರಿಕೆ ಇಂಗಿತು. ಇಂಗಿದ ನೀರು ಬೇಸಿಗೆಗೆ ಗಟ್ಟಿಯಾಗಿದ್ದ ಮಣ್ಣಿನ ಅಣು ಕಣಗಳನ್ನು ಮೃದುಗೊಳಿಸಿತು. ಮುರಿದ ಮುದುಡಿದ ಗಿಡ ಮರಗಳ ಬೇರುಗಳು ಅತ್ತಿತ್ತ ನುಸುಳಿದುವು. ಹೊಸ ಉಲ್ಲಾಸ ಹೊಸ ಶಕ್ತಿ ಚೈತನ್ಯದಿಂದ ಗೆಲ್ಲುಗಳು ಚಿಗುರಿದುವು. ಬಿದಿರು ಬಾಣದಂತಹ ಕಣೆತೊಟ್ಟಿತು. ಲಂತಾನ ದಪ್ಪ ಬೆಳೆಯಿತು. ಕರ್ಮ್ಮರ್, ಮತ್ತಿ ಮೊದಲಾದ ಮರಗಳು ಇನ್ನಷ್ಟು ಉದ್ದವಾದುವು. ಅವುಗಳ ಬುಡದಲ್ಲಿ ಬಿದ್ದ ಬೀಜಗಳು ಸದ್ದಿಲ್ಲದೆ ಮೊಳಕೆ ಒಡೆದುವು. ಎಲ್ಲೆಲ್ಲೂ ಈ ಗಿಡ ಮರ ಬಳ್ಳಿಗಳದೇ ರಾಜ್ಯ ; ಅವುಗಳದೇ ಆನಂದ ಸಾಮ್ರಾಜ್ಯ. ಹುಲಿ ಹರಿಣಗಳಿಗೆ ಅವೇ ತಮ್ಮ ಎಲೆಕೊಡೆ ಹಿಡಿಯುತ್ತವೆ. ಪೊದರಿನಲ್ಲಿ ಮೈ ಮುದುಡಿ ಅರೆ ಕಣ್ಮುಚ್ಚಿ ಕುಳಿತ ಮೊಲ ಅಲ್ಲೇ ಚಿಗುರೆಲೆಗಳನ್ನು ಜಗೆಯುತ್ತದೆ. ಲಂತಾನದ ಹೊದರಿನೊಳಗೆ ಕಾಡುಕೋಳಿ ಕಾಲು ಕೆದರಿ ಹುಳು ಹುಪ್ಪಡಿಗಳನ್ನು ಹಿಡಿದು ನುಂಗುತ್ತದೆ. ಕಾಡು ಗುಬ್ಬಿ, ಕಾಡು ಪಾರಿವಾಳ, ಗೊರವ ಮೊದಲಾದ ನಾನಾ ಜಾತಿಯ ಹೆಸರಿಲ್ಲದ ಚಿತ್ರ ವಿಚಿತ್ರ ಬಗೆ ಬಗೆ ಬಣ್ಣದ ಹೆಣ್ಣು ಗಂಡು ಹಕ್ಕಿಗಳು ರಕ್ಕೆಗಳೊಳಗೆ ಕೊಕ್ಕನ್ನು ತುರುಕಿಸಿ ಮರಗಳ ಮರೆಯಲ್ಲಿ ಕುಳಿತು ವಸಂತದ ಸವಿ ಸ್ಮರಣೆಗಳನ್ನು ಮೆಲುಕಾಡಿದುವು.

ಗೋವಿಂದರಾಯರು, 'ಜೂನ್, ಜುಲಾಯಿ' ಎಂದು ಮಳೆಗಾಲದ ತಿಂಗಳುಗಳನ್ನು ಲೆಕ್ಕ ಹಾಕತೊಡಗಿದರು. ಇನ್ನೂ ಇದು ಅಗಸ್ಟ್. ಮಳೆ ಸಪ್ಟಂಬರ್ ತಿಂಗಳಲ್ಲಿ ಇಳಿ ಮುಖ. ಆದರೆ ಇದೆಲ್ಲ ಕರಾವಳಿ ಲೆಕ್ಕ. ಘಟ್ಟದ ನೆರಳಲ್ಲಿ ಹಾಗೆ ಅಥವಾ ಹೀಗೆ ಎಂದು ತರ್ಕಿಸುವುದು ಕಷ್ಟ. ಅಲ್ಲದೆ ಈ ಭಾಗದಲ್ಲಿ ಅವರು ಕಳೆವ ಮೊದಲನೇ ಮಳೆಗಾಲವಿದು. ಅನುಭವವಿಲ್ಲ. ಇಷ್ಟರ ವರೆಗೆ ಕಳೆದ ಎರಡು ತಿಂಗಳುಗಳೇ ಎರಡು ವರುಷಗಳಂತೆ ಭಾಸವಾಗಿದೆ ಅವರಿಗೆ. ಮಳೆಗಾಲ ಆರಂಭವಾದುದೇ ಆದುದು, ಒಂದು ನರಹುಳು ಅವರ ಮನೆಗೆ ಬರಲಿಲ್ಲ. ಮಳೆ ಹನಿಯುವ ಮೊದಲು ಬೋರನ ಹೆಂಡತಿ ಲಚ್ಚಿ, ಮಿ ಆಹಮ್ಮದನ ಬೀಬಿ ಹಸೀನ್, ತುಕ್ರನ ಬೈದ್ಯೆತಿ ಪಾರ್ವತಿ ಆಗಾಗ ಬಂದಿದ್ದರು. ಮುಳಿಹುಲ್ಲು ಕೀಳಲು ಬಂದವರು, ದನಕರುಗಳನ್ನು ಹುಡುಕುಲು

ನಿಂದವರು ಅವರನ್ನು ನೋಡಲೆಂದಾದರೂ ಕಾಣಿಸಿಕೊಂಡುದುಂಟು. ರಸ್ತೆಯಲ್ಲಿ ತೆರಳುವ ದಾರಿಹೋಕರು ಮುಳಿಹುಲ್ಲನ್ನು ಕಂಡು ಬಿಸಿ ನೀರಿಗೆ ಬಾಯಾರಿ ಬರುತ್ತಿದ್ದರು. ಬೋರ, ಅಹ್ಮದ್, ತುಕ್ರ ಮೊದಲಾದ ಆಳುಗಳು ಹಣದಾಶೆಗಾಗಿ ಕೆಲಸಕ್ಕೆ ಹಾಜರಿರುತ್ತಿದ್ದರು. ಆದರೆ, ಮಳೆಗಾಲ ಆರಂಭವಾದ ಮೇಲೆ ಅವರ ಸುಳಿವಿಲ್ಲ.

ನೇತ್ರಾವತಿ ತುಂಬಿ ಹರಿಯುತ್ತಿದ್ದುದರಿಂದ ಅದನ್ನು ದಾಟಿ ಬರಲು ಹೊಳೆಯಾಚೆಯ ಅಹ್ಮದ್ ಬ್ಯಾರಿಗೂ ಅಶಕ್ಯ. ನೀರು ಭೋರ್ಗರೆದು ಹರಿವ ಶಬ್ದ ಮನೆಯ ವರೆಗೂ ಕೇಳಿಸುತ್ತಿತ್ತು ಗೋವಿಂದರಾಯರಿಗೆ. ದಡ ಉಕ್ಕಿ ಹರಿದು ಬಂತೇ, ಮನೆಗೆ ಅಪಾಯ ಉಂಟೇ ಎಂದು ಹೆದರಿ, ಗಾಳಿಗೆ ಹಾರಿ ಹೋಗದಂತೆ ಹರುಕು ಹಳೇ ಕೊಡೆಯನ್ನು ಅರ್ಧ ಬಿಡಿಸಿ ತಲೆಯ ಮೇಲೆ ಹಿಡಿದುಕೊಂಡು ಹೊಳೆಯವರೆಗೂ ಒಮ್ಮೆ ಅವರು ಬಂದಿದ್ದರು. ದಡ ಮೀರದಿದ್ದರೂ ತುಂಬಿತ್ತು. ನೀರಿನ ರೌದ್ರಾವತಾರವನ್ನು ನೋಡಿ ಅವರ ಕಾಲು ನಡುಗಿದುವು. ಬೇಸಿಗೆಗೆ ತಮ್ಮ ಮೂಗು ಮೇಲೆಂದು ನೀರಿನ ಮೇಲೆ ತಲೆ ಎತ್ತಿ ನಿಂತಿದ್ದ ಒಂದೂ ಬಂಡೆಗಲ್ಲು ಕಾಣಿಸಲೊಲ್ಲದು. ಅವುಗಳ ಎಡೆಯಲ್ಲಿ ಬೆಳೆದಿದ್ದ ಈಚಲು ಹುಲ್ಲು, ಸಸಿಗಳ ಸುಳಿವಿಲ್ಲ. ಅಲ್ಲಲ್ಲಿ ಒಂದೊಂದು ಗಿಡದ ಕೈ, ಜುಟ್ಟು ಮಾತ್ರ ಗೋಚರಿಸುತ್ತದೆ. ನೀರಿನ ಭರಕ್ಕೆ ಅದೂ ಒಮ್ಮೆ ಹಿಂದೆ ಮುಂದೆ ಎಳೆಯಲ್ಪಡುತ್ತದೆ. 'ಮುಳುಗಿದೆ, ಮುಳುಗಿದೆ' ಎಂದು ಅದು ಗೋಳಿಡುವಂತೆ ಕಂಡಿತು ಗೋವಿಂದರಾಯರಿಗೆ. ನದಿಯ ನೀರಿನ ಪ್ರವಾಹ ಅಷ್ಟು ಜೋರು. ಅದರ ಬಣ್ಣ ನೋಡಿದಾಗಲೇ ಸಾಮಾನ್ಯರಿಗೆ ಕಣ್ಣುಕತ್ತಲೆ ಬಂದೀತು. ದಡದ ಬಳಿಯಲ್ಲಿ ನೀರಿಗೆ ಸ್ವಲ್ಪ ಕರಿ ಛಾಯೆ. ಸುಟ್ಟ ಮಲೆಯ ಕರಿ ನೀರು ಕೂಡಿ ಬಂದುದರಿಂದ ಹೀಗಿರಬೇಕು. ಆದರೆ ಮುಂದೆ ಮುಂದೆ ಹಳದಿ ಕೆಂಬಣ್ಣ ಮಿಶ್ರ ನೀರು. ಒಮ್ಮೊಮ್ಮೆ ದೊಡ್ಡ ದೊಡ್ಡ ಮರಗಳೂ ತೇಲಿ ಬರುತ್ತಿದ್ದುವು. ಕರಾವಳಿಯಲ್ಲಿ ಅದನ್ನು ಬಿಡುವವರು ಕಡಿಮೆ. ದೋಣಿ ನಡೆಸಿ ಅಥವಾ ಈಸಿ, ಮರಗಳಿಗೆ ಹಗ್ಗ ಎಸೆದು ದಡಕ್ಕೆ ಎಳೆದು ತರುವ ಸಾಹಸಿಗರುಂಟು. ಕರಾವಳಿಯಲ್ಲಿ ಹೊಳೆಗಳು ಅಗಲವಿರುವುದರಿಂದಲೂ ಹೆಚ್ಚಾಗಿ ಸಮತಟ್ಟಾದ ಬೈಲಿನ ಮಧ್ಯೆ ಹರಿಯುವುದರಿಂದಲೂ ಅದು ಕೆಲವರಿಗೆ ಸಾಧ್ಯ. ಆದರೆ ಎತ್ತರದಿಂದ ತಗ್ಗಿಗೆ ರಭಸದಿಂದ ಹರಿವ, ಬಂಡೆಗಲ್ಲು ಮರಗಳಿರುವ ಈ ಮಲೆನಾಡಿನಲ್ಲಿ ನೆರೆಗಿಳಿಯಲು ನರ ಮನುಷ್ಯರಿಗೆ ಎಡೆಯಿಲ್ಲ. ಪಾಪ! ಅಹ್ಮದ್ ಬ್ಯಾರಿ ಏನು

ಮಾಡಿಯಾನು ?

ಹೌದು. ಹೊಳೆಯಾಚೆಯ ಆಳುಗಳಿಗಾಗಲಿ ಜನರಿಗಾಗಲಿ ಬರಲು ಅಸಾಧ್ಯ. ಆದರೆ ಹೊಳೆಯೀಚೆಯ ಬೋರ, ತುಕ್ರರೂ ನಾಪತ್ತೆ. ಮಳೆ ಬಿದ್ದೊಡನೆ ಅವರು ಕೆಲಸಕ್ಕೆ ಬರುವುದನ್ನು ನಿಲ್ಲಿಸಿದರು. ಅವರದೂ ತಪ್ಪಲ್ಲ. ಏಕೆಂದರೆ ಅವರೂ ಹಂಗಿನ ಚಾಲುಗೇಣಿ ಒಕ್ಕಲುಗಳೇ. ಧನಿಯರ ಬೇಸಾಯ ಬಿಟ್ಟ ಬೇಗಾರಿ ಇದ್ದದ್ದೇ. ಅದು ಮುಗಿದ ಮೇಲೆ ಒತ್ತಾಯದಿಂದ ಕಟ್ಟಿ ಕೊಟ್ಟ ತಮ್ಮ ವ್ಯವಸಾಯ ಬಿಡುವಂತಿಲ್ಲ. ಬೇಸಾಯದ ಕೆಲಸ ಒಂದೆರಡಲ್ಲ. ಮನುಷ್ಯನ ಮೈ ಗದ್ದೆಯಲ್ಲಿ ಎಷ್ಟು ಮುದ್ದೆಯಾಯಿತೋ ಅಷ್ಟು ಒಳ್ಳೇದು. ಕೆಸರು ತುಳಿದು ತುಳಿದು ಮೊಸರಿನಂತಾದರೆ ಬತ್ತದ ತೆನೆ ಯಥೇಚ್ಛ ಬಂದು ಬಾಯಿ ಮೊಸರಾಗುತ್ತದೆ. ಅದಕ್ಕೂ ಒಂದು ಹೊತ್ತು ಗೊತ್ತುಂಟು. ಉತ್ತು ನೇಜಿ ನೆಡುವ ಕೆಲಸ ಮುಗಿದ ಮೇಲೆ ಕೊಯ್ಲಿನವರೆಗೆ ಅವರಿಗೆ ಬಿಡುವು. ಆಗ ಮಾತ್ರ ಆಗಾಗ ಕಾಣಿಸಿಕೊಂಡರು. ಒಂದು ದಿನ ಬಂದರೆ ಇನ್ನೊಂದು ದಿನವಿಲ್ಲ. ಕೆಲಸವಿಲ್ಲದೆ ಗೋವಿಂದರಾಯರಿಗೆ ಅದು ಗೊತ್ತಾಗುವುದಿಲ್ಲ. ಅವರಿಗೆ ಜನವಿಲ್ಲದೆ ಹೊತ್ತೇ ಹೋಗುವುದಿಲ್ಲ.

ಹೊತ್ತೂ ಗೊತ್ತಾಗುವುದಿಲ್ಲ. ಹಗಲಿರುಳೂ ಒಂದಾಗಿವೆ. ಹಗಲನ್ನು ಇರುಳು ನುಂಗಿದಂತೆ ಕಾಣುತ್ತದೆ. ಹಗಲೂ ಸಣ್ಣದಾಗುತ್ತ ನಡೆದಿದೆ. ಏಕೆಂದರೆ ಸರಿ ಬೆಳಗಾದ ಮೇಲೆಯೇ ಅವರು ಹೊರಬಾಗಿಲನ್ನು ತೆರೆದು ಮುಖಮಂಟಪಕ್ಕೆ ಕಾಲಿಡುವರು. ಸಾಯಂಕಾಲ ಸರಿ ಕತ್ತಲೆ ಪಸರಿಸುವ ಮೊದಲೇ ಬಾಗಿಲಿಗೆ ಚಿಲುಕವಿಕ್ಕಿ ಒಳಗೆ ಕುಳಿತುಬಿಡುವರು. ಅಲ್ಲದೆ, ಬಂಗಾಡಿಯಲ್ಲಿ ಸೂರ್ಯೋದಯವೂ ಸ್ವಲ್ಪ ತಡ. ಸೂರ್ಯ ಮೂಡಿದ ಒಂದು ಗಂಟೆಯ ಮೇಲೆಯೇ ಅಲ್ಲಿ ಸೂರ್ಯ ಪ್ರಕಾಶ. ಅಷ್ಟರವರೆಗೆ ಬಲ್ಲಾಳ ರಾಯದುರ್ಗ ತಡೆದು ಬಿಡುತ್ತದೆ. ಒಂದೆರಡು ಗಂಟೆ ಮೊದಲೇ ಸೂರ್ಯಾಸ್ತ ವಾದಂತೆಯೂ ತೋರುತ್ತದೆ. ಏಕೆಂದರೆ ಕುದುರೆಮುಖದ ಪರ್ವತಾವಳಿ ಕರಿಸೆರಗನ್ನು ಸೂರ್ಯನಿಗೆ ಅಡ್ಡ ಹಿಡಿದುಬಿಡುವುದು. ಆಚೆಯ ಸೂರ್ಯನ ದರ್ಶನ ಈಚೆಯವರಿಗಿಲ್ಲ. ಬೆಟ್ಟದ ನೆರಳಿನಲ್ಲಿ ಕತ್ತಲೆ ಬೆರೆತು ಬೇಗನೇ ಒಕ್ಕಲಾಗುತ್ತದೆ ಬಂಗಾಡಿಯಲ್ಲಿ. ಆದುದರಿಂದ, ಹಗಲಿಗಿಂತ ರಾತ್ರಿ ಬಹಳ ದೊಡ್ಡದಾಗಿದೆಯೆಂದು ಗೋವಿಂದರಾಯರು ಕಂಡದ್ದು ಸಹಜವೇ ಆಗಿದೆ.

ರಾತ್ರಿ ಆರಂಭವಾದೊಡನೆಯೇ ಮೋಹನ, ಸೀತಮ್ಮನವರ ಸೆರಗು

ಬಿಡುವುದಿಲ್ಲ. 'ಮಗ್ಗಿ, ನಕ್ಷತ್ರ, ಸಂವತ್ಸರಗಳ ನಾಮ ಹೇಳು. ಘಟ್ಟದ ಬುಡಕ್ಕೆ ಬಂದ ಮೇಲೆ ಕಲಿತುದು ಘಟ್ಟ ಹತ್ತುವುದು ಬೇಡ' ಎಂದು ಅವರು ಬೆದರಿಸಿದರೂ ಕೇಳಲಾರ. 'ಊಟ ಆಗಲಿ. ಮಲಗಿಕೊಳ್ಳುವ ಮೊದಲು ಹೇಳುತ್ತೇನೆ' ಎಂದು ಹಾರಿಸಿಕೊಳ್ಳುವನು. ಊಟವಾದ ಮೇಲೆ 'ಒಂದು ಎರಡು' ಎಂದು ಹೇಳಲಾರಂಭಿಸಿ ನೂರರ ಅಂಕೆ ಮುಟ್ಟುವುದರೊಳಗೆ ಬಾಯಿ ಆಕಳಿಸಿ ಬಿಡುವನು. ಆ ಮೇಲೆ ಅವನೆಲ್ಲೋ ಅವನ ಧ್ಯಾನವೆಲ್ಲೋ? 'ಅಶ್ವನಿ, ಭರಣಿ, ಕೃತ್ತಿಕಾ, ರೋಹಿಣಿ' ಎಂದು ಆರಂಭಿಸಿ ತನ್ಮಧ್ಯೆ 'ನಳ, ಪಿಂಗಳ' ಎಂದು ಉಸುರಿಬಿಡುವುದೂ ಇದೆ. ತಪ್ಪಿದುದನ್ನು ಗೋವಿಂದ ರಾಯರು ತಿದ್ದಿ ಹೇಳಿದಾಗ ಅವರೆಂದಂತೆ ಪುನರುಚ್ಚರಿಸುತ್ತಾನೆ. ಮತ್ತೆ ಅದೇ ಸೊಲ್ಲು.

'ಹುಂ, ನಿನಗೆ ನಿದ್ದೆ ಬಂತೆಂದು ತೋರುತ್ತದೆ, ಮಲಗು' ಎಂದವರು ಹೇಳುವುದೇ ತಡ, ಅವನ ದೇಹ ಹಾಸಿಗೆ ಕಾಣುತ್ತದೆ.

ಮೋಹನ ನಿದ್ದೆ ಹೋದ ಮೇಲೆ ಜಾಗ್ರತಾವಸ್ಥೆಯಲ್ಲಿ ಉಳಿದ ಜೀವ ಎರಡೇ. ಸೀತಮ್ಮ, ತಂದೆ ಮಗನ ಊಟವಾದ ಮೇಲೆಯೇ ತಾವು ಬಡಿಸಿ ಕೊಂಡು ಕುಳಿತುಕೊಳ್ಳುವರು. 'ನಾನು ಮಲಗಿಲ್ಲ. ನೀನು ಹೆದರುವುದು ಬೇಡ' ಎಂದು ಹೆಂಡತಿಗೆ ತಿಳಿಯಬೇಕೆಂದೋ ಏನೋ ಅಡಿಗೆ ಮನೆಗೆ ಕೇಳು ವಂತೆ 'ರಾಂ, ರಾಂ, ಸೀತಾ ರಾಂ' ಎಂದು ಗಟ್ಟಿ ಧ್ವನಿ ತೆಗೆಯುವರು ಗೋವಿಂದರಾಯರು. ಧ್ವನಿ ಇಳಿದಾಗ ಚಪ್ಪಾಳೆ ಬಡೆದು ಹೇಳುವರು. ಆದರೆ ಆವರ ಊಟ ಮುಗಿವಹೊತ್ತಿಗೇ 'ಸೀತಾರಾಂ' ಶಬ್ದ ಹೊರಗಿನ ಗುಡುಗು ಜಡೆಮಳೆಗಳ ಅನಂತ ಗದ್ದಲದಲ್ಲಿ ಅಡಗಿಹೋಗುತ್ತದೆ. 'ಏನು ಮಳೆ? ಎಂಥಾ ಸಿಡಿಲು?' ಎಂದು ಹೇಳುತ್ತ ಗೋವಿಂದರಾಯರು ದುಪ್ಪಟ ಹೊದೆದು ಕೊಂಡೇ ಅಡಿಗೆಮನೆಯ ಅಗಳಿಯ ಮೇಲೆ ಬಂದು ಕುಳಿತುಬಿಡುವರು. ಗಾಳಿಗೆ ಮುಖಮಂಟಪದ ಬಾಗಿಲು ಸ್ವಲ್ಪ ಅಲುಗಿದರೆ ಆವರ ಮೈ ಜುಂ ಎಂದೆನ್ನುತ್ತದೆ.

ಹೌದೇನೇ, ಯಾರಾದರೂ ಕಳ್ಳರು ಬಂದು ಬಾಗಿಲು ಬಡಿದರೆ ನಾವು ಮಾಡುವುದಾದರೂ ಏನು? ಹೆದರಿಸಬೇಕೆಂದರೆ ನಮ್ಮನೆಯಲ್ಲಿ ಒಂದು ಕೋವಿಯೂ ಇಲ್ಲ. ನಾಲ್ಕು ಜನ ಬಂದು ನಮ್ಮ ಕುತ್ತಿಗೆ ಹಿಚುಕಿದರೆ ಕೇಳುವವರೂ ಇಲ್ಲ' ಎಂದು ಹೆಂಡತಿಯ ಮುಂದೆ ಆಡುವರು.

‘ ಹೌದು. ನಿಮಗದೇ ಚಿಂತೆ. ನಮ್ಮಲ್ಲಿ ಕೊಪ್ಪರಿಗೆ ಇದೆಯೇನು ಕಳ್ಳರಿಗೆ ? ಈ ಕಣ್ಣು ಕಾಣದ ಕತ್ತಲೆ ಗುಡುಗು ಮಳೆಗೆ ಕಳ್ಳರು ಬರುತ್ತಾರೆ! ಅವರಿಗೆ ಜೀವದಾಶೆಯಿಲ್ಲವೆಂದು ತಿಳಿದಿದ್ದೀರಿ. ಒಬ್ಬೊಬ್ಬರಿಗೆ ಈ ಕಾಡಿಗೆ ಬರಲು ಕಾಲು ನಡುಗೀತು. ಒಬ್ಬಿಬ್ಬರು ಬಂದರೆ ನಾವು ಹೆದರುವಂತೆಯೂ ಇಲ್ಲ. ಕೋವಿ ಇಲ್ಲದಿದ್ದರೆ ಕತ್ತಿ ಕೊಡಲಿಯಾದರೂ ಉಂಟಲ್ಲ! ’

‘ ನೀನು ಕ್ಷತ್ರಿಯರ ಕುಲದಲ್ಲಿ ಹುಟ್ಟಬೇಕಿತ್ತಪ್ಪಾ! ಹಾಗೆಲ್ಲಾದರೂ ಹುಟ್ಟಿದ್ದರೆ ಏನೇನು ಮಾಡುತಿದ್ದೆಯೋ ? ’

ಮಾಡುವುದೇನು ? ಝಾನ್ಸಿರಾಣಿ ಏನು ಮಾಡಿದಳು ? ಅದನ್ನೆ ಮಾಡುತ್ತಿದ್ದೆ. ’

‘ ಅಬ್ಬ, ಅಬ್ಬ, ಈಗಲಾದರೂ ಏನಾಯ್ತು ? ಕಾಲ ಮಿಂಚಿ ಹೋಗಿಲ್ಲ. ಝಾನ್ಸಿ ರಾಣಿಯಾಗದಿದ್ದರೆ ಬಂಗಾಡಿ ರಾಣಿಯಾದರೂ ಆಗು. ’

ಆಗುತಿದ್ದೆನಲ್ಲ! ಏನು ಮಾಡುವುದು ? ಮಾರಾಯ ಸ್ವಲ್ಪ ವಕ್ರ ಬರೆದ. ಆದಕ್ಕೇ ಹೀಗಾಗಿದ್ದೇನೆ. ಈ ಕಾಡಿಗೆ ಬರಬೇಕಾಯ್ತು. ’

‘ ಓಹೋ, ಈಗ ಗೊತ್ತಾಯಿತು ನಿನಗೆ! ಉಡುಪಿಯಲ್ಲಿದ್ದಾಗ ಥೈ ಥೈ, ಕುಣಿಯುತ್ತಿದ್ದೆ ಮಕ್ಕಳ ಮನೆಗೆ ತೆರಳಬೇಕೆಂದು. ’

‘ ಹಾಂ, ನೀವು ನನ್ನನ್ನು ಹಂಗಿಸಲು ಸುರುಮಾಡಿದಿರಾ ? ನಾನು ಕುಣಿದೆ ನಿಜ. ನೀವು ಒಲ್ಲೆ ಎಂದೆನ್ನುತ್ತಿದ್ದರೆ ನಾನೊಬ್ಬಳೇ ಎಲ್ಲಿ ಬರುತ್ತಿದ್ದೆ ? ಮನೋನ್ಮನದೊಳಗೆ ನಿಮಗೂ ಆಶೆಯಿತ್ತು ಎಂದೆನ್ನಿ. ಅಪವಾದ ಹೊರಿಸಲು ಮನುಷ್ಯನಿಗೆ ಹೆಂಡತಿಯೇ ಸೈ. ಯಾರ ಮೇಲೆ ಹೊರಿಸಿದರೆ ಯಾರೂ ಕೇಳುವವರಿಲ್ಲ. ಆಗಲಿ, ರಾಜ ಬರಲಿ ಈ ಸಲ, ಕೇಳಿಬಿಡುತ್ತೇನೆ ಆವನನ್ನು ! ’

ಸೀತಮ್ಮನವರು ನೆನಸಿದಂತೆ ಒಂದು ಆದಿತ್ಯವಾರ ರಾಜ ಬಂದ. ಉಡುಪಿಯಿಂದ ಗಾಡಿ ಬಂದು ಮುಟ್ಟಿದ ಮೇಲೆ ಅವನು ಆಗಾಗ ಒಂದೆರಡು ಸಲ ಆಗಮಿಸಿದ್ದ. ಆದರೆ ಜಡಿಮಳೆ ಆರಂಭವಾದಂದಿನಿಂದ ಬಂದಿರಲಿಲ್ಲ. ಈಗ ಆಗಸ್ಟ್ ಆಗಮಿಸಿದ್ದುದರಿಂದ ಬಿಟ್ಟುಬಿಟ್ಟು ಮಳೆ ಸುರಿಯುತ್ತಿತ್ತು. ಗಾಳಿ ಬಂದ ಕಡೆ ಕೊಡೆ ಹಿಡಿದರೂ ಅವನ ಕೋಟು ಅಲ್ಲಲ್ಲಿ ಒದ್ದೆ ಮುದ್ದೆಯೇ. ಪಂಚೆಯ ಚುಂಗನ್ನು ಎತ್ತಿ ಸೊಂಟಕ್ಕೆ ಸಿಕ್ಕಿಸಿದ್ದರೂ ಜೋಡಿನ ಕೆಸರುನೀರು ಹಿಂಬದಿ ಸಿಡಿದಿದೆ. ಅವನ ಮೋರೆಯಲ್ಲೂ ಸ್ವಲ್ಪ ಸಿಡುಕಿನ ಭಾವವನ್ನೇ ಕಂಡರು ಗೋವಿಂದರಾಯರು. ‘ ಮಗು ಹೇಗಿದೆ? ಶುಭಾ ಚೆನ್ನಾಗಿದ್ದಾಳಾ ? ’

ಎಂದು ತಾಯಿ ಕೇಳಿದುದಕ್ಕೂ ಸರಿ ಉತ್ತರವನ್ನೇ ಕೊಡಲಿಲ್ಲ. 'ಅವರಿಗೇ-ನಾಗಿದೆ ಧಾಡಿ?' ಎಂದೇ ಮುಕ್ತಾಫಲಗಳು ಉದುರಿದುವು. ಗೋವಿಂದ ರಾಯರು ಒಮ್ಮೆ ಅಡಿಗೆಮನೆಗೆ ತೆರಳುವರು. ಒಮ್ಮೆ ಪಡಸಾಲೆಗೆ ಬಂದು ಮುಖಮಂಟಪದ ಕಡೆ ಹಣಕಿ ನೋಡುವರು. 'ನಸ್ಯ ತಂದಿಯೇನು?' ಎಂದು ಕೇಳಲು ಅವರ ಆಸೆ. ನಸ್ಯ ಮುಗಿದು ಹೋಗಿದ್ದುದರಿಂದ ಅದರ ಹಂಬಲ ವಾದಾಗ ಬರೇ ಬುರುಡೆ ಮೂಸಲು ಅವರು ಆರಂಭಿಸಿ ಎರಡು ಮೂರು ದಿವಸ ಗಳಾಗಿವೆ. ಅವನು ಕುದುರೆಮುಖ ನೋಡುತ್ತ ಏನೋ ಚಿಂತಿಸುತಿದ್ದಾನೆ. ಮೋಹನ ಬಟ್ಟಲು ನೀರು ಮಣೆಯಿಟ್ಟು 'ಅಣ್ಣ, ಊಟಕ್ಕೇಳಬೇಕಂತೆ' ಎಂದು ಹೇಳಿದಾಗಲೇ 'ಹುಂ' ಎಂದಷ್ಟೇ ಹೇಳಿ ಬಂದ. ಯಂತ್ರದಂತೆಯೇ ಊಟ ಮಾಡಿದ. ಆ ಮೇಲೆ ಚಾಪೆ ಬಿಡಿಸಿ ಮಲಗಿಕೊಂಡ.

'ಏನೋ ಆಗಿದೆ. ಅವನು ಎಂದಿನಂತಿಲ್ಲ' ಎಂದು ತರ್ಕಿಸಿ ಮುಖಮಂಟ ಪಕ್ಕೆ ಬಂದು, 'ನಸ್ಯ ಮರೆತೆಯೇನು ರಾಜ' ಎಂದು ಗೋವಿಂದರಾಯರು ಮಾತನಾಡಿಸಿದರು.

'ಕೋಟಿನ ಕಿಸೆಯಲ್ಲಿದೆ' ಎಂದಷ್ಟು ಉತ್ತರ ಬಂತು.

ಗೋವಿಂದರಾಯರು ಅಷ್ಟಕ್ಕೇ ಬಿಡದೆ ಅವನ ಚಾಪೆಯ ಬಳಿಯಲ್ಲೇ ಕುಳಿತು ಪೊಟ್ನ ಬಿಚ್ಚಿ ಒಮ್ಮೆ ಮೂಗಿಗೇರಿಸಿ ಮತ್ತೆ ಬುರುಡೆಗೆ ತುಂಬಿಸಲು ತೊಡಗಿದರು ತನ್ಮಧ್ಯ ಕೇಳಿದರು—'ಏಕೆ, ನಿನಗೆ ಹುಷಾರಿಲ್ಲವೇನು?'

'ಹುಷಾರಿಲ್ಲದಿದ್ದರೆ ಇಲ್ಲಿಯ ವರೆಗೆ ನಡೆದು ಬರುತ್ತಿದ್ದೆನಾ?'

'ಮತ್ತೇನು ಹೇಳು. ನೀನು ಯಾವಾಗಲೂ ಹೀಗಿರುವವನಲ್ಲ. ಮೋರೆ ಸಣ್ಣದು ಮಾಡಿಕೊಂಡು ಮಲಗಿದರೆ ನಮಗೂ ಬೇಸರವಾಗುತ್ತದೆ. ಅವಳು ಸರಿ ಊಟವನ್ನೇ ಮಾಡಲಿಲ್ಲ. ನಮ್ಮೊಡನೆ ಹೇಳುವ ಸಂಗತಿಯಾದರೆ ಹೇಳು. ಏನಾಯಿತು?'

'ಆಗುವುದೇನು? ಈ ಪಂಚ್ಯಾತ್ ಬೋರ್ಡ್ ಇಲಾಖೆಯನ್ನು ಎಬೋ ಲಿಷ್ ಮಾಡಿದರು.'

ಗೋವಿಂದರಾಯರಿಗೆ ಚೂರಿಯಿಂದ ತಿವಿದಂತಾಯ್ತು. ಒಂದು ಕ್ಷಣ ಅವರು ಸ್ತಬ್ಧರಾದರು. 'ಎಂದರೆ ಸುಪರ್‌ವೈಜರರಿಗೂ ಬಂತಾ ಚಕ್ರ?' ಎಂದು ಆಶ್ಚರ್ಯದಿಂದ ಕೇಳಿದರು.

'ಎಲ್ಲರಿಗೆ ಬಂತು. ಆದರೆ ನಮ್ಮದು ಕೆಲಸ ಖಾಯಂ ಆಗಿರುವುದರಿಂದ

ಮನೆಗೆ ಕಳಿಸಲು ಅವರಿಗೆ ಸಾಧ್ಯವಾಗಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿನ ಕೈಕೆಳಗೆ ದುಡಿಯಬೇಕು ಇನ್ನು.'

'ಓಹೋ, ಇಷ್ಟಕ್ಕೆ ಇಷ್ಟು.......'

ಅವರು ವಾಕ್ಯ ಮುಗಿಸಿರಲಿಲ್ಲ. ನಡುವೆ ಅವನೇ ತಡೆದು 'ಇಷ್ಟಕ್ಕೇಕೆ ಚಿಂತೆ ಎಂದರೆ? ನಿಮಗೆ ಗೊತ್ತಾಗಲಿಲ್ಲ. ಇನ್ನು ಮಂಗಳೂರಿನಲ್ಲಿ ಕೆಲಸಕ್ಕೆ ಹಾಜರಾಗಬೇಕು. ನಾನಲ್ಲಿ, ಈ ಆಸ್ತಿ ಇಲ್ಲಿ. ಇಲ್ಲೆಲ್ಲ ಸರಿ ಕೆಲಸ ಯಾರು ಮಾಡಿಸಬೇಕು?'

ಗೋವಿಂದರಾಯರು ಮೌನವೇ ಈಗ ಒಳ್ಳೇದೆಂದು ಸುಮ್ಮಗಿದ್ದರು.

ರಾಜ ಮಾತು ಮುಂದುವರಿಸಿದ– 'ಮಂಗಳೂರಿಗೆ ವರ್ಗವಾದ ಮೇಲೆ ಪ್ರತ್ಯೇಕ ಬಿಡಾರ ಮಾಡದೆ ಬೇರೆ ಉಪಾಯವಿಲ್ಲ. ಅಲ್ಲೊಂದು ಬಿಡಾರ! ಇಲ್ಲೊಂದು ಬಿಡಾರ!'

ಮತ್ತೂ ತಂದೆ ತುಟಿ ತೆರೆಯಲಿಲ್ಲ.

ಅವನು ಅಲ್ಲಿಗೇ ನಿಲ್ಲಿಸಲಿಲ್ಲ. 'ಈ ಎರಡು ಬಿಡಾರದ ವೆಚ್ಚ ಸಹಿಸಿದ ಮೇಲೆ ಉಳಿಯುವುದೇನು? ಆಳುಗಳಿಗೆ ಏನು ಕೊಡಲಿ? ಈ ಕಾಡನ್ನೆಲ್ಲ ಕಡಿದು ಕೃಷಿ ಮಾಡಿಸುವ ಬಗೆ ಹೇಗೆ? ನಾನು ಪೂರ್ವಾಪರ ವಿಚಾರವಿಲ್ಲದೆ ಸುಮ್ಮಗೆ ಹುಚ್ಚಾಗಿ ಈ ಕಾಡುಭೂಮಿ, ಈ ಪಾಳುಭೂಮಿ ತೆಗೆದುಕೊಂಡೆ. ಹುಚ್ಚು ಕಟ್ಟಿ ನಿಮ್ಮನ್ನೂ ಕರೆಸಿಕೊಂಡೆ. ಈಗ ಇದನ್ನು ನುಂಗಲೂ ಅಲ್ಲ, ಉಗುಳಲೂ ಅಲ್ಲ. ಏನು ಮಾಡಬೇಕೆಂದು ತೋಚುವುದಿಲ್ಲ. ಒಟ್ಟು ಹುಚ್ಚ ನಂತಾಗಿದೆ ನನಗೆ' ಎಂದುಸುರಿ ಹಣೆಯ ಮೇಲೆ ಬಲಗೈಯ್ಯನ್ನಿಟ್ಟುಕೊಂಡ.

ತಟಪಟ ಮಳೆಯ ದೊಡ್ಡ ದೊಡ್ಡ ಹನಿಗಳು ಆಕಾಶದಿಂದ ಉದುರಿದುವು. ಗಾಳಿ ಸುಂಯ್ ಸುಂಯ್ ಎಂದು ಬಿಸುಸುಯ್ಯಿತು. ಮಗನ ನಿಟ್ಟುಸಿರನ್ನೂ ಅವನ ಮಾತುಗಳನ್ನೂ ಕೇಳಿ ಗೋವಿಂದರಾಯರಿಗೆ ಒಂದೆಡೆ ಆಶ್ಚರ್ಯವೂ ಇನ್ನೊಂದೆಡೆ ಅನಂತ ವೇದನೆಯೂ ಆಯಿತು. ಅವನ ಅಧೈರ್ಯಕ್ಕಾಗಿ ಆಶ್ಚರ್ಯ, ಹತಾಶೆಗಾಗಿ ವ್ಯಸನ. ದುಃಖದಿಂದ ಗೋವಿಂದರಾಯರ ಕಣ್ಣುಗಳಲ್ಲಿ ನೀರು ತುಂಬಿತು. ಆದರೆ ಅದನ್ನು ತೋರಗೊಡಬಾರದೆಂದು ಒಂದು ಚಿಟಿಕೆ ನಸ್ಯ ಏರಿಸಿ ಮೂಗು ಒರೆಸಿಕೊಳ್ಳುವಾಗ ಕಣ್ಣುಗಳನ್ನು ಒರಸಿಕೊಂಡರು. ನಾಲ್ಕು ಮಾತುಗಳನ್ನು ಹೇಳಿ ಸಂತೈಸಬೇಕೆಂದು ಅವರ ಮನಸ್ಸು ಎಳೆಯತೊಡಗಿತು. ಸ್ವಲ್ಪ ಗಂಭೀರವಾಗಿಯೇ ಅವರು ಆರಂಭಿಸಿದರು—

‘ ರಾಜ, ನೀನು ಹೇಳಿದುದೆಲ್ಲ ಅರ್ಥವಾಯಿತು. ಆದರೆ ಇದಕ್ಕಾಗಿ ನೀನು ಚಿಂತಿಸುವುದೇಕೆಂದು ಮಾತ್ರ ನನಗೆ ಅರ್ಥವಾಗುವುದಿಲ್ಲ. ಮಂಗಳೂರಿಗೆ ವರ್ಗವಾದ ಮಾತ್ರಕ್ಕೆ ಇಷ್ಟು ಮನೋದೌರ್ಬಲ್ಯ ಹೇಗೆ ಬಂತು? ಇಲ್ಲಿ ಯಾರೂ ಕೆಲಸ ಮಾಡುವವರಿಲ್ಲವೆಂದೇ? ನಾವಿಲ್ಲವೇನು? ನಿನಗೆ ಆ ಶಂಕೆ ಏಕೆ ಉತ್ಪನ್ನವಾಯ್ತು?’

ರಾಜ ಚಾಪೆಯ ಮೇಲೆ ಎದ್ದು ಕುಳಿತು, ‘ ಸಂಶಯವಲ್ಲ. ನಿಮಗೆ ವಯಸ್ಸಾಗುತ್ತ ಬಂತು. ಮತ್ತು ನಿಮಗೆ ಕೆಲಸ ಮಾಡಿಸಲು ತ್ರಾಣ ಇರಲಾರದೆಂದು ಹಾಗೆ ಹೇಳಿದೆ’ ಎಂದ.

‘ ಹಾಂ, ನನಗೆಷ್ಟು ವಯಸ್ಸಾಯಿತು? ಇನ್ನೂ ಅರುವತ್ತಕ್ಕೆ ಮುಟ್ಟಿಲ್ಲ. ನನ್ನ ತಲೆ ಹಣ್ಣಾದೊಡನೆ ನಾನು ಮುದುಕನಾಗಲಿಲ್ಲ. ಈಗ ಕೂಡಾ ಒಂದು ಮುಡಿ ಅಕ್ಕಿಯನ್ನು ಎತ್ತಿ ಇಡುವೆ. ಅದನ್ನು ಹೊತ್ತು ಹತ್ತು ಮಾರು ನಡೆವೆ. ಅಷ್ಟು ತ್ರಾಣವಿಲ್ಲದಿರುತಿದ್ದರೆ ನಿನ್ನ ಹೆಜ್ಜೆಯ ಮೇಲೆ ಹೆಜ್ಜೆ ಹಾಕಿ ಮುಂಡಾಜೆಯಿಂದ ಇಲ್ಲಿಯ ವರೆಗೆ ನಡೆಯುತ್ತಿದ್ದೆನೇನು? ನಾವು ಹಿಂದಿನ ಮನುಷ್ಯರು. ನಮ್ಮ ಎಲುಬು ಕಬ್ಬಿಣದ ಸಲಾಕೆಗಳಂತಿವೆ, ನೋಡು’ ಎಂದು ಗೋವಿಂದರಾಯರು ತಮ್ಮ ಬಲತೋಳನ್ನೆತ್ತಿದರು.

ರಾಜ ವಿಸ್ಮಿತನಾದ.

ಗೋವಿಂದರಾಯರ ಆವೇಶ ಇಳಿದಿರಲಿಲ್ಲ. ಬಿಟ್ಟಲ್ಲಿಂದ ಮಾತಿನ ಎಳೆಯನ್ನು ಮತ್ತೆ ಹಿಡಿದೆಳೆದರು—‘ ಹೌದು, ಮಂಗಳೂರಲ್ಲೊಂದು ಮತ್ತೆ ಇಲ್ಲೊಂದು ಬಿಡಾರ ನಡೆಸಲು ಕಷ್ಟ. ನಿನ್ನ ಬಿಡಾರಕ್ಕೆ ನೀನು ಎಷ್ಟು ವೆಚ್ಚ ಮಾಡುತ್ತಿ, ಮಂಗಳೂರಲ್ಲಿ ಎಷ್ಟು ವೆಚ್ಚವಾದೀತೆಂದು ನಾನು ಹೇಳಲಾರೆ. ಆದರೆ, ಇಲ್ಲಿಯ ಬಿಡಾರದ ಭಾರ ನಿನ್ನ ಮೈಮೇಲೆ ಬೀಳಲಾರದು. ಈ ಮೂರು ಜೀವಗಳಿಗೆ ಎಷ್ಟು ಬೇಕು? ತಿಂಗಳೊಂದಕ್ಕೆ ಒಂದು ಮುಡಿ ಅಕ್ಕಿ ಯಥೇಚ್ಛ. ಮುಡಿ ಅಕ್ಕಿಗೆ ಮೂರು ರೂಪಾಯಿಗಳು. ಮೇಲೆ ಜಿನಸು ಸಾಮಾನುಗಳಿಗೆ ಎರಡು ಮೂರು ರೂಪಾಯಿಗಳಿದ್ದರೆ ಸಾಕು. ಹಾಲು ತುಪ್ಪಕ್ಕಾಗಿ ನಮಗೆ ಕಾಸಿನ ಖರ್ಚಿಲ್ಲ. ಭಾಗೀರಥಿ ಕರು ಹಾಕಿದೆ. ಪೇಟೆಯಂತೆ ಇಲ್ಲಿ ತರಕಾರಿ ಕ್ರಯಕ್ಕೆ ಕೊಳ್ಳುವುದೂ ಇಲ್ಲ. ಕಾಲಿನಲ್ಲಿ ಮಣ್ಣು ಕೆದರಿ ಬೀಜಗಳನ್ನೆಸೆದರೂ ನಮಗೆ ಬೇಕಾದ ತರಕಾರಿ ಬೆಳೆಯುತ್ತದೆ. ಅಂಥಾ ಭೂಮಿ ಇದು. ಅಷ್ಟು ಫಲವತ್ತಾಗಿದೆ.’

ರಾಜ ಎದ್ದು ಬೆನ್ನಿಗೆ ಎರಡು ಕೈಗಳನ್ನೂ ಹೆಣೆದುಕೊಂಡು ಮುಖ ಮಂಟಪದಲ್ಲಿ ಅತ್ತಿತ್ತ ಅಲೆಯಲಾರಂಭಿಸಿದ.

ಅವನು ಆಲಿಸುತ್ತಿರುವುದನ್ನು ನೋಡಿ ತಂದೆ ಇನ್ನಷ್ಟು ಉತ್ಸಾಹದಿಂದ ನುಡಿದರು—'ಇದು ಕಾಡು ಭೂಮಿ; ಕೃಷಿ ಮಾಡಿಸುವುದು ಹೇಗೆ?' ಎಂದೆಲ್ಲ ಇನ್ನೊಮ್ಮೆ ಆಡಬೇಡ. ಕಾಡು ನಮ್ಮ ಸಂಪತ್ತು. ಅದರ ಕಟ್ಟಿಗೆ ನಮಗೆ ಅವಶ್ಯ. ಅದರ ಸೊಪ್ಪು ಹಟ್ಟಿಗೊಬ್ಬರಕ್ಕೆ ಬೇಕು. ಕಾಡು ಕಡಿದೇ ನಾಡಾಗಿದೆ. ಕಾಡುಮನುಷ್ಯನೇ ನಾಡಿಗಿಳಿದ. ಕಾಡಿನ ನೆರಳಲ್ಲೇ ನೆರೆಯಲ್ಲೇ ನಾಡು ಕಟ್ಟಿದ. ಕಾಡಿಲ್ಲದ ನಾಡು ಸುಡುಗಾಡು. ಸ್ವಲ್ಪ ಸ್ವಲ್ಪ ಕಾಡನ್ನು ನಾವೂ ಕಡಿದು ಗದ್ದೆ ಮಾಡೋಣ. ಒಂದೊಂದೇ ಗದ್ದೆ ಮಾಡಿ ಬಿತ್ತುವ. ಒಂದೊಂದೇ ಸಸಿ ನೆಟ್ಟು ತೋಟ ಬೆಳೆಸುವ. ಒಮ್ಮೆಗೊಂದು ಎಕರೆ. ವರುಷಕ್ಕೊಂದು ತುಂಡು. ಹತ್ತುವರುಷ ಈ ರೀತಿ ದುಡಿಯಬೇಕು. ಹತ್ತು ವರುಷಗಳಲ್ಲಿ ಹತ್ತು ರಾಜ್ಯ ಕಟ್ಟಬಹುದು. ಹತ್ತು ವರುಷ ಹತ್ತು ಯುಗವಲ್ಲ. ಕಣ್ಮುಚ್ಚಿ ತೆರೆದಾಗ ಹತ್ತು ವರುಷ ಉರುಳುತ್ತದೆ. ಹತ್ತು ವರುಷಕ್ಕೆ ಹತ್ತು ನೂರು, ಹತ್ತು ಸಹಸ್ರ ಪುಡಿಯಾದರೂ ವ್ಯರ್ಥ ಎಂದೆನಬೇಡ. ಮಣ್ಣಿನಲ್ಲಿ ಚೆಲ್ಲಿದ ಹೊನ್ನು ಮೊಳಿಕೆ ಒಡೆದು ಗಿಡ ಮರವಾಗಿ ಬೆಳೆದು ಚಿನ್ನದ ಹೂ ಹಣ್ಣು ಬಿಡುವುದು. ಮಣ್ಣಿನಲ್ಲೇ ನಮ್ಮ ಹಿರಿಯರು ಬೇರುಬಿಟ್ಟರು. ಆಳದ ವರೆಗೆ ಬೇರು ಇಳಿದರೆ ಗಾಳಿ ಮಳೆ ಸೋಂಕದು. ಗೆದ್ದಲು ಬದನಿಕೆಗಳು ಜೀವರಸವನ್ನು ಹೀರಲಾರವು. ಇದು ಬಂಗಾರ ಭೂಮಿ. ಈ ಭೂಮಿಯಲ್ಲಿ ಕೊಪ್ಪರಿಗೆಯಿದೆ. ಇದು ಪಾಳೇ?'

ಗೋವಿಂದರಾಯರ ಮಾತು ಮುಗಿದಾಗ ನಭವನ್ನು ಮುತ್ತಿದ್ದ ಮೋಡಗಳೆಲ್ಲ ತಿಳಿಯಾಗಿ ಸೂರ್ಯನ ಬಿಸಿಲು ಬಿದ್ದಿತು. ಕಾಡುಪಾರಿವಾಳ ಗುಟುರು ಹಾಕತೊಡಗಿತು. ಅಂಗಳದಿಂದ ಓತಿಯೊಂದು ಓಡಿ ಬಂದು ಮುಖಮಂಟಪದ ದಂಡೆಯ ಮೇಲೆ ಕುಳಿತು ತಲೆದೂಗಿತು. ಜಂತೆಯ ಮೇಲಿನ ಹಲ್ಲಿ 'ಹೌದು ಹೌದು' ಎಂದು ಲೊಚಗುಟ್ಟಿತು. ಮನೆಯ ಹಿಂಬದಿ ಬೆಳೆದ ಕಾಡಿನಲ್ಲಿ ಮಂಗಗಳು ಟರ್ ಟರ್ ಅರಚಲು ಆರಂಭಿಸಿದುವು. ರಾಜ ಅಂಗಳಕ್ಕೆ ಇಳಿದು ಬಂದು, 'ಹಿಡಿ, ಹಿಡಿ' ಎಂದು ದೂರದಿಂದಲೇ ಮಂಗಗಳನ್ನು ಬೆದರಿಸಲಾರಂಭಿಸಿದ.

'ಹಣ್ಣು ಹಣ್ಣಿದ್ದರೆ ಮಂಗಗಳು ಒಂದನ್ನೂ ಉಳಿಸಲಿಕ್ಕಿಲ್ಲ' ಎಂದರು ಅಂಗಳಕ್ಕೆ ಬಂದ ಸೀತಮ್ಮ.

'ಕೋವಿಯಿಂದ ಡಂ ಡಂ ಗುಂಡು ಹೊಡೆದರೆ ಸರಿ' ಎಂದ ಮೋಹನ ಕೈಗಳನ್ನು ಕೋವಿಯಾಕಾರ ನೀಡಿ.

ತಮ್ಮನ ಮಾತು ಕೇಳಿ ರಾಜನಿಗೆ ನಗು ಬಂತು. 'ನೀನು ಮಂಗಗಳ ಸಮೀಪ ಹೋಗಬೇಡ. ಆ ದೊಡ್ಡ ಮುಸು ನಿನ್ನನ್ನು ಎತ್ತಿಕೊಂಡು ಹೋದೀತು' ಎಂದು ನುಡಿದ.

'ಆಗಲಿ, ಒಮ್ಮೆ ಜುಟ್ಟು ಹಿಡಿದು ಎಳೆದೊಯ್ಯಲಿ. ನಾನು ಬೇಡವೆಂದರೆ ಕೇಳುವುದಿಲ್ಲ. ಮಂಗ ಕಂಡ ಕೂಡಲೇ ಕಲ್ಲೆಸೆಯುತ್ತಾನೆ. ಇವನೂ ಒಂದು ಮಂಗವೇ. ಒಮ್ಮೆ ಬುದ್ಧಿ ಬರಲಿ' ಎಂದು ಸೀತಮ್ಮ ಮಾತು ಕೂಡಿಸಿದರು.

'ಬೋರ ತುಕ್ರ ಮೊದಲಾದವರು ಕೆಲಸಕ್ಕೆ ಸರಿ ಬರುತ್ತಾರಾ? ಕಟ್ಟಿಗೆ ಇದೆಯಾ?' ಎಂದು ತಾಯಿಯನ್ನು ಕೇಳಿದ ರಾಜ.

'ಬೇಸಾಯ ಇದ್ದಾಗ ಅವರು ತಲೆ ತೋರಿಸಲಿಲ್ಲ. ನಡುವೆ ಒಂದೊಂದು ದಿನ ಬಂದರು. ಇನ್ನು ಕೊಯ್ಲು. ಅದು ಮುಗಿದ ಮೇಲೆಯೇ ಬರಬಹುದು. ಕಟ್ಟಿಗೆ ಮೊದಲೇ ರಾಶಿ ಮಾಡಿದ್ದಾರೆ— ಕೊಟ್ಟಿಗೆಯಲ್ಲಿ. ನಾಲ್ಕು ಮದುವೆಗೆ ಸಾಲುವಷ್ಟಿದೆ ಇನ್ನೂ.'

ಅಲ್ಲಿಂದ ಕೊಟ್ಟಿಗೆಯ ಬಳಿ ತೆರಳಿದ. ಎರಡು ಸಣ್ಣ ಗದ್ದೆಗಳಷ್ಟು ಸ್ಥಳ ದಲ್ಲಿ ಕಾಡುಗಿಡಗಳನ್ನೆಲ್ಲ ಕಡಿದಿದ್ದರು. ಮಳೆಗಾಲವಾಗಿದ್ದುದರಿಂದ ಆ ಗುತ್ತಿ ಗಳು ಮತ್ತೆ ಚಿಗುರಿದ್ದವು. ಇದೇ ರೀತಿ ಹೊಳೆಯ ವರೆಗೂ ಗದ್ದೆ ಮಾಡ ಬೇಕೆಂದೂ ರಾಜ ಯೋಚಿಸಿದ. ವಿಚಾರ ಮಾಡುತ್ತ ಹೊಳೆಯ ವರೆಗೂ ಬಂದ. ಕೆಂಬಣ್ಣ ಹೊಂಬಣ್ಣದ ನೀರು ತಿಳಿಯಾಗಿದೆ. ನೀರಿನೊಡನೆ ಹರಿದು ಬಂದ ಉಸುಕು ಹೊಳೆಯಲ್ಲಲ್ಲಲ್ಲಿ ಇರುವ ದೊಡ್ಡ ದೊಡ್ಡ ಹೊಂಡಗಳಿಗೆ ಇಂಗಿದೆ. ಕೆಸರು ತಿಳಿಯಾಗಿ ಸುಭಾಷಿಣಿಯ ಕಣ್ಣಾಲಿಗಳ ಬಣ್ಣ ಬಂದಿದೆ ನೀರಿಗೆ. ಆಚೆ ಈಚೆ ದಂಡೆಯ ವರೆಗೆ ಏಕಪ್ರಕಾರವಾಗಿದ್ದ ನೀರು ಈಗ ದಂಡೆಯಿಂದ ಒಂದೆರಡು ಕೋಲು ಇಳಿದಿದೆ. ನದಿಯ ಮಧ್ಯದಲ್ಲಿದ್ದ ಒಂದೊಂದು ಗಿಡದ ಟೊಂಗೆಗಳೂ ಹಣಕಿನೋಡುತ್ತಿವೆ. 'ಇನ್ನೂ ದಾಟಲು ಸಾಧ್ಯವಿಲ್ಲ' ಎಂದೆಂದುಕೊಂಡು ರಾಜ ಹೊಳೆಯ ದಂಡೆಯಲ್ಲೇ ನಡೆದ. ಕಾಲಿಟ್ಟಲ್ಲಿ ನೀರು, ಹೆಜ್ಜೆಯಿಟ್ಟಲ್ಲಿ ಹಸುರುಹುಲ್ಲು. ಹುಲ್ಲಿನ ಎಸಳು ಗಳ ಮೇಲಿದ್ದ ಬಿಳಿ ಮುತ್ತಿನಂತಹ ಹನಿಗಳೂ ಸಿಡಿದುವು ಮೊಳಗಂಟಿನ ವರೆಗೆ. ಮುಂದೆ ಮುಂದೆ ಹೋದಂತೆ ಹಿಂದಿನ ಹೆಜ್ಜೆಗಳೂ ಮೂಡಿದುವು.

ನೇರವಾಗಿ ನಡೆಯುವಂತೆಯೂ ಇಲ್ಲ. ಒಂದೆಡೆ ಎದುರಿಗೆ ಬಲೆಯಂತಹ ಸೀಗೆಯ ಬಲ್ಲೆ. ಇನ್ನೊಂದೆಡೆ ಕೊಡೆಯಾಕಾರದ ಬಳ್ಳಿಗಳು. ಮತ್ತೊಂದೆಡೆ ತಲೆ ತಗ್ಗಿಸಿ ನುಸುಳಬೇಕು. ಕೆಲವು ಕಡೆ ಕೈಯಿಂದ ಗಿಡಗಳ ಎಳೆಗೆಲ್ಲು ಗಳನ್ನು ಸರಿಸಿ ಸರಿಯುವುದೂ ಅತ್ಯಗತ್ಯ. ಒಮ್ಮೆ ಮರಗಳ ತೊಗಟೆಯಲ್ಲಿ ಅಂಟಿಕೊಂಡ ಜಿಟ್ಟೆ ಹುಳುಗಳ 'ಜೀಂ ಜೀಂ' ಶಬ್ದವನ್ನಾಲಿಸಿ ವಿಸ್ಮಿತನಾದ. ಇನ್ನೊಮ್ಮೆ ಕಾಲಡಿ ಓಡಿದ ಆರಣೆ ನೋಡದೆ ಹಾವೆಂದು ಭ್ರಮಿಸಿ ಅತ್ತಿತ್ತ ತಿರುಗಿ ನೋಡಿದ. ಹಾವಿನ ಭಯದಿಂದ ಬೇಗ ಬೇಗನೇ ಬಡಗು ದಿಕ್ಕಿನ ದರೆ ದಾಟಿ ಆಚೆಯ ಬೆಟ್ಟು ಗದ್ದೆಗಳಿಗೆ ಹಾರಿದ. ಅಲ್ಲಿಂದ ತಿರುಗಿ ನೋಡಿ ದಾಗ ಅವನಿಗೆ ಇನ್ನಷ್ಟು ಆಶ್ಚರ್ಯವಾಯಿತು. ಮೊದಲು ಅವನು ಕಂಡಾಗ ಅಗಳು ಬೋಳಾಗಿತ್ತು. ಆದರೆ ಈಗ ಅದರ ತುದಿಯ ಮೇಲೆ ಒಂದೊಂದು ಮೊಳದ ಕಿರು ಬೆರಳಿನ ಗಾತ್ರದ ಕಡ್ಡಿಗಳನ್ನು ನೆಟ್ಟಿದ್ದರು. ಹತ್ತಿರ ಬಂದು ಅಗಳು ಏರಿ ಪುನಃ ಬಗ್ಗಿ ನೋಡಿದ. ಕೆಲವು ಚಿಗುರಿದ್ದುವು. ಚಿಗುರು ಗಳನ್ನು ಕಿತ್ತು ಅಂಗೈಯಲ್ಲಿ ತಿಕ್ಕಿ ಮೂಸಿದ. ಲಂತಾನ. ಹೌದು, ಲಂತಾನ ಕಡ್ಡಿಗಳು. ಜೀವವಿದೆ. ಕೆಲವು ಚಿಗುರಿ ಜೀವದುಸಿರು ಸೇದುತ್ತಿವೆ. 'ಆಸ್ತಿಯ ಮೂರು ಬದಿಯಲ್ಲಿರುವ ಅಗಳಿಗೂ ಇದನ್ನು ನೆಡಿಸಬೇಕು. ಇದು ಒಳ್ಳೆಯ ಬೇಲಿ' ಎಂದು ಯೋಚಿಸುತ್ತಾ ಮರಳಿದ.

ಮನೆಗೆ ಮರಳುತಿದ್ದಾಗ ರಾಜನಿಗೆ ನಾಗಬನದ ನೆನಪಾಯ್ತು ಮತ್ತೆ. ರವಿವರ್ಮನ ಚಿತ್ರದಲ್ಲಿ ನಿರೂಪಿಸಿದಂತೆ ನಾಗಶೇಷನ ಹೆಡೆಯಂತೆ ಬೆಳೆದ ಬನ. ಬನದಲ್ಲಿ ಸುತ್ತಿದ ವಿಚಿತ್ರ ಬಳ್ಳಿಗಳು, ಕೊಡೆಯಂತೆ ಹೆಣೆದ ರೀತಿ ಆ ವಿಚಿತ್ರ ಮರ, ಆದರಲ್ಲಿ ಇಳಿದ ಮದನ ಕೈ, ರಾಜನ ಮೈಯಲ್ಲಿ ನಮಿರೆ ಳಿಸಿದುವು; ಮನವನ್ನು ಆಕರ್ಷಿಸಿದುವು. ಅದನ್ನು ಒಂದು ದಿನ ಅಗೆಸಬೇಕು. ಕೊಪ್ಪರಿಗೆಯಿದೆಯೆಂದರು ಅಪ್ಪಯ್ಯ. ಇರಲೇಬೇಕು. ಅದರೊಳಗೆ ಏನಿದೆ ಯೆಂದು ನೋಡಬೇಕು. ಚಿನ್ನವಿದ್ದರಂತೂ ನನ್ನ ಪುಣ್ಯವೇ. ಎಲ್ಲ ಮಾ ಈ ಭೂಮಿಗೆ ಹಾಕುತ್ತೇನೆ. ಹತ್ತು ವರುಷವೇಕೆ, ಹತ್ತು ತಿಂಗಳೊಳ ಹೊಲಗದ್ದೆ ಮಾಡಿ ಬಿಡಬಹುದು' ಎಂದೂ ಭಾವಿಸಿ ಬನದೊಳಗೆ ನುಸುಳಿದ.

ತಂದೆ ಅಲ್ಲಿ ನಿಂತಿದ್ದರು. ರಾಜ ಲಜ್ಜೆಯಿಂದ ತಲೆ ತಗ್ಗಿಸಿದ. 'ಊ ಕ್ಕಾಯ್ತು. ನೀನೆಲ್ಲಿ ಹೋದೆ? ಹೊಳೆಯ ಕಡೆ ತೆರಳಿದವನು ಬಹ ಹೊತ್ತಾದರೂ ಹಿಂದಿರುಗಲಿಲ್ಲ. ಕರೆದರೂ ಓ ಗೊಡಲಿಲ್ಲ' ಎಂದರು ಅವರು

'ಹೊಳೆಯ ಬದಿಗೆ ಹೋಗಿದ್ದೆ. ನೀರಿನ ಗರ್ಜನೆಗೆ ನೀವು ಕರೆದುದು ಕೇಳಿಸಲಿಲ್ಲ.'

'ಒಬ್ಬೊಬ್ಬರೇ ಇಲ್ಲೆಲ್ಲ ಓಡಾಡಬಾರದು. ಹುಲ್ಲು ಕಸ ಕಡ್ಡಿಗಳ ಎಡೆಯಲ್ಲಿ ಚೇಳು ಹಾವುಗಳಿದ್ದರೂ ಗೊತ್ತಾಗುವುದಿಲ್ಲ.'

ರಾಜನ ದೃಷ್ಟಿ ಕಾಲಿನ ಪಾದದ ಕಡೆ ಹರಿಯಿತು. ಬನದೊಳಗೆ ಕಸ ಕಡ್ಡಿ ತರಗೆಲೆಗಳು ಬಹಳ ಇದ್ದಿರಲಿಲ್ಲ. ಯಾರೋ ಅದನ್ನೆಲ್ಲ ಬಳೆದಿದ್ದುದು ಗೋಚರಿಸಿತು. ಅಡ್ಡ ಬಿದ್ದ ನಾಗಕಲ್ಲುಗಳನ್ನು ಎತ್ತಿ ನಿಲ್ಲಿಸಲಾಗಿತ್ತು. ಅರ್ಧಹುಗಿದಂತಿದ್ದ ಕಲ್ಲುಗಳ ಮೇಲೆ ಅಂಟಿಕೊಂಡಿದ್ದ ಪಾಚಿ, ಹುಲ್ಲುಗಳನ್ನು ಕಿತ್ತಿದ್ದರು. ಎಲ್ಲ ಕಡೆ ಮನುಷ್ಯ ಕೈ ಚಾಚಿದ ಗುರುತು. 'ಇದನ್ನೆಲ್ಲ ನೀವು ಮಾಡಿದಿರಾ?' ಎಂದು ಅವನು ಗೋವಿಂದರಾಯರನ್ನು ಕೇಳಿದ.

'ಹೌದು, ನಾಗರ ಪಂಚಮಿಗೆ ಹಾಲು ಎರೆದೆ' ಎಂದು ಹೇಳಿ ಅವರು ಹೊರಟರು. ಮೋಹನನಂತೆ ಹಿಂದಿನಿಂದ ಅವರನ್ನು ಅನುಸರಿಸಿದ ರಾಜ.

ಮಧ್ಯಾಹ್ನ ಊಟವಾದ ಮೇಲೆ ಹೊಳೆಯಾಚೆಯ ಆಳುಗಳನ್ನು ಕಂಡು ಬರಲು ತೆರಳಿದ ರಾಜ ಹಿಂತಿರುಗಿದಾಗ ಕತ್ತಲಾಗಿತ್ತು. ಒಟ್ಟಿಗೆ ಬೋರ ಬಂದಿದ್ದ. ಬೋರ ಅಲ್ಲೇ ರಾತ್ರಿ ಮಲಗಬೇಕೆಂದೂ ಬೆಳಗಿನ ಜಾವಕ್ಕೆ ಎದ್ದು ಮುಂಡಾಜೆಯ ವರೆಗೆ ಇಬ್ಬರೂ ತೆರಳಬೇಕೆಂದೂ ನಿಶ್ಚಯವಾಯಿತು. ನಸುಕಿಗೆ ಮುಂಡಾಜೆಯಲ್ಲಿ ಬಸ್ಸಿನಲ್ಲಿ ಕುಳಿತರೆ ಹತ್ತು ಗಂಟೆಯೊಳಗೆ ಮಂಗಳೂರು. ಆಫೀಸಿಗೆ ಸೋಮವಾರ ಹಾಜರಾಗಲು ತೊಂದರೆಯಿಲ್ಲ. ಬೋರ ಬೆಳಗಾದ ಮೇಲೆ ಮುಂಡಾಜೆಯಿಂದ ಹಿಂತಿರುಗುವನು.

ರಾತ್ರಿ ಊಟವಾಗುವಾಗ ಬಡಿಸುವ ತಾಯಿಯ ಮೋರೆ ನೋಡಿ ರಾಜ ನುಡಿದ— 'ಅಮ್ಮಾ, ಮನೆಗೆ ಏನೇನು ಸಾಮಾನು ಬೇಕು ಹೇಳು. ಬೋರ ನನ್ನೊಟ್ಟಿಗೆ ಹೇಗೂ ಬರುತ್ತಾನೆ. ಮುಂಡಾಜೆಯಿಂದ ಬೇಕಾದ್ದನ್ನೆಲ್ಲ ತಲೆ ಹೊರೆಯಲ್ಲಿ ಕಳಿಸುತ್ತೇನೆ.'

'ಉಪ್ಪು, ಹುಳಿ, ಮೆಣಸು, ಬೆಲ್ಲ. ಮತ್ತೆಲ್ಲ ಇದೆ. ಕಾಫಿಪುಡಿಯೊಂದಿಲ್ಲ' ಎಂದರು ಸೀತಮ್ಮ.

ಅವರು ಬೆಳಗಿನ ಜಾವಕ್ಕೆ ಎದ್ದು ದೀಪ ಹಿಡಿದುಕೊಂಡೇ ಹಟ್ಟಿಗೆ ... ಭಾಗೀರಥಿಯನ್ನು ಎಬ್ಬಿಸಿ ಹಾಲು ಹಿಂಡಿಕೊಂಡು ಬಂದು ರಾಜ ಕೆ... ಕಾಫಿ ತಯಾರಿಸಿ ಕೊಟ್ಟರು. ಮಗನೊಂದಿಗೆ ಮಾರ್ಗದ ವರೆಗೆ ...

ಗೋವಿಂದರಾಯರ ಪದ್ಧತಿ. ಆದರೆ, ಕತ್ತಲೆಯಿದ್ದುದರಿಂದ ಮುಖಮಂಟ
ದಿಂದ ಇಳಿಯಲಿಲ್ಲ. ಅಗಳು ದಾಟಿದಾಗ ರಾಜ, 'ಕೆಲಸ ಸಾಗಲಿ ಅಪ್ಪಯ್ಯ
ಬೋರ ಮುಂತಾದವರಿಗೆಲ್ಲ ತಿಳಿಸಿ ಬಂದಿದ್ದೇನೆ. ನಾನು ಒಂದೆರಡು ವಾರಗಳ
ಮೇಲೆ ಬರುತ್ತೇನೆ' ಎಂದು ಕೂಗಿ ಹೇಳಿದ.

'ಮಂಗಳೂರು ನಸ್ಯ ಒಂದು ಮುಕ್ಕಾಲಿನದ್ದು ಮರೆಯಬೇಡ' ಎಂದು
ಅವರು ನೆನಪುಕೊಟ್ಟರು.

೬

ಮುಂಡಾಜೆಯಿಂದ ಮನೆಗೆ ಬೇಕಾದ ಸಾಮಾನುಗಳನ್ನು ಹೊತ್ತು ತಂದ
ಬೋರ ಆ ದಿನ ಕೆಲಸಕ್ಕೂ ನಿಂತ. ಹಿಂದಿನ ದಿನ ರಾಜ ಹೇಳಿ ಬಂದಿದ್ದುದ
ರಿಂದ, ತುಕ್ರನೂ ಮುಂಜಾನೆ ಉದಯವಾದ. ಕತ್ತಿ ಕೊಡಲಿ ಮಡುಗಳನ್ನು
ಮೋಹನ ಹೊರಗಿಟ್ಟ. ಬೆಣಚುಕಲ್ಲುಗಳನ್ನು ಪುಡಿ ಮಾಡಿ ಅದನ್ನು ಒ
ಮಣೆಗೆ ಸುರಿದು ಕೊಡಲಿ ಕತ್ತಿ ಹತ್ಯಾರುಗಳನ್ನು ತಿಕ್ಕಿ ಕಿಡಿ ಹಾರಿಸಿದರು
ಆಳುಗಳು. ಆ ಮೇಲೆ ಎಲೆಯಡಿಕೆ ಬಾಯಿಗೆ ತುರುಕಿಸಿ, ಹೊಗೆಸೊಪ್ಪಿನ
ಕರಿದಂಟನ್ನು ಚಿವುಟಿ ಅದಕ್ಕೆ ಸುಣ್ಣ ಸೇರಿಸಿ ಅಂಗೈಯಲ್ಲಿ ಹಾಕಿ ತಿಕ್ಕಿ
ನಾಲಿಗೆಯ ಮಧ್ಯದಲ್ಲಿಟ್ಟು, 'ಅಯ್ಯ, ಹುಂ, ಹೋಗೋಣ ನಡೆಯಿರಿ'
ಎಂದು ಎದ್ದರು. ಗೋವಿಂದರಾಯರು ಅವರನ್ನು ಮನೆಯ ಹಿಂಬದಿ ಕರೆ
ದೊಯ್ದು ತೆಂಕು ದಿಕ್ಕಿಗಿರುವ ಕುರಿಚಲು ಕಾಡಿನ ಕಡೆ ಕೈನೀಡಿ 'ಬೋರ,
ಈ ಗೋಡೆಯಿಂದ ನೂರು ಹೆಜ್ಜೆಯ ವರೆಗೆ ಗಿಡಮರಗಳನ್ನು ಸಫಾಯಿ
ಮಾಡಬೇಕು. ಅಷ್ಟು ದೂರ ಚಿಕ್ಕ ಚಿಕ್ಕ ಗಿಡ ಮರಗಳೇ ಇವೆ. ಆ ಮೇಲೆ
ದಟ್ಟಡವಿ. ಆದರೆ, ಇದು ಕುರಿಚಲು ಕಾಡೆಂದು ತಾತ್ಸಾರ ಮಾಡಿದರೆ ನಾಲ್ಕು
ಮಳೆಗಾಲ ದಾಟುವುದರೊಳಗೆ ಭೈರವರೂಪ ತಾಳೀತು. ಮನೆಯ ಹಂತ
...ತರದಲ್ಲಿ ಕಾಡಿನ ಒಂದು ರೂಪ ಇರಕೂಡದು. ಇಲಿಗಳ ಆಶೆಗಾಗಿ
... ಹಾವು ಹರಿದು ಬಂದು ಗೋಡೆಯೇರಿ ಮಾಡಿನಲ್ಲಿ ಮಡಚಿ ಕುಳಿತರೆ
... ಗೊತ್ತಾಗಲಿಕ್ಕಿಲ್ಲ. ಜಾತಿ ಮರ ಮುಟ್ಟಬೇಡಿ. ಉಳಿದದ್ದೆಲ್ಲ
...ಸುರ, ಕರ್ಮಾರ್ ಒಂದೂ ಉಳಿಸುವುದು ಬೇಡ. ಇದು ಮುಗಿದ

ಮೇಲೆ ಹಟ್ಟಿಯ ಹಿಂಬದಿ ಬಡಗು ದಿಕ್ಕಿನ ಕಾಡನ್ನು ಕಡಿಯೋಣ. ಅದನ್ನೂ ಅಷ್ಟು ದೂರ ಸವರಿಬಿಡಬೇಕು. ಉದ್ದ ಇಷ್ಟಾದರೆ ಮತ್ತೆ ಅಡ್ಡ ಪಶ್ಚಿಮಕ್ಕೆ ತಿರುಗಿ ಹೊಳೆಯ ಬದಿಯ ವರೆಗೆ ಕಡಿಯಬೇಕು. ಅಂದರೆ ಸಾಧಾರಣ ಮನೆಯ ಸಮೀಪ ನಾಲ್ಕೈದು ಎಕರೆ ಬೇಸಾಯಕ್ಕೆ ಸಿಕ್ಕಿದಂತಾಗುತ್ತದೆ' ಎಂದರು.

'ಅಯ್ಯ, ಇಬ್ಬರಿಂದ ಇದು ಆದೀತಾ?'—ಕೇಳಿದ ಬೋರ.

'ಆಗದೇನು? ಇದು ಒಂದೇ ದಿನದ ಕೆಲಸವಲ್ಲ. ಒಂದೊಂದೇ ದಿನ ನೀವು ಸತತ ಹದಿನೈದು ದಿನ ಬಂದರೆ ಎಲ್ಲ ಬಟ್ಟಬಯಲಾಗುತ್ತದೆ. ಅಷ್ಟರೊಳಗೆ ಅಹ್ಮದ್ ಕುಟ್ಟಿ ಬಾರದೇ ಇದ್ದೀತಾ? ಹೊಳೆಯಲ್ಲಿ ಸ್ವಲ್ಪ ನೀರು ತಗ್ಗಿ ದಾಟಲು ಸಾಧ್ಯವಾದರೆ ಅದು ಕೂಡಲೇ ಓಡಿ ಬಂದೀತು. ನೀವು ಮರ ಕಡಿವ ಪಟ ಪಟ ಸಪ್ಪಳ ಹೊಳೆಯಾಚೆ ಕೇಳಿಸಿದರೆ ಈಸಿಯಾದರೂ ಬಂದೀತು. ಬ್ಯಾರಿ ನಾಲ್ಕಾಣೆಯೆಂದರೆ ಪ್ರಾಣ ಬಿಡುತ್ತದೆ. ಹುಂ, ಸುರು ಮಾಡಿ. ಮಾತಿನಲ್ಲಿ ವೇಳೆ ಕಳೆಯಬೇಡಿ' ಎಂದು ಗೋವಿಂದರಾಯರು ಸಂಜ್ಞೆ ಮಾಡಿದರು ಕೈಯಿಂದ.

ಬೋರ ಎಡಗೈಯಲ್ಲಿ ಗಿಡಗಳ ಜುಟ್ಟನ್ನು ಹಿಡಿದು ಬಲಗೈಯಿಂದ ಅವುಗಳ ಬುಡವನ್ನೇ ಕತ್ತಿಯಿಂದ ಕಡಿದ. ಕತ್ತಿಗೆ ನಿಲುಕದ ಗಿಡಗಳ ಬುಡಕ್ಕೆ ತುಕ್ರ ಮಡು ಬೀಸಿದ. ಕಡಿದ ಗಿಡಗಳ ಗೆಲ್ಲುಗಳನ್ನು ಕೈಯಲ್ಲಿ ಹಿಡಿದು ಅದರ ಸೊಪ್ಪನ್ನು ಒಂದೆಡೆ ಸವರಿ, ದಂಟು ಕಟ್ಟಿಗೆಗಳನ್ನು ಮತ್ತೊಂ ದೆಡೆ ಎಸೆದರು. ಒಂದೆಡೆ ಸೊಪ್ಪಿನ ರಾಶಿಯಾದರೆ ಇನ್ನೊಂದು ಕಡೆ ಕಟ್ಟಿ ಗೆಯ ರಾಶಿಯಾಯ್ತು. ಮುಂದೆ ಮುಂದೆ ಕಡಿಯುತ್ತ ಹೋದಂತೆ ಇಂಥ ಅನೇಕ ಸಣ್ಣ ಸಣ್ಣ ಕಟ್ಟಿಗೆ ಮತ್ತು ಸೊಪ್ಪಿನ ಗುಂಪುಗಳಾದುವು. ಮನೆಯ ತೆಂಕು ಬದಿಯಲ್ಲಿದ್ದ ಅಗಳು ಎದ್ದು ಕಾಣತೊಡಗಿತು. ಬೋರ ತುಕ್ರರು ಬೆಳಿಗ್ಗೆ ಕೆಲಸಕ್ಕೆ ಬಂದಾಗ ಒಂದೊಂದು ಕಟ್ಟು ದಾಸಾಳ, ಆಡುಸೋಗೆ, ಗೋರಟೆಗಳ ಕಟ್ಟುಗಳನ್ನು ಅಂಗಳದಲ್ಲಿ ಒಗೆದಿದ್ದರು. ಆಳುಗಳು ಕಾಡು ಕಡಿದಾಗ, ಗೋವಿಂದರಾಯರು ಮೋಹನನೊಂದಿಗೆ ತೆರಳಿ ಆ ಅಗಳಿನ ಮೇಲೆ ಒಂದೊಂದೇ ದಂಟನ್ನು ಚುಚ್ಚತೊಡಗಿದರು. ಮೋಹನ ಒಂದೊಂದೇ ದಂಟನ್ನು ಅವರ ಕೈಗೆ ಕೊಡುತ್ತಿದ್ದ. 'ಅಯ್ಯಾ, ಬಡಗಿನ ಅಗಳಿಗೆ ಲಂತಾನ ಹಚ್ಚಿದಿರಿ. ಇಲ್ಲಿ ಈ ದಾಸಾಳ ಆಡುಸೋಗೆ ಬೇಕೆಂದಿರಿ' ಎಂದು ಆಳುಗಳು ಕೇಳಲೂ

ಮರೆಯಲಿಲ್ಲ. 'ಮನೆಯ ಸಮೀಪ ಬಲ್ಲೆ ಆಗಬಾರದು. ಹೂವು ಸಮೀಪ ಹೆಚ್ಚಿದರೆ ಮಕ್ಕಳಿಗಾಗುತ್ತದೆ' ಎಂದು ಅವರು ಉತ್ತರ ಕೊಟ್ಟರು.

ಗೋವಿಂದರಾಯರು ಊಹಿಸಿದಂತೆ ಎರಡು ಮೂರು ದಿವಸಗಳ ಮೇಲೆ ಅಹ್ಮದ್ ಬ್ಯಾರಿ ಸವಾರಿ ಬಂತು. ತಲೆಯ ಮೇಲೆ ಬತ್ತದ ಬಣ್ಣದ ಉರುಟು ತಪ್ಪಲೆಯಂತಹ ಟೊಪ್ಪಿ. ಕುತ್ತಿಗೆಗೊಂದು ತಾಯಿತ. ಕೆಂಪು ಚಚ್ಚೌಕ ಮುದ್ರೆಗಳುಳ್ಳ ದುಪ್ಪಟಿಯಂತಿದ್ದ ಅಡ್ಡ ಪಂಚೆ ಸುತ್ತಿದ್ದ. ಅದು ಜಾರದಂತೆ ಚರ್ಮದ ಬೆಲ್ಟ್. ಈ ಸೊಂಟಪಟ್ಟಿಯ ಮೇಲೆ ಉಡೆದಾರವೂ ಸುತ್ತಿ ಕೊಂಡಿತ್ತು. ಬೆಲ್ಟಿಗೆ ಒಂದು ಚೂರಿಯೂ ಜೋತಾಡುತ್ತಿತ್ತು. ಪಂಚೆ ಅಲ್ಲಲ್ಲಿ ಒದ್ದೆಯಾದುದನ್ನು ಕಂಡ ಗೋವಿಂದರಾಯರು 'ಹೊಳೆ ಹೇಗೆ ದಾಟಿ ಬಂದಿರಿ? ನೀರು ಬಹಳವಿದೆ ಇನ್ನೂ' ಎಂದರು.

'ಅಕ್, ಪೊಳಿಲಿ ಭಾರೀ ತನ್ನಿ ಉಂಡ್. ನಾನ್ ಅವುಡೆ ಕೊಲ್ಲಿಗ್ ಪೋಯಿಟ್ ಕಡತ್ ಬಂದೆ. ತನ್ನಿ ಇವುಡೆ ಬಂತು' ಎಂದು ಅಹ್ಮದ್ ಬ್ಯಾರಿ ತನ್ನ ಎದೆಯನ್ನು ತೋರಿಸಿದ.

'ನೀವು ಹೀಗೆ ದಾಟಿದರೆ ಒಂದು ದಿನ ನೆರೆಯಲ್ಲಿ ಹೋದರೆ ಏನು ಗತಿ?'

'ಅಯ್ಯ, ಇದ್ ಒಂದ್ ಕರ್ಮ ಉಂಟಲ್ಲೇ' ಎಂದು ಬ್ಯಾರಿ ತನ್ನ ಹೊಟ್ಟೆ ತಟ್ಟಿಕೊಂಡ.

'ಪ್ರಾಣ ಮೊದಲು. ಪ್ರಾಣವಿದ್ದರೆ ಹೊಟ್ಟೆ. ಆಗಲಿ, ಕತ್ತಿ ತಗೊಳ್ಳಿ' ಎಂದುಸುರಿ ಗೋವಿಂದರಾಯರು ತಮ್ಮ ಕೆಲಸದಲ್ಲಿ ಮಗ್ನರಾದರು.

ಸೀತಮ್ಮನವರು ಭಾಗೀರಥಿಯನ್ನು ಎಳೆದುಕೊಂಡು ಬಂದು ಕಾಡು ಕಡಿದಲ್ಲಿ ಮೇಯಲು ಬಿಟ್ಟರು. ತಾವೂ ಕತ್ತಿಯಿಂದ ಹುಲ್ಲನ್ನು ಹೆರೆದು ಬೆತ್ತದ ಬುಟ್ಟಿಗೆ ತುಂಬಿಸಿದರು. ಅದನ್ನು ಕಂಡ ಗೋವಿಂದರಾಯರು, 'ಅಂತೂ ಇಲ್ಲಿಯೂ ನೀನು ಹುಲ್ಲು ಕೊಯ್ಯುವುದನ್ನು ಬಿಡಲಿಲ್ಲ. ಇದೇನು ಕರಾವಳಿ ರಾಜ್ಯವಾ? ಒಂದು ಗಳಿಗೆ ಬಿಟ್ಟರೆ ದನದ ಹೊಟ್ಟೆ ತುಂಬೀತು. ನಿನಗೆ ಮರುಳು' ಎಂದು ಹೆಂಡತಿಯನ್ನು ಹಂಗಿಸಿದರು.

'ಮುಳಿಹುಲ್ಲು ಅದರ ಮೂಗಿಗೆ ಇರಿಯುತ್ತದೆ. ಕೊಯ್ದು ಹಾಕಿದರೆ ರಾತ್ರಿ ತಿನ್ನಲು ಬೈಪಣೆಯಲ್ಲಿ ಎಸೆದ. ಬೈಹುಲ್ಲು ಉಳಿಯುತ್ತದೆ' ಎಂದು ಉಪದೇಶವಾಯಿತು ಸೀತಮ್ಮನವರದು.

ಸೀತಮ್ಮನವರೆಂದಂತೆ ಭಾಗೀರಥಿ ಬೆನ್ನು ಬಗ್ಗಿಸಿ ಸರಿ ಮೇಯಲಿಲ್ಲ.

ಅಲ್ಲಲ್ಲಿ ಎಳೆ ಹುಲ್ಲನ್ನು ಹೆಕ್ಕಿ ಹೆಕ್ಕಿ ತಿನ್ನುತ್ತಿತ್ತು. ಹಟ್ಟಿಯಲ್ಲಿ ಅದರ ಒಂಟಿ ಕರು ಬೇಸರದಿಂದ 'ಬೇ, ಬೇ' ಎಂದು ಕೂಗಿ ಕರೆಯುತ್ತಿದ್ದುದರಿಂದ ದನ ಅತ್ತ ಮೋರೆ ಎತ್ತಿ ಕಿವಿ ನಿಗುರಿಸಿ ಒಮ್ಮೊಮ್ಮೆ ಆಲಿಸಿತು. ಮೋಹನ ಮೆಲ್ಲಗೆ ಹಟ್ಟಿಗೆ ತೆರಳಿ ಕರುವಿನ ಹಗ್ಗ ಬಿಚ್ಚಿ ಬಿಟ್ಟ. ಅದು ನಾಲ್ಕೂ ಕಾಲುಗಳನ್ನು ನೆಗೆಯುತ್ತ ಹರಿಣದಂತೆ ಜಿಗಿಯುತ್ತ ಬಂದಿತು. ಗಾಳಿ ಅದರ ಕಿವಿಯೊಳಗೆ ಪ್ರವೇಶಿಸಿದುದರಿಂದ ನೆಲದ ಮೇಲೆ ಅದರ ಕಾಲುಗಳೇ ನಿಲ್ಲವು. ಭಾಗೀರಥಿ ಹಾಲು ಕೊಡಲು ಹಿಂಗಾಲುಗಳನ್ನು ಅಗಲಿಸಿತು. 'ಅಯ್ಯೋ, ನಿನ್ನ ಉಪದ್ರವೇ ಮೂರಾಯ. ನಿನ್ನ ಬೆನ್ನು ಒಡೆಯುತ್ತೇನೆ ನೋಡು' ಎಂದು ಸೀತಮ್ಮ ಮಗನನ್ನು ಬೆದರಿಸಿ, 'ಹಾಲು ಕರು ಕುಡಿದರೆ ರಾತ್ರಿ ನಿನಗೆ ಮಜ್ಜಿಗೆ ಅನ್ನಕ್ಕೆ ಗಂಗೋದಕವೇ ಗತಿ ನೋಡು' ಎಂದು ಸಿಡಿಗುಟ್ಟಿದರು. ಕರುವನ್ನು ಹಿಡಿಯಲು ಹೋದಾಗ ಅದು ನಾಲ್ಕೂ ಕಡೆ ಓಡಾಡತೊಡಗಿತು ಸೀತೆಯ ಪರ್ಣಕುಟಿ ಮುಂದೆ ಸುಳಿದ ಮಾಯಾಮೃಗದಂತೆ. 'ಮಾರೀಚ, ನೀನು ಹಾಲು ಕುಡಿ. ಸಾಯಂಕಾಲ ನಿನಗೆ ಉಪವಾಸ ಹಾಕುತ್ತೇನೆ' ಎಂದು ಕೂಗುತ್ತ ಹಿಡಿಯಲೆತ್ನಿಸಿದರು ಸೀತಮ್ಮ. ಕಾಲು ಸೋತ ಮೇಲೆಯೇ ಅದು ಅವರ ಕೈಗೆ ಸಿಕ್ಕಿತು. ಸೀತಮ್ಮ ಸೆರಗಿನ ತುದಿಯನ್ನೇ ಅದರ ಕೊರಳಿಗೆ ಸುತ್ತಿ, 'ಇನ್ನು ಓಡು ನೋಡೋಣ. ಮೊಲೆಹಾಲು ತಿಂದು ಈಗಲೇ ನಿನಗೆ ಸೊಕ್ಕು ಬಂತಲ್ಲ?' ಎನ್ನುತ್ತ ಅದನ್ನು ಹಟ್ಟಿಗೆ ಎಳೆದುಕೊಂಡು ಹೋದರು. ಭಾಗೀರಥಿಯೂ ಕರುವಿನ ಹಿಂದೆ ಬಂದಿತು. 'ನಿನಗೆ ಹುಲ್ಲು ಮೇಯಲು ಮೈ ಬಗ್ಗುವುದಿಲ್ಲ. ನಾನಿದ್ದೇನಲ್ಲ ಹುಲ್ಲು ಕೊಯ್ದು ಹಾಕಲಿಕ್ಕೆ? ಅಬ್ಬಾ' ಎಂದು ಹೇಳಿ ಭಾಗೀರಥಿಯನ್ನು ಗೂಟಕ್ಕೆ ಬಿಗಿದು ಹಿಂಬಾಗಿಲಿನ ಬಿದಿರಿನ ಪಡಿಯನ್ನು ಮುಚ್ಚಿ ಅಂಗಳಕ್ಕೆ ಬಂದಾಗ, ಮುಖಮಂಟಪವೇರುತ್ತಿದ್ದ ಶಿವರಾಯ, 'ಏನಮ್ಮ?' ಎಂದು ಕೇಳಿದ.

'ಅರೆ, ನೀನೆಲ್ಲಿಂದ ಉದಯವಾದೆ?' ಎಂದು ಆಶ್ಚರ್ಯದಿಂದ ಕೇಳಿದರು ತಾಯಿ. ಅವನು ಉತ್ತರ ಕೊಡುವ ಮೊದಲೇ, 'ಸಗುಣ ಹೆತ್ತಳೇನು? ಏನು ಮಗು? ನೀನು ಒಂದು ಕಾಗದವನ್ನೂ ಹಾಕಲಿಲ್ಲ' ಎಂದೂ ತಕರಾರು ಮುಂದಿಟ್ಟರು.

'ಹೇಳಲಿಕ್ಕೆಂದೇ ಬಂದೆ. ಕಾಗದ ಹಾಕಿದರೆ ಇಲ್ಲಿ ಮುಟ್ಟೀತಾ?'

'ಅದು ನಿಜ. ಅದಿರಲಿ. ಏನು ಸುದ್ದಿ?'

'ಗಂಡು ಮಗು. ಹಡೆದು ತಿಂಗಳಾಯ್ತು. ಬಾಣಂತಿ ಮಗು ಚನ್ನಾಗಿದ್ದಾರೆ.'

ಆಗಲಿ, ದೇವರು ದಯೆದೋರಿದ' ಎಂದು ಹೇಳುತ್ತ ಸೀತಮ್ಮನವರು ಪಡಸಾಲೆಗೆ ತೆರಳಿ ಕಿಟಕಿಗೆ ಮೊಗ ಆನಿಸಿ, 'ಮೋಹನಾ, ಶಿವಣ್ಣ ಬಂದಿದ್ದಾನೆ. ನಿನ್ನ ಅಪ್ಪಯ್ಯಗೆ ಹೇಳು' ಎಂದು ಕೂಗಿ ಹೇಳಿದರು

ಮೋಹನ ಕೆಸರು ಕಾಲು ಕೈಗಳಲ್ಲೇ ಓಡಿ ಬಂದ. ಗೋವಿಂದರಾಯರು ಸ್ನಾನದ ಕೊಟ್ಟಗೆಗೆ ತೆರಳಿ ಕೈ ಕಾಲುಗಳಿಗೆ ನೀರೆರೆದು ಬಂದರು. ಮಗನ ಮೋರೆ ಕಂಡೊಡನೆಯೇ, 'ದಾರಿ ಸಿಕ್ಕಿತಾ ನಿನಗೆ? ಯಾವ ದಾರಿಯಿಂದ ಬಂದೆ? ಹೊಳೆಗಿಳೆ ದಾಟಿದೆಯಾ?' ಎಂದು ಒಮ್ಮೆಗೇ ಮೂರು ನಾಲ್ಕು ಪ್ರಶ್ನೆಗಳನ್ನು ಕೇಳಿದರು.

'ಮುಂಡಾಜೆಯಿಂದಲೇ ನಡೆದು ಬಂದೆ. ದಾರಿಯಲ್ಲಿ ಒಬ್ಬಿಬ್ಬರು ಸಿಕ್ಕಿದರು. ಕೇಳುತ್ತ ಬಂದೆ. ಮೂಲ್ಕಿಯಿಂದ ನಾನು ಬೆಳಿಗ್ಗೆ ಬಸ್ಸು ಹತ್ತಿದುದೇ ಒಳ್ಳೆಯದಾಯ್ತು. ಸಾಯಂಕಾಲದ ಮೋಟಾರ್ ಕಾದಿದ್ದರೆ ಇಲ್ಲಿ ಅಡವಿ ಪಾಲಾಗುತ್ತಿದ್ದೆನೋ ಏನೋ?' ಎಂದು ಹೇಳಿದ ಶಿವರಾಯ ಗಂಡುಮಗುವಿನ ಜನನದ ಸುದ್ದಿ ತಿಳಿಸಿದ.

'ಬಂಗಾಡಿಗೆ ಹೊರಡುತ್ತೇವೆಂದು ನೀವು ಕಾಗದ ಬರೆದ ಮೇಲೆ ನಾನು ಉಡುಪಿಗೆ ಹೋಗಿದ್ದೆ. ನೀವು ಅಷ್ಟರಲ್ಲೇ ಹೊರಟುಬಿಟ್ಟಿದ್ದಿರಿ. ಸುಮ್ಮಗೆ ಎರಡು ಮೂರು ರೂಪಾಯಿ ಹಾಳಾಯ್ತು. ತಿಂದದ್ದಲ್ಲ, ಉಂಡದ್ದಲ್ಲ. ಆ ಬಸ್ಸಿನ ಬ್ರಹ್ಮಾಂಡಹೊಟ್ಟೆಗೆ ಸುರಿದಹಾಗಾಯ್ತು. ನೀವು ಬಹಳ ಅವಸರ ಅವಸರದಿಂದ ಬಂದುಬಿಟ್ಟಿರಿ.'

'ಅವಸರವೇನು? ಹೊರಡುವುದೆಂದು ನಿರ್ಧರಿಸಿದ ಮೇಲೆ ಕಾಲವಿಳಂಬವೇಕೆಂದು ಬೇಗನೇ ಗಂಟುಕಟ್ಟಿದೆವು. ಕಾಲಹರಣ ಮಾಡುತ್ತಿದ್ದರೆ ಮಳೆ ಬರುತ್ತಿತ್ತು. ಮಳೆಗಾಲದಲ್ಲಿ ಇಲ್ಲಿಗೆ ಬರಲು ಸಾಧ್ಯವಾಗುತ್ತಿದ್ದಿಲ್ಲ.'

'ಅಯ್ಯೋ, ಇದು ಘೋರಾರಣ್ಯ. ಮುಂಡಾಜೆಯಿಂದ ಇಷ್ಟು ದೂರ ಬರುವಾಗಲೇ ನನ್ನ ಕಾಲು ಗಡಗಡ ನಡುಗಿದುವು. ಈ ಗೊಂಡಾರಣ್ಯಕ್ಕೆ ಹೇಗೆ ಬಂದಿರೋ, ಹೇಗೆ ಮಳೆಗಾಲ ಕಳೆದಿರೋ ದೇವರೇ ಬಲ್ಲ!' ಎಂದು ಉದ್ಗರಿಸಿದ.

'ಹೋಯ್ತು. ಇನ್ನೇನೂ ಹೆದರಿಕೆಯಿಲ್ಲ. ಬಿಸಿಲು ಬಿದ್ದಿದೆ' ಎಂದಷ್ಟೇ

ನುಡಿದರು ತಂದೆ.

‘ ನೀವು ಗಟ್ಟಿ ಅಪ್ಪಯ್ಯ ! ನಾನಾಗುತ್ತಿದ್ದರೆ ಇಲ್ಲಿ, ಈ ಕಾಡಿನಲ್ಲಿ, ಈ ಮಹಾಜ್ವರದ ಕೊಂಪೆಯಲ್ಲಿ ಒಂದು ದಿವಸ ಉಳಿದೇನಾ? ಛೀ, ಜೀವ ಉಳಿದರೆ ಬಿಕ್ಕೆಬೇಡಿ ಬದುಕಬಹುದು. ’

ಉತ್ತರ ಕೊಡಲು ಗೋವಿಂದರಾಯರು ಬಾಯಿ ತೆರೆದಾಗ ಬೋರ ತುಕ್ರ ಅಹ್ಮದರ ಬಾಯಿ ಕೇಳಿಸಿತು. ‘ ಅಕೋ ಅಲ್ಲಿದೆ. ದೊಡ್ಡ ಕಲ್ಲು ತಾ. ಆ ಕೋಲು ಸಾಲದು. ಹೊಡೆ, ಹೊಡೆ. ತಲೆಗೇ ಹೊಡೆ ’ ಎಂದು ಅವರು ಕೂಗುತ್ತ ಗುಲ್ಲೆಬ್ಬಿಸಿದರು. ಗದ್ದಲ ಕೇಳಿ ಮುಖಮಂಟಪದಿಂದ ಎಲ್ಲರೂ ಅತ್ತ ಧಾವಿಸಿದರು. ಆಳುಗಳು ಒಬ್ಬರೂ ಕಾಣಿಸಲಿಲ್ಲ ಅವರಿಗೆ. ಗೋವಿಂದ ರಾಯರು ‘ ಏನೋ? ಏನದು? ಏ ತುಕ್ರ ಬೋರ, ಏನದು ? ’ ಎಂದು ಕರೆಯುತ್ತ ಕೇಳುತ್ತ ಬಂದರು. ‘ ಅಯ್ಯಾ, ದೊಡ್ಡ ಹಾವು ’ ಎಂದು ಅವರಿಗೆ ಅಲ್ಲಿಂದಲೇ ಉತ್ತರ ಬಂತು. ‘ ಎಲ್ಲಿ ? ಎಲ್ಲಿ ? ’ ಎಂದು ಕೇಳುತ್ತ ಕುರಿಚಲು ಗಿಡಗಳ ಮಧ್ಯೆ ನುಸುಳುತ್ತ ಗೋವಿಂದರಾಯರು ‘ ಏ ಮೋಹನಾ, ನೀನು ಬರಬೇಡ, ಹಾವಿದೆಯಂತೆ ’ ಎಂದು ಅವನನ್ನು ಬೆದರಿಸಿ ಕಳಿಸಿ ತಾವು ಹಾವಿದ್ದಲ್ಲಿ ಬಂದರು. ಹಾವು ಇದಿರಿಗೇ ಸುರುಳಿ ಸುರುಳಿಯಾಗಿ ಬಿದ್ದಿತ್ತು. ಅದರ ತಲೆ ಜಜ್ಜಿ ಹೋಗಿದೆ. ಮೈ ಮೇಲೂ ಕಲ್ಲಿನ ಗಾಯಗಳಾಗಿವೆ. ನಾಗರ ಹಾವಲ್ಲ. ಚಿಟ್ಟೆ ಹುಲಿಯಂತೆ ಅದರ ಮೈಮೇಲೆ ಪಟ್ಟೆ ಮುದ್ರೆ. ಗೋವಿಂದ ರಾಯರ ಬಲತೋಳಿನಷ್ಟು ಗಾತ್ರ.

‘ ಅಯ್ಯಾ, ಇದು ಪಿಲಿ ಕಂದೋಡಿ ’ ಎಂದ ಬೋರ.

‘ ಅಬ್ಬಾ, ಇದನ್ನು ನೋಡುವಾಗಲೇ ಮೈ ಜುಂ ಎನ್ನುತ್ತದೆ. ಗ್ರಹಚಾರಕ್ಕೆ ಎಲ್ಲಾದರೂ ಯಾರಿಗಾದರೂ ಕಚ್ಚಿದರೆ ಅವರು ಮೂರೂ ಮುಕ್ಕಾಲು ಗಳಿಗೆ ಬದುಕಲಿಕ್ಕುಂಟಾ ?’ ಎಂದು ಶಿವರಾಯ ಬಾಯಿಗೆ ಕೈ ಇಟ್ಟುಕೊಂಡ.

‘ ಅಯ್ಯಾ, ಇದು ಕಚ್ಚಬೇಕೆಂದಿಲ್ಲ. ಇದರ ವಿಷದ ನೊರೆ ಎಲ್ಲಾದರೂ ಕಾಲಿನ ಗಾಯಕ್ಕೆ ತಾಗಿದರೆ ಕಾಲು ಬಾತು ಕೊಳೆತುಬಿಡುವುದು. ನಾಗರ ಹಾವಿಗೆ ಕೋರೆ ಹಲ್ಲಿನಲ್ಲಿ ಮಾತ್ರ ವಿಷ. ಇದರ ಸರ್ವಾಂಗ ವಿಷ. ಕೆಟ್ಟ ಹಾವು ’ ಎಂದು ಕೂಡಿಸಿದ ಬೋರ.

‘ ರಾಮ ರಾಮ ’ ಎಂದು ಶಿವರಾಯನ ಬಾಯಿಂದ ಉದ್ಗಾರಗಳು ಹೊರ[illegible]ಗೃ.

‘ಏನು ತಿಂದು ಇಷ್ಟು ಬೆಳೆದಿದೆ! ಏನು ಅದರ ಮೈ ಬಣ್ಣ! ಅಬ್ಬಾ ದೈವ ಸೃಷ್ಟಿಯೆ!’ ಎಂದು ಗೋವಿಂದರಾಯರು ಅಂಗೈ ತಿರುಗಿಸಿದರು.

‘ಕಾಡಿನಲ್ಲಿ ಅದಕ್ಕೆ ಏನು ಕಡಿಮೆಯಾಗಿದೆ ಅಯ್ಯ? ಇಲಿ, ಮೊಲ, ಹಕ್ಕಿಗಳನ್ನು ತಿನ್ನುತ್ತದೆ. ದೊಡ್ಡದು ಸಣ್ಣ ಹಾವನ್ನು ನುಂಗುತ್ತದೆ. ಏನೂ ಸಿಗದಿದ್ದರೆ ಮಣ್ಣು ನೆಕ್ಕುತ್ತದೆ. ಇದನ್ನು ಕಂಡೇ ನೀವು ಇಷ್ಟು ಬೆರಗಾದಿರಿ. ಮಲೆಯಲ್ಲಿ ನನ್ನ ತೊಡೆಯಷ್ಟು ದಪ್ಪದ ಕಂದೊಡಿಗಳುಂಟು. ಒಮ್ಮೆ ನಾನೂ ಕೆಲವರೂ ಒಳ್ಳೆಮೆಣಸು, ಸೀಗೆ, ಬೆತ್ತ ತರಲು ಕುದುರೆಮುಖದ ಬುಡಕ್ಕೇ ಹೋಗಿದ್ದೆವು. ಇಂಥಾ ಕಂದೊಡಿ ನೋಡಿ ಓಡಿ ಬಂದೆವು’ ಎಂದು ತುಕ್ರ ನುಡಿದು ತನ್ನ ತೊಡೆಯನ್ನು ತೋರಿಸಿದ.

‘ಅಮ್ಮನಾ’ ಎಂದ ಶಿವರಾಯ, ‘ಅಕೋ ಅಕೋ, ಅದರ ಜೀವ ಹೋಗಿಲ್ಲ. ಬಾಲ ಹಂದಾಡುತ್ತದೆ. ಕೊಲ್ಲು, ಕೊಲ್ಲು. ಮತ್ತೆ ಹರಿದು ಯಾರನ್ನಾದರೂ ಕಚ್ಚೀತು ವೈರದಿಂದ’ ಎಂದು ಬೋರನನ್ನುದ್ದೇಶಿಸಿ ಹೇಳಿದ.

‘ಇನ್ನೇನು ಜೀವವಾಗುತ್ತದೆ ಸ್ವಾಮಿ? ಅದನ್ನು ಹೀಗೆಯೇ ಬಿಡುವುದಿಲ್ಲ. ಬೆಂಕಿ ಹಾಕಿ ಸುಡಬೇಕು’ ಎಂದ ಬೋರ.

ತುಕ್ರ ಮನೆಗೆ ತೆರಳಿ ಹಟ್ಟಿಯಲ್ಲಿ ಒಟ್ಟಿದ್ದ ಒಂದೆರಡು ಸೂಡಿ ಬೈಹುಲ್ಲು ತಂದ. ಅಹ್ಮದ್ ಬ್ಯಾರಿ ಟೊಪ್ಪಿಗೆ ತೆಗೆದು ಅದರೊಳಗಿದ್ದ ಬೆಂಕಿಪೆಟ್ಟಿಗೆಯಿಂದ ಕಡ್ಡಿ ಗೀರಿದ. ಸತ್ತಿದ್ದರೂ ಉರಿ ಪ್ರಜ್ವಲಿಸಿದಾಗ ಹಾವು ದಡ ದಡ ಹೊರಳಾಡಿಸಿತು ಬಾಲವನ್ನು. ಅದು ನಿಂತ ಮೇಲೆ ಉದ್ದ ಕೋಲಿನಿಂದ ಅದನ್ನು ಎತ್ತಿಕೊಂಡು ಹೊಳೆಗೆಸೆಯಲು ತುಕ್ರ ಹೊರಟಾಗ, ‘ಹೊಳೆಗೆಸೆಯ ಬೇಡ. ನೀರು ಹೊಲಸಾಗುತ್ತದೆ. ಯಾರಾದರೂ ಕುಡಿದಾರು. ಹುಗಿದು ಬಿಡು’ ಎಂದರು ಗೋವಿಂದರಾಯರು. ಆಳುಗಳು ನಕ್ಕು ಗುಳಿತೋಡಿ ಹುಗಿದರು.

ಮನೆಗೆ ಹಿಂತಿರುಗಿದಾಗ ಶಿವರಾಯ ಮಾತಾಪಿತೃಗಳ ವನವಾಸದ ಬಗೆಗೆ ಬಹಳ ದುಃಖ ತೋಡಿಕೊಂಡ—‘ಇಂಥ ಭೀಕರ ಆರಣ್ಯದಲ್ಲಿ ನೀವು ಹೇಗಿರುತ್ತೀರೋ? ನನಗೆ ನಿಜವಾಗಿಯೂ ಭಯವಾಗುತ್ತದೆ. ನೀವು ಬಹಳ ಅವಸರದಿಂದ ಬಂದಿರಿಯೆಂದು ಅದಕ್ಕೇ ಹೇಳಿದೆ’ ಎಂದು ಮತ್ತೆ ಅದೇ ಮಾತನ್ನು ತೆಗೆದ.

ಬಾರದೆ ಮತ್ತೇನು ಮಾಡುವ ಹಾಗಿತ್ತು? ನನಗೆ ನಿವೃತ್ತಿಯಾಯಿತಲ್ಲ?’ ಎಂದು ತಿಳಿಸಿದರು ತಂದೆ.

'ನನಗದು ಗೊತ್ತಿರಲಿಲ್ಲ. ಇಲ್ಲದಿದ್ದರೆ ನಾನು ಬಿಡುತ್ತಿದ್ದಿಲ್ಲ. ನನ್ನ ಅಂಗಡಿಯಲ್ಲಿ ನೀವು ಕುಳಿತುಕೊಳ್ಳುತ್ತಿದ್ದರೆ ನಾನು ಬೇಡವೆನ್ನುತ್ತಿದ್ದೆನಾ? ಅಮ್ಮ ಬಂದರೆ ಆಗುತ್ತಿತ್ತೆಂದು ಅವಳೂ ಪದೇ ಪದೇ ಹೇಳುತ್ತಿದ್ದಳು. ನೀವು ಬರುತ್ತಿದ್ದರೆ ಪ್ರತ್ಯೇಕ ಮನೆ ನೋಡುವ ಅಗತ್ಯವೂ ಇದ್ದಿಲ್ಲ. ಹೇಗೂ ನಮ್ಮ ಮಾವ ಸಾಯುವ ಕಾಲಕ್ಕೆ ಒಳ್ಳೇ ಮನೆ ಕಟ್ಟಿಸಿ ಸತ್ತರು. ನೀವು ಬಂದರೆ ನಮ್ಮತ್ತೆ ಬೇಡವೆನ್ನುತ್ತಿದ್ದರಾ? ತಿಂದುಣ್ಣುವ ಬೇರೆ ಮಕ್ಕಳೂ ಇಲ್ಲ ಅವರಿಗೆ. ಎಲ್ಲ ನೀವು ಗಡಿಬಿಡಿ ಮಾಡಿದಿರಿ.'

ಗೋವಿಂದರಾಯರಿಗೆ ಈ ಮಾತು ಅಷ್ಟು ರುಚಿಸಲಿಲ್ಲವೋ ಏನೋ? 'ಬಂದಾಯಿತಲ್ಲ? ಇನ್ನೇಕೆ ಆ ಮಾತು?' ಎಂದವರು ಮುಗಿಸಿದರು.

'ಛೇ, ಈಗ ನೀವು ಬನ್ನಿ ಎಂದು ನಾನು ಹೇಳಲು ಬಂದವನಲ್ಲ. ಹೇಳಲು ಬರುವಂತೆಯೂ ಇಲ್ಲ. ಕೇಳಿದರೆ ಅಣ್ಣನ ಕಣ್ಣು ಕೆಂಪಗಾದೀತು. ಆದದ್ದು ಆಯಿತಲ್ಲ? ನಾನು ಹೀಗೆ ಸುಮ್ಮನೆ ಹೇಳಿದೆ ಈ ಕಾಡು ನೋಡಿ, ಅಷ್ಟೆ.'

ತಂದೆ ಉತ್ತರ ಕೊಡಲಿಲ್ಲ. ಅವರ ಮೋರೆ ಸ್ವಲ್ಪ ಗಂಭೀರವಾಯ್ತು. ಕಾಲಲ್ಲಿ ಕೆಸರಾಗಿದ್ದುದರಿಂದ ಮತ್ತೆ ಕೊಟ್ಟಗೆಗೆ ಬಂದು ಹಂಡೆಯೊಳಗಿಂದ ಬಿಸಿನೀರು ತೆಗೆದು ಕಾಲುಗಳ ಮೇಲೆ ಎರೆದರು. ಎಡಪಾದದ ಮೇಲೆ ಬಲ ಅಂಗಾಲಿನಿಂದ ತಿಕ್ಕಿ ನೀರು ಚಲ್ಲಿಕೊಂಡರು ಮತ್ತೆ. ಕಾಲು ತೊಳೆದುಕೊಂಡು ಪುನಃ ಮುಖಮಂಟಪಕ್ಕೆ ಬಂದ ಶಿವರಾಯ ಮೆಲುದನಿಯಿಂದ 'ಅಪ್ಪಯ್ಯ, ಅಣ್ಣನಿಗೆ ಆಸ್ತಿ ತೆಗೆದುಕೊಳ್ಳಲು ನೀವು ಹಣ ಕೊಟ್ಟಿರಂತೆ! ನಿಜವಾ?' ಎಂದು ಪ್ರಶ್ನಿಸಿದ.

ಈ ಆಕಸ್ಮಿಕ ಪ್ರಶ್ನೆಯಿಂದ ತಂದೆ ಸ್ವಲ್ಪ ತಬ್ಬಿಬ್ಬಾದರು. 'ನಿನಗೆ ಯಾರು ಹೇಳಿದರು?' ಎಂಬ ನುಡಿ ಹೊರಬಿತ್ತು ಅವರ ಬಾಯಿಂದ.

'ಯಾರೋ ಹೇಳಿದರು. ಅಡಿಕೆ ಕದ್ದರೆ ಗೊತ್ತಾಗಲಿಕ್ಕಿಲ್ಲ. ಆನೆಯನ್ನು ಮುಚ್ಚಿಟ್ಟುಕೊಳ್ಳಲಿಕ್ಕಾಗುತ್ತದೆಯೆ? ಯಾರೋ ಹೇಳಿದರು. ಅದನ್ನು ತೆಗೆದುಕೊಂಡು ಮಾಡುವುದೇನಿದೆ? ಅದು ಸತ್ಯವಾ?'

'ಛೇ, ಇದು ಹಸಿ ಸುಳ್ಳು. ಯಾರೋ ಸುಮ್ಮನೆ ನಿನ್ನ ಕಿವಿಗೂದಿರ ಬೇಕು.'

'ನಾನು ನಂಬುವುದಿಲ್ಲ. ಇಲ್ಲದಿದ್ದರೆ ಇಷ್ಟು ಹಣ ಅವನಿಗೆಲ್ಲಿಂದ ಬಂತು? ಕೊಪ್ಪರಿಗೆ ಅಗೆದನೇನು? ಅಥವಾ ಗೋವೆ ಲಾಟ್ರಿ ಎದ್ದಿತಾ?'

‘ ಈ ಪಾಳು ಭೂಮಿ ತೆಗೆದುಕೊಳ್ಳಲು ಕೊಪ್ಪರಿಗೆ ಸಿಗಬೇಕಾ ? ಕಾಡು ! ಅರಣ್ಯ ! ಇದರಲ್ಲಿ ಶೀರ್ವೆಯೂ ಹುಟ್ಟುವುದಿಲ್ಲ. ಯಾವ ಭೂತ ಬರುತ್ತಿತ್ತು ಇಲ್ಲಿಗೆ ? ರಾಜ ಏನೋ ಹುಚ್ಚುಕಟ್ಟಿ ಏಲಂನಲ್ಲಿ ನಿಂತು ಆರು ಕಾಸು ಮೂರು ಕಾಸಿಗೆ ತೆಗೆದುಕೊಂಡ. ಅಷ್ಟು ಹಣವೂ ಇರಲಿಲ್ಲವಾ ಅವನ ಹತ್ರ ? ಇಷ್ಟು ವರುಷ ದುಡಿದದ್ದೆಲ್ಲ ನೀರಿನಲ್ಲಿಟ್ಟು ಹೋಯಿತು ಹಾಗಾದರೆ ? ’

‘ ಹಾಗಾದರೆ ನಿಮ್ಮ ಫಂಡಿನ ಹಣ ಏನಾಯ್ತು ? ’

‘ ಇದೆ ನನ್ನ ಹತ್ತಿರ. ನಿನಗೇಕೆ ಅದರ ಮೇಲೆ ಕಣ್ಣು ಈಗಲೇ? ’

‘ ಛೇ, ನಿಮ್ಮ ದುಡ್ಡು ನನಗೇಕೆ ? ಮಂದಿ ಏನೇನೋ ಹೇಳುತ್ತಿದ್ದರು. ಅದು ಕಿವಿಗೆ ಬಿದ್ದುದರಿಂದ ಕೇಳಿದೆ, ಅಷ್ಟೆ. ನಾನೂ ನಿಮ್ಮ ಒಬ್ಬ ಮಗ ನಲ್ವಾ? ಅದಕ್ಕಾಗಿ ಕೇಳಿದೆ. ಎಲ್ಲಾದರೂ ನಮಗೆ ಸಂಕಟ ಬಂದಾಗ ಸಾಲವಾದರೂ ಸಿಗಬಹುದೆಂದು ಒಂದು ಆಶೆ.’

‘ ನಿನಗೇನು ಬಂತು ಅಂಥಾ ಸಂಕಟ ! ಮಾವನ ಮನೆಯಿದೆ. ಅಂಗಡಿ ಕೊಟ್ಟಿದ್ದಾರೆ. ಹುಡುಗಿಗೆ ಮೈಮೇಲೆ ಒರ್‍ವಾರ ಆಭರಣ ಹಾಕಿದ್ದಾರೆ. ನೀವು ಇರುವುದು ಎರಡು ಮೂರು ಜನ. ಊಟಕ್ಕೆ ಬೇಕಾಗುವಷ್ಟು ಅಕ್ಕಿ ಬರುತ್ತದೆ ಗದ್ದೆಯಿಂದ. ಅವರಿಗೆ ಬೇರೆ ಮಕ್ಕಳೂ ಇಲ್ಲ. ಎಲ್ಲ ನಿನಗೇ ಇನ್ನು. ನಿನಗೂ ತೊಂದರೆಯೆಂದರೆ ಆಶ್ಚರ್ಯ.’

‘ ಅಪ್ಪಯ್ಯ, ನಿಮಗೆಲ್ಲ ಹಾಗೆ ತೋರುತ್ತದೆ. ದೂರದ ಬೆಟ್ಟ ನುಣ್ಣಗೆ. ಹತ್ತಿರ ಹೋದಾಗಲೇ ಕಲ್ಲು ಮುಳ್ಳು ಕಣಿ ಕಾಡು ಕಾಣಿಸುತ್ತದೆ. ಯಾರೂ ದಿಕ್ಕಿಲ್ಲವೆಂದು ನಾನು ಕೈಕೊಟ್ಟರೆ ಅತ್ತೆಯವರು ಏನೆಂದಾರು ? ಅಂಗಡಿ ಮಾತ್ರ ನನ್ನ ವಶ. ಏನು ವ್ಯಾಪಾರವಾಗುತ್ತದೆ ಈ ಅಂಗಡಿಯಲ್ಲಿ ? ಎಲ್ಲ ಮುಕ್ಕಾಲಿನ ಮೆಣಸು ಜೀರಿಗೆ ಉಪ್ಪಿನ ಗಿರಾಕಿಗಳೇ. ಬರುವುದು ಒಂದಾದರೆ ಖರ್ಚು ಎರಡು. ಹೀಗಾಗಿ ಸಾಲ.’

‘ ಸಾಲವಿಲ್ಲದವರು ಯಾರು ? ಜಾರ್ಜ್ ಅರಸನಿಗೂ ಅಮೇರಿಕದ ಸಾಲವಿದೆಯಂತೆ.’

ಶಿವರಾಯ ಎತ್ತಲೋ ದೃಷ್ಟಿ ಹೊರಳಿಸಿ, ‘ ಕೊಡುವುದಿಲ್ಲವಾದರೆ ಬಿಡಿ. ನಾನೇನು ನಿಮ್ಮೊಡನೆ ಜಗಳಾಡಲು ಬಂದಿದ್ದೇನಾ ? ’

‘ ಎಲ್ಲಿಂದ ಕೊಡುವುದು ? ’ ಎಂದು ಸ್ವಲ್ಪ ಗಟ್ಟಿಯಾಗಿ ನುಡಿದ ಗೋವಿಂದರಾಯರು ಕುಳಿತಲ್ಲಿಂದ ಎದ್ದು ಮತ್ತೆ ಒಂದೆರಡು ವಾಕ್ಯ ಸೇರಿಸಿ

ದರು— " ನಾನು ಗಂಟು ಹುಗಿದಿಟ್ಟಿದ್ದೇನೆಂತ ನಿನ್ನ ಕಲ್ಪನೆ. ಫಂಡಿನ ಹಣ ಬಂದ ಕೂಡಲೇ ನಿನ್ನ ತಾಯಿಯೇ 'ಬಳೆ ಬಳೆ' ಎಂದು ಕುಣಿದು ಅನ್ನ ನೀರು ಬಿಟ್ಟಳು. ಬಾವಿ ಹಾರುತ್ತೇನೆಂದು ಕಣ್ಣೀರು ಹರಿಸಿದಳು. 'ಆಗಲಿ. ಅದು ಇರುವುದರಿಂದ ಇಷ್ಟೆಲ್ಲ ಜಗಳಕ್ಕೆ ಕಾರಣ. ಕಿಸೆಯೊಳಗೆ ಆರು ಕಾಸಿದ್ದರೆ ತುರಿಸುತ್ತದೆ ಕೈ ವೆಚ್ಚಮಾಡಲು. ಹೋಗಲಿ. ನಿನ್ನ ಇಷ್ಟ ಪೂರ್ತಿಯಾಗಲಿ' ಎಂದು ಹೇಳಿ ಬಳೆ ಮಾಡಿಸಲು ಹಾಕಿದೆ. ಇನ್ನೆಲ್ಲಿಂದ ನಾನು ತರುವುದು ? "

ಶಿವರಾಯ ಮಾತು ನಿಲ್ಲಿಸಿದ. ಮೋರೆಯೂ ಸ್ವಲ್ಪ ಸಿಟ್ಟಿನಿಂದ ಗಂಟಿಕ್ಕಿತು. ಮತ್ತೆ ವಿಶೇಷ ಮಾತನಾಡಲಿಲ್ಲ. ಪ್ರಶ್ನೆಗೆ ತಕ್ಕ ಉತ್ತರ. ಹೆಚ್ಚಿನದಕ್ಕೆಲ್ಲ 'ಹುಂ, ಹಾಂ, ಹುಂ' ಒಂದೇ ಉತ್ತರ. ಊಟಕ್ಕೆ ಕೂತಾಗಲೂ ಅಷ್ಟೆ. ಊಟವಾದ ಮೇಲೆ ಒಂದೆರಡು ಗಳಿಗೆ ವಿಶ್ರಾಂತಿಯನ್ನೂ ಸರಿಯಾಗಿ ತೆಗೆದುಕೊಳ್ಳಲಿಲ್ಲ. ಅಂಗಿ, ಕೋಟು ಹಾಕಿಕೊಂಡು ಸಿದ್ಧನಾದ. ದುಸ್ತು ಧರಿಸಿದುದನ್ನು ಕಂಡ ಗೋವಿಂದರಾಯರು, 'ಎಲ್ಲಿಗೆ ಹೊರಟೆ ?' ಎಂದು ಕೇಳಿದರು.

'ಹೊರಟೆ. ಹಾಗೇ ನಿಮ್ಮನ್ನು ನೋಡಲು ಬಂದೆ. ನನ್ನ ಕೆಲಸವಾಯ್ತು. ಇನ್ನೇನಿದೆ ಇಲ್ಲಿ ನನಗೆ ?'

ರಾತ್ರಿ ಉಳಿದು ಬೆಳಿಗ್ಗೆ ಹೋಗೆಂದು ಅವರು ಹೇಳಿದರೂ ಶಿವರಾಯ ಕೇಳಲಿಲ್ಲ. ತಾಯಿಯ ಮಾತನ್ನು ಅವನು ಲಕ್ಷಿಸಲಿಲ್ಲ. 'ಮುಂಡಾಜೆಗೆ ಮುಟ್ಟಿದಾಗ ಸಾಯಂಕಾಲವಾಗುತ್ತದೆ. ಮತ್ತೆ ಮೂಲ್ಕಿಗೆ ತೆರಳುವ ಬಸ್ಸಿಲ್ಲ' ಎಂದು ಗೋವಿಂದರಾಯರು ತಿಳಿಸಿದರು. 'ರಾತ್ರಿ ಎಲ್ಲಿ ಮಲಗಿಕೊಳ್ಳುತ್ತಿ ?' ಎಂದು ಸೀತಮ್ಮನವರು ಮತ್ತೆ ಮತ್ತೆ ಕೇಳಿದರು. 'ಎಲ್ಲಾದರೂ ಮಲಗಿಕೊಂಡ. ಎಲ್ಲಿಯೂ ಸ್ಥಳ ಸಿಗದಿದ್ದರೆ ಅಂಗಡಿ ಬಾಗಿಲಲ್ಲಿ. ನನಗೇನಾಗಬೇಕು ? ಕೈಯಲ್ಲಿ ಸಾವಿರಾರು ರೂಪಾಯಿಗಳಿವೆಯೇನು ? ಫಕೀರ್‌ಕು ಪೀಕೀರ್ ನೈ' ಎಂದುಸುರುತ್ತ, 'ಬರುತ್ತೇನೆ' ಎಂದು ಮುಖಮಂಟಪದಿಂದ ಇಳಿದು ಕೊಡೆ ಬಿಡಿಸಿ ಮುಂಡಾಜೆ ರಸ್ತೆಯ ದಾರಿ ಹಿಡಿದ.

ಶಿವರಾಯ ಕಣ್ಣಿಗೆ ಕಾಣಿಸುವವರೆಗೂ ಮುಖಮಂಟಪದಲ್ಲೇ ನಿಂತು ನೋಡಿದರು ಗೋವಿಂದರಾಯರು. ಅವನು ಸಿಟ್ಟಿನಿಂದಲೇ ಹೋದನೆಂದು ಅವರ ಮನಸ್ಸಿಗೆ ಖಾತ್ರಿಯಾಯ್ತು. ಆದರಿಂದ ಅವರ ಮನಸ್ಸೂ ಬಹಳ

ನೊಂದಿತು. ಮಗನ ಸ್ವಭಾವವೇ ಅವರಿಗೆ ಅರ್ಥವಾಗಲಿಲ್ಲ. ಅದನ್ನು ನೆನಸಿದಂತೆ ಮಕ್ಕಳ ಗುಣಗಳೆಲ್ಲ ಅವರ ಕಲ್ಪನೆಗೆ ನಿಲುಕಿದುವು. ಎಲ್ಲ ಮಕ್ಕಳೂ ಒಂದೇ ವಿಧ. ಸಾಲಾಗಿ ನಿಲ್ಲಿಸಿದರೆ ಇವನು ಅಣ್ಣ, ಅವನು ತಮ್ಮನೆಂದು ಕುರುಡರೂ ಗುರುತಿಸಬಹುದು ಆದರೆ ಅಣ್ಣನಂತೆ ತಮ್ಮನಿಲ್ಲ. ಒಬ್ಬನಲ್ಲಿ ಕಾಸಿಲ್ಲ ತಿಂಗಳ ಕೊನೆಗೆ. ಆದರೂ ಆಕಾಶಕ್ಕೆ ಮೊಳ ಹಾಕುತ್ತಾನೆ. ಮತ್ತೊಬ್ಬ ಕಾಸು ಬಿಚ್ಚುವುದಿಲ್ಲ. ಪರರದ್ದಕ್ಕೂ ಕೈ ಚಾಚುತ್ತಾನೆ. ಇಬ್ಬರೂ ತನ್ನ ಮಕ್ಕಳೇ. ಆದರೆ ಒಬ್ಬರಿಗೊಬ್ಬರು ಅಜಗಜಾಂತರ. ಇನ್ನು ಹರಿ ಬಂದ ಮೇಲೆ ಅವನು ಹೇಗೊ? ಏನೇನು ಅನುಭವಿಸಲಿದೆಯೋ ಎಂದು ಚಿಂತಿಸುತ್ತ ಮೋರೆ ಹೊರಳಿಸಿದರು. ಅಲ್ಲೇ ನಿಂತಿದ್ದ ಹೆಂಡತಿಯನ್ನು ನೋಡಿ, 'ಹಾಂ, ಈ ಫಂಡಿನ ಹಣ ಒಂದು ಕಿಲ್ಬಿಷವಾಯ್ತು' ಎಂದು ನಿಟ್ಟುಸಿರುಬಿಟ್ಟರು.

'ನಾನು ಆಗಲೆ ಹೇಳಿದೆ ಬಳೆ ಮಾಡಿಸಿ ಬಿಡಿ ಎಂದು. ನೀವು ನನ್ನ ಮಾತನ್ನು ಕಿವಿಯಲ್ಲಿ ಹಾಕಿಕೊಳ್ಳಲಿಲ್ಲ' ಎಂದರು ಸೀತಮ್ಮ.

ಅದನ್ನು ಕೇಳಿ ಗೋವಿಂದರಾಯರಿಗೆ ಗಾಯದಮೇಲೆ ಸಾಸಿವೆ ಬಳಿದಂತಾಯ್ತು. ಸ್ವಲ್ಪ ಸಿಟ್ಟಿನಿಂದಲೇ ಅವರು ಹೆಂಡತಿಯನ್ನು ಗದರಿಸಿದರು— 'ಅವನದು ಆಯ್ತು. ಈಗ ನೀನು ಬಂದೆಯೇನು ಜಗಳಕ್ಕೆ? ಏನು ನಾನು ಮನೆಯಲ್ಲಿರಬೇಕೆಂದು ಮಾಡಿದೆಯೋ ಅಥವಾ ಕಾಡಿಗೆ ಹೋಗಿಬಿಡಲೋ?'

ರಾಯರಿಗೆ ಸಿಟ್ಟು ಬಂದಿದೆಯೆಂದರಿತು ಸೀತಮ್ಮನವರು ಒಳಗೆ ನಡೆದರು. ಗೋವಿಂದರಾಯರು ನಸ್ಯ ಏರಿಸಿ ಮತ್ತೆ ಅಂಗಳಕ್ಕೆ ಇಳಿದು ಕಾಡು ಕಡಿವಲ್ಲಿ ತೆರಳಿದರು. 'ಏ ಬೋರ, ತುಕ್ರ, ಎಲ್ಲಿದ್ದೀರಿ? ಕಡಿವ ಶಬ್ದವೇ ಕೇಳಿಸುವುದಿಲ್ಲ' ಎಂದು ಗಟ್ಟಿಯಾಗಿ ನುಡಿಯುತ್ತ ಬಂದರು. ಅವರೆಲ್ಲ ಒತ್ತಟ್ಟಿಗೆ ಕುಳಿತು ಎಲೆ ಅಡಿಕೆ ಜಗಿಯುತ್ತಿದ್ದರು. 'ಹುಂ, ಏಳಿ ಏಳಿ. ನಾನತ್ತ ಹೋದ ಕೂಡಲೇ ಇತ್ತ ನೀವು ಕುಳಿತಿರಾ ಏನು? ಕಾಡು ಕಡಿವ ಶಬ್ದವೇ ಕೇಳಿಸಲಿಲ್ಲ. ಹದಿನೈದು ದಿವಸಗಳೊಳಗೆ ಮುಗಿಯಬೇಕೆಂದು ಅಯ್ಯ ಹೇಳಿ ಹೋಗಿದ್ದಾರೆ. ಹೀಗಾದರೆ ನಿಮ್ಮ ಸಂಬಳ ಕಡಿಯಬೇಕಾದೀತು, ಏಳಿ' ಎಂದು ಒತ್ತಾಯದಿಂದ ಅವರನ್ನೆಬ್ಬಿಸಿದರು. ಮತ್ತೆ ಪಟ್‌ಪಟ್ ಮರ ಕಡಿವ ಶಬ್ದ ಆರಂಭವಾಯಿತು. ದಿನಂಪ್ರತಿ ಈ ಪಟ್ ಪಟ್ ಶಬ್ದ ಕಾಡಿನಲ್ಲೆಲ್ಲ ಪ್ರತಿಧ್ವನಿತವಾಯಿತು.

ಆದರೆ ಹದಿನೈದು ದಿನಗಳು ಉರುಳಿದರೂ ರಾಜ ಬರಲಿಲ್ಲ. 'ಪ್ರಾಯಶಃ

ಸಂಬಳ ದೊರೆತ ಮೇಲೆಯೇ ಬಂದಾನು. ಬರಿಗೈಯಲ್ಲಿ ಬಂದರೆ ಏನು ಪ್ರಯೋಜನ? ಆಳುಗಳು ಅವನ ಜೀವವನ್ನೇ ತಿಂದಾರು' ಎಂದು ಗೋವಿಂದ ರಾಯರು ಊಹಿಸಿದರು. ಅದರಂತೆ ಸಂಬಳ ಕೈಗೆ ಸಿಕ್ಕ ಮೇಲೆಯೇ ರಾಜ ಮೂಡಿದ. ನಡೆದ ಕೆಲಸವನ್ನು ಕಂಡು ಅವನಿಗೆ ಪರಮಾನಂದವಾಯಿತು. ಮನೆಯ ತೆಂಕು ಹಾಗೂ ಹಟ್ಟಿಯ ಬಡಗು ದಿಕ್ಕಿನಿಂದ ಪಶ್ಚಿಮಕ್ಕೆ ಹೊಳೆಯ ದಂಡೆಯವರೆಗೂ ಬಟ್ಟ ಬಯಲಾಗಿದೆ. ಹೊಳೆಯ ದಂಡೆಯ ಮರಗಳನ್ನು ಮಾತ್ರ ಮುಟ್ಟಿರಲಿಲ್ಲ. ಸಾಲಾಗಿ ಸೈನಿಕರು ನಿಂತಂತೆ ಅವು ಕಂಗೊಳಿಸಿದುವು. ಕಾಡು ಕಡಿದ ಸ್ಥಳದಲ್ಲೂ ಅಲ್ಲೊಂದು ಇಲ್ಲೊಂದು ಜಾತಿ ಗಿಡ ಮರಗಳನ್ನು ಬಿಟ್ಟಿರುವರು. ಆಲ, ಪಾಲ, ಅಶ್ವಥ್ಥ, ಮಾವು, ಹಲಸು, ಹೆಬ್ಬಲಸು ಎಲ್ಲ ಗೋವಿಂದರಾಯರ ಪಟ್ಟಿಯಲ್ಲಿ ಜಾತಿಮರಗಳೇ. ಅಂಗಳದ ಬದಿಯಲ್ಲೊಂದು ಕಾಟುಮಾವಿನ ಮರವಿದ್ದರೆ ಹೊಳೆಯ ಬದಿಯಲ್ಲೊಂದು ಅಶ್ವತ್ಥವಿದೆ. ಅಂಗಳದಿಂದ ಹೊಳೆಯವರೆಗೆ ಭೂಮಿ ಇಳಿಜಾರಾಗಿದೆ. 'ಅಲ್ಲಲ್ಲಿ ನೆಲವನ್ನು ಸಮತಟ್ಟಾಗಿ ಮಾಡಬೇಕು. ಭೂಮಿ ಲೆವೆಲ್ ಇಲ್ಲ. ಹೊಳೆಯ ಕಡೆ ತಗ್ಗಾಗಿದೆ. ಅಲ್ಲಲ್ಲಿ ಹುಣಿಗಳನ್ನು ಹಾಕಬೇಕು. ಇಲ್ಲದಿದ್ದರೆ ಮೇಲಿಂದ ನೀರು ಹರಿದು ಹೊಳೆಗೆ ಇಳಿಯುವುದೇ ಸರಿ' ಎಂದ ರಾಜ ನೋಡಿ.

'ಲೆವೆಲ್ ಮಾಡಿ ಹುಣಿ ಹಾಕುವ ಮೊದಲು ಕರ್ಮಾರ್, ಸರೋಳಿಗೆ, ಕುಂಟಾಲ್, ಕಾಸರಕಗಳ ಗುತ್ತಿಗಳನ್ನು ಅಗೆದೊಗೆಯಬೇಕು. ಬಿದಿರು ಹಿಂಡಲುಗಳ ಬೇರನ್ನೂ ಮುರಿಯದೆ ಆಗುವುದಿಲ್ಲ. ಇಲ್ಲದಿದ್ದರೆ ಮುಂದಿನ ಮಳೆಗಾಲದೊಳಗೆ ಮತ್ತೆ ತಿರಿ ಚಿಗುರಿ, ಪೊದೆ ಪೊದರು ಬೆಳೆಯುವುದು. ಮತ್ತೆ ಅದನ್ನು ಕೊಯ್ವ ಕೆಲಸ ಬೇಡ. ಈಗಲೇ ಮುಗಿಸಿ ಗದ್ದೆ ರೂಪ ತರುವುದು ಒಳ್ಳೆಯದು' ಎಂದು ಗೋವಿಂದರಾಯರು ಸೂಚಿಸಿದರು.

'ಅದು ಹೌದು' ಎಂದುತ್ತರವಿತ್ತ ರಾಜ ಅಂಗಳದಿಂದ ಮತ್ತೆ ತೆಂಕು ಬದಿಗೆ ಬಂದು ಅಲ್ಲಿಂದ ಹೊಳೆಯ ವರೆಗೂ ಮತ್ತೊಮ್ಮೆ ದಿಟ್ಟಿಸಿದ. ಆ ಮೇಲೆ ತಂದೆಯ ಕಡೆ ಹೊರಳಿ, 'ಅಪ್ಪಯ್ಯ, ಇದು ಬಹಳ ಎತ್ತರ ಸ್ಥಳ; ಮಣ್ಣು ಪಡ್ಪೋಶಿ. ಕಲ್ಲುಗಳು ತುಂಬಿವೆ. ಗದ್ದೆಯಾಗಲಿಕ್ಕಿಲ್ಲ. ಗದ್ದೆ ಮಾಡಿದರೆ ನೀರೂ ನಿಲ್ಲಲಿಕ್ಕಿಲ್ಲ. ಹೊಳೆಯ ಕಡೆ ಹರಿಯುವುದೂ ನಿಶ್ಚಿತ. ಇಲ್ಲಿ ಗಿಡ ಮರಗಳನ್ನು ಕಡಿದುದು ವ್ಯರ್ಥ' ಎಂದು ಅಭಿಪ್ರಾಯಪಟ್ಟ.

'ಯಾವುದೂ ವ್ಯರ್ಥವಲ್ಲ. ಮನೆಯ ಸಮೀಪ ಕಾಡಿರಬಾರದೆಂದು

ಬೇಕೆಂದೇ ಕಡಿಸಿದೆ. ಇಲ್ಲೆಲ್ಲ ಗುಳಿ ತೋಡಿ ಕೆಲವು ಕಸಿ ಗಿಡಗಳನ್ನು ನೆಡುವ' ಎಂದು ಅವರು ಸೂಚಿಸಿದರು.

'ಹಾ, ಅದು ಒಳ್ಳೆಯದು. ನನಗೆ ತೋಚಲಿಲ್ಲ. ಈ ಸಲ ಬರುವಾಗಲೇ ಮಂಗಳೂರಿನ ಸೋನ್ಸ್ ಫಾರ್ಮಿನಿಂದ ತಂದು ಬಿಡುತ್ತಿದ್ದೆ ಗಿಡ.'

'ನಾನೂ ಹೇಳಲು ಮರೆತೆ. ಬಹಳ ಬೇಡ. ಸ್ವಲ್ಪ ಸ್ಥಳ ಹರಿವೆ, ಹಾಗಲು, ತರಕಾರಿ ಬೆಳೆಸಲೂ ಬೇಕು. ನೋಡು, ಸಾಧಾರಣ ಅಂಗಳದ ಅಂಚಿನಲ್ಲಿರುವ ಸ್ನಾನದ ಕೊಟ್ಟಿಗೆಯಿಂದ ಹಿಡಿದು ದಕ್ಷಿಣಕ್ಕೆ ಆ ಕಾಡಿನ ಕರೆ ಮುಟ್ಟುವ ಲೈನಿನಿಂದ ಈಚೆ, ಈ ದರೆಯ ವರೆಗೆ ಸ್ಥಳ ಬಿಟ್ಟುಬಿಡೋಣ. ಗದ್ದೆಯ ಯೋಚನೆ ಬೇಡ. ಮನೆಯ ಸುತ್ತಲೂ ಗದ್ದೆಯಿದ್ದರೆ ಅದರ ನೀರಿನ ಪಸೆ ಮನೆಗೂ ಇಂಗುತ್ತದೆ, ಗೋಡೆಗೂ ಹಾನಿಯುಂಟು. ಮನೆಯ ಸಮೀಪವೇ ಹೀರೆ, ಸೋರೆಗಳ ದರ ಹಾಕಬಹುದು. ಬಾವಿಯೂ ಹತ್ತಿರದಲ್ಲಿದೆ. ಆದರೆ, ಬೇಸಿಗೆಯಲ್ಲಿ ಮಾತ್ರ ನೀರು ಹೊತ್ತು ಹೊತ್ತು ಅವಳ ಬೆನ್ನು ಬಗ್ಗಿ ಹೋದೀತು' ಎಂದು ಸೀತಮ್ಮನವರನ್ನು ನೆನೆಸಿಕೊಂಡು ನುಡಿದರು.

'ಹಾಂ, ಅವಳನ್ನು ನೀರು ಹೊರಲು ಯಾಕೆ ಹಚ್ಚಬೇಕು? ಬೇಸಿಗೆಗೆ ನೇತ್ರಾವತಿಗೆ ಕಟ್ಟ ಕಟ್ಟಿ ನೀರು ತಂದ ಇಲ್ಲಿಯ ವರೆಗೆ. ತರಕಾರಿಗೂ ಆಗುತ್ತದೆ, ಕಸಿ ಗಿಡಗಳಿಗೂ ಆಗುತ್ತದೆ.'

'ನೀರು ಇಷ್ಟು ಎತ್ತರದ ವರೆಗೆ ಹರಿಯುವುದುಂಟಾ?'

'ನೋಡಬೇಕು' ಎಂದ ರಾಜ ತಂದೆಯೊಡನೆ ಎಲ್ಲೆಲ್ಲಿ ಕಸಿ ಗಿಡಗಳ ಹೊಂಡ ತೆಗೆಯಬೇಕು, ೨೦ ಅಡಿಗೊಂದು ನೆಟ್ಟರಾದೀತೆ ಹೇಗೆ, ಎಂದು ಚರ್ಚಿಸುತ್ತ ಹೆಜ್ಜೆಯಿಕ್ಕಿದ. ಆ ಮೇಲೆ ನೀರಿನ ಕಾಲಿವೆಯ ಸ್ಥಳ ನಿರೀಕ್ಷೆಗೂ ಅವರು ಆರಂಭಿಸಿದರು. ಹಿಂದಿದ್ದ ಪಾಳು ತೋಡಿನ ಗುರುತು ಹಿಡಿಯಲೂ ಯತ್ನಿಸಿದರು. ಸಾಧಾರಣ, ಅಂಗಳದ ಅಂಚಿನಲ್ಲೇ ಈ ನೀರಿನ ತೋಡು ಕಡಿಯಬೇಕೆಂದು ಅವರು ನಿರ್ಧರಿಸಿದರು. ಅಂಗಳದಿಂದ ಹೊಳೆಯ ಕಡೆ ಇಳಿಜಾರಾಗಿರುವುದರಿಂದ ಮನೆಯ ಈಚೆ ಮತ್ತು ಹೊಳೆಯ ದಿಕ್ಕಿಗಿರುವ ಭೂಮಿಯೆಲ್ಲಕ್ಕೂ ನೀರುಣಿಸಲು ಅನುಕೂಲವೇ. ತಂದೆ ಮಗನ ಈ ನಿರ್ಣಯ ಕೇಳಿದ ಸೀತಮ್ಮನವರ ಸಂತೋಷಕ್ಕೆ ಪಾರವಿಲ್ಲ. 'ಮುಸುರೆ ತಿಕ್ಕಲು ನೀರಾಯ್ತು. ಬಿಸಿ ನೀರಿನ ಹಂಡೆಗೂ ಅಲ್ಲಿಂದಲೇ ತುಂಬಿಸಬಹುದು. ಒಂದು ದೊಡ್ಡ ಕಲ್ಲನ್ನು ಹಾಕಿದರೆ ಬಟ್ಟೆ ಕೂಡಾ ಒಗೆಯಬಹುದು. ನೀರೆಳೆದು

ಎಳೆದು ನನ್ನ ಬೆನ್ನು ಈಗಲೇ ಬಗ್ಗಿದೆ. ತೋಡು ಬಂದ ಮೇಲಾದರೂ ನನ್ನ ಕಷ್ಟ ತಪ್ಪುವುದಲ್ಲ?' ಎಂದವರು ಈಗಲೇ ಹಿಗ್ಗಿದರು.

ಸುಗ್ಗಿಯ ಬೇಸಾಯ ಆರಂಭವಾದಾಗ ಮತ್ತೆ ಆಳುಗಳೊಬ್ಬರೂ ಬರಲಿಲ್ಲ ಕೆಲಸಕ್ಕೆ. ಅವರು ಬರದಿದ್ದರೂ ಕೆಲಸ ನಿಲ್ಲಲಿಲ್ಲ. ಗೋವಿಂದ ರಾಯರು ಏಳುವಾಗಲೇ ಕಾಫಿ ತಯಾರಾಗುವುದು. 'ಇದು ಮಲೆನಾಡು. ಕಾಲಡಿ ಹಾವುಗಳ ರಾಜ್ಯ. ಬಿಸಿಲು ಬೀಳಲಿ ಚಾಪೆಯಿಂದೇಳಲು' ಎಂದು ಅವರು ಎಷ್ಟು ಹೇಳಿದರೂ ಸೀತಮ್ಮ ಕೇಳಲಾರರು. 'ನನಗೇನಾಗಬೇಕು ಇನ್ನು?' ಎಂದು ಅವರು ಉತ್ತರ ಕೊಡುವರು. 'ಗಿಡವಾಗಿ ಬಗ್ಗದ್ದು ಮರ ವಾಗಿ ಬಗ್ಗೀತೊ?' ಎಂದು ಹಂಗಿಸಿ ಮಾತು ನಿಲ್ಲಿಸಿ ಕಾಫಿ ಕುಡಿಯುವರು. ಗೋವಿಂದರಾಯರು. ಅದನ್ನು ಮುಗಿಸುವುದರೊಳಗೆ ಕಟ್ಟಿಟ್ಟ ತರಕಾರೀ ಬೀಜಗಳ ಒಂದೊಂದೇ ಬಟ್ಟೆಯ ಗಂಟನ್ನು ಸೀತಮ್ಮ ತಂದು ಬಿಚ್ಚುವರು. 'ಈ ಋತುವಿಗೆ ಬಿತ್ತುವ ಬೀಜ ಯಾವುದು? ಬೇಸಿಗೆಗಾವುದು?' ಎಂಬುದನ್ನು ಪರಿಕಿಸಿ ಬೇಕಾದದ್ದನ್ನು ಗೋವಿಂದರಾಯರು ಪ್ರತ್ಯೇಕಿಸುವರು. ಅವರು ಹಾರೆ ಪಿಕ್ಕಾಸ್ ಹಿಡಿದು ಹೊರಟಾಗ ಬೀಜಗಳ ಗಂಟನ್ನಿಟ್ಟ ಬುಟ್ಟಿಯನ್ನು ಮೋಹನ ಹೊತ್ತು ತರುವ. ಅವರು ಉದ್ದಕ್ಕೆ ಮಣ್ಣನ್ನಗೆದು ಕೊಚ್ಚಿ ಅಗತೆ ಮಾಡಿದರೆ ಕೂಡಿಸಿಟ್ಟ ಬೂದಿಯನ್ನು ಸೀತಮ್ಮ ತಂದು ಸುರಿಯುವರು ಕೆಲಸಕ್ಕೆ ದನದ ಗೊಬ್ಬರ. ಹಟ್ಟಿಗೊಬ್ಬರ ಹಾಕಿದರೆ ಬಳ್ಳಿಯೇ ಸೊಕ್ಕಿ ಕೋಡು ಕಾಯಿಗಳು ಬಿಡದವೂ ಉಂಟು. ಆಳಸಂಡೆ ಕುಂಬಳಗಳ ದರೆ ಒತ್ತೊತ್ತಿಗೆ ಇರುವಂತೆಯೂ ಇಲ್ಲ. ಎಲ್ಲ ಗಾವುದ ಪಸರಿಸುವ ಲತೆಗಳು ಇವು. ಇವುಗಳ ಬಳ್ಳಿ ಹಬ್ಬಲು ಅಡರು ಹಾಸುವರು. ಅಡರಿನ ಮೇಲೆ ಬಳ್ಳಿ ಪಸರಿಸಿದಾಗ ಕುಂಬಳಕಾಯಿ ಇಳಿದು ಕೆಳಗಿನ ನೆಲಕ್ಕೆ ಮುಟ್ಟುತ್ತದೆ. ಆದರೆ ಪಡವಲು, ಹಾಗಲು, ಹೀರೆಗಳಿಗೆ ಚಪ್ಪರದ ಮರ್ಯಾದೆಯುಂಟು. ಈ ಬೀಜಗಳು ಮೊಳಕೆ ಒಡೆದು ಎರಡೆಲೆ ನಾಲ್ಕೆಲೆಯಾಗಿ ತಲೆ ಅತ್ತಿತ್ತ ಹೊರಳಿಸುವಾಗಲೇ ಕುಡಿಯ ಸಮೀಪ ದರೆಯ ಮೇಲೆ ಅಡರು ನೀಟ ಚುಚ್ಚಿ ಬಳ್ಳಿಯನ್ನು ಅದರ ಮೇಲೆ ಏರಿಸಿ ಬಿಡುವರು. ಅದು ಏರಿ ಒಣಗಿದ ಇಡೀ ಗೆಲ್ಲನ್ನು ಆಕ್ರಮಿಸಿದಾಗ ಮೇಲೆ ಚಪ್ಪರ ಸಿದ್ಧವಾಗುತ್ತದೆ. ಈ ಚಪ್ಪರಕ್ಕೆ ಅಂಥಾ ಸಡಗರವಿಲ್ಲ. ಬಳ್ಳಿಯ ದರದ ನಾಲ್ಕೂ ಬದಿಗಳಲ್ಲಿ ನಾಲ್ಕು ಕೋಲು ಹುಗಿದು ಮೇಲೆ ಅಡ್ಡ ನೀಟ ಕೋಲುಗಳನ್ನು ಕಟ್ಟಿ ಅದರ ಮೇಲೆ ಅಡರು

ಎಸೆಯುವುದು ಕ್ರಮ. ಬಳ್ಳಿ ಆ ಚಪ್ಪರವನ್ನೆಲ್ಲ ವ್ಯಾಪಿಸಿಬಿಡುತ್ತದೆ. ಹಾಗಲು, ಹೀರೆ, ಸೋರೆ, ಪಡವಲು ಕಾಯಿಗಳೆಲ್ಲ ಗಾಳಿಗೆ ಅತ್ತಿಂದಿತ್ತ ತೂಗುವುವು. ಅದನ್ನು ಕಂಡರೆ ಜನರಿಗೇಕೆ, ಬೆಂಡೆ ಬದನೆಗಳಿಗೂ ಹೊಟ್ಟೆಯುರಿ. 'ಬಳ್ಳಿಯಲ್ಲದಿದ್ದರೆ ಏನಾಯ್ತು? ಸುಂದರ ನಾರಿಯ ಕೈಬೆರಳುಗಳಂತಿರುವ ಈ ಕಾಯಿಗಳನ್ನು ನೋಡಿ' ಎಂದು ಅಣಕಿಸಿ ತೋರಿಸುವಂತೆ ನೀಟವಾಗಿ ಕಾಯಿಗಳನ್ನು ಪ್ರದರ್ಶಿಸುವುವು. ಯಾವ ಶೋಡಷೋಪಚಾರವೂ ಇಲ್ಲದ ಬಡ ಹರಿವೆ, ಮಣ್ಣನ್ನು ಕೊಚ್ಚಿ ಮೇಲೆ ಒಂದಿಷ್ಟು ಬೂದಿ ಚೆಲ್ಲಿ ಬೀಜಗಳನ್ನು ಹರಹಿ ನೀರು ಚಿಮುಕಿಸಿದರೆ ಸಾಕು, ಅಲ್ಪ ತೃಪ್ತಿಯಿಂದಲೇ ಗುಪ್ಪೆ ಗುಪ್ಪೆಯಾಗಿ ಸಸಿಗಳು ಮೂಡುವುವು.

ಹರಿವೆ ಇರಲಿ, ಕುಂಬಳ ಇರಲಿ, ಬೀಜ ನೋಡಿ ಫಲದ ಗುಣ ನುಡಿಯುವುದು ಕಠಿಣ. ಸಾಸಿವೆಗಿಂತಲೂ ಕಿರಿದಾಗಿರುವ ಅತಿ ನಯವುಳ್ಳ ಹರಿವೆಯ ಕರಿಬೀಜಗಳನ್ನು ಕೈಯ ಹಿಡಿಯಲ್ಲಿ ಹಿಡಿದರೆ ಎಡೆಯಲ್ಲಿ ಜಾರಿಕೊಳ್ಳಲೆತ್ನಿಸುತ್ತದೆ. ಬಿತ್ತಿದಾಗಲೇ ಈ ಅಣುವಿನ ಗುಣ ಗೊತ್ತು. ಬೀಜಗಳಿಗೊಂದೇ ಸ್ವರೂಪವಿದ್ದರೂ ಗಿಡಸೊಪ್ಪುಗಳ ಸ್ವರೂಪ ಒಂದೊಂದು ವಿಧ. ಕೆಲವು ಅಚ್ಚ ಹಸುರಾದರೆ ಹಲವಕ್ಕೆ ರಕುತದ ಬಣ್ಣ. ಆಳಸಂಡೆಯ ಕೋಡುಗಳಾದರೂ ಅಷ್ಟೆ. ಬದನೆಯಲ್ಲಿ ಉದ್ದ, ಗಿಡ್ಡ, ಅಚ್ಚಬಿಳಿ, ಪಚ್ಚೆ, ಕೆಂಪು ಗುಂಪು. ಅದರಲ್ಲೂ ಮುಟ್ಟಗುಳ್ಳದ ಶೋಭೆಯೇ ಬೇರೆ. ಅದರ ಕೊರಳಿಗೆ ಹಸುರು ಹಾರ. ಕುಂಬಳದಲ್ಲೂ ಅನೇಕ ವೈವಿಧ್ಯ. ತಂಬಿಗೆಯಷ್ಟು ಗಾತ್ರದ ರಾಮ ಕುಂಬಳ. ಕಾಶಿಕುಂಬಳ ಒಂದು ದುಂಡಗಿದ್ದರೆ ಮತ್ತೊಂದು ಉದ್ದ. ಅದರ ಎಳೆ ಕಾಯಿಯಂತೂ ಹುಳಿ, ಪಲ್ಯ, ಪಾಯಸಕ್ಕೆ ಉಪಯೋಗಿಸಲ್ಪಡುತ್ತದೆ. ಸೊಕ್ಕಿದ ಬಳ್ಳಿಯ ಎಳೆಕುಡಿಗಳನ್ನೂ ಗೋವಿಂದರಾಯರು ಬಿಡುವಂತಿಲ್ಲ. ಅವನ್ನು ಚಿವುಟಿ ತಂದು, 'ಬೇಳೆ ಹಾಕಿ ಹುಳಿ ಮಾಡು. ಬಹಳ ರುಚಿಯಾಗುತ್ತದೆ' ಎಂದು ಹೆಂಡತಿಗೆ ನುಡಿವರು. ಹೂಗಳು ಅರಳಿದಾಗ ಭೃಂಗಗಳು ಎರಗುವಂತೆ, ಕುಂಬಳದ ಹುಸಿ ಹೂಗಳು ಅರಳಿದೊಡನೆಯೇ ಅವುಗಳನ್ನೂ ಕಿತ್ತು ತಂದು 'ಹುಂ, ಉದ್ದಿನ ಬೇಳೆ ಹಾಕಿ ಗೊಜ್ಜುಮಾಡು. ಗೊಜ್ಜು ಪಸಂದಾಗುತ್ತದೆ' ಎಂದು ನುಡಿಯುವರು. ಮೋಹನ ಈ ಕುಂಬಳದ ಹೂಗಳ ಮಧ್ಯೆ ಇರುವ ಪರಾಗನಳಿಕೆಗಳನ್ನು ಒಂದೊಂದಾಗಿ ಕಿತ್ತು ಸೌಟಿನಲ್ಲಿ ತುಂಬಿಸಿ ಅದಕ್ಕೆ ಒಂದು ಚಮ್ಚೆ ಎಣ್ಣೆ ಹೊಯ್ದು ಬೆಂಕಿಯಲ್ಲಿ ಬೇಯಿಸಿ

ಮುಖಮಂಟಪಕ್ಕೆ ತಂದು ಒಂದೊಂದೇ ಬಾಯಿಗೆ ಹಾಕಿ ನಾಲಿಗೆ ಚಪ್ಪರಿಸು ತ್ತಾನೆ. ಹೆಚ್ಚು ಹುಸಿ ಹೂಗಳು ಜಗಲಿಯಲ್ಲಿ ಬಂದು ಬಿದ್ದ ದಿನ ಸೀತಮ್ಮ ನವರು ಪಾವು ಅಕ್ಕಿ ನೆನೆಹಾಕಿ ಕಡೆದು-ಈ ಹೂವಿನ ಪತ್ರೊಡೆ ಮಾಡುವುದೂ ಇದೆ. ಬೇಳೆ, ಅಳಸಂಡೆ, ಹೀರೆ, ಹಾಗಲುಗಳ ಬಳ್ಳಿ ತುಂಬಿದ್ದರೂ ಈ ಕುಡಿ ಮತ್ತು ಹೂಗಳನ್ನು ತಂದುದಕ್ಕೆ ಸೀತಮ್ಮನವರು ಆಕ್ಷೇಪಿಸುವುದುಂಟು— 'ಏನು ಅವಸರ ನಿಮಗೆ? ಬರಲಿ ರಾಜ. ಕೈಗೆ ಬಂದುದು ಬಾಯಿಗೆ ಬರಲು ಎಷ್ಟು ಹೊತ್ತು? ಯಾವಾಗಲಾದರೂ ನಾವೇ ಅಲ್ಲವೆ ತಿನ್ನುವವರು?' ಎಂದು.

ರಾಜ ಬಂದಾಗ ಈ ವಿಧ ವಿಧದ ವಿಪುಲ ಬದನೆ, ಕುಂಬಳಗಳನ್ನು ಕಂಡು ಬೆರಗಾದ. ಎಲೆಗಳನ್ನು ಹೊದಿಸಿ ಮುಚ್ಚಿಟ್ಟಿದ್ದ ಒಂದು ಕುಂಬಳ ವನ್ನು ಗೋವಿಂದರಾಯರು ತೋರಿಸಿ, 'ಇಕೋ, ಇದು ಮುಂದಿನ ವರುಷಕ್ಕೆ ಬೀಜದ ಕಾಯಿ' ಎಂದರು. ಮಿಡಿತೆ, ಬಂಬೂಚುಗಳು ಎರಗಿ ಕೊರೆದು ಕೆಡಿಸ ದಂತೆ ಬಟ್ಟೆ ಸುತ್ತಿದ್ದ ಬೇಂಡೆಯನ್ನೂ ಮಗನ ಗಮನಕ್ಕೆ ತಂದುಕೊಟ್ಟರು. 'ಅಪ್ಪಯ್ಯ, ಎಷ್ಟು ದೊಡ್ಡದಾಗಿವೆ! ಇವನ್ನು ಪ್ರದರ್ಶನದ ಕಾಲಕ್ಕೆ ಮಂಗ ಳೂರಿಗೆ ಕಳಿಸಿದರೆ ಪ್ರೈಜ್ ದೊರೆತೀತು! ಏನು ತಿಂದು ಇಷ್ಟು ಸೊಕ್ಕಿದೆ?' ಎಂದು ರಾಜ ಕಣ್ಣುಗಳನ್ನು ಅರಳಿಸಿದ.

'ಏನು ಹಾಕಿದ್ದೇನೆ ನಾನು? ಒಂದೊಂದು ಹಿಡಿ ಬೂದಿ. ಎಲ್ಲ ಈ ಮಣ್ಣಿನ ಗುಣ. ಬಹಳ ಈಟ್ ಉಂಟು ಈ ಮಣ್ಣಿನಲ್ಲಿ. ಬರೇ ಮಣ್ಣು ಕೆದರಿ ಬೀಜ ಬಿತ್ತಿದುದಕ್ಕೆ ಇಷ್ಟಾಗಿದೆ. ಇನ್ನು ಸರಿಯಾಗಿ ಗೊಬ್ಬರ, ಸುಡುಮಣ್ಣು ಹಾಕಿದರೆ ಅದರ ಕಥೆಯೇ ಬೇರೆಯುಂಟು. ಅಕ್ಕಿಮುಡಿಯಷ್ಟು ದೊಡ್ಡ ಕುಂಬಳಕಾಯಿ ಆಗುವುದು ನಿಸ್ಸಂಶಯ.'

'ಮುಂದಿನ ವರುಷಕ್ಕೆ ಸುಡುಮಣ್ಣು ಮಾಡೋಣ. ಹೇಗೂ ಕಾಡು ಕಡಿದ ಅಡವಿ ಬಿದ್ದಿದೆ ರಾಶಿ. ಈ ಬೇಸಿಗೆಯಲ್ಲಿ ಸುಡುಮಣ್ಣು ತಯಾರಿಸಿದರೆ ಸರಿ' ಎಂದು ರಾಜ ಭವಿಷ್ಯತ್ತಿನ ಕಲ್ಪನೆಯಲ್ಲಿ ತಲ್ಲೀನನಾದ. ಗೋವಿಂದ ರಾಯರು ಒಂದೊಂದನ್ನೇ ಮುಟ್ಟೆ, ಒತ್ತಿ, ಕಿಣಕಿ, ಬೇಂಡೆ, ಹಾಗಲ, ಹೀರೆ ಬದನೆಗಳನ್ನು ಕೊಯ್ಯತೊಡಗಿದರು. ಅವನಿದ್ದಷ್ಟು ಹೊತ್ತು ಮಧ್ಯಾಹ್ನ ಒಂದೊಂದರ ಬೇರೆ ಬೇರೆ ಹುಳಿ ಪಲ್ಯ ಗೊಜ್ಜುಗಳಾದರೆ, ರಾತ್ರಿ ಊಟಕ್ಕೆ ಇನ್ನೊಂದೊಂದರ ಅಡಿಗೆಯಾಯ್ತು. 'ಒಂದು ಕ್ಷಣದೊಳಗೆ ಬೆಂದಿತು'

ಎಂದು ಸೀತಮ್ಮನವರು ಗುಣಗಾನ ಮಾಡಿದರೆ, ‘ಇಷ್ಟು ದೊಡ್ಡದಿದ್ದರೂ ಬದನೆಯಲ್ಲಿ ಇನ್ನೂ ಬೀಜಗಳೇ ಇಲ್ಲ’ ಎಂದು ರಾಜ ವರ್ಣಿಸಿದ. ‘ಕರಾವಳಿಯಲ್ಲಾಗುತ್ತಿದ್ದರೆ ಒಂದೊಂದು ಹೀರೆಕಾಯಿಗೆ ಒಂದೊಂದಾಣೆ ಬರುತ್ತಿತ್ತು. ಇಲ್ಲಿ ಪೇಟೆಯೂ ಹತ್ತಿರವಿಲ್ಲ’ ಎಂದು ಗೋವಿಂದರಾಯರು ನುಡಿದರು. ರಾಜ ನಕ್ಕು, ‘ನಸ್ಯದಂಗಡಿ ಮಾಡಿ ನೀವು ಹಣ ಗಳಿಸಿದ್ದಾಯಿತು ಅಪ್ಪಯ್ಯ. ಇನ್ನು ತರಕಾರಿ ಮಾರಿ ಹಣ ಸಂಪಾದಿಸುವುದು ಉಳಿದಿದೆ’ ಎಂದ. ನಸ್ಯದಂಗಡಿಯ ಈ ರಹಸ್ಯ ಅವನಿಗೆ ತಿಳಿದುದನ್ನು ಕೇಳಿ ಗೋವಿಂದರಾಯರು ಚಕಿತರಾದರು. ರಾಜ ಉಡುಪಿಗೆ ಬಂದಾಗ ಎಲ್ಲೋ ಇವಳೇ ಹೇಳಿರಬೇಕು ಎಂದು ಭಾವಿಸಿ ಅರ್ಥಗರ್ಭಿತ ದೃಷ್ಟಿಯಿಂದ ಹೆಂಡತಿಯನ್ನು ನೋಡಿದರು. ಸೀತಮ್ಮ ಕಂಡೂ ಕಾಣದವರಂತೆ ಮನೆಗೆ ನಡೆದರು.

ಮರುದಿನ ರಾಜ ಮಂಗಳೂರಿಗೆ ಹೊರಟಾಗ ಗೋವಿಂದರಾಯರು ತುಂಬಾ ತರಕಾರಿ ಕೊಯ್ದಿಟ್ಟರು. ಬೋರ ಅದನ್ನು ಮುಂಡಾಜೆಯ ವರೆಗೆ ಹೊತ್ತು ಹಿಂಬಾಲಿಸಬೇಕೆಂದೂ ಆಜ್ಞೆಯಾಯಿತು. ಮನೆಯಿಂದ ರಸ್ತೆಯ ವರೆಗೆ ತೆರಳಿದ್ದ ರಾಜ ಮತ್ತೆ ಹೊರಳಿ ಬಂದು ಅಗಳಿನ ಬಳಿಯಲ್ಲೇ ನಿಂತು ಕೂಗಿ ಹೇಳಿದ ತಂದೆಗೆ— ‘ಅಪ್ಪಯ್ಯ, ಮಂಗಳೂರಿಂದ ಬಂದಾಗ ಕಸಿ ಗಿಡಗಳನ್ನು ತಂದಿದ್ದೆ. ಹೊತ್ತುಕೊಂಡು ಬರಲು ಆಗಲಿಲ್ಲ. ಮುಂಡಾಜೆಯಲ್ಲುಂಟು. ಬೋರನೊಡನೆ ಕಳಿಸುತ್ತೇನೆ. ಎಲ್ಲಿ ಬೇಕಾದಲ್ಲಿ ನೆಟ್ಟುಬಿಡಿ. ನನ್ನನ್ನು ಕಾಯುವುದು ಬೇಡ.’

೭

ಮಳೆಗಾಲ ಮುಗಿದು ಬಿಸಿಲು ನಿಸರ್ಗದ ಹಸುರು ಮಣೆಯ ಮೇಲೆ ಓಲಾಡಿತು. ಹುಲ್ಲಿನ ಎಸಳುಗಳು ಬಸವಳಿದುವು. ಹಣ್ಣೆಲೆಗಳು ಉದುರಿ ಒಣಗಿದವು. ಮೊಳ ಉದ್ದದ ಅಳಸಂಡೆಯ ಕೋಡುಗಳು ಗೇಣುದ್ದವಾದುವು. ಬದನೆ, ಕೆಸುವಿನ ಮಿಳ್ಳೆಯಷ್ಟಾಯಿತು. ಹೀರೆಯ ಬಳ್ಳಿ ಸುಟ್ಟು ಚಪ್ಪರದ ಅಡರುಗಳು ಕಾಣಿಸಿದುವು. ಕುಂಬಳದ ಕುಡಿ ಮುರುಟುಗಟ್ಟಿತು. ಕಸಿಮಾವಿನ ಗಿಡವೂ ಬಾಡಿ ಎಲೆಗಳು ನೆಲಕ್ಕೆ ಬಾಗಿದುವು. ನೆಲ ಒಣಗಿದೆ. ಗೋವಿಂದ

ರಾಯರ ನಾಲಿಗೆಯೂ ಒಣಗತೊಡಗಿದೆ. ಒಳ್ಳೆಮೆಣಸಿನ ಬಿಸಿನೀರಿಗೆ ಜೀರಿಗೆ ಪುಡಿ ಬೆರಸಿ ಕಷಾಯ ಮಾಡಿ ಕುಡಿದರೂ ತೃಪ್ತಿಯಿಲ್ಲ. ಕುಡಿದ ಮರುಕ್ಷಣದಲ್ಲೇ ಬೆವರಾಗಿ ಒಡೆದು ಇಳಿದುಬಿಡುತ್ತದೆ. ಮೈ ಮೋರೆ, ಕಂಕುಳನ್ನು ಬೈರಾಸಿನಿಂದ ಎಷ್ಟು ಒರಸಿಕೊಂಡರೂ ಸಾಲದು. ಬಾಯಾರಿಕೆ ಕುಡಿದು ಕುಡಿದು ಬಾವಿ ಬತ್ತಿತೋ ಎಂಬಂತೆ ನೀರು ಒಂದೊಂದೇ ಮೊಳ ಇಳಿಯಿತು. 'ತಳ ಸೇರಲು ಇನ್ನು ಬಹಳ ಕಾಲವಿಲ್ಲ. ಮತ್ತೆ ನೇತ್ರಾವತಿಯೇ ಗತಿ. ನದಿಯಿಂದ ತಲೆಯ ಮೇಲೆ ನೀರು ಹೊತ್ತು ತರುವ ವರೆಗೆ ನೀವು ಕಟ್ಟ ಕಟ್ಟಿಸುವುದಿಲ್ಲ!' ಎಂದು ಸೀತಮ್ಮ ಎಚ್ಚರಿಸಿದ್ದರಿಂದ ಗೋವಿಂದರಾಯರು ಕಾಲಿವೆ ಕಟ್ಟಗಳ ಕೆಲಸಗಳಿಗೆ ಕೈಯಿಕ್ಕಿದರು.

ಕಾಲಿವೆ, ಮನೆಯ ತೆಂಕು ಕಾಡಿನ ಬದಿಯಿಂದ ಕೊಟ್ಟಿಗೆ ಅಂಗಳಗಳ ಅಂಚಿನಲ್ಲಿ ಬಡಗು ಮುಖವಾಗಿ ಕಡಿಯಲ್ಪಟ್ಟಿತು. ತೋಡು ತಮ್ಮ ತೋಳಿನಷ್ಟು ಅಗಲ, ಮೊಣಗಂಟಿನ ವರೆಗೆ ಆಳವಾದರೆ ಸಾಕೆಂದು ಆಳು ಗಳಿಗೆ ತಿಳಿಸಿದರೆ 'ಅಯ್ಯ, ಒಂದು ಕೋಲಿನಲ್ಲಿ ಅಗಲ, ಆಳದ ಚಡಿಮಾಡಿ ಕೊಡಿ. ನನುಗೆ ಗೊತ್ತಾಗಲಿಕ್ಕಿಲ್ಲ' ಎಂದು ಆಳುಗಳು ಜಾಗ್ರತೆ ವಹಿಸಿ ದರು. 'ತೋಡು ಅಂಕುಡೊಂಕು ಸಂಕಪಾಲ ಆಗಬಾರದು' ಎಂದು ರಾಯರು ಮೊದಲೇ ಹೇಳಿದ್ದರಿಂದ ಬೋರ ಕಾಡಿಗೆ ತೆರಳಿ, ಬೀಳುಗಳನ್ನು ತರಿದು ಎಲೆಗಳನ್ನು ಹರಿದು ಸವರಿ ಸುರುಳಿಯಾಗಿ ಭುಜದ ಮೇಲೆ ಹಾಕಿಕೊಂಡು ಬಂದು ಬಿಡಿಸಿ, ಕೋಲಿನ ಅಳತೆಗೆ ಸರಿಯಾಗಿ ಎರಡು ಗೆರೆಗಳನ್ನು ಬರೆದಂತೆ ಗೂಟ ಬಡೆದು ಬೀಳು ಕಟ್ಟಿದ. ತೋಡು ಕಡಿವ ಸ್ಥಳ ಹಾಗೂ ಆ ಸಾಲಿನ ಇಕ್ಕೆಲಗಳಲ್ಲಿದ್ದ ಪೊದೆಪೊದರುಗಳನ್ನೂ ಹುಲ್ಲು ಗಿಡಗಳನ್ನೂ ಬೋರ ಕಡಿ ಯುತ್ತ ಸವರುತ್ತ ಹೋದಂತೆ, ತುಕ್ರ ಪಿಕ್ಕಾಸಿನಿಂದ ಮಣ್ಣನ್ನಗೆಯತೊಡ ಗಿದ. ಬೆನ್ನು ಸ್ವಲ್ಪ ಬಗ್ಗಿದ್ದ ಅಹ್ಮದ್ ಬ್ಯಾರಿ ಅಂಗೈಗೆ ನಾಲಿಗೆನೀರು ಉಗುಳಿ, ತಿಕ್ಕಿ, ಅಗೆದ ಮಣ್ಣನ್ನು ಹಾರೆಯಿಂದ ಗೋರಿ, ತೋಡಿನ ಇಕ್ಕೆಡೆ ಗಳಿಗೆ ಎಸೆದ. ಒಗೆದ ಮಣ್ಣು ಪುನಃ ತೋಡಿಗೆ ಜರೆದು ಬೀಳದಂತೆ ಗೋವಿಂದರಾಯರು ಮೋಹನನೊಂದಿಗೆ ತೋಡಿನ ದಂಡೆಯ ಮೇಲೆ ಚಕ ಚಕ ಮೆಟ್ಟತೊಡಗಿದರು. 'ಹಾಗೆ ತಕ ತಕ ಕುಣಿಯಬೇಡವೋ. ಕಲ್ಲಿನ ಚೂಪು ಅಂಗಾಲಿಗೆ ನೆಟ್ಟೀತು' ಎಂದು ನಡುನಡುವೆ ಮೋಹನನಿಗೂ ಅವರು ಗದ್ದರಿಸುತ್ತಿದ್ದರು.

ಆದರೆ, ಅಗೆದ ಎಲ್ಲ ಕಡೆಗಳಲ್ಲೂ ಕಲ್ಲುಗಳಿರಲಿಲ್ಲ. ಕೆಲವು ಕಡೆ ಬಾವೆ ಮಣ್ಣು. ಒಮ್ಮೊಮ್ಮೆ ಪಿಕ್ಕಾಸಿನ ಮೊನೆ ದೊಡ್ಡ ಕಲ್ಲುಗಳಿಗೆ ಟಣ್ ಎಂದು ಬಡೆಯುತ್ತಿತ್ತು. ತುಕ್ರ ಮಣ್ಣು ಕೆರೆಯಲು ಎತ್ತಿ ಹಾಕಿದಾಗ ಹಾರೆಯ ಬಾಯಿ ಮಡಿಸಿಹೋಯ್ತು. ದೊಡ್ಡ ಕಲ್ಲಿನ ಮೇಲೆ ಹಾರೆಯ ತಗಡನ್ನಿಟ್ಟು ಮತ್ತೊಂದು ಕಲ್ಲಿನಿಂದ ಅದನ್ನು ಗುದ್ದಿ ಆವನು ಸರಿ ಮಾಡಿದುದೂ ಉಂಟು. ಹಟ್ಟಿಯ ಹಿಂಬದಿ ಕಡಿದ ಕಾಡಿನ ಭಾಗದಲ್ಲಿ ತೋಡು ಕಡಿದಾಗ ದೊಡ್ಡ ಮರದ ಬುಡವೇ ಇದಿರಾಯಿತು. ಅದನ್ನು ಬೇರು ಸಹಿತ ಅಗೆವ ಗೋಜಿಗೆ ಹೋಗದೆ ಅದರ ಬಳಿಯಲ್ಲೇ ತಿರುಗಿಸಿದರು. ಅಡ್ಡ ಬಂದ ಸಣ್ಣ ದೊಡ್ಡ ಬೇರುಗಳನ್ನು ಮಾತ್ರ ಬೋರ ಕಡಿಯದೆ ಬಿಡಲಿಲ್ಲ. ಹಳೇ ತೋಡು ಅವರಿಗೆ ಸಿಕ್ಕಿದಾಗ ಪಿಕ್ಕಾಸಿನ ಅವಶ್ಯಕತೆಯೇ ಬೀಳಲಿಲ್ಲ. ಕೆಲವು ಮಡಿಕೆಯ ಚೂರುಗಳೂ ದೊರೆತುವು. ಮಡಿಕೆ ಚೂರು ಸಿಕ್ಕಿದಾಗ ಗೋವಿಂದರಾಯರ ಕಣ್ಣುಗಳು ಅರಳುತಿದ್ದವು. 'ಎಲ್ಲಿ? ಎಲ್ಲಿ?' ಎಂದವರು ಓಡಿ ಬಂದು ಸುತ್ತಲೂ ನೋಡುತ್ತಿದ್ದರು. 'ಬರಿ ಚೂರು ಮಾತ್ರವಾ? ಮಡಿಕೆಯೇ ಇತ್ತಾ? ಅಲ್ಲೇ ಸುತ್ತುಮುತ್ತು ಅಗೆ ನೋಡೋಣ' ಎಂದು ಹೇಳುವರು. ಮಡಿಕೆಗಳಲ್ಲಿ ಹುಗಿದಿಟ್ಟ ಹಣ ತುಂಬಿರಬೇಕೆಂದು ಅವರ ಅಂತರಂಗದ ಆಶೆ. ಆದರೆ ತೋಡನ್ನು ತಂದು ಕಟ್ಟ ಕಟ್ಟುವಲ್ಲಿ ಹೊಳೆಗೆ ಮುಟ್ಟಿಸುವ ವರೆಗೂ ಮಕ್ಕಾಯಿ ಮೀನಿನ ಚಿಪ್ಪು, ಒಡೆದ ಗಾಜಿನ ಬಳೆಗಳು ಮತ್ತು ತುಕ್ಕು ಹಿಡಿದ ಕಬ್ಬಿಣದ ತುಂಡುಗಳು ಹೊರತು ಮಿಕ್ಕದ್ದೇನೂ ಅವರ ಕಣ್ಣಿಗೆ ಬೀಳಲಿಲ್ಲ. 'ನಮ್ಮನ್ನು ಕಂಡಾಗ ಅದು ಮಾಯ. ಪಾಪಿ ಹೋದಲ್ಲಿ ಮೊಳಕಾಲು ನೀರು' ಎಂದು ಅವರು ತಮ್ಮ ಮನಸ್ಸಿನ ಅತ್ಯಾಶೆಯನ್ನು ಮುರಿದಿಕ್ಕಿದರು.

ಕಟ್ಟ ಕಟ್ಟುವ ಸ್ಥಳದಲ್ಲೂ ಮೊಳಕಾಲು ನೀರೇ. ಮಧ್ಯೆ ಕುದುರು ಇದ್ದು ಹೊಳೆ ಇಲ್ಲಿ ಇಬ್ಭಾಗವಾಗಿ ಹರಿಯುತ್ತಿದ್ದರೂ ಅಷ್ಟೇ ನೀರು. ಬೇಸಿಗೆಯಲ್ಲಿ ಇಷ್ಟು ನಿಜ. ಆದರೆ ಮಳೆಗಾಲದಲ್ಲಿ ನೆರೆ ಬಂದಾಗ ಹೊಳೆ ತುಂಬಿ, ಕುದುರಿನ ಮೇಲೂ ಹರಿದು ಹೊಳೆ ಏಕಪ್ರಕಾರವಾಗುತ್ತದೆ. ಆಗ ದ್ವೀಪದಲ್ಲಿ ಬೆಳೆದ ಮರಗಳು ನೀರ ಮೇಲೆ ನಿಂತ ಮಾಯಾಲೋಕದ ಮರಗಳಂತೆ ತೋರುತ್ತವೆ. ಈಗ ಮಾತ್ರ ಮರಗಳ ಬುಡದಲ್ಲಿ ನೆಲದ ಮೇಲೆ ಹರಿದ ದೊಡ್ಡ ದೊಡ್ಡ ಬೇರುಗಳೂ ಗೋಚರಿಸುತ್ತವೆ. ಬೇರುಗಳೆಡೆಯಲ್ಲಿದ್ದ ಮಣ್ಣು ಕೊಚ್ಚಿಹೋಗಿದ್ದುದರಿಂದ ಪೊಟರೆಗಳೂ ಇವೆ. ಈ ಕುದುರನ್ನು

ಕೊಚ್ಚಿಕೊಂಡು ಹೋಗಲು ನೆರೆನೀರಿಗೂ ಶಕ್ಯವಾಗಿಲ್ಲ. ಎದುರಾಗಿ ದೊಡ್ಡ ಬಂಡೆಗಲ್ಲುಗಳಿದ್ದುದರಿಂದ ನೀರಿನ ತೆರೆಗಳೆಲ್ಲ ಅವಕ್ಕೆ ಬಡೆದು ಕವಲೊಡೆದು ಹರಿದುವು. ಆದುದರಿಂದ ನದಿ ಇಬ್ಭಾಗವಾಯಿತು ಸ್ವಲ್ಪ ದೂರದ ವರೆಗೆ. ಇಬ್ಭಾಗವಾಗಿ ಭರದಿಂದ ಹರಿದಾಗ ತಳದಲ್ಲಿದ್ದ ಉಸುಕು ಮಣ್ಣುಗಳೊಂದನ್ನೂ ಉಳಿಸಲಿಲ್ಲ. ಹೀಗಾಗಿ ತಳದಲ್ಲಿ ಬಂಡೆಗಲ್ಲುಗಳು ಕೋರೆಹಲ್ಲುಗಳಂತೆ ಮೂಡಿವೆ. ಬೇಸಿಗೆಗೆ ಇವು ಹೊರಗೆ ತಲೆ ಎತ್ತಿ ಬಿಸಿಲು ಕಾಯಿಸುತ್ತವೆ. ಮಡಿವಾಳ ಹಕ್ಕಿ ಈ ಕಲ್ಲುಗಳ ಮೇಲೆ ಕುಳಿತು ಕುಣಿದು ಹಾತೆ ಮಿಡಿತೆಗಳನ್ನು ಹಿಡಿದು ತಿಂದು ಪುಚ್ಛವನ್ನು ಯಾವಾಗಲೂ ಕುಣಿಸುತ್ತದೆ. ಮೀನ್ಚುಳ್ಳಿಯೂ ಕಲ್ಲಿನ ಮೇಲೆ ಕುಳಿತೇ ಮೀನು ನುಂಗುವುದು. ಅದಕ್ಕೆ ಮೀನಿನ ಆಶೆ ಬಹಳ. ನೀರಿನ ಮೇಲೆ ರೆಕ್ಕೆ ಬಡೆಯುತ್ತ ಪಲ್ಟಿ ಹೊಡೆಯುತ್ತ ನೀರೊಳಗೆ ನುಸುಳಿ ಬರುವ ಮೀನನ್ನೇ ನೋಡುತ್ತಿರುತ್ತದೆ ಹರಿತ ದೃಷ್ಟಿಯಿಂದ. ಅದರ ಡೇಗೆಕಣ್ಣಿಗೆ ಮೀನು ಕಾಣಿಸಿದೊಡನೆಯೇ ಬಾಣದಂತೆ ನೀರೊಳಗೆ ನುಸುಳಿ ಕೊಕ್ಕಿನಲ್ಲಿ ಆದುಮಿ ಬಂಡೆಗಲ್ಲಿನ ಮೇಲೆ ಕುಳಿತು ನುಂಗುತ್ತದೆ. ಕಲ್ಲುಗಳ ಮೇಲೆ ಕಾಲುಗಳನ್ನಿಡುತ್ತ ಗೋವಿಂದರಾಯರು ಬಂದಾಗ ಬಿಕ್ಕಳಿಸುವ ಮೀನ್ಚುಳ್ಳಿಗಳನ್ನು ನೋಡಿ, ‘ಏನು? ನಿಮ್ಮ ಗಂಟಲಲ್ಲಿ ಮೀನಿನ ಮುಳ್ಳು ಸಿಕ್ಕಿಕೊಂಡಿತಾ?’ ಎಂದು ಕೇಳಿದರು. ಬಣ್ಣಬಣ್ಣದ ರೆಕ್ಕೆಗಳನ್ನು ಅಗಲಿಸಿ ಅವು ಬೇರೆ ಕಡೆ ಹಾರಿದವು.

ಕಟ್ಟೆ ಕಟ್ಟಲು ಕಲ್ಲುಗಳನ್ನು ಕಡಿಸಿ ತರಿಸಬೇಕಾದ ಅವಶ್ಯಕತೆಯೂ ಇರಲಿಲ್ಲ. ನದಿಯಲ್ಲೇ ಕಲ್ಲುಗಳು ಹೇರಳವಾಗಿ ಬಿದ್ದಿದ್ದುವು. ತಳಕ್ಕೆ ದೊಡ್ಡ ದೊಡ್ಡ ಕಲ್ಲುಗಳು. ಕಬ್ಬಿಣದ ಸರಳುಗಳಿಂದ ಮೂವರೂ ಕೂಡಿ ಜಾರಿಸಿ, ಉರುಳಿಸಿಕೊಂಡು ಬಂದು ಹೊಳೆಗಡ್ಡವಾಗಿ ಸಾಲಾಗಿ ಹಾಸಿದರು. ಆ ಮೇಲೆ ಮನೆಯ ಗೋಡೆಯ ತಳಕಟ್ಟಿನಂತೆ ದೊಡ್ಡ ಕಲ್ಲುಗಳ ಮೇಲೆ ಕಲ್ಲು ಕಟ್ಟಿಕೊಂಡು ಬಂದರು. ಒಂದು ಮಾರು ಅಗಲದ ಕಟ್ಟೆ. ಕಲ್ಲುಗಳ ಮೇಲೆ ಕಲ್ಲು, ಆಚೀಚೆ ದೊಡ್ಡ ಕಲ್ಲುಗಳು. ಅವುಗಳ ಮಧ್ಯೆ ಸಣ್ಣ ಸಣ್ಣ ಕಲ್ಲುಗಳನ್ನು ಬುಟ್ಟಿಗಳಲ್ಲಿ ತಂದು ಸುರಿದರು. ಆ ದಂಡೆಯಿಂದ ಕುದುರಿನ ವರೆಗೆ, ಕುದುರಿನಿಂದ ಈಚೆಯ ದಂಡೆಯ ವರೆಗೆ ಕಲ್ಲಿನ ಆಣೆಕಟ್ಟು ಮುಗಿದ ಮೇಲೆ ಅದರ ನೀರ ಮಗ್ಗುಲಲ್ಲಿ ಬುಟ್ಟಿಬುಟ್ಟಿಯಾಗಿ ಸಾವಿರಾರು ಬುಟ್ಟಿ ಮಣ್ಣನ್ನು ಸುರಿಯುತ್ತ ಬಂದರು. ಬೋರ ಮಣ್ಣನ್ನಗೆದುಕೊಟ್ಟಂತೆ ಶುಕ್ರ ಹೊತ್ತ.

ಅಹ್ಮದ್ ಬ್ಯಾರಿ ನೀರಲ್ಲಿಳಿದು ಕಟ್ಟದ ಕಲ್ಲುಗಳನ್ನು ಎರಡೂ ಕೈಗಳಿಂದ ಹಿಡಿದುಕೊಂಡು ಸುರಿದ ಮಣ್ಣು ಗಟ್ಟಿಯಾಗುವಂತೆ ಕಾಲಿನಲ್ಲಿ ತುಳಿದ. ಕಲ್ಲು ಕಟ್ಟದ ಮುಂದೆ ಮಣ್ಣಿನ ಗೋಡೆಯನ್ನೂ ನಿರ್ಮಿಸಿದಂತಾಯಿತು. ಆ ಮಣ್ಣಿನ ಗೋಡೆ ಒಡೆದು ಕಲ್ಲಿನ ಕಟ್ಟವನ್ನು ನೂಕುವ ಶಕ್ತಿ ಬೇಸಿಗೆಯ ನೀರಿನ ಪ್ರವಾಹಕ್ಕಿಲ್ಲ. ಆದರೂ ಗಾಳಿ, ನೀರು, ಬೆಂಕಿಗಳ ಪ್ರತಾಪ ದೊಡ್ಡದು. ಹಾಗೆಯೇ ಅಥವಾ ಹೀಗೆಯೇ ಎಂದು ಹೇಳುವುದು ಕಠಿನ. ಆದುದರಿಂದ ಉಕ್ಕಿದ ನೀರು ಕಟ್ಟವನ್ನು ಮೀರಿ ಹರಿಯದಂತೆ, ಪೊಟರೆಗಳಲ್ಲಿ ಹರಿದು ಕಟ್ಟ ಒಡೆಯದಂತೆ ಒಂದು ಮಗ್ಗುಲಲ್ಲಿ ದೊಡ್ಡ ಬಾಂದ್ ತೆರೆದಿಡುವರು. ಕೆಲವು ಕಲ್ಲುಗಳನ್ನುರುಳಿಸಿ ಆ ಬಾಗಿಲನ್ನು ದೊಡ್ಡದನ್ನಾಗಿಯೂ ಮಾಡಲು ಸಾಧ್ಯ. ಕಡು ಬೇಸಿಗೆಯಲ್ಲಿ ಚಿಕ್ಕದನ್ನಾಗಿಯೂ ಮಾಡುವರು. ಮಳೆಗಾಲ ಆರಂಭವಾದಾಗ ಅಲ್ಲಲ್ಲಿ ಕಟ್ಟದ ಕಲ್ಲುಗಳನ್ನು ಹೊಳೆಗೆ ಉರುಳಿಸಿ ಬಿಡುವರು. ಉಳಿದ ಕಲ್ಲು ಮಣ್ಣುಗಳನ್ನು ಮಳೆಗಾಲದ ನೆರೆಯ ನೀರು ಉಳಿಸುವುದಿಲ್ಲ. ಮತ್ತೆ ಬೇಸಿಗೆಗೆ ಮೊದಲಿನಂತೆ ಕಟ್ಟುವುದು ಮಲೆನಾಡಿನ ಈ ಭಾಗದಲ್ಲಿ ನಡೆದು ಬಂದ ಪದ್ಧತಿ. ಗೋವಿಂದರಾಯರು ಇದನ್ನರಿಯರು. ಆದರೆ ಬೋರ, ತುಕ್ರ, ಅಹ್ಮದರು ತಿಳಿಯದವರಲ್ಲ. ಕಟ್ಟ ಮುಗಿದ ಮೇಲೆ ಸಂಜೆ ಹತ್ಯಾರುಗಳನ್ನು ಹೊತ್ತು ಮನೆಗೆ ಮರಳಿದಾಗ 'ಅಯ್ಯಾ, ಬೆಳಿಗ್ಗೆಯೊಳಗೆ ನೀರು ಉಕ್ಕಿ ಮನೆಯ ಅಂಗಳದವರೆಗೆ ಹರಿಯದೇ ಇರಲಿಕ್ಕಿಲ್ಲ' ಎಂದು ತಿಳಿಸಿದರು.

ಗೋವಿಂದರಾಯರು ರಾತ್ರಿ ಊಟವಾದ ಮೇಲೆ ಲಾಟಾನು ಹಿಡಿದು ಕೊಂಡು ಅಂಗಳದ ಅಂಚಿಗೆ ಬಂದು ಇಣಿಕಿದರು. ಆ ಮೇಲೆ ತೋಡಿಗೆ ಇಳಿದು ನೋಡಿದರು. ಸ್ವಲ್ಪ ತೋಡಿನಲ್ಲೇ ನಡೆದರು. ಇಲ್ಲ; ನೀರು ಬಂದಿರಲಿಲ್ಲ. ಅವರ ಲವಲವಿಕೆ ಕಂಡು ಸೀತಮ್ಮನವರಿಗೆ ಸ್ವಲ್ಪ ಸಿಟ್ಟು ಬಂದಿತು. 'ಕತ್ತಲೆಗೆ ಯಾಕೆ ಅಲ್ಲೆಲ್ಲ ಕಾಲಿಡುತ್ತೀರಿ? ತೋಡಿನಲ್ಲಿ ಹಾವು ಗೀವು ಇದ್ದೀತು ಬನ್ನಿ. ಬೆಳಿಗ್ಗೆ ನೋಡೋಣ. ನೀರು ಬಂದರೆ ಭೂಮಿಯೇ ಎಲ್ಲವನ್ನೂ ಕುಡಿದು ಬಿಡಲಿಕ್ಕಿಲ್ಲ' ಎಂದು ಬಾಯ್ದೆರೆದರು. ರಾತ್ರಿ ಮಲಗುವಾಗಲೂ ಮುಖಮಂಟಪಕ್ಕೆ ಬಂದು ಮೆಲ್ಲಗೆ ಕಿವಿ ನಿಗುರಿಸಿದರು. ಸುಳು ಸುಳು ನೀರು ಹರಿದ ಶಬ್ದ ಆಲಿಸಲು ಅವರಿಗೆ ಆತುರ. ಆದರೆ ಕಾಲಿವೆಯಲ್ಲಿ ನೀರು ಹರಿದಾಗ ಅದರ ಸುಳಿವೇ ತಿಳಿಯುವುದಿಲ್ಲ. ಸುಳಿವಿಲ್ಲದೆ ಅದು ರಾತ್ರಿ

ಹರಿದು ಬಂತು. ಮುಂಜಾನೆ ಸೀತಮ್ಮನವರು ಎದ್ದು ಬಂದಾಗ ಕಾಲಿವೆಯಲ್ಲಿ ನೀರು ತುಂಬಿ ಗದ್ದೆಗಳಿಗೆ ಹರಿಯುತ್ತಿತ್ತು. ಅನೇಕ ಗದ್ದೆಗಳಲ್ಲಿ ನೀರು ಪಾದ ಮುಳುಗುವವರೆಗೆ ಏರಿತ್ತು. ಮೇಲಿನ ಗದ್ದೆಗಳಿಂದ ಕೆಳಗಿನ ಗದ್ದೆಗಳಿಗೆ ಒರತೆಯು ಪಸೆಯೂ ಬಂದಿತ್ತು. ಬಾವಿಯಲ್ಲೂ ಬಾಗೀರಥಿ ಬಂದಂತೆ ಬಿಳಿನೀರು. ತರಕಾರಿ ದರಗಳೆಲ್ಲ ಅರ್ಧಮರ್ಧ ತೊಯ್ದಿದ್ದುವು. ಹೊಸದಾಗಿ ಹಾಕಿದ ಸೌತೆಯ ದರಗಳಲ್ಲೂ ನೀರು. ಸೀತಮ್ಮನವರ ಆನಂದಕ್ಕೆ ಪಾರವಿರಲಿಲ್ಲ. ಇನ್ನೂ ಮಲಗಿದ್ದ ಗಂಡನನ್ನು ಎಚ್ಚರಿಸಿ 'ಏಳಿ ಏಳಿ, ಬಾಗಿಲಿಗೆ ಬಂದಿದ್ದಾಳೆ ನೇತ್ರಾವತಿ. ನಿಮಗೆ ಇನ್ನೂ ಬೆಳಗಾಗಿಲ್ಲ. ಇನ್ನು ಸ್ನಾನಕ್ಕೆ ಬಾವಿಯಿಂದ ನೀರು ಸೇದಿ ಸೇದಿ ಬಿಸಿಮಾಡುವ ಕಷ್ಟ ತಪ್ಪಿತು ನನಗೆ. ಕಾಶಿ, ಬಾಗೀರಥಿ, ಹರಿ ಎಂದು ಈ ತೋಡಿನ ನೇತ್ರಾವತಿ ನೀರನ್ನೇ ತಲೆಯ ಮೇಲೆ ಸುರಿದುಕೊಂಡರಾಯ್ತು ತಂಬಿಗೆಯಿಂದ' ಎಂದು ಎಬ್ಬಿಸಿದರು.

'ಹೌದೇನೇ, ಬಂತಾ? ಆಂ, ಬಂತಾ? ನಾನು ಬಿಸಿಲಿಗೆ ಮನೆಯಿಂದ ಕಟ್ಟಕ್ಕೆ, ಕಟ್ಟದಿಂದ ಮನೆಗೆ ಓಡಾಡಿದ್ದುದರಿಂದ ಒಳ್ಳೇ ನಿದ್ದೆ ಬಂದಿತ್ತು ನೋಡು. ಬೆಳಗಿನ ಜಾವಕ್ಕೆ ನೀರು ಹರಿದು ಬಂದುದು ಗೊತ್ತೇ ಆಗಲಿಲ್ಲ. ಬಂತಾ? ಕಾಲಿವೆ ತುಂಬ ಹರಿದು ಬಂತಾ? ಅಥವಾ ದಾರ್ನ್ನೀರಾ?' ಎಂದು ನೂರೆಂಟು ಮಾತನಾಡುತ್ತ ಹೊದ್ದ ದುಪ್ಪಟಿಯನ್ನೇ ಮೈಮೇಲೆ ಹಾಕಿಕೊಂಡು ಅಂಗಳಕ್ಕೆ ಇಳಿದರು. ನೀರು ಗದ್ದೆಗಳಿಗೆ ಹರಿಯುತ್ತಿರುವುದನ್ನು ಕಂಡು, 'ಓಹೋಹೋ, ವ್ಯರ್ಥವಾಯಿತಲ್ಲ?' ಎಂದು ಹಂಬಲಿಸಿದರು.

ಅವರ ಈ ಹಂಬಲಿಕೆಯನ್ನು ಕೇಳಿ ಸೀತಮ್ಮನವರಿಗೆ ನಗು ಬಂದಿತು. 'ವ್ಯರ್ಥವಾಯಿತು, ವ್ಯರ್ಥವಾಯಿತು ಎನ್ನುತ್ತಿದ್ದೀರಲ್ಲ, ನೀರಿಗೂ ಕ್ರಯ ಕೊಟ್ಟಿದೆಯೇನು? ಒಂದು ಕಡೆಯಿಂದ ಬಂತು; ಒಂದು ಕಡೆಯಿಂದ ಹರಿಯಿತು. ಗದ್ದೆಗಳಿಂದ ಹರಿದು ಹರಿದು ಮತ್ತೆ ಇಲ್ಲಿ ನದಿಯ ನೀರು ನದಿಗೆ ಸೇರುತ್ತದೆ' ಎಂದು ಅವರು ವ್ಯಂಗ್ಯ ಮಾತುಗಳನ್ನಾಡಿದರು.

'ಸಾಕು, ಸಾಕು, ನಿನ್ನ ಮಾತು' ಎಂದು ಅವರನ್ನು ತಡೆದ ಗೋವಿಂದರಾಯರು, 'ಏ ಮಾಣಿ ಮೋಹನಾ, ನೀನು ಊಟ ಮಾಡುವ ಬಟ್ಟಲುಗಳನ್ನು ತಾ. ಬೇಗ ಬಾ ಬೇಗ' ಎಂದು ಕೂಗಿದರು. ಅವನು ಕಂಚಿನ ಬಟ್ಟಲುಗಳನ್ನು ಹಿಡಿದುಕೊಂಡು ಅಂಗಳಕ್ಕೆ ಹಾರಿ, 'ಯಾಕಪ್ಪಯ್ಯ? ಯಾಕೆ?' ಎಂದು

ಕೇಳುತ್ತ ಓಡಿ ಬಂದ. 'ಹೇಳುತ್ತೇನೆ' ಎಂದುತ್ತರವಿತ್ತು ಗೋವಿಂದರಾಯರು ಒಂದು ಬಟ್ಟಲನ್ನು ಎಳೆದುಕೊಂಡರು. ತೋಡಿನಲ್ಲಿಳಿದು ಬಟ್ಟಲಿನಿಂದ ನೀರನ್ನು ಇಕ್ಕೆಲಗಳಲ್ಲಿ ನಟ್ಟ ತುಳಸಿ, ಮೆಣಸು, ಮಲ್ಲಿಗೆ ಗಿಡಗಳಿಗೂ ಸುವರ್ಣ ಗಡ್ಡೆ, ತುಪ್ಪ ಗೆಣಸುಗಳ ದರಗಳಿಗೂ ಎರೆದರು. 'ತೋಡಿನಲ್ಲಿ ನೀರು ಹರಿದಾಗ ಆಚೆ ಈಚೆ ಬೆಳೆದ ಗಿಡಗಳಿಗೆ ಪಸೆ ಆಗುವುದಿಲ್ಲವೇನು? ಅವುಗಳ ಬೇರು ಪಾತಾಳಕ್ಕೂ ಇಳಿಯುತ್ತದೆ. ಮುಂಜಾನೆ ಎದ್ದ ಕೂಡಲೇ ಬೆನ್ನು ಬಗ್ಗಿಸಿಕೊಂಡು ಯಾಕೆ ಅವುಗಳಿಗೆಲ್ಲ ಶೋಡಷೋಪಚಾರ? ಮತ್ತೆ ಬೆನ್ನು ನೋವು, ಅಲ್ಲಿ ನೋವು, ಇಲ್ಲಿ ನೋವು ಎಂದೆನ್ನುತ್ತೀರಿ' ಎಂದು ಸೀತಮ್ಮ ಹೇಳಲು ಬಂದರು.

'ನೀನು ಬರೇ ಮಾತಿನಲ್ಲೇ ಮುಗಿಸಿದಿ. ಅಷ್ಟು ಬೋಗರದುಃಖವಿದ್ದ ವಳು ಬಟ್ಟಲು ಹಿಡಿ, ನೋಡೋಣ' ಎಂದರು ಗೋವಿಂದರಾಯರು.

ಆ ತುಳಸಿ ಗಿಡಗಳಿಗೆಲ್ಲ ನಾನು ನೀರೆರೆಯುತ್ತೇನೆ ಈಗ! ನನಗೆ ಬೇರೆ ಕೆಲಸವಿಲ್ಲೇನು? ಆ ಕಸಿ ಗಿಡಗಳಿಗಾದರೂ ನೀರೆರೆಯುವುದರಲ್ಲಿ ಅರ್ಥವಿದೆ. ನೀರು ಆ ಎತ್ತರ ಸ್ಥಳಕ್ಕೆ ಹರಿಯುವುದಿಲ್ಲ. ಇವುಗಳಿಗೆಲ್ಲ ಯಾವ ಕಿಸು ಭಾಗ್ಯಕ್ಕೆ?'

'ಅದನ್ನಾದರೂ ಮಾಡು ನೋಡೋಣ' ಎಂದು ಹೇಳಬೇಕೆಂದು ಗೋವಿಂದರಾಯರು ಬಾಯಿ ತೆರೆಯುವವರಿದ್ದರು. ಆದರೆ ಅಷ್ಟರೊಳಗೆ ಸೀತಮ್ಮನವರು ಕೊಡವನ್ನು ತೋಡಿನ ನೀರಿನಲ್ಲಿ ಮುಳುಗಿಸಿ, ಕೂಸಿನಂತೆ ಸೊಂಟದ ಮೇಲಿಟ್ಟುಕೊಂಡು ಕಸಿ ಗಿಡಗಳ ಹೊಂಡಗಳಿಗೆರೆದರು. ನೀರಿನ ಕೋಲಾಹಲವಾದುದರಿಂದ ಬೋರ ಬಂದೊಡನೆಯೇ ಕಟ್ಟದ ಬಾಂದ್ ಬಿಟ್ಟಲ್ಲಿ ಇನ್ನೂ ಕೆಲವು ಕಲ್ಲುಗಳನ್ನುರುಳಿಸಲು ತಿಳಿಸಿದರು. 'ಸ್ವಲ್ಪ ನೀರು ಬಂದರೆ ಸಾಕು. ಕೈಕಾಲು ತೊಳೆಯಲು ತೋಡಿನಲ್ಲಿ ನೀರಿದ್ದರೆ ತತ್ಕಾಲ ಸಾಕು' ಎಂದವರು ಅವನನ್ನು ಕಟ್ಟಕ್ಕಟ್ಟಿದ್ದರು. ನೀರು ಹೆಚ್ಚು ಬೇಕೆಂದಾಗಲೂ ಕಲ್ಲುಗಳನ್ನು ಪುನಃ ಇಟ್ಟು ಬರುವುದು ಅವನ ಕೆಲಸ. ಈ ಕೆಲಸಕ್ಕೆ ಗಂಟೆ ಹಿಡಿಯಬಹುದಾದರೂ ಬೋರನ ಹಳ್ಳಿಗಂಟೆಯ ಅವಧಿ ದೊಡ್ಡದು. ನೀರು ಬೀಳುವಲ್ಲಿ ಬೀಳಿನ ಬಲೆಯನ್ನಿಟ್ಟು ಮೀನು ಹಿಡಿಯುವುದರಲ್ಲೂ ಅವನು ಸ್ವಲ್ಪ ವೇಳೆ ಕಳೆಯುತ್ತಾನೆ. ಪೊದೆ ಪೊದರುಗಳಲ್ಲಿ ಮೊಲವಾಗಲೀ ಬೆರಿಂಕ ವಾಗಲೀ ನೆಗೆದರೆ ಅದರ ಬೆನ್ನು ಹಿಡಿಯಲು ಯತ್ನಿಸುವುದೂ ಉಂಟು.

ತೋಡಿನ ಇಬ್ಬದಿಗಳಲ್ಲಿ ಮಣ್ಣು ಕೊರೆದು ಅಡಗಿದ ದೆಂಜಿಗಳನ್ನು ಹಿಡಿಯು ವುದೂ ಇದೆ. ಹೀಗಾಗಿ ಮುಂಜಾನೆ ಕಟ್ಟಕ್ಕೆ ಅವನನ್ನು ಕಳಿಸಿದರೆ ಅವನು ಹಿಂತಿರುಗುವುದು ಮಧ್ಯಾಹ್ನ. ಮಧ್ಯಾಹ್ನ ತೆರಳಿದರೆ ಸಾಯಂಕಾಲವೇ. 'ಕಟ್ಟಕ್ಕೆ ಹೋಗಿಬರಲು ನಿನಗೆ ಇಷ್ಟು ಹೊತ್ತಾ? ನಾನು ಮುದುಕ ಇಷ್ಟರಲ್ಲಿ ಘಟ್ಟ ಹತ್ತುತ್ತಿದ್ದೆ. ಹೇಗಾದರೂ ಮಾಡಿ ಮೂಡಿದ ಸೂರ್ಯ ಮುಳುಗುವ ವರೆಗೆ ಕಾಲಾಡಿಸಿ ಬಿಡು' ಎಂದು ಗೋವಿಂದರಾಯರು ಒಮ್ಮೊಮ್ಮೆ ಸಿಟ್ಟು ಮಾಡುತ್ತಿದ್ದುದೂ ಉಂಟು.

ಈ ರೀತಿ ದಿನೇ ದಿನೇ ಮೂಡಿದ ಸೂರ್ಯ ಕಂತಿದ. ದಿನಗಳ ಹಿಂದೆ ವಾರಗಳು ಮುಳುಗಿದವು. ಮಾಸಗಳು ಉರುಳಿದವು. ವಸಂತ ಮಾಸವೂ ತಲೆದೋರಿತು. ಕಾಡುಕೋಳಿಗಳು ಬೆಳಿಗ್ಗೆ ರೆಕ್ಕೆಗಳನ್ನು ಪಟ ಪಟ ಬಡೆದು ಕೆಲೆದುವು. ಟಿಟ್ಟಿಭ 'ಟೀಂ, ಟೀಂ,' ಎಂದು ಮಾರು ದೂರ ಹಾರಿ ಮತ್ತೆ ನೆಲದಲ್ಲಿ ತನ್ನ ಕೊಕ್ಕರೆಯುದ್ದದ ಹಳದಿ ಕಾಲುಗಳನ್ನು ಎತ್ತಿ ಹಾಕುತ್ತ ಗಾಂಭೀರ್ಯದಿಂದ ನಡೆಯಿತು. ಪೊದೆ ಪೊದರು ಮರ ಗಿಡಗಳ ಕೆಳಗೆ ಬೆಜಕ್ರೆ ಪಕ್ಕಿಗಳು ಬೆರೆ ಬೆರೆ ಅರಚುತ್ತ ತರಗೆಲೆಗಳನ್ನು ಕಾಲುಗಳಿಂದ ಕೆದರಿದುವು. ಮರಗಳ ರೆಂಬೆಗಳಲ್ಲಿ ನಾನಾ ವರ್ಣದ ಹೊಂಬಣ್ಣದ ಹೆಸರಿಲ್ಲದ ಹೆಸರೇ ಅರಿಯದ ಹೊಸ ಹೊಸ ಹಕ್ಕಿಗಳು ಹೆಸರು ಹೇಳಿ ಕರೆದುವು ಒಂದನ್ನು ಇನ್ನೊಂದು. ಹುಲ್ಲು ಮಲ್ಲಿಗೆ ಮಾವು ಮೊದಲಾದವುಗಳೂ ಹೂತುವು. ಹಸುರು ಎಲೆಗಳ ಮಧ್ಯೆ ಬಿಳಿ, ಕೆಂಪು, ಹಳದಿ, ನೀಲ ಹಕ್ಕಿಗಳು ಕುಳಿತಂತೆ ಹೂಗಳೂ ಅರಳಿದುವು. ಶೇವಂತಿ, ಬಯ್ಯಮಲ್ಲಿಗೆ, ಗೊಂಡೆಮಲ್ಲಿಗೆ, ಗೋರಟೆ, ರತ್ನಗಂಧಿಗಳಿಗೆಲ್ಲ ಬಿಳಿ, ಹಳದಿ, ಕಿತ್ತಳೆ ವರ್ಣಗಳ ಬೆಡಗು. ಜಾಜಿ, ಗುಂಡು ಮಲ್ಲಿಗೆ, ಗುಲಾಬಿ, ಪಾರಿಜಾತಗಳಿಗೆ ಪರಿಮಳ ಬಹಳ. ಹಾತೆಗಳು ಬಣ್ಣಕ್ಕೆ ಮೈಸೋತು ಎರಗಿ ಮಧು ಹೀರಿದರೆ, ಸುವಾಸಿನಿಯ ಸುತ್ತಲೂ ತುಂಬಿ ನಾದ ಲೋಲನಾಗಿ ನಲಿಯುತ್ತದೆ. ಮರಗಳ ಎಲೆಗಳ ಎಡೆಯಲ್ಲಿ ಅವಿತ ಕೋಗಿಲೆ ಗಳು 'ಕೂಹು ಕೂಹು' ಎಂದು ಉಲಿದು ಧ್ವನಿಗೂಡಿಸುತ್ತವೆ.

ಈ ಹಿಮ್ಮೇಳಕ್ಕೆ ಸರಿಯಾಗಿ ಕಾಲಹೆಜ್ಜೆಗಳನ್ನಿಕ್ಕುತ್ತ ಅಂಗಳಕ್ಕೆ ಬಂದ ಸೀತಮ್ಮನವರು 'ಕೂಹು ಕೂಹು' ಎಂದು ಕರೆವ ಸ್ವರಗಳ ಕಡೆ ತಿರುಗಿ, 'ಅದು ಯಾವ ಪಕ್ಕಿ? ಮಲೆನಾಡಿಗೆ ಬಂದ ಮೇಲೆ ಕಾಗೆ ಕಂಡುದೇ ಅಪ ರೂಪ. ಇದು ಕಾಗೆಯ ಮರಿಯೇನು? ಅಥವಾ ಮಟ್ಟಕಾಗೆಯಂತೆ ಮಲೆ

ನಾಡಿನ ಈ ಕಾಗೆ ಇಷ್ಟೇ ಚಿಕ್ಕದಾ?' ಎಂದು ಕೇಳಿದರು.

ತೋಡಿನ ಬದಿಯಲ್ಲಿ ತುಳಸಿ ಮತ್ತು ಹೂಗಳನ್ನು ಕೊಯ್ದು ಹರಿವಾಣಕ್ಕೆ ಹಾಕುತ್ತಿದ್ದ ಗೋವಿಂದರಾಯರು ಗಹಗಹಿಸಿ ನಕ್ಕರು—'ನೀನು ಮೂಢಳೆಂದರೆ ಮೂಢಳು. ಹೆಂಗಸರ ಬುದ್ಧಿ ಮೊಣಕಾಲು ಕೆಳಗೆ ಎಂದುದು ಸುಳ್ಳಲ್ಲ. ಅದು ಕೋಗಿಲೆ. ಕೋಗಿಲೆ ಕಾಗೆಮರಿಯಲ್ಲ. ಮರಿ ಸಾಕುವುದು ಮಲತಾಯಿ ಕಾಗೆಯೇ. ಆದರೆ ಕಾಗೆ ಕಾಗೆಯೇ, ಕೋಗಿಲೆ ಕೋಗಿಲೆಯೇ' ಎಂದು ಅವರು ತಿಳಿಸಿದರು.

"ಕೋಗಿಲೆಯೆಂದರೆ ಆಯಿತು. ಅದಕ್ಕೆ ಇಷ್ಟೆಲ್ಲ ರಾಮಾಯಣ ಯಾಕೆ ಬೇಕು? 'ನೀನು ಮೂಢಳು! ಹೆಂಗಸರಿಗೆ ಬುದ್ಧಿಯಿಲ್ಲ' ಎಂದು ಮೂದಲಿಸಬೇಕೇಕೆ? ನಾನು ಇಷ್ಟರವರೆಗೆ ನೋಡಿರಲಿಲ್ಲ. ಹೌದು, ನಾನು ಮೂಢಳು! ನಿಮ್ಮ ಹಾಗೆ ಶಾಲೆಗೆ ಹೋಗಿಲ್ಲ" ಎಂದು ಸೀತಮ್ಮನವರು ಸಿಡಿ ನುಡಿದರು.

ಗೋವಿಂದರಾಯರು ವಿನೋದ ಲಹರಿಯಿಂದಲೇ ಹೇಳಿದರು—'ಮೋಸವಾಯ್ತು. ನಿಮ್ಮಪ್ಪ ಶಾಲೆಗೆ ಕಳಿಸಬೇಕಿತ್ತು! ಮೋಸ ಮಾಡಿದ!'

ತಮ್ಮ ತಂದೆಯನ್ನು ನಿಂದಿಸಿದುದರಿಂದ ಸೀತಮ್ಮನವರಿಗೆ ಇನ್ನಷ್ಟು ರೇಗಿತು—'ಹೌದು. ನಮ್ಮಪ್ಪ ಮೋಸ ಮಾಡಿದ. ಶಾಲೆಗೆ ಕಳಿಸಲಿಲ್ಲ. ಆದರೆ, ನೀವು ಕಳಿಸಬಹುದಿತ್ತಲ್ಲ! ನನಗೆ ಲಗ್ನವಾದಾಗ ಮೂವತ್ತು ವರುಷದ ದಿಗ್ಡ್ ದಿಮ್ಮಿಯಾಗಿರಲಿಲ್ಲ. ಇನ್ನೂ ಮೈನೆರೆದಿರಲಿಲ್ಲ ನಾನು. ಕಳಿಸಬೇಕಿತ್ತು ಶಾಲೆಗೆ. ಯಾಕೆ ಕಳಿಸಲಿಲ್ಲ ಈಗ ಇಷ್ಟು ಮಾತನಾಡುವವರು?' ಎಂದು ಅವರು ಪ್ರಶ್ನಿಸಿದರು.

"ನನಗೂ ಗೊತ್ತಾಗಲಿಲ್ಲ. ಆಗ ಅಷ್ಟು ಹೊಳೆಯಲಿಲ್ಲ. ಥರ್ಡ್ ಫಾರ್ಮ್ ವರೆಗಾದರೂ ಓದಿಸಿ ಬಿಟ್ಟಿದ್ದರೆ ಒಳ್ಳೆಯದಾಗುತ್ತಿತ್ತು. ಮಿಸ್ಟ್ರೆಸ್ ಕೆಲಸವನ್ನೂ ನೀನು ಮಾಡುತ್ತಿದ್ದೆ. 'ಅೃಟ್ ಮ್ಯೆಟ್ ಕ್ಯೆಟ್ ಕಾರ್ಡ್' ಎಂದು ಕಲಿಸಲು ಮಿಸ್ಟ್ರೆಸ್‌ನವರು ಟ್ರೇನ್ಡ್ ಆಗಬೇಕೆಂತಲೂ ಇಲ್ಲ. ನೀನು ಸಂಪಾದನೆ ಮಾಡಬಹುದಿತ್ತು' ಎಂದು ಮೀಸೆಯೊಳಗೆ ಅವರು ನಕ್ಕರು.

"ಮಿಸ್ಟ್ರೆಸ್ ಆಗುತ್ತಿದ್ದೆ ಅಥವಾ 'ಕಲೆಕ್ಟರ್' ಆಗುತ್ತಿದ್ದೆ. ಆದರೆ, ನೀವು ಕಳಿಸಲಿಲ್ಲವಲ್ಲ? ಶಾಲೆಗೆ ಕಳಿಸುವುದಿರಲಿ, ಒಂದು ದಿನ ಉಡುಪಿ ಪೇಟೆಗೆ ಅತ್ತೆಯವರೊಡನೆ ಹೊರಟರೆ ಮೆಲ್ಲಗೆ ಸೆರಗು ಹಿಡಿದೆಳೆದು ಕಣ್ಣು ಚಿವುಟುತಿದ್ದಿರಿ. 'ಅತ್ತೆ ಹೋಗಲಿ. ನೀನು ಇರೆ, ಇರೆ' ಎಂದು ಗುಟ್ಟಾಗಿ ಹೇಳು

ತ್ತಿದ್ದುದು ಯಾರು? ಒಂದು ಕ್ಷಣ ತಪ್ಪಿದರೆ ಸರಿ, ಏನೆಲ್ಲ ರಂಭಾಟ ನಿಮ್ಮದು? 'ನಿನ್ನ ಕೆನ್ನೆ ಗುಲಾಬೀ ಎಸಳೇ ಸೀತಾ? ನಿನ್ನ ನಗೆ ಮಲ್ಲಿಗೆ ನೋಡೆ ನೀನು ಹಾಗೆ ಸೀತಾ, ನೀನು ಹೀಗೆ ಸೀತಾ' ಎಂದು ದಿನಕ್ಕೆ ಸಾವಿರ ಸಲ 'ಸೀತಾ ಸೀತಾ' ಎಂದು ಕರೆದು ಒಳಹೊರಗೆ ಕುಣಿಯುತ್ತಿದ್ದುದು ಯಾರು? ಒಂದು ದಿನ ಬಿಟ್ಟಿರುತ್ತಿದ್ದಿಲ್ಲ. ಆಗ ಮಾಡಿದ್ದೆಲ್ಲ ಮರೆತು ಹೋಯ್ತುಂತೆ ಕಾಣು ತ್ತದೆ ರಾಯರಿಗೆ. ಲಗ್ನವಾದ ಮೇಲೆ ಶಾಲೆಗೆ ಕಳಿಸುತ್ತಿದ್ದರಂತೆ ಶಾಲೆಗೆ? ಮಿಸ್‌ಟ್ರೆಸ್ ಆಗುತ್ತಿದ್ದೆನಂತೆ! ಮಿಸ್‌ಟ್ರೆಸ್ ಆಗುತ್ತಿದ್ದರೆ ಯಾವ ಮಾಷ್ಟ್ರ ಮೇಲಾದರೂ ಸಂಶಯಪಡದೆ ಇರುತ್ತಿದ್ದಿರಾ? 'ನೀನು ಅವನನ್ನು ನೋಡಿದೆ ಯಾಕೆ? ಇವನೊಡನೆ ಏನು ಕೆಲಸವಿತ್ತು? ಗುಸುಗುಸು ಏನು ಮಾತ ನಾಡಿದೆ?' ಎಂದು ದಿನಂಪ್ರತಿ ನೂರೆಂಟು ಜಗಳ ತೆಗೆಯುತ್ತಿದ್ದಿರಿ. ಅದೊಂದು ಬಾಕಿ" ಎಂದು ಹುಸಿ ಮುನಿಸು ತೋರಿಸಿದರು ಸೀತಮ್ಮ.

ಈ ಹಳೇ ಕತೆ ಕೇಳಿದ ಗೋವಿಂದರಾಯರಿಗೆ ಹೃದಯದೊಳಗೆ ನೀರಿನ ಕಾಲಿವೆಯಂತೆ ಒಲವು ಹರಿದು ಬಂತು. ಅದನ್ನು ಬಹಿರಂಗಗೊಳಿಸದೆ 'ಹೌದೇನೇ, ನಾನು ಕುಣಿಯುತ್ತಿದ್ದೆ! ನೀನು ದೊಡ್ಡ ರಂಭೆ!' ಎಂದು ಒಂದು ವಸಂತದ ವಾಗ್ಬಾಣವನ್ನೆಸೆದರು.

'ಆಗ ನಿಮ್ಮ ಕಣ್ಣಿಗೆ ರಂಭೆಯಾಗಿಯೇ ತೋರುತ್ತಿದ್ದೆ. ಆದುದ ರಿಂದಲೇ ನಾಲ್ಕಾರು ಮಕ್ಕಳುಗಳಾದವು. ಆದುದೆಲ್ಲ ಆಯಿತು. ಇನ್ನೇ ನಾಗಬೇಕು? ನಿಮ್ಮ ಕಣ್ಣಿಗೆ ಈಗ ಮುದಿಗೂಬೆ.'

'ನನಗಿಂತ ಚಿಕ್ಕವಳು ಮುದುಕಿಯಂತೆ! ಮುದುಕನೆಂದು ನನ್ನನ್ನು ಕರೆದರೆ ಒಪ್ಪುವ ಮಾತು. ನೋಡು, ಗಡ್ಡ ಮೀಸೆ ತಲೆಗಳೆಲ್ಲ ಹಣ್ಣಾಗಿದೆ. ಇದು ೧೯೩೬. ನನಗೀಗ ೫೯ ವರುಷ. ನಮ್ಮಪ್ಪಯ್ಯ ೬೦ಕ್ಕೇ ಕಣ್ಮುಚ್ಚಿ ದ್ದರು' ಎಂದರು.

'ಯಾಕೆ ಹಾಗೆಲ್ಲ ಮಾತನಾಡುತ್ತೀರಿ? ಉಡುಪಿಗೆ ರಾಜ ಬಂದಾಗ ಹಾಗೆಯೇ ಹೇಳಿದ್ದಿರಿ. ಬಾಯಲ್ಲಿ ಶಕುನ ನುಡಿಯುತ್ತೀರೇನು? ಒಂದು ಗಳಿಗೆ ಕೆಟ್ಟದಿರುತ್ತದೆ, ಒಂದು ಗಳಿಗೆ ಒಳ್ಳೆಯದಿರುತ್ತದೆ. ನಿಮ್ಮೊಡನೆ ಅಧಿಕ ಪ್ರಸಂಗ ತೆಗೆದುದು ನನ್ನದೇ ತಪ್ಪು' ಎಂದು ನುಡಿದು ಸೀತಮ್ಮ ಮನೆಯೊಳಗೆ ನುಸುಳಿದರು.

'ಒಳ್ಳೆ ಗಳಿಗೆ! ಕೆಟ್ಟ ಗಳಿಗೆ! ಬಟ್ಟಲು ತುಂಬಿದಾಗ ಸದ್ದಿಲ್ಲದೆ ಅದು

ಮುಳುಗುವುದು' ಎಂದು ಮೆಲ್ಲನೆ ಅವರು ಪ್ರತಿನುಡಿದುದು ಸೀತಮ್ಮನವರಿಗೆ ಕೇಳಿಸಲಿಲ್ಲ.

ಆದರೆ, ಒಂದೆರಡು ದಿನಗಳ ಮೇಲೆ ಬೆಳಿಗ್ಗೆ ಮೈ ಬಿಟ್ಟುಕೊಂಡೇ ತುಳಸಿ ಹೂಗಳನ್ನು ಕೀಳುತಿದ್ದ ಗೋವಿಂದರಾಯರು, 'ಚಳಿಯಾಗುತ್ತಿದೆ, ಚಳಿ' ಎಂದು ಅರ್ಧದಲ್ಲೇ ಮನೆಯೊಳಗೆ ಓಡಿ ಬಂದಾಗ ಸೀತಮ್ಮನವರ ಮೈ ಜುಂ ಎಂದಿತು. 'ನನಗೆ ೫೯ ವರುಷ. ನಮ್ಮಪ್ಪಯ್ಯ ೬೦ಕ್ಕೆ ಕಣ್ಮುಚ್ಚಿದ್ದರು' ಎಂದು ಅವರು ಎರಡು ದಿನಗಳ ಹಿಂದೆ ಆಡಿದ್ದ ಮಾತು ಸೀತಮ್ಮನವರ ಕಿವಿಯಲ್ಲಿ ಪ್ರತಿಧ್ವನಿಸಿತು. 'ಮೈ ಬಿಟ್ಟುಕೊಂಡೇ ಯಾಕೆ ಬೆಳಿಗ್ಗೆ ಅದನ್ನು ಕೊಯ್ಯಲು ತೆರಳಿದಿರಿ? ದುಪ್ಪಟಿಯನ್ನಾದರೂ ಮೈ ಮೇಲೆ ಹೊದ್ದುಕೊಳ್ಳಬಾರದಿತ್ತಾ?' ಎಂದು ಸೀತಮ್ಮನವರು ನುಡಿದು ಚಾಪೆ ಬಿಡಿಸಿ ಅದರೊಳಗಿದ್ದ ದುಪ್ಪಟಿಯನ್ನು ಹೊರಗೆ ತೆಗೆದು ಹೊದೆಸಿದರು. ಚಳಿ ತಡೆಯಲಾರದೆ ಗೋವಿಂದರಾಯರು ಒಲೆಯ ಮುಂದೆ ಬಂದು ಕುಳಿತರು. ಆದರೆ ತಡೆದುಕೊಳ್ಳಲು ಸಾಧ್ಯವಾಗಲಿಲ್ಲ. ಬೇಸಿಗೆಯಲ್ಲಿ ಚಳಿ ಚಳಿ ಎಂದು ಅವರು ಮೈ ಮುದ್ದೆ ಮಾಡುತ್ತಿದ್ದುದನ್ನು ಕಂಡು ಸೀತಮ್ಮ ಪ್ರಾಯಶಃ ಜ್ವರದ ಲಕ್ಷಣವೆಂದರಿತರು ಮಲಗಿಕೊಳ್ಳಲು ಗೋವಿಂದರಾಯರು ಚಾಪೆಯನ್ನು ಬಿಡಿಸಿದರು. ದುಪ್ಪಟಿ ಹೊದೆದುಕೊಂಡರೂ ಮೈ ಕೈ ನಡುಗುವುದು ನಿಲ್ಲಲಿಲ್ಲ. 'ಕಂಬಳಿ ತರಲು ರಾಜನೊಡನೆ ಹೇಳಬೇಕೆಂದಿದ್ದೆ. ಮಾಣಿ ಆಳುಗಳಿಗೆ ದುಡ್ಡು ಪೂರಾ ಕೊಟ್ಟಿಲ್ಲ. ಅವನ ಒಡ್ಡಾಟ ನೋಡಲಾರದೆ ಕಂಬಳಿ ತರಹೇಳಲು ಬಾಯೇ ಬರಲಿಲ್ಲ' ಎಂದು ಮಲಗಿದಲ್ಲೇ ನುಡಿದರು. ಸೀತಮ್ಮನವರು ದುಪ್ಪಟಿಯ ಮೇಲೆ ತಮ್ಮ ಸೀರೆಗಳನ್ನು ಹೊದೆಸಿದರು. 'ಇದೆಲ್ಲ ಎಷ್ಟು ಸಾಕು? ನನ್ನನ್ನೊಮ್ಮೆ ಗಟ್ಟಿಯಾಗಿ ಹಿಡಿದುಕೋ ನೋಡೋಣ?' ಎಂದು ಅವರು ಹೇಳಿದುದರಿಂದ ಸೀತಮ್ಮನವರು ಚಾಪೆಯ ಬಳಿಯಲ್ಲೇ ಮೊಣಕಾಲೂರಿ ಕುಳಿತು ಎರಡೂ ಕೈಗಳನ್ನು ಸುತ್ತಿ ಹಿಡಿದರು. ಸೀತಮ್ಮನವರ ಕೈ ಕಾಲುಗಳೂ ನಡುಗಿದವು.

ಸ್ವಲ್ಪ ಹೊತ್ತಿನ ತರುವಾಯ ಮೈ ನಡುಕ ನಿಂತು ತಲೆ ನೋವು ಆರಂಭವಾಯಿತು. ಬೈರಾಸನ್ನು ತಲೆಗೆ ಬಿಗಿಯಾಗಿ ಕಟ್ಟಿ, 'ಹಣೆಗೆ ಕಳ್ಳಿಯ ಲೇಪ ಹಚ್ಚುತ್ತೇನೆ, ತಡಿಯಿರಿ' ಎಂದು ಸೀತಮ್ಮ ಹೇಳಿ, 'ಮೋಹನ, ಅಗಳಿನ ಮೇಲೆ ನೆಟ್ಟ ಒಂದು ಕಳ್ಳಿ ತುಂಡು ಕಡಿದು ತಾ, ಬೇಗ' ಎಂದವನನ್ನು

ಅಟ್ಟಿದರು. ಕಳ್ಳಿಯ ಮುಳ್ಳು ಸವರಿ ಅದನ್ನು ಸುಡಲು ಒಲೆಯ ಕೆಂಡದಲ್ಲಿ ಕಡೆದರು. ಅದರ ಸಿಪ್ಪೆ ಬಾಡಿದ ಮೇಲೆ ಹೊರಗೆ ತೆಗೆದು ಅಡ್ಡಗಲ್ಲಿನ ಮೇಲಿಟ್ಟು ಗುದ್ದಿ ರಸ ಹಿಂಡಿದರು. ಸ್ವಲ್ಪ ಸಾಸಿವೆಯನ್ನು ಹಾಕಿ ಆ ರಸದಲ್ಲಿ ಅರೆದು ಸೌಟಿಗೆ ತುಂಬಿಸಿ ಮತ್ತೆ ಕುದಿಸಿ ತಂದರು. ಈ ಕಿವಿಯಿಂದ ಆ ಕಿವಿಯ ವರೆಗೆ ಬಿಸಿ ಬಿಸಿ ಲೇಪ ಬಳಿದಾಗ 'ಅಮ್ಮಾ, ಅಮ್ಮಾ' ಎಂದು ಧ್ವನಿ ತೆಗೆದರು ಗೋವಿಂದರಾಯರು. ಹಣೆ ಮುಟ್ಟಿದ ಸೀತಮ್ಮನವರಿಗೆ ಒಲೆಗೆ ಕೈ ಇಟ್ಟಂತಾಯಿತು. ದುಪ್ಪಟಿಯೊಳಗೆ ಕೈ ತಳ್ಳಿ ಎದೆಯನ್ನು ಸ್ಪರ್ಶಿಸಿದರು. ಎದೆಯೂ ಬಿಸಿ ಸುಡುತ್ತಿತ್ತು. 'ಅಯ್ಯೋ, ನಿನ್ನ ಕೈ ಮಹಾ ಸಿಮ. ನೀರಿನ ಪಸೆ ಒರಸಿಕೊಂಡಿಲ್ಲ. ಐಸ್, ಐಸಿನ ಹಾಗಿದೆ. ತೆಗೆ! ತೆಗೆ!' ಎಂದು ಅವರು ಹೇಳಿದುದರಿಂದ ಸೀತಮ್ಮನವರು ಕೈ ಕೊಸರಿಕೊಂಡರು.

'ಒಂದು ಕಪ್ ಸ್ಟ್ರಾಂಗ್ ಕಾಫಿ ಮಾಡಿ ಕೊಡಲಾ?'

'ಹೇ, ಒಂದು ಕಪ್ ಯಾಕೆ? ಒಂದು ಗುಡಾಣ ಕೊಟ್ಟರೂ ಗಟ ಗಟ ಕುಡಿಯುತ್ತೇನೆ ನೋಡು.'

ಕಾಫಿ ಕುಡಿದಾಗ ಗೋವಿಂದರಾಯರ ಕಣ್ಣುಗಳೆಲ್ಲ ಕೆಂಡದಂತಾಗಿದ್ದುವು. ಜ್ವರದ ತಾಪದಿಂದ ಅವರು ಏನೇನೋ ಮಾತನಾಡಲಾರಂಭಿಸಿದರು.

ಹೌದೇನೇ, ನೀನು ಸಣ್ಣವಳಿದ್ದಾಗ ನನ್ನ ಹತ್ತಿರ ಬರಲು ಎಷ್ಟು ನಾಚುತ್ತಿದ್ದೆ! ಮುಟ್ಟಿದರೆ ಜಿಂಕೆಯಂತೆ ಜಿಗಿಯುತ್ತಿದ್ದೆ. ನನ್ನನ್ನು ಮುಟ್ಟಲೂ ಹೆದರುತ್ತಿದ್ದೆ. ಈಗ ನಿನಗೆ ಬಹಳ ಧೈರ್ಯ ಬಂದಿದೆ. ಹಣೆ, ಎದೆಗಳ ಮೇಲೆಲ್ಲ ಕೈಯಾಡಿಸುತ್ತೀಯಲ್ಲ?'

'ನೀವು ಸುಮ್ಮನೆ ಮಲಗಿ.'

'ನಾನು ಮಲಗುತ್ತೇನೆ. ಮಲಗಿಯೇ ಇದ್ದೇನಲ್ಲ? ಅಲ್ಲ, ನಿನ್ನನ್ನು ಸೀತಾ ಎಂದು ಕರೆದರೆ ಸಿಟ್ಟಾದೀತಾ ಹೇಳು. ನೀನು ಸಣ್ಣವಳಿದ್ದಾಗ ಹಾಗೇ ಕರೆಯುತ್ತಿದ್ದೆ. ಮಕ್ಕಳು ಮರಿ ದೊಡ್ಡವರಾದ ಮೇಲೆ ಅವರ ಇದಿರು ಕರೆಯಲು ನಾಚಿಕೆಯಾಯ್ತು, ಬಿಟ್ಟುಬಿಟ್ಟೆ. ಈಗ ಹತ್ತಿರ ಮಕ್ಕಳು ಯಾರೂ ಇಲ್ಲ. ಮೋಹನ ಒಬ್ಬ ಇದ್ದಾನೆ. ಅದು ಇನ್ನೂ ಕೂಸು. ಸೀತಾ ಎಂದೇ ಕರೆಯುತ್ತೇನೆ. ಏನೇ?'

'ನೀವು ವಿಶೇಷ ಮಾತನಾಡಬೇಡಿ. ಜ್ವರ ಜೋರಾದೀತು.'

'ಹೌದು. ಅದು, ಹೌದು. ಇದು ಸಾಮಾನ್ಯ ಜ್ವರವಲ್ಲ; ಜೋರಿನ ಜ್ವರ.

ಹೌದೇನೇ, ಮೈ ಹಣೆಯೆಲ್ಲ ಸುಡುತ್ತದೆ. ಒಂದು ಕೈಯಲ್ಲಿ ನೀನು ಹಿಡಿ. ಇನ್ನೊಂದು ಕೈಯನ್ನು ಮೋಹನನ ಹೆಗಲಿನ ಮೇಲೆ ಹಾಕುತ್ತೇನೆ. ಆ ತೋಡಿನ ವರೆಗೆ ಕರೆದುಕೊಂಡು ಹೋಗಿ ಬಿಟ್ಟುಬಿಡಿ. ಕುತ್ತಿಗೆಯ ವರೆಗೆ ನೀರಿನಲ್ಲಿ ಮುಳುಗಿ ಕುಳಿತುಬಿಡುತ್ತೇನೆ. ಒಂದು ನಿಮಿಷದಲ್ಲಿ ದೇಹ ತಣ್ಣಗಾಗುತ್ತದೆ, ಜ್ವರ ಇಳಿದು ಬಿಡುತ್ತದೆ.'

'ಹಾಂ, ಹಾಗೆ ಮಾಡಿದರೆ ಆದೀತು! ನೀವು ಹುಚ್ಚುಹುಚ್ಚು ಮಾತ ನಾಡುವುದನ್ನು ನಿಲ್ಲಿಸುತ್ತೀರಾ ಇಲ್ಲ?'

"ನಾನು ಹುಚ್ಚು ಮಾತನಾಡುತಿದ್ದೇನಾ? ನಾನು ಹುಚ್ಚನಾ? ಆ ಕಾಲ ಕಳೆದುಹೋಯ್ತಲ್ಲೇನೇ ಸೀತಾ? ನಿನ್ನನ್ನು ನೋಡಿ ಹುಚ್ಚಾದ ಕಾಲ ಕಳೆಯಿತು. ಆಗ ಉಡುಪಿ ಮನೆಯ ಮುಂದಿದ್ದ ತೋಟಕ್ಕೆ ನಾನು ನಿನ್ನನ್ನು ಕರೆದೊಯ್ದು ತಾಳೆಯ ಬುಡದಲ್ಲಿ ಇಬ್ಬರೇ ಕುಳಿತು ಮಾತನಾಡುತ್ತಿದ್ದಾಗ ನೀನು 'ನಿಮಗೆ ಹುಚ್ಚು' ಎಂದು ಹೇಳಿದ್ದೆ. ನೀನು ಅರ್ಧ ತಿಂದ ಗೇರು ಹಣ್ಣನ್ನು ಕಿತ್ತುಕೊಂಡು ನಾನು ಬಾಯೊಳಗೆ ತುರುಕಿಕೊಂಡಾಗ, 'ನನ್ನ ಎಂಜಲು ತಿನ್ನುತ್ತೀರಾ? ನಿಮಗೆ ಹುಚ್ಚೇನು?' ಎಂದು ಕೇಳಿದೆ. 'ಹೌದು' ಎಂದು ಆಗ ನಾನು ನುಡಿದುದುಂಟು. ಅದೊಂದು ಕಾಲ, ಇದೊಂದು ಕಾಲ. ಆದರೆ ಈಗಲೂ ಆ ಹುಚ್ಚು ಹಿಡಿದಿದೆಯೆಂದು ಹೇಳುತ್ತೀಯಾ?"

ಏನು ಉತ್ತರ ಕೊಡಬೇಕೆಂದು ಸೀತಮ್ಮನವರಿಗೆ ಹೊಳೆಯಲಿಲ್ಲ. ಅವರ ಕಣ್ಣುಗಳಲ್ಲಿ ನೀರು ಬಂದಿತು. ಅದನ್ನು ಕಂಡು ಗೋವಿಂದರಾಯರು, 'ಹಾಂ, ನಿನಗೆ ನನ್ನ ಮಾತಿನಿಂದ ನೋವಾಯಿತಾ?' ಎಂದು ಮಗುವಿನಂತೆ ಕೇಳಿದರು.

'ಇಲ್ಲ, ನೀವು ಬಹಳ ಮಾತನ್ನಾಡಬೇಡಿ.'

'ಇಲ್ಲ, ಇಕೋ ನಾಲಿಗೆ ಕಚ್ಚಿಕೊಂಡೆ' ಎಂದು ಸ್ವಲ್ಪ ಹೊತ್ತು ಸುಮ್ಮನಾದರು.

'ಜ್ವರ ಬಂದಾಗ ಕ್ವಿನಿನ್ ಗುಳಿಗೆಯನ್ನು ದಿನಂಪ್ರತಿ ಎರಡು ಸಲ ನುಂಗಲಿ' ಎಂದು ಹೇಳಿ ರಾಜ ಕೊಟ್ಟು ಹೋಗಿದ್ದ ಕ್ವಿನಿನ್ ಮಾತ್ರೆಗಳ ನೆನಪಾಯಿತು ಈಗ ಸೀತಮ್ಮನವರಿಗೆ. ಕಾಗದದಲ್ಲಿ ಮುದ್ದೆ ಮಾಡಿ, ಯಾವುದೋ ಬಟ್ಟೆಯ ಚುಂಗಿನಲ್ಲಿ ಅದನ್ನು ಕಟ್ಟಿದ್ದರು. ಹುಡುಕಿ ಹುಡುಕಿ ಬೇಸತ್ತಾಗ ಅವರ ಕೊಪ್ಪು, ಬುಗುಡಿ, ತಿರುಪು ಆಭರಣಗಳನ್ನಿಟ್ಟಿದ್ದ ಸಣ್ಣ ಪೆಟ್ಟಿಗೆಯಲ್ಲಿತ್ತು ಅದು. ಬಿಸಿ ಹಾಲನ್ನು ಲೋಟಕ್ಕೆ ಬಸಿದು ಮಾತ್ರೆಯೊಂದಿಗೆ

ಕೊಡಲು ಬಂದರು. ಗೋವಿಂದರಾಯರು ಮಾತ್ರೆಯನ್ನು ನಾಲಿಗೆಯ ಮೇಲೆ ಹಾಕಿಕೊಂಡೊಡನೆಯೇ, 'ಅಮ್ಮಾ, ಕಹಿ ವಿಷ. ಕಾರ್ಕೋಟಕನ ವಿಷ' ಎಂದು ಮೋರೆ ಮುದುಡಿ ಕಣ್ಮುಚ್ಚಿ ನುಂಗಿ, ಹಾಲು ಸುರಿದರು ಗಂಟಲೊಳಗೆ.

"ಸ್ವಲ್ಪ ಬೆಲ್ಲವಾದರೂ ಕೊಟ್ಟೆಯಾ ಮಾರಾಯತಿ! ಮೊದಲೇ ಬಾಯಿ ಕಹಿ. ಇನ್ನು ಹೇಳುವುದೇ ಬೇಡ' ಎಂದು ಹೆಂಡತಿಯನ್ನಷ್ಟು ಟೀಕಿಸಿದರು.

'ಮೋಹನನಿಗಾದರೆ ಬೆಲ್ಲ ಬೇಕು. ನಿಮಗೇಕೆಂದು ಬಿಟ್ಟು ಬಂದೆ; ತೋಚಲಿಲ್ಲ' ಎಂದರು ಸೀತಮ್ಮ.

'ಕ್ವಿನಿನ್ ಗುಳಿಗೆ ಕೊಡಲು ತೋಚಿತಾ? ನೀನು ದೊಡ್ಡ ಡಾಕ್ಟರಳೇ ಆಗಿಬಿಟ್ಟೆ! ಇದು ಯಾವ ಜ್ವರ ಏನೆಂದು ಏನಾದರೂ ತಲೆ ಬುಡ ನಿನಗೆ ಗೊತ್ತುಂಟಾ? ಒಮ್ಮೆಗೇ ಕ್ವಿನಿನ್‌ಗೆ ಕೈಕೊಟ್ಟೆ! ಅಂ, ಎಲ್ಲಾದರೂ ಟೈಫೈಡ್ ಜ್ವರವಾದರೆ ಏನು ಗತಿ? ನಿನ್ನ ಕ್ವಿನಿನ್ ಮಾತ್ರೆಗಳಿಂದ ಆ ಜ್ವರ ಬಿಟ್ಟೀತಾ? ಆಯುಷ್ಯ ಗಟ್ಟಿ ಇದ್ದರೆ ಬದುಕಬಹುದೆನ್ನು. ಬೇಗನೆ ರಾಜ ಕೂಡಾ ಬಂದಾನು. ಶಿವರಾಯ ಬಂದಿದ್ದ. ಹರಿಯ ಮೋರೆ ಕಾಣದೆ ಮಾತ್ರ ಒಂದು ವರುಷವಾಗುತ್ತ ಬಂತು. ಪರೀಕ್ಷೆ ಮುಗಿದ ಕೂಡಲೇ ಅವನೂ ನಿಲ್ಲಲಾರ ಅಲ್ಲಿ. ಈ ಹೊತ್ತು ಅಥವಾ ನಾಳೆ ಬರಬಹುದು' ಎಂದು ಮತ್ತೆ ಗೋವಿಂದ ರಾಯರು ಜ್ವರದ ಕಾವಿನಿಂದ ನಾಲಿಗೆ ಸಡಿಲಿಸಿದರು.

ಸೀತಮ್ಮನವರ ಮನಸ್ಸಿಗೆ ಮುಳ್ಳಿನಿಂದ ಚುಚ್ಚಿದಂತಾದರೂ ಆ ನೋವನ್ನು ಸಹಿಸಿಕೊಂಡೇ ಉತ್ತರ ಕೊಟ್ಟರು— 'ಟೈಫೈಡಲ್ಲ, ಗ್ರಿಫೈಡ್ ಅಲ್ಲ. ಆ ಜ್ವರವಾದರೆ ಮೈ ನಡುಗುತ್ತದೆಯಾ? ಬಾಯಾರಿಕೆಯೂ ಬಹಳ ವಿರುತ್ತದೆ ಆ ಜ್ವರಕ್ಕೆ. ಪೇಟೆಯಲ್ಲಾದರೆ ಯಾವ ಜ್ವರವೆಂದು ಹೇಳಲಿಕ್ಕೆ ಬಾರದು, ಡಾಕ್ಟರ್ ಬೇಕು. ಈ ಮಲೆನಾಡಿನಲ್ಲಿ ಟೈಫೈಡ್ ಎಲ್ಲಿಂದ ಬಂತು? ನಿಮ್ಮದು ಬರಿ ಭ್ರಮೆ. ಕಟ್ಟ ಕಟ್ಟಲು ಬಿಸಿಲೆಂದಿಲ್ಲ ಗಾಳಿಯೆಂದಿಲ್ಲ; ಮುಂಜಾನೆ ಸಂಜೆ ಮನೆಯಿಂದ ಕಟ್ಟಕ್ಕೆ, ಕಟ್ಟದಿಂದ ಮನೆಗೆ ಕುಣಿದಿರಿ. ಬಾಯಾರಿಕೆಯಾದಾಗ ಹೊಳೆಯ ನೀರನ್ನೂ ಕೈಬೊಗಸೆಗಳಿಂದೆತ್ತಿ ಕುಡಿದಿರಿ. ಕಟ್ಟದ ಕೆಲಸ ಮುಗಿದ ಮೇಲಾದರೂ ಒಂದು ಕ್ಷಣ ಮನೆಯೊಳಗೆ ತಣ್ಣಗೆ ಕುಳಿತಿರಾ? ಅದೂ ಇಲ್ಲ. ಆ ಬಟ್ಟಲು ಹಿಡಿದುಕೊಂಡು ತೋಡಿನಲ್ಲಿ ನಿಂತು ತೇಪಿದಿರಿ. ಬೇಡ ಬೇಡವೆಂದರೂ ಬೋರ ತಂದು ಕೊಟ್ಟ ಹಲಸಿನ ಹಣ್ಣು ತಿಂದಿರಿ.'

'ನಾನು ಎಷ್ಟು ತಿಂದೆನೇ? ರುಚಿ ನೋಡೋಣವೆಂದು ಒಂದೆರಡು ಸೋಳೆ ಬಾಯಿಗೆ ಹಾಕಿಕೊಂಡೆ, ಅಷ್ಟೆ.'

'ವಿಷ ಎಷ್ಟು ಬೇಕು ಈ ಜೀವಕ್ಕೆ? ನೋಡಲು ಇಷ್ಟು ದೊಡ್ಡದಾಗಿ ಕಂಡರೂ ಒಳಗೇನಿದೆ? ಬೊಳ್ಳು ಮರವಿದ್ದ ಹಾಗೆ! ನಾನು ಆಗಲೇ ಬೇಡ ಬೇಡವೆಂದು ಹೇಳಿದ್ದೆ. ನೀವು ಕೇಳಲಿಲ್ಲ. ವರುಷ ಕಳೆದ ಹಾಗೆ ನೀವು ಮೋಹನನಿಗಿಂತಲೂ ಕಡೆಯಾಗುತ್ತೀರಿ. ನನಗೆ ಗೊತ್ತುಂಟು. ಮತ್ತೆ ಏನಾದರೂ ಆದರೆ ರಾಜ ಎಲ್ಲಿ? ಹರಿ ಯಾಕೆ ಬರಲಿಲ್ಲ? ಇದು ಟೈಫೈಡ್ ಎಂದು ಹೇಳಿ ನಮ್ಮನ್ನು ಹೆದರಿಸಿ. ನನಗೆ ಕೈಕಾಲೇ ಬರುವುದಿಲ್ಲ' ಎಂದು ತೆರೆದ ಎದೆಯ ಮೇಲಿನ ಸೆರಗನ್ನು ಎಳೆದುಕೊಂಡರು.

ಗೋವಿಂದರಾಯರು ದುಪ್ಪಟಿಯನ್ನು ಮೋರೆಗೂ ಎಳೆದುಕೊಂಡು ಗಪ್ ಚಿಪ್ ಮಲಗಿದರು. ರಾತ್ರಿ ಕೂಡಾ ಮೈಗೆ ಕೈ ಇಡುವಂತಿದ್ದಿಲ್ಲ. ಸೀತಮ್ಮನವರ ಎದೆಬಡಿತ ಹೆಚ್ಚಾಯ್ತು. ಮೋಹನ ಗಾಢನಿದ್ದೆ ಹೋಗಿದ್ದ. ಸುತ್ತಲೂ ಕಾಡು. ಅಂಧಕಾರ! ಒಂಟಿಮನೆಯಲ್ಲಿ ಒಬ್ಬರೇ ಕುಳಿತಿದ್ದಾರೆ. 'ನಾಲ್ಕು ಗಂಡು ಎರಡು ಹೆಣ್ಣು ಹಡೆದರೂ ಕಷ್ಟಕಾಲಕ್ಕೊಬ್ಬರಿಲ್ಲ' ಎಂದು ಅವರು ನೆನೆಸಿಕೊಂಡರು. ಕಣ್ಣುಗಳಿಂದ ಒಂದೆರಡು ಹನಿ ಉದುರಿದುವು. ಕಣ್ಣಿಗೆ ಜೊಂಪು ಹಿಡಿಯುವ ವರೆಗೂ ಅವರ ಎರಡೂ ಕೈಗಳು ಗಂಡನ ಕಾಲುಗಳನ್ನೊತ್ತಿದುವು. ಎರಡು ದಿನ ಹೀಗೆಯೇ ಸಾಗಿತು.

ಮೂರನೇ ದಿನ ಬೆಳಗಿನ ಜಾವಕ್ಕೆ ಗೋವಿಂದರಾಯರೇ ಕರೆದರು ಹೆಂಡತಿಯನ್ನು. 'ಏನು? ಏನು?' ಎಂದು ಕೇಳುತ್ತ ಸೀತಮ್ಮ ದೀಪ ದೊಡ್ಡದು ಮಾಡಿ ಎದ್ದರು.

'ಏನಿಲ್ಲ. ಗಾಬರಿಯಿಲ್ಲ. ಬೈರಾಸ್ ತಾ. ಬೆವರಿನಿಂದ ಮೈ ಕೈ ದುಪ್ಪಟಿಯೆಲ್ಲ ಒದ್ದೆ ಮುದ್ದೆಯಾಯ್ತು.'

'ಸೀತಮ್ಮನವರು ಬೈರಾಸಿನಿಂದ ಗಂಡನ ಹಣೆ, ಮೋರೆ, ಕಂಕುಳು, ಎದೆ ಎಲ್ಲವನ್ನೂ ಒರಸಿದರು. ಅವರ ಮೈಗೆ ಕೈ ತಾಗಿದಾಗ ಬಿಸಿ ಇರಲಿಲ್ಲ. 'ಜ್ವರ ಬಿಟ್ಟಿತು' ಎಂದು ಅವರು ತಿಳಿದರು. ಆ ಮಾತು ಅವರ ಬಾಯಿಯಿಂದಲೂ ಹೊರಬಿತ್ತು.

'ಹೌದು, ಜ್ವರಬಿಟ್ಟಿತು. ಶನಿಸಂಧಿಯೂ ಬಿಟ್ಟಿತು. ಅಬ್ಬ ಶನಿಮಹಾರಾಯನ ಮಹಾತ್ಮೆಯೇ! ಕೆಲಸ ಕಳೆದ; ಹುಟ್ಟುಮನೆ ಬಿಡಿಸಿದ;

ಕಾಡಿಗಟ್ಟಿದ. ಕೊನೆಗೆ ಪ್ರಾಣ ಹಿಡಿದೆಳೆಯಲೂ ನೋಡಿದ. ಆದರೆ ದೈವ ಬಲದ ಇದಿರು ಅವನ ಕೈಸಾಗಲಿಲ್ಲ, ಬಿಟ್ಟ. ಇಂದಿಗೆ ಅವನ ಅವತಾರ ಸಮಾಪ್ತಿಯಾಯ್ತು. ಇನ್ನು ಹತ್ತು ವರುಷ ನನಗೇನೂ ಆಗುವಂತಿಲ್ಲ. ಜ್ವರ ಬರಲಿ, ಗಿರ ಹಿಡಿಯಲಿ ಏನೇನೂ ಆಗುವುದಿಲ್ಲ. ನೀನು ಎಳ್ಳಷ್ಟೂ ಗಾಬರಿಯಾಗಬೇಡ, ನೋಡು' ಎಂದು ಹೆಂಡತಿಯನ್ನು ಸಂತೈಸಿದರು.

ಈಗ ಸೀತಮ್ಮನವರ ಕಣ್ಣುಗಳಿಂದ ಆನಂದ ಬಾಷ್ಪಗಳು ಉದುರಿದವು. ರಾಜನು ಹೆಂಡತಿ ಮಗುವಿನೊಂದಿಗೆ ಬಂದು ನಾಲ್ಕು ದಿನ ಇದ್ದಾಗ ಜ್ವರದ ಅಮಲಿನಲ್ಲಿ ಆಡಿದ ಮಾತುಗಳನ್ನು ಅವರು ಹೇಳಿ ನಕ್ಕು ನಗಿಸಿದರು. ರಜೆ ದೊರೆತು ಹರಿ ಮನೆಗೆ ಬಂದಾಗಲೂ ತಂದೆಯ ಅವತಾರದ ಮಾತುಗಳನ್ನು ಹೇಳಿ, 'ನನ್ನನ್ನು ಹೆದರಿಸಿಬಿಟ್ಟರು ಮಾರಾಯರು' ಎಂದು ಮತ್ತೆ ನಕ್ಕರು.

೮

ಹರಿ ಮನೆಗೆ ಬಂದುದರಿಂದ ಗೋವಿಂದರಾಯರ ಮೋರೆಯಮೇಲೆ ಸ್ವಲ್ಪ ಗೆಲುವಿನ ಚಿಹ್ನೆಗಳು ಕಂಡುಬಂದುವು. ಸೀತಮ್ಮನವರ ಮನಸ್ಸಿನ ಬೇಸರವೂ ಬಹು ಮಟ್ಟಿಗೆ ಪರಿಹಾರವಾಯಿತು. ಅವನನ್ನು ಕಾಣದೆ ಅವರ ಜೀವ ತಳಮಳ ಹೊಂದಿದೆ. ದಸರೆ, ಕ್ರಿಸ್ಮಸ್ ರಜೆಗಳಲ್ಲೂ ಅವನು ಊರಿಗೆ ಬಂದಿರಲಿಲ್ಲ. ಆದುದರಿಂದ ಹನ್ನೆರಡು ತಿಂಗಳು ಹನ್ನೆರಡು ವರುಷಗಳಂತೆ ಅವರಿಗೆ ತೋರಿದ್ದೂ ಇದೆ. ಇಷ್ಟು ದೀರ್ಘ ಕಾಲದ ವರೆಗೆ ಇನ್ನಾವ ಮಕ್ಕಳನ್ನೂ ಪರರ ಮನೆಯಲ್ಲಿ ಅವರು ಬಿಟ್ಟು ಬಂದುದಿಲ್ಲ. ಅಕ್ಕ ಪರಕೀಯಳಲ್ಲ, ನಿಜ. ಆದರೆ ಅಕ್ಕನಂತೆ ಭಾವ ಇರಲಾರ. ಅತ್ತೆ ಮೈದುನರಿಗೆ ಅಕ್ಕನ ಕರುಳು ಕರುಣೆ ಹೇಗೆ ಬಂದೀತು? ಬಂಧುಗಳ ಮನೆಯಲ್ಲಿ ಒಂದೆರಡು ದಿನಗಳಿದ್ದರೆ ಚಂದ. ಅನ್ನ ನೀರಿಗೆ ಅವರ ಕೈ ಬಾಯಿ ಕಾಯಲು ತೊಡಗಿದ ಮೇಲೆ ತಾತ್ಸಾರವುಂಟಾಗುವುದು ಸಹಜವೇ. ಮಕ್ಕಳು ಅತ್ತಾಗ ಎತ್ತಿಕೊಳ್ಳದಿದ್ದರೆ ಕೆಲವರು ಗುಮ್ಮನ ಮುಸುಡು ಮಾಡುವರು. ನೀರೆಳೆಯಲು, ಅಂಗಡಿಯಿಂದ ಮನೆಗೆ ಓಡಾಡಲು ಒಲ್ಲೆನ್ನಬರುವುದಿಲ್ಲ. ಪೇಟೆ ಕೆಲಸ, ಕತ್ತೆ ಚಾಕರಿಗಳಿಗೆ ಹಚ್ಚುವವರೂ ಇದ್ದಾರೆ. ಇಲ್ಲದಿದ್ದರೆ ಇರು

ವುದೇ ಕಷ್ಟ. ಊಟಕ್ಕೆ ಬಟ್ಟಲಿನ ಮೇಲೆ ಕುಳಿತಾಗ ಸಹಸ್ರನಾಮಕ್ಕೆ ಆರಂಭವಾಗುವುದುಂಟು. 'ಊಟಕ್ಕೆ ತಯ್ಯಾರ್, ಉಗುರು ಮುರಿದು ಒಂದು ಕೆಲಸ ಮಾಡುವಂತಿಲ್ಲ' ಎಂದು ಒಟಗುಟ್ಟುವರು. ಲೋಕಾಚಾರ ಹೀಗೆ.

ಸೀತಮ್ಮನವರ ಲೋಕಾನುಭವ ಹಾಗೆ. ಹೊರತು, ಹರಿಗೆ ಅಕ್ಕನ ಮನೆಯಲ್ಲಿ ಅಂಥಿಂಥ ಕಷ್ಟವೆಂದವರ ಭಾವನೆಯಲ್ಲ. ಆದರೂ ತಮ್ಮ ಕಣ್ಣೆದಿರು ಇದ್ದಂತೆ ಮುಂದಿಯ ಮನೆಯಲ್ಲಿ ಆಗಲಾರದೆಂದು ಅವರ ತಿಳಿವಳಿಕೆ. ತಾವು ಮಕ್ಕಳಿಗೆ ಹೋಳಿಗೆ ತುಪ್ಪ ಇಕ್ಕಿದ್ದು ಅಷ್ಟರಲ್ಲೇ ಇದೆ. ಆ ಜಂಭದ ಮಾತನ್ನು ಅವರು ಕೊಚ್ಚಿಕೊಳ್ಳುವುದೂ ಇಲ್ಲ. ಬಡತನದಿಂದಲೇ ಮಕ್ಕಳನ್ನು ಬೆಳೆಸಿದೆವೆಂದು ಅವರು ಒಪ್ಪಿಕೊಳ್ಳುವರು. ಹಾಲಿನ ಬದಲು ಗಂಜಿ ನೊರೆಯನ್ನೇ ತೆಗೆದು ಅನ್ನಕ್ಕೆ ಕಲಿಸಿ ಮಕ್ಕಳಿಗೆ ಉಣಿಸಿದ್ದೂ ಉಂಟು. ಮರದ ತೊಟ್ಟಲಿನ ಬದಲು ಸೀರೆಯನ್ನೇ ಜಂತೆಗೆ ಕಟ್ಟಿ ಮಗುವನ್ನು ತೂಗಿ ಜೋಗುಳ ಹಾಡಿ ಮಲಗಿಸಿದ್ದೂ ಇದೆ. ಮಹಾಯುದ್ಧ ಕಾಲದಲ್ಲಿ ಅಕ್ಕಿ ಮುಡಿಗೆ ಮೂವತ್ತು ರೂಪಾಯಿ ಆದಾಗ ಅವರು ಉಪವಾಸವಿದ್ದ ದಿನಗಳಿಗೆ ಲೆಕ್ಕವಿಲ್ಲ. ಉಡುಪಿಯ ಭೋಜನಶಾಲೆಗೆ ತೆರಳಲು ಒಮ್ಮೊಮ್ಮೆ ಮನಸ್ಸಾ ಗಿದ್ದರೂ ಮಠಗಳ ಕೊಟ್ಟಾರಿ ಭಂಡಾರಿಗಳಿಂದ ಹಿಡಿದು ಸ್ವಾಮಿಗಳ ವರೆಗಿನ ದೆವ್ವ ದೇವರುಗಳ ದೃಷ್ಟಿ ಬಿದ್ದೀತೆಂದು ಅಂಜಿ ಅವರು ಹೋಗಲಿಲ್ಲ. ಆದುದ ರಿಂದ ಹೊಟ್ಟೆಗೆ ಗೆಣಸಿನ ಸಮಾರಾಧನೆ ನಡೆದಿತ್ತು. ಒಂದೊಂದು ದಿನ ಸ್ಪಜಂಕ್ ಸೊಪ್ಪು, ಕುಂಬಳದ ಕುಡಿಗಳನ್ನು ಬೇಯಿಸಿ ತಿನ್ನುತ್ತಿದ್ದರು. ಒಂದೇ ಸೀರೆಯಲ್ಲಿ ಕಾಲ ನೂಕಿದುದನ್ನು ಅವರು ಮರೆತಿಲ್ಲ. ಉಟ್ಟ ಸೀರೆಯ ಒಂದು ಚುಂಗು ಒಣಗಿದ ಮೇಲೆ ಅದನ್ನು ಸುತ್ತಿಕೊಂಡು ಮತ್ತೊಂದು ಚುಂಗನ್ನು ಬಿಸಿಲಿಗೆ ಹಿಡಿದೂ ಬದುಕಿದರು. ಗೋವಿಂದರಾಯರು ಹಗಲು ಉಟ್ಟ ಧೋತರವನ್ನೇ ರಾತ್ರಿ ಹೊದೆದು ಮಲಗಿದ್ದೂ ಸುಳ್ಳಲ್ಲ. ಸೀಮೆಎಣ್ಣೆ ಲಭಿಸದೆ ಇದ್ದಾಗ ಹೊನ್ನೆಣ್ಣೆ, ಕುರ್ಸಾನ್ ಎಣ್ಣೆಗಳ ಹಣತೆ ಹಚ್ಚಿ ರಾತ್ರಿ ಊಟ ಮಾಡಿದರು. ಅದರ ಬೆಲೆಯೂ ಕೈಗೆ ನಿಲುಕದಷ್ಟು ಏರಿದಾಗ ತೆಂಗಿನ ಮಡಲನ್ನು ಒಲೆಗಿಟ್ಟು ಅದರ ಬೆಳಕಿನಲ್ಲಿ ಮಕ್ಕಳು ಉಂಡರು. ಇಷ್ಟು ಕಷ್ಟ ಬಂದಿದ್ದರೂ ಮಕ್ಕಳ ಒಪ್ಪೊತ್ತಿನ ಒಂದು ಗಂಜಿಗೆ ಅವರು ತಾತ್ಸಾರ ಮಾಡಿಲ್ಲ. ತಮ್ಮ ಗಂಜಿಯನ್ನು ತಾವೇ ಸಂಪಾದಿಸಿಕೊಳ್ಳಲು ಸಾಧ್ಯವಾಗುವ ಹಾಗೆ ಮಕ್ಕಳಿಗೆ ನಾಲ್ಕು ಅಕ್ಷರಗಳನ್ನೂ ಕಲಿಸಿದರು.

ರಾಜನಿಗೆ ಮೊದಲು ಕಷ್ಟದಿಂದಲೇ ಕಲಿಸಿದರು. ಮೊದಲು ಮನೆಯಲ್ಲೇ ಸೀತಮ್ಮನವರು 'ಅ ಆ' ಉರು ಹಾಕಿಸಿದರು. ವಾರಕ್ಕೊಮ್ಮೆ ಮನೆಗೆ ಬಂದಾಗ ಮಗ್ಗಿಗಿಗ್ಗಿ ಗೋವಿಂದರಾಯರು ಹೇಳಿಕೊಟ್ಟರು. ಓದಲು ಬರೆಯಲು ಚನ್ನಾಗಿ ಬಂದ ಮೇಲೆ ಅವನು ಹೈಸ್ಕೂಲಿಗೆ ತೆರಳಿದ. ಶಾಲೆಯ ಸಂಬಳದಲ್ಲಿ ಅವನಿಗೆ ಸ್ವಲ್ಪ ಮಾಫಿಯೂ ದೊರೆಯಿತು. ಬಲ್ಲಾಳರ ಮಕ್ಕಳು ತಾವು ಕಲಿತು ಬಿಟ್ಟ ಪಾಠಪುಸ್ತಕಗಳನ್ನು ಕೊಟ್ಟರು. ಹೇಗೋ ಕಲಿತ, ಹೇಗೋ ಉತ್ತೀರ್ಣನಾದ. ಅವನ ಹಣೆಬರಹ ಒಳ್ಳೇದಿತ್ತು. ಆಗಿನ ಕಾಲವೂ ಅಂತಹುದೇ. ಅವನ ಪುಣ್ಯಕ್ಕೆ ಬೇಗನೇ ಒಂದು ಗುಮಾಸ್ತ ಕೆಲಸವೂ ದೊರೆಯಿತು. ಆ ಮೇಲೆ ಅವನೂ ಸಂಸಾರಕ್ಕೆ ಸ್ವಲ್ಪ ನೆರವಾದ. ಶಿವರಾಯನಿಗೂ ಎಸ್. ಎಸ್. ಎಲ್. ಸಿ. ವರೆಗೆ ಓದಿಸಲು ಸಾಧ್ಯವಾಯ್ತು. ಗುಲಾಬಿ ಕಮಲೆಯರೂ ಉರುಟಣೆಪದ ಓದುವಷ್ಟು ಕಲಿತರು. ಹರಿಗೂ ಹಿರಿಯಣ್ಣನೇ ಸ್ವಲ್ಪ ಸ್ವಲ್ಪ ಕೊಟ್ಟ. ಆದರಿಂದ ಅವನು ಒಂದು ಮೆಟ್ಟಲಿಗೆ ಬಂದ. ಇನ್ನು ಅವನು ಎಲ್ಲಾದರೂ ತೆರಳಿ, ಕೋಳಿಯಂತೆ ತನ್ನ ಹೊಟ್ಟೆ ತಾನು ತುಂಬಿಸಿಕೊಳ್ಳಲು ಏನೂ ಅಡ್ಡಿಯಿಲ್ಲವೆಂದು ಗೋವಿಂದರಾಯರ ಮನಸ್ಸಿನ ಗೆಲುವು.

ಆದುದರಿಂದ ಹರಿ ಬಂದ ಕೂಡಲೇ 'ಪರೀಕ್ಷೆಯಲ್ಲಿ ಚನ್ನಾಗಿ ಮಾಡಿದೆಯಾ? ಕೊಶ್ಚನ್ ಪೇಪರ್ಸ್ ಹೇಗಿದ್ದುವು? ಪಾಸಾಗಬಹುದಾ?' ಎಂದು ಅವರು ಪ್ರಶ್ನಿಸಿದರು.

'ಚನ್ನಾಗಿ ಮಾಡಿದ್ದೇನೆ. ಹಿಸ್ಟರಿ, ಜಾಗ್ರಫಿ ಸುಲಭವಿತ್ತು. ಸಂಸ್ಕೃತ ಪೇಪರ್ ಸ್ವಲ್ಪ ಕಠಿಣ. ಆದರೂ ಪಾಸಾಗಲು ಅಡ್ಡಿಯಿಲ್ಲ. ಪಾಸಾದರೆ ಕಾಲೇಜಿಗೆ ತೆರಳಬೇಕು.'

'ಕಾಲೇಜಿಗೆ ತೆರಳಬೇಕು' ಎಂಬ ಮಗನ ಮಾತುಗಳನ್ನು ಕೇಳಿ ಗೋವಿಂದರಾಯರಿಗೆ ಸೋಜಿಗವಾಯಿತು. ಒಂದು ಕ್ಷಣ ಅವರು ಕಣ್ಣಿವೆಗಳನ್ನೂ ಮುಚ್ಚಲಿಲ್ಲ. ಬಾಯಿ ಅಗಲಿಸಿ ಅವನನ್ನು ಕಾಲಿನಿಂದ ತಲೆಯ ವರೆಗೂ ನೋಡಿದರು. ಹರಿ ಉಳಿದ ಅಣ್ಣಂದಿರಿಗಿಂತ ಭಿನ್ನವಾಗಿಯೇ ಅವರಿಗೆ ತೋರಿದ. ಉಳಿದಿಬ್ಬರೂ ಬೆಳೆದು ದೊಡ್ಡವರಾಗಿದ್ದಾರೆ. ರಾಜ ತಂದೆಯಷ್ಟೇ ಉದ್ದ. ಅವರಿಗಿಂತ ಸ್ವಲ್ಪ ದಪ್ಪ. ಅವರದೇ ಹೋಲಿಕೆ. ಶಿವರಾಯ ಒಂದು ಮುಷ್ಟಿ ಗಿಡ್ಡ. ತಂದೆಯ ಮೈಕಟ್ಟಿದ್ದರೆ ತಾಯಿಯ ಬಣ್ಣವೂ ಕೂಡಿದೆ. ಆದರೆ ಹರಿ ಬಡಕಲು ಜೀವ. ಕೈ ಕಾಲುಗಳೂ

ಉದ್ದ. ಬಸಳೆಯಂತೆ ಮೃದು. ಮಾವಿನ ತಳಿರಿನಂತಹ ತುಟಿಗಳು. ಅಗಲವಾದ ಹಣೆ. ನಗುವ ಕಣ್ಣುಗಳು ಮೋರೆಯಲ್ಲಿ ಎದ್ದು ಕಾಣಿಸುತ್ತಿವೆ. ಹತ್ತು ಹದಿನಾರನೇ ವಯಸ್ಸಿನಲ್ಲಿ ಅವನ ತಾಯಿಯೂ ಹೀಗೆಯೇ ಇದ್ದ ಳೆಂದು ಗೋವಿಂದರಾಯರಿಗೆ ಫಕ್ಕನೆ ಹೊಳೆಯಿತು. ಆ ಸವಿ ನೆನಪು ಬಂದು ದರಿಂದ ಮುಗುಳು ನಕ್ಕು, 'ಕಾಲೇಜಿಗೆ ಹೋಗುವುದೇನು ಹುಡುಗಾಟವಾ? ಎಷ್ಟು ಹಣ ಬೇಕು, ಏನು ಕಥೆ?' ಎಂದು ನುಡಿದರು.

'ನೀವು ಕಳಿಸದಿದ್ದರೆ ನೋಡೋಣ. ನಾನೆಲ್ಲಿ ಬಿಡುತ್ತೇನೆ?' ಎಂದು ಹೇಳಿ ಅವನು ಒಳಗೆ ನಡೆದ.

ಗೋವಿಂದರಾಯರು ಮೌನಸಮಾಧಿಯಲ್ಲಿ ತಲ್ಲೀನರಾದರು. ಇದೊಂದು ಹೊಸ ಸಮಸ್ಯೆ ಉದ್ಭವಿಸಬಹುದೆಂದು ಅವರು ಕನಸು ಮನಸ್ಸಿನಲ್ಲಿಯೂ ನೆನೆಸಿರಲಿಲ್ಲ. ಇದನ್ನು ಹೇಗೆ ನಿವಾರಣೆಗೊಳಿಸಬೇಕೆಂಬ ಯೋಚನೆ ಅವರಿಗೆ. ಕಲಿಸುವ ಬಗೆ ಹೇಗೆ? ಸಾವಿರಾರು ರೂಪಾಯಿಗಳನ್ನು ಕೊಡುವವರು ಯಾರು? ರಾಜನ ಕೈ ಈಗಲೇ ಕಟ್ಟಿದೆ. ಕಾಲೇಜಿನ ಮಾತೆತ್ತಿದರೆ ಅವನು ರೇಗದೆ ಇರಲಾರ. ತನ್ನ ಕೈ ಕೂಡ ಗಿಡ್ಡಾಗಿದೆ. ಇದ್ದ ಫಂಡಿನ ಹಣ ಆರು ತಿಂಗಳಿಗೂ ಸಾಲದು. ಮಾಷ್ಟ್ರ ಕೆಲಸವಿರುತ್ತಿದ್ದರೆ ಏನಾದರೂ ವೇಷ ಕಟ್ಟ ಬಹುದಿತ್ತು. ಅವನು ಕಲಿವಾಗ ಬೆಳಗಾಗಿಬಿಟ್ಟಿತು. ಮುಂದೆ ಕಲಿಸುವ ವಿಚಾರ ಆವರ ಯಾರ ತಲೆಯಲ್ಲೂ ಇಲ್ಲ. ಕಲಿತು ಮಾಡುವುದಾದರೂ ಏನು? ಬಿ. ಎ. ಆದ ಜನರಿಗೇ ಈಗಿನ ಕಾಲಕ್ಕೆ ಕೆಲಸ ದೊರೆಯುವುದು ಕಷ್ಟ ವಾಗಿದೆ. ಹತ್ತು ಇಪ್ಪತ್ತು ರೂಪಾಯಿಗಳ ಸಂಬಳದ ಕೆಲಸಗಳಿಗೆ ಸಾವಿರಾರು ಜನ ಅರ್ಜಿ ಹಾಕುತ್ತಿದ್ದಾರೆಂದು ರಾಜ ಕೂಡಾ ಒಮ್ಮೆ ಮಂಗಳೂರಿನಿಂದ ಬಂದಾಗ ಹೇಳಿದ್ದುಂಟು. ತಿಂಗಳಿಗೆ ಹತ್ತು ರೂಪಾಯಿ ಸಂಪಾದನೆ ಇಲ್ಲದ ಎಲ್. ಎಲ್. ಬಿ. ವಕೀಲರು ಮಂಗಳೂರಲ್ಲಿ ಮನೆಗೊಬ್ಬರಂತೆ! ಹೀಗಿರುವಾಗ ಹರಿ ಕಲಿತು ಮಾಡುವುದಾದರೂ ಏನು, ಎಂದು ಗೋವಿಂದರಾಯರು ಅವನ ಮನಸ್ಸಿನೊಳಗೆ ಹೊಕ್ಕು ಒಂದೊಂದೇ ಪರೆ ಸರಿಸಿ ನೋಡಲಾರಂಭಿಸಿದರು.

ಈ ಸುದ್ದಿಯನ್ನು ಒಂದು ಆದಿತ್ಯವಾರ ಬಂದ ರಾಜನ ಕಿವಿಗೂ ಹಾಕಿದರು ಗೋವಿಂದರಾಯರು. ಊಹಿಸಿದಂತೆ ಮೊದಲು ಅವನು 'ಕಾಲೇ ಜಲ್ಲ. ಐ. ಸಿ. ಎಸ್. ಪರೀಕ್ಷೆಗೆ ಇವನು ಲಂಡನ್ನಿಗೆ ಹೋಗಲಿ' ಎಂದು ರೇಗಿದ. ಮತ್ತೆ ಊರಿಗೆ ಹೊರಟಾಗ ಮನೆಯ ಮೇಲಿನ ರಸ್ತೆಯ ವರೆಗೂ ಬೀಳ್ಕೊ

ಳ್ಳಲು ಬಂದ ತಂದೆಯನ್ನು ನಿಲ್ಲಿಸಿ ಸಮಾಧಾನದಿಂದ ಹೇಳಿದ— ' ಅಪ್ಪಯ್ಯ, ನಮ್ಮಂತಹ ಬಡವರಿಗೆ ಕಾಲೇಜ್ ಶಿಕ್ಷಣ ಸಾಧ್ಯವಿದೆಯಾ ? ಅದೆಲ್ಲ ದೊಡ್ಡ ದೊಡ್ಡ ಜಮೀನ್ದಾರರ ಮಕ್ಕಳಿಗೋ ವ್ಯಾಪಾರಿಗಳ ಮಕ್ಕಳಿಗೋ ಹೇಳಿದ್ದು. ದುಡ್ಡು ಹೇಗೆ ವೆಚ್ಚ ಮಾಡಬೇಕೆಂದು ಅವರಿಗೆ ತೋರುವುದಿಲ್ಲ. ಅದಕ್ಕೆ ಕಾಲೇಜೊಂದು ದಾರಿ ಅವರಿಗೆ. ಮಂಗಳೂರಲ್ಲಿ ನಾನು ದಿನಂಪ್ರತಿ ನೋಡು ತ್ತಿದ್ದೇನೆ. ಅವರ ಉಡುಗೆ ತೊಡುಗೆಗಳೇನು ? ಶೋಕೇನು ? ಅವರು ಚಾ, ಸಿನಿಮಾ, ಸಿಗರೇಟುಗಳಿಗೆ ವೆಚ್ಚ ಮಾಡುವ ಹಣ ನಮ್ಮೆರಡು ಸಂಸಾರಗಳಿಗೆ ಸಾಕು. ಕಾಲೇಜಿನ ಪುಸ್ತಕಗಳಿಗೆಷ್ಟು ಹಣ ಬೇಕು ? ಫೀ ಎಷ್ಟು ಏರಿಸಿದ್ದಾರೆ ಈಗ ? ಬಡವರ ಮಕ್ಕಳಿಗಾಗಿ ಸರಕಾರ ಕಟ್ಟಿಲ್ಲ ಕಾಲೇಜನ್ನು ! ಬಡವರೆಲ್ಲರೂ ಕಲಿಯಬೇಕೆಂದು ಸರಕಾರ ಬಯಸುವುದೂ ಇಲ್ಲ. ಏಕೆಂದರೆ ಕಲಿತ ಬಡವರು ನಾಳೆ ತಮಗೆ ತಿರುಗಿ ನಿಲ್ಲುವರೆಂದು ಬ್ರಿಟಿಷರಿಗೆ ಗೊತ್ತು. ಶ್ರೀಮಂತರ ಮಕ್ಕಳಿಗೆ ಯಾವುದೂ ಬೇಡ. ಗಾಂಧಿಯವರೂ ಬೇಡ, ಗಾಂಧಿರಾಜ್ಯವೂ ಬೇಡ. ಗಾಂಧೀ ರಾಜ್ಯ ಬಂದ ಮೇಲೆ ಈ ಜಮೀನ್ದಾರರು ವ್ಯಾಪಾರಿಗಳು ಅದನ್ನು ಸುಸೂತ್ರ ನಡೆಯಲು ಬಿಟ್ಟೇರೆಂದು ತಿಳಿದಿದ್ದೀರಾ ? ಇದು ಬೇಕು ಅದು ಬೇಡ. ಮತ್ತೆ ಒಬ್ಬನನ್ನು ಮತ್ತೊಬ್ಬ ಸುಲಿದು ತಿನಲುಂಟು. ಅವನು ಅಣ್ಣ ಇವನು ತಮ್ಮನೆಂದೂ ನೋಡಲಾರರು. ಹಾವು ಹಾವೇ. ಗಾಂಧಿ ರಾಜ್ಯ ಬಂದ ಮೇಲೆ ಅದರ ವಿಷವೇನೂ ಕಡಿಮೆಯಾಗುವುದಿಲ್ಲ.'

' ನೀನು ಹೇಳುವುದೆಲ್ಲ ಸರಿ. ಮತ್ತೆ ಹೇಗೆ ಮಾಡಲಿ ರಾಜ ? '

' ನಾನಾದರೂ ಏನು ಮಾಡಲಿ ಅಪ್ಪಯ್ಯ ? ನನ್ನ ಕಾಲು ಕೆಸರಲ್ಲಿದೆ. ನಾನು ಮುಳುಗುವುದೊಂದೇ ಬಾಕಿ. ನಿಮಗೆ ಅದೆಲ್ಲ ಗೊತ್ತಿಲ್ಲ. ಇದೇನು ಆಗುವ ಹೋಗುವ ವ್ಯಾಪಾರವಾ ? ಅವನಿಗೆ ಮನಸ್ಸಿದ್ದರೆ ಇಲ್ಲೇ ಎಲ್ಲಾದರೂ ಪಂಚ್ಯಾತ್ ಶಾಲೆಯಲ್ಲಿ ಮಾಷ್ಟ್ರ ಕೆಲಸ ಮಾಡಲಿ. ಪಂಚ್ಯಾತ್ ಪ್ರೆಸಿಡೆಂಟರ ಗುರುತು ಪರಿಚಯ ನನಗಿದೆ. ನೀವೇ ಮಾತನಾಡಿ ನೋಡಿ.'

' ಆಗಲಿ, ಮತ್ತೇನು ಮಾಡೋಣ ? ' ಎಂದು ರಸ್ತೆಯಿಂದ ಗೋವಿಂದ ರಾಯರು ಹಿಂತಿರುಗಿದರು. ಅವರ ಪೆಚ್ಚು ಮೋರೆ ಕಂಡೇ ಹರಿಗೆ ಅರ್ಥ ವಾಯಿತು. ಎಲ್ಲವನ್ನೂ ಕೇಳಿ ತಿಳಿದುಕೊಂಡಮೇಲೆ ಮುಖಮಂಟಪದ ದಂಡೆ ಯ ಮೇಲೆ ಕುಳಿತಿದ್ದ ಹರಿ ಎದ್ದು, ' ಅಪ್ಪಯ್ಯ, ಹಾಗಾದರೆ ನಾನೆಲ್ಲಾದರೂ ಹೊರಟುಹೋಗುತ್ತೇನೆ ' ಎಂದು ದಡಕ್ಕನೆ ನುಡಿದ.

ಬಿದಿರಿನ ಕಣೆ ಮೈಗೆ ನೆಟ್ಟಂತಾಯಿತು ಗೋವಿಂದರಾಯರಿಗೆ.

'ಎಲ್ಲಿಗೆ ಹೋಗುತ್ತೀ? ನಿನ್ನಲ್ಲಿ ಕಾಸೇನಿದೆ? ಹೋಗಿ ಮಾಡುವುದಾದರೂ ಏನು?' ಎಂದು ಏಕಕಾಲಕ್ಕೆ ಅವರು ಅನೇಕ ಪ್ರಶ್ನೆಗಳನ್ನು ಕೇಳಿದರು.

'ಎಲ್ಲಾದರೂ ಹೋದ. ಕೈಕಾಲು ಗಟ್ಟಿಯಾಗಿವೆಯಲ್ಲ! ಬೇಡಿ ತಿಂದ. ಏನಿಲ್ಲದಿದ್ದರೆ ಕೊನೆಗೆ ಗಾಂಧೀ ಮಹಾರಾಜ್–ಕೀ–ಜೈ ಎಂದ.'

ಮಾಷ್ಟ್ರ ಕೆಲಸ, ಆ ಕೆಲಸ, ಈ ಕೆಲಸಗಳ ಸವಿ ತೋರಿಸಿ ಬಗೆ ಬಗೆಯಿಂದ ಹೇಳಿಕೊಂಡರೂ ಹರಿ ಕೇಳದಾದ. ಹತ್ತು ಹದಿನೇಳು ವಯಸ್ಸಿನ ಈ ಎಳೆಹರೆಯದಲ್ಲೇ ಅವನ ನಿಶ್ಚಿತ ಮನೋಬಲವನ್ನು ಕಂಡು ಗೋವಿಂದರಾಯರು ತಬ್ಬಿಬ್ಬಾದರು. ಅದು ಹಟವೆಂದೂ ಅವರು ಭಾವಿಸಿದರು. ಮಗನ ಮನಸ್ಸನ್ನು ಪರಿವರ್ತಿಸಲಾರದೆ ಕೊನೆಗೆ ಅವರು ಈ ಒಂದು ಮಾತು ನುಡಿದರು–– 'ಆಯ್ತು. ನೀನು ಹೇಳಿದಂತೆಯೇ ಆಗಲಿ. ನೀನು ಬೇಕಾದ್ದಲ್ಲಿ ಹೋಗು, ನಮ್ಮಡ್ಡಿಯಿಲ್ಲ. ಆದರೆ ನನ್ನ ಒಂದು ಮಾತು ಕೇಳು. ಇನ್ನು ಮಳೆಗಾಲ ಆರಂಭವಾಗಲು ಬಹಳ ದಿನಗಳಿಲ್ಲ. ಅದು ಮುಗಿದ ಮೇಲೆ ನಿನ್ನ ಮನಸ್ಸಿಗೆ ಇಷ್ಟತೋರಿದಂತೆ ಮಾಡು.'

ತಂದೆಯ ಮಾತನ್ನು ಹರಿ ಮೀರಲಿಲ್ಲ. ತಂದೆಯ ಕೆಲಸದಲ್ಲೊ ಒಂದೊಂದು ದಿನ ನೆರವಾದ. ಮಳೆ ಬೀಳುವುದರೊಳಗೆ ಗೆಣಸು ಅಗೆಯಲು ಗೋವಿಂದರಾಯರು ಮೋಹನನೊಂದಿಗೆ ಗದ್ದೆಗೆ ತೆರಳಿದಾಗ ಅವನೂ ಬಂದ. ಅವರ ಕೈಯಿಂದ ಹಾರೆ ತೆಗೆದುಕೊಂಡು ತಾನು ದರ ಅಗೆದ. ಆದರೆ ಬೀಳಿನ ಅಚೀಚೆಯ ಮಣ್ಣನ್ನು ಅಗೆವಾಗಲೇ ಅವನ ಮೈಯಲ್ಲಿ ಬೆವರು ಧಾರಾಕಾರವಾಗಿ ಇಳಿಯಿತು. ಒಂದು ಮಾರು ಅಗೆದ ಮೇಲೆ ಅಬ್ಬ ಎಂದು ಬಗ್ಗಿದ ಬೆನ್ನನ್ನು ನೀಟ ಮಾಡಲೆತ್ನಿಸಿದ. ಸುವರ್ಣಗಡ್ಡೆ ಅಗೆದಾಗಲೂ ಅಷ್ಟೆ. 'ಬಿಡು ಬಿಡು. ನಿನ್ನಿಂದ ಆಗುವುದಿಲ್ಲ' ಎಂದು ಗೋವಿಂದರಾಯರೆ ಹಾರೆಯನ್ನು ಕಿತ್ತುಕೊಂಡರು. ತಾಯಿ ಬೆನ್ನಿಗೆ ತೆಂಗಿನೆಣ್ಣೆ ತಿಕ್ಕಬೇಕಾಯ್ತು. 'ನಿನಗೆ ಯಾಕೆ ಬೇಕು ಈ ಕೆಲಸ? ಅದೆಲ್ಲ ನಿನ್ನಿಂದಾಗುವುದಿಲ್ಲ. ಮೋಹನನಷ್ಟೂ ನಿನಗೆ ದೈಹಿಕ ತ್ರಾಣವಿಲ್ಲ. ನೀನು ಯಾವ ಊರಿಗೆ ಹೋಗಿ ಏನು ಮಾಡುತ್ತೀಯೋ? ನಮಗೆ ಇದೊಂದು ದೊಡ್ಡ ಚಿಂತೆಯೇ ಸರಿ. ನೀನು ಕಾಗದ ಕಪ್ಪು ಮಾಡಿ ಬದುಕಬೇಕು, ಹೊರತು ಬೇರೇನೂ ಆಗಲಿಕ್ಕಿಲ್ಲ.

ಗಳಶಂಕರ' ಎಂದು ಸೀತಮ್ಮ ಗೊಣಗುಟ್ಟಿದರು.

ಹುಟ್ಟಿದಂದಿನಿಂದ ಅಂತಹ ಕೆಲಸ ಮಾಡಿಯೂ ಗೊತ್ತಿಲ್ಲ ಅವನಿಗೆ. ಬುದ್ಧಿ ತಿಳಿಯುವ ಮೊದಲೇ ಅಕ್ಕನ ಕೈಹಿಡಿದುಕೊಂಡು ಶಾಲೆಗೆ ತೆರಳಿದ್ದ. ಶಾಲೆಗೆ ಸೇರಿದ ಮೇಲೆ ಆಟ ಪಾಠಗಳ ಮೇಲೆಯೇ ಪ್ರೀತಿ. ಅದು ದೊಡ್ಡವನಾಗುತ್ತ ಬಂದಾಗಲೂ ಕಡಿಯಲಿಲ್ಲ. ಈಗ ಶಾಲೆ ಬಿಟ್ಟು ಬಂದಾಗಲೂ ಪುಸ್ತಕಗಳ ಮೇಲಿನ ಪ್ರೇಮ ಬಿಟ್ಟಿಲ್ಲ, ಪುಸ್ತಕಗಳನ್ನು ಬಿಟ್ಟು ಬಂದಿಲ್ಲ. ಮುಂಡಾಜೆಯಿಂದ ಹಳೇ ಟ್ರಂಕನ್ನು ತನ್ನ ತಲೆಯ ಮೇಲೆಯೇ ಹೊತ್ತು ತಂದಿದ್ದ. ಒಂದೆರಡು ಗಂಟೆಯಾದರೂ ಓದದ ದಿನವಿಲ್ಲ. ಮನೆಯಲ್ಲಿ ಬೇಸರವಾದಾಗ ಹೊಳೆಯ ಬದಿಗೆ ತೆರಳಿ ಮರದ ಬೇರಿನ ಮೇಲೆ ಕುಳಿತು ಓದುತ್ತಿದ್ದ. ಕಾಲೇಜಿಗೆ ತೆರಳುವ ವಿಚಾರಕ್ಕೆ ಕಲ್ಲು ಬಿದ್ದ ಮೇಲೆ ಓದಲೂ ಬೇಸರ ಬಂದಿತು. ಒಂದು ದಿನ ಹೊಳೆ ದಾಟಿ ಬಂಗಾಡಿ ಪೇಟೆ ನೋಡಿ ಬಂದ. ಇನ್ನೊಂದು ದಿನ ಬಂಗಾಡಿ ಪೇಟೆಯ ಶಾಲೆಯಲ್ಲಿ ನಡೆದ ತಾಳಮದ್ದಲೆ ಕಂಡ. ನಾವೂರು ಮಾರ್ಗವಾಗಿ ಗಡಾಯಿಗೆ ತೆರಳಿ ಜುಮಲ ಬೀಬಿ ಕೋಟೆ ಕಟ್ಟಿರುವ ಆ ಮಹಾ ಕಲ್ಲನ್ನೇರಿ ಮರಳಿದ. ಅವರಿವರ ಮಾತು ಕೇಳಿ ಮರುಳಾಗಿ ಮತ್ತೆ ಎಳ್ನೀರ್ ಘಟ್ಟ ಹತ್ತಿದ. ಕಳಸದ ವರೆಗೂ ತೆರಳಿ ಘಟ್ಟದ ಚಾ ಕಾಫಿ ತೋಟಗಳನ್ನು ನೋಡಿದ. ಮರಳಿದ ಮೇಲೆ ತಾಯಿ ತಂದೆಯ ಮುಂದೆ ತನ್ನ ಅನುಭವವನ್ನೂ ವರ್ಣಿಸಿದ. ಅದನ್ನು ಕೇಳಿ ಗಡಾಯಿ ಕಲ್ಲನ್ನೇರಬೇಕೆಂದು ತೋರುತ್ತಿತ್ತು ಗೋವಿಂದರಾಯರಿಗೆ. ಎಳ್ನೀರ್ ಘಟ್ಟ ಹತ್ತಿ ಅಲ್ಲಿರುವ ಜನರನ್ನು ಕಾಣಬೇಕೆಂದೂ ಆತುರವಾಗುವುದು. ಆದರೆ ಅದು ಸಾಧ್ಯವಾದೀತೋ ಇಲ್ಲವೋ ಎಂಬ ಶಂಕೆ ಅವರಿಗೆ. ಅಲ್ಲದೆ ಈ ವರುಷ ಗದ್ದೆ ಕೂಡಾ ಬಿತ್ತಬೇಕೆಂದು ಅವರು ಸಂಕಲ್ಪಿಸಿದ್ದರು. ಅದರ ಪೂರ್ವ ತಯಾರಿಯಲ್ಲೇ ಅವರ ವೇಳೆ ಕಳೆಯಿತು.

ಬಂಗಾಡಿಯಲ್ಲಿ ಮಳೆ ಬರುವ ಮೊದಲೇ ಬೇಸಾಯದ ಕೆಲಸ ಆರಂಭವಾಗುತ್ತದೆ. ಹೆಚ್ಚಿನ ಬೆಟ್ಟುಗದ್ದೆಗಳನ್ನೂ ಮಜಲುಗಳನ್ನೂ ಮೊದಲೇ ಉತ್ತು ಪುಡಿಮಾಡಿ ಹಲಿಗೆ ಹಾಕಿ ಬಿತ್ತಿಬಿಡುವರು. ಅದನ್ನು ಮತ್ತೆ ಮುಟ್ಟುವುದಿಲ್ಲ. ಪೈರಾದಾಗಲೇ ಕೊಯ್ಯಲು ಬರುವರು. ಬತ್ತದ ಈ ಸಸಿಗಳು ಮೊಳ ಉದ್ದವಾದೊಡನೆಯೇ ಹರಿದು ಪುನಃ ಅದೇ ಗದ್ದೆಗಳನ್ನು ಮಳೆಗಾಲದಲ್ಲಿ ಉತ್ತು ಕೆಸರುಗದ್ದೆಗಳನ್ನಾಗಿ ಮಾರ್ಪಡಿಸಿ ನೇಜಿ ನೆಡುವ ಗೊಡ

ವೆಗೆ ಹೋಗುವುದು ಕಡಿಮೆ. ಬೈಲುಗದ್ದೆಗಳಲ್ಲಿ ಮಾತ್ರ ನೇಜಿ ನೆಡುವರು. ಅಂಥ ಗದ್ದೆಗಳನ್ನು ಯಾರೂ ಬಹಳ ಇಟ್ಟುಕೊಳ್ಳುವುದಿಲ್ಲ. ಏಕೆಂದರೆ ಎತ್ತುಗಳ ಕೊರತೆ, ಆಳುಗಳ ಅಭಾವ, ನೆರೆಹಾವಳಿ, ಮಲೆನಾಡಿನ ಈ ಭಾಗ ದಲ್ಲಿ ಎಂದೂ ತಪ್ಪಿಲ್ಲ. ಆದುದರಿಂದ ಗದ್ದೆ ಪುಡಿಮಾಡಿ ಮೊದಲೇ ಬಿತ್ತಿಗೆ ಕೆಲಸ ಮುಗಿಸುವವರೇ ಬಹಳ ಮಂದಿ. ಇದನ್ನು ಆಳುಗಳ ಮೂಲಕ ಅರಿತ ಗೋವಿಂದರಾಯರೂ ಅದೇ ನಿರ್ಧಾರಕ್ಕೆ ಬಂದಿದ್ದರು. 'ಮಳೆ ಬರುವುದ ರೊಳಗೆ ಆದಷ್ಟು ಉತ್ತು ಬೀಜ ಬಿತ್ತಿಬಿಡೋಣ. ಮಳೆ ಆರಂಭವಾದ ಮೇಲೆ ಜನ ಸಿಗಲಿಕ್ಕಿಲ್ಲ. ಹೊಳೆಯಾಚೆಯವರು ಬಂದರೆ ಕೆಲವು ಬೈಲು ಗದ್ದೆಗಳಲ್ಲಿ ನೇಜಿ ನೆಟ್ಟರೆ ಸರಿ. ಎಲ್ಲ ಗದ್ದೆಗಳಲ್ಲೂ ಈ ವರುಷ ಬೇಸಾಯ ಮಾಡಲು ನಮಗೆ ಅನುಕೂಲವಾಗಲಿಕ್ಕಿಲ್ಲ. ಅದಕ್ಕೆ ಬೇಕಾದ ಸಹಾಯ ಸಲಕರಣೆಗಳೂ ನಮ್ಮಲ್ಲಿಲ್ಲ. ಕ್ರಮೇಣ ಒಂದೊಂದನ್ನೇ ಮಾಡಿದ' ಎಂದು ರಾಜ ಬಂದಾಗಲೂ ಅವರು ಅವನಿಗೆ ವಿವರಿಸಿದ್ದರು. ಅವನು ಹೋದ ಮೇಲೆ ಅದನ್ನು ಮತ್ತೆ ಬೋರ ಮತ್ತು ತುಕ್ರರ ಮುಂದೆಯೂ ಹೇಳಿದರು—

'ಈ ವರುಷ ನೀವೇ ಒದಗಬೇಕು. ನಮ್ಮಲ್ಲಿ ಎತ್ತುಗಳೂ ಇಲ್ಲ, ನೇಗಿಲೂ ಇಲ್ಲ. ನೇಗಿಲು ಹಿಡಿದು ಗೊತ್ತೂ ಇಲ್ಲ. ಎಲ್ಲ ನಿಮ್ಮಿಂದಲೇ ಆಗ ಬೇಕು. ನೀವೇ ತಂದು ಮಾಡುವುದನ್ನೆಲ್ಲ ಸಕಾಲದಲ್ಲಿ ಮಾಡಬೇಕು. ಈ ಭೂಮಿಗೆ ನೇಗಿಲು ತಾಗದೆ ಬಹಳ ಕಾಲವಾಗಿದೆ. ನೆಲಕ್ಕೆ ಪಸೆ ಬರುವಂತೆ ತೋಡಿನ ನೀರು ಬಿಡೋಣ. ಎತ್ತುಗಳಿಗೇನೂ ತ್ರಾಸವಿಲ್ಲ. ಬೀಜಕ್ಕಾಗುವ ಬತ್ತವನ್ನು ಅಯ್ಯ ಬಂಗಾಡಿ ಪೇಟೆಯಿಂದ ತರಿಸಿಟ್ಟಿದ್ದಾರೆ' ಎಂದು ಗೋವಿಂದರಾಯರು ತಮ್ಮ ಮನಸ್ಸಿನ ಆಶೆಯನ್ನು ತಿಳಿಸಿದರು.

'ಆಯ್ತುಯ್ಯ, ಇದಕ್ಕೇನಾಗಬೇಕು? ಏಳೆಂಟು ದಿವಸಗಳ ಕೆಲಸ! ಬಂಗಾಡಿ ಊರಿನಲ್ಲಿದ್ದ ಹಾಗೆ ನೀವು ಬಿಟ್ಟಿ ಕೆಲಸ ಮಾಡಿಸುವುದಿಲ್ಲ. ಮತ್ತೆ ನಮಗೇನು ನಷ್ಟ?' ಎಂದು ಅವರು ಒಪ್ಪಿಕೊಂಡರು. ಅದರಂತೆ ಬಂದು ಹೆಚ್ಚಿನ ಬೆಟ್ಟು ಮತ್ತು ಮಜಲುಗದ್ದೆಗಳನ್ನು ಉತ್ತು ಬಿತ್ತಿದರು. ಅಂಗಳದ ಬದಿ ಬಿಸಿನೀರುಕೊಟ್ಟಿಗೆಗೆ ತಾಗಿದ್ದ ಒಂದೆರಡು ಗದ್ದೆಗಳನ್ನು ತರಕಾರಿಗಳಿ ಗಾಗಿ ಬಿಟ್ಟರು. ಹೊಳೆಯ ಬದಿಯಲ್ಲಿದ್ದ ತಗ್ಗಿನ ಬೈಲುಗದ್ದೆಗಳಲ್ಲಿ ಸಾಧ್ಯ ವಾದರೆ ನೇಜಿ ನೆಡಬೇಕೆಂದೂ ಅವುಗಳನ್ನು ಉಳಿಸಿದರು. ನೇಜಿಗಾಗಿ ಪ್ರತ್ಯೇಕ ಒಂದು ಕೆಸರುಮಜಲಿನಲ್ಲಿ ಬತ್ತದ ಬೀಜ ಚಲ್ಲಿ ನೀರನ್ನೊಣಗಿಸಿ

ಬಿಟ್ಟರು. ನದಿಯ ನೀರಿನ ಆಶ್ರಯವಿದ್ದುದರಿಂದ ಕೆಲವು ದಿವಸಗಳಲ್ಲೇ ಪುಡಿಮಣ್ಣಿನ ಗದ್ದೆಗಳಲ್ಲೂ ಮಜಲುಗಳಲ್ಲೂ ಹಸುರು ಸೂಜಿಗಳಂತೆ ಬತ್ತದ ಸಸಿಗಳು ಎದ್ದುವು.

ಬತ್ತದ ಸಸಿ ಮೂಡಿದ ಬಳಿಕ ಹುಣಿಗಳೆಲ್ಲ ಬೋಳು ಬೋಳಾಗಿ ಕಂಡವು ಗೋವಿಂದರಾಯರ ಕಣ್ಣಿಗೆ. 'ಈ ಹುಣಿಗಳಲ್ಲಿ ತೆಂಗು ಕಂಗುಗಳ ಸಸಿಗಳನ್ನು ಸಾಲಾಗಿ ನೆಟ್ಟರಾದೀತು' ಎಂಬ ವಿಚಾರವೂ ಸಟಕ್ಕನೆ ಸುಳಿಯಿತು. ಸರಿ. ಆ ಮೇಲೆ ಅಹ್ಮದ್ ಬ್ಯಾರಿಯನ್ನು ಕರೆದುಕೊಂಡು ಬಂಗಾಡಿ, ಮಿತ್ತಬಾಗಿಲ್, ಇಂದಬೆಟ್ಟು ಗ್ರಾಮಗಳಲ್ಲಿ ಸಂಚರಿಸಿ ದೊಡ್ಡ ದೊಡ್ಡ ತೆಂಗಿನ ಮರಗಳಲ್ಲಿ ಬೆಳೆದ ತೆಂಗಿನಕಾಯಿಗಳನ್ನು ಕೊಯ್ಸಿಕೊಂಡು ಬಂದು ಕೆಲವು ದಿನಗಳ ವರೆಗೆ ಅಂಗಳದಲ್ಲಿ ಬಿಸಿಲಿಗಿಟ್ಟರು. ಹಸುರು ಸಿಪ್ಪೆ ಒಣಗಿದಾಗ ಅವನ್ನು ಬಿಸಿನೀರಿನ ಕೊಟ್ಟಿಗೆಯ ಬಳಿ ಬಂಜರು ಬಿಟ್ಟಿದ್ದ ಒಂದು ಗದ್ದೆಗೆ ತೋಡಿನ ನೀರು ಕುಡಿಸಿ ಅಗೆಸಿ ಕಳಮಾಡಿಸಿದರು. ಆ ಕಳದಲ್ಲಿ ಈ ತೆಂಗಿನ ಬೀಜಗಳನ್ನೂ ಅರ್ಧಮರ್ಧ ಹುಗಿಸಿದರು. ಗೆಂಧಾಳಿಗೆ ಮೊಳಕೆ ಒಡೆಯಲು ಮನೆಯ ಮುಳಿಹುಲ್ಲಿನಲ್ಲಿ ಮರೆಸಿಟ್ಟರು. ಒಂದಷ್ಟು ಅಡಿಕೆ, ಗೇರುಬೀಜಗಳ ಸಸಿಗಳನ್ನೂ ಮಾಡಬೇಕೆಂಬ ಯೋಚನೆ ಹುಟ್ಟಿತು. ಬಂಗಾಡಿ ಪೇಟೆಯಿಂದ ಒಂದು ಕಳಸೆ ಗೇರುಬೀಜವನ್ನೂ ತರಿಸಿದರು. ಅಡಿಕೆಬೀಜಗಳಿಗಾಗಿ ಬುಟ್ಟಿ ಕೊಟ್ಟು ಬೋರನನ್ನು ಮುಂಡಾಜೆಗೆ ಕಳಿಸಿದರು.

ಮಳೆಗಾಲವನ್ನು ನೆನಸಿಯೋ ಏನೋ ಆಕಾಶದಲ್ಲಿ ಅಲೆಯುತ್ತಿದ್ದ ಮೋಡಗಳ ಬಿಳಿ ಮೋರೆ ಕಂದಿತು. ಗಾಳಿ ಮೋಡಗಳನ್ನು ಕಡೆಯಿತು ಆಕಾಶದ ಕಡೆಯುವ ಕಲ್ಲಲ್ಲಿ. ಅದರಿಂದ ಮತ್ತೆ ಗುಡುಗುಡು ಗುಡುಗುಡು ಎಂದೆನ್ನತೊಡಗಿತು. ಗಾಳಿಯಲ್ಲಿ ನೀರಿನ ಹನಿಗಳ ಪಸೆಯನ್ನು ಗುರುತಿಸಿದರು ಗೋವಿಂದರಾಯರು. 'ಕರಾವಳಿಯಲ್ಲೆಲ್ಲೋ ಮಳೆಯಾಗಿರಬೇಕು. ಇನ್ನು ಬಹಳ ದಿನಗಳಿಲ್ಲ ಮಳೆಗಾಲಕ್ಕೆ' ಎಂದೆಂದುಕೊಂಡರು ಅವರು. ಮಳೆಗಾಲ ಮೊದಲಾಗುವುದರೊಳಗೆ ಬೈಲಿಗೆ ನೇಜಿ ನೆಟ್ಟುಬಿಡಬೇಕೆಂದು ಅವರ ಯೋಚನೆ. ಜಡೆಮಳೆಯಾಗಿ ಬೈಲುಗದ್ದೆಗಳಲ್ಲಿ ನೀರು ನಿಂತ ಮೇಲೆಯೇ ಅವನ್ನು ಉತ್ತು ನೇಜಿ ನೆಡಲು ಸಾಧ್ಯ. ಆದುದರಿಂದ ಜಿರಾವರ್ತಿ ಮಳೆಯನ್ನೇ ಎಲ್ಲರೂ ನಿರೀಕ್ಷಿಸುವರು. ಆದರೆ ಗೋವಿಂದರಾಯರು ಮಳೆರಾಯನ ದಾರಿ ನೋಡುವ ಅಗತ್ಯವಿಲ್ಲ. ನದಿಯ ನೀರಿನ ಆಶ್ರಯವಿದೆ ಅವರ ಗದ್ದೆಗಳಿಗೆ. ಬೇಗಾ

ದಾಗ ತುಂಬಿಸಿ ಕೋಣಕಟ್ಟಲು ಅನುಕೂಲ. ಜೋರು ಮಳೆ ಆರಂಭವಾದ ಮೇಲೆ ಸಕಾಲಕ್ಕೆ ಕೋಣವೂ ಸಿಗಲಿಕ್ಕಿಲ್ಲ. ನೇಜಿ ನೆಡಲು ಹೆಣ್ಣಾಳುಗಳು ದೊರೆಯುವುದೂ ದುರ್ಲಭ. ಆದುದರಿಂದ ಬೇಗನೇ ಮುಗಿಸಿಬಿಡಲು ಅವರ ಆತುರ. ಬೋರ ಅದಕ್ಕೆ ಅನ್ಯಥಾ ಹೇಳಲಿಲ್ಲ.

ಬೋರ, ಮರುದಿನ ನಸುಕಿಗೇ ಕೋಣಗಳನ್ನು ಹೊಡೆದುಕೊಂಡು ಬಂದು ಅವುಗಳ ಕುತ್ತಿಗೆಗೆ ನೊಗಕಟ್ಟಿ ಎರಡು ಕೋಣಗಳ ಮಧ್ಯೆ ನೇಗಿಲನ್ನು ಎಳೆದು ಅದಕ್ಕೆ ಗೂರಿದ ಕೋಲನ್ನು ನೊಗಕ್ಕೆ ಬಿಗಿದ. ಮೊದಲಿನ ರಾತ್ರಿ ಗೋವಿಂದರಾಯರು ತೋಡಿನ ನೀರನ್ನು ಬೈಲುಗದ್ದೆಗಳಿಗೆ ಕಟ್ಟಿಬಿಟ್ಟಿದ್ದ ರಿಂದ ನೀರು ತುಂಬಿತ್ತು. ಹೆಚ್ಚಿನ ನೀರನ್ನು ಹೊಳೆಗೆ ಕಡಿದುಬಿಟ್ಟು ಬೋರ ಹೊಡಲೂ ತೊಡಗಿದ. ಎಡಗೈಯಿಂದ ನೇಗಿಲನ್ನು ಒತ್ತಿ ಬಲಗೈಯಲ್ಲಿ ಕೋಲನ್ನು ಎತ್ತಿ, 'ಕಾಳ ಬೋಳ ಓ, ಓ' ಎಂದು ಅವನು ಓಂಕಾರ ಸ್ವರ ತೆಗೆಯುವುದೇ ತಡ, ಕೋಣಗಳು ನೇಗಿಲನ್ನು ಎಳೆದುಕೊಂಡು ಹೋದುವು. ಉದ್ದಕ್ಕೆ ಒರ್ವಳ ಹೊಡಿದ; ಅಡ್ಡಕ್ಕೆ ಇರ್ವಳ ಮಾಡಿದ. ಹೀಗೆ ಎರಡು ಮೂರು ದಿನ ಉತ್ತಾಗ ಬೈಲುಗದ್ದೆ ಕೆಸರಿನ ರಸಾಯನವಾದಂತಾಯಿತು. ಕಾಲಿಟ್ಟೊಡನೆ ಪಾದ ಕೆಸರಲ್ಲಿ ಹೂತುಹೋಗುವುದು. ನೇಜಿ ನೆಡಲು ಗದ್ದೆ ಸಿದ್ಧವಾದುದರಿಂದ ಲಚ್ಚಿಮಿ, ಹಸೀನ್‌ಬೀಬಿ, ಪಾರೋತಿ ಬಂದರು. ನೀರಿದ್ದ ಮಜಲುಗದ್ದೆಗೆ ಇಳಿದು ನೇಜಿಯನ್ನು ಹಿಡಿ ಹಿಡಿಯಾಗಿ ಹರಿದು ಒಂದೊಂದೇ ಸೂಡಿ ಮಾಡಿ ಒಗೆದರು. ಗೊಬ್ಬರ ಹೊರುವ ಬೀಳಿನ ಕುಕ್ಕೆಯಲ್ಲಿ ತುಕ್ರ ಅದನ್ನು ತುಂಬಿಸಿದ. ಗೋವಿಂದರಾಯರು ತಲೆಗೆತ್ತಿ ಕೊಟ್ಟರು. ಬೈಲು ಗದ್ದೆಯಲ್ಲಿ ಅಲ್ಲಲ್ಲಿ ಅವನು ಹೊತ್ತು ಹಾಕಿದುದನ್ನು ಮೋಹನ ಒಂದೊಂದೇ ಸೂಡಿಯನ್ನೆತ್ತಿ ಗದ್ದೆಯಲ್ಲೆಲ್ಲ ನಿಲ್ಲಿಸಿದ. ನೇಜಿ ಹರಿದು ಮುಗಿದ ಮೇಲೆ ಲಚ್ಚಿಮಿ ಉಳಿದವರನ್ನು ಕರೆದುಕೊಂಡು ಬೈಲು ಗದ್ದೆಗೆ ಬಂದಳು. ಒಂದೊಂದೇ ಸೂಡಿ ಬಿಚ್ಚಿ ಮೂರು ನಾಲ್ಕು ಸಸಿಗಳನ್ನು ಕೂಡಿಸಿ ಸಾಲಾಗಿ ಮೂವರೂ ಬಗ್ಗಿ ಬಂದರು ನೆಡುತ್ತ. ಹಸೀನ್‌ಬೀಬಿ ತಲೆಯ ಮೇಲೆ ದೊಡ್ಡ ಕೆಂಪು ಕರವಸ್ತ್ರವನ್ನು ಸುತ್ತಿದ್ದಳು. ಅದರ ಒಂದು ಚುಂಗು ಬೆನ್ನ ಮೇಲಿನ ರವಕೆಯಲ್ಲಿ ಓಲಾಡುತ್ತಿತ್ತು. ಅವಳು ಸೆರಗನ್ನೂ ಎದೆಯ ಮೇಲೆ ಎಳೆದುಕೊಂಡಿರಲಿಲ್ಲ. ಉದ್ದ ತೋಳಿನ ರವಕೆ ಮಾತ್ರ ಇದೆ. ತೊಟ್ಟ ಸೀರೆಗೆ ಸೆರಗಿಲ್ಲ. ಸೆರಗನ್ನು ಗಟ್ಟಿಯಾಗಿ ಬಿಗಿದವರು ಲಚ್ಚಿಮಿ ಮತ್ತು

ಪಾರ್ವತಿ. ತಲೆಯ ಮೇಲೆ ಕಂಗಿನ ಪಾಳೆಯ ಮುಟ್ಟಲೆಯನ್ನೂ ಇಟ್ಟಿದ್ದರು.

ಗದ್ದೆಯ ಹುಣಿಯ ಮೇಲೆ ಕುಳಿತು ಕಾಲುಗಳನ್ನು ಕೆಸರಲ್ಲಿ ಇಳಿಬಿಟ್ಟ ಗೋವಿಂದರಾಯರು ಈ ಮುಟ್ಟಲೆಗಳನ್ನು ಕಂಡು, 'ಲಚ್ಮಕ್ಕ, ನಿನ್ನ ಟೊಪ್ಪಿ ದೇಶೀ ಟೊಪ್ಪಿ. ಗಾಳಿ, ಮಳೆ, ಬಿಸಿಲು ತಲೆಗೆ ಏನೇನೂ ತಾಗುವಂತಿಲ್ಲ. ಅಂತಹ ಒಂದು ಟೊಪ್ಪಿ ನನಗೂ ಬೇಕೆಂದು ಮನಸ್ಸಾಗುತ್ತದೆ' ಎಂದು ರಸಿಕತನದ ಮಾತು ತೆಗೆದರು.

'ಅಯ್ಯಾ, ಮುಟ್ಟಲೆ ನೋಡಿ ನಿಮಗೆ ಮನಸ್ಸಾಯಿತು. ಅದನ್ನು ಮುಟ್ಟಿದರೆ ಮತ್ತೇನು ಮನಸ್ಸಾದೀತೋ?' ಎಂದು ತುಕ್ರ ಹೇಳಿ ನಕ್ಕ.

ಅವನ ಮಾತು ಕೇಳಿ ಎಲ್ಲರೂ ಗಹಗಹಿಸಿ ನಕ್ಕರು.

'ಮನಸ್ಸಾಗುತ್ತಿತ್ತಲ್ಲ, ಏನು ಮಾಡೋದು? ತಲೆಯೆಲ್ಲ ಹಣ್ಣಾಯಿತು. ೬೦ಕ್ಕೆ ಮುಟ್ಟಿದ ಈ ಜಬ್ಬಜ್ಜನನ್ನು ಯಾರು ಮೂಸಬೇಕು' ಎಂದು ಅವರು ಕೂಡಿಸಿದರು.

'ಅಯ್ಯಾ, ೬೦ಕ್ಕೇ ನೀವು ಜಬ್ಬ ಎಂದೆನ್ನುತ್ತೀರಿ. ಬಂಗಾಡಿ ಪೇಟೆಯ ತಮ್ಮ ಯಾಜ್ರಿಗಳು ೬೦ಕ್ಕೇ ಮೂರನೇ ಹೆಂಡತಿ ಮಾಡಿಕೊಂಡರು ಮೊನ್ನೆ' ಎಂದು ತುಕ್ರ ಸುದ್ದಿ ಹೇಳಿದ.

'ಹೌದಾ ತುಕ್ರ? ಹಾಗಾದರೆ ಅಡ್ಡಿಯಿಲ್ಲ. ನಾನೂ ಆಗಬಹುದು. ಎಲ್ಲಾದರೂ ಒಂದು ಕನ್ಯೆ ನೋಡು.'

'ಹುಡುಗಿ ಹೇಗಿರಬೇಕಯ್ಯಾ ನಿಮಗೆ?'

'ಫಸ್ಟ್‌ಕ್ಲಾಸ್! ಪೊಲ್ಲಕ್ಕ! ಪೊಲ್ಲಕ್ಕ ಬೇಕು ನೋಡು. ಆಕೆಯನ್ನು ನೋಡಿದ ಕೂಡಲೆ ತಕತಕ ಕುಣಿಯುವಂತಾಗಬೇಕು ನೋಡು.'

ಅವರ ಮಾತು ಕೇಳಿ ಲಚ್ಚಿಮಿ, ಹಸೀನ್‌ಬೀಬಿ, ಪಾರೋತಿಯರು ಬಿದ್ದು ಬಿದ್ದು ನಕ್ಕರು. ಅಲ್ಲಿಗೆ ಬಂದ ಸೀತಮ್ಮನವರಿಗೂ ನಗು ಬಂದಿತು.

'ಅಯ್ಯಾ, ಮತ್ತೆ ಅಮ್ಮ ನಿಮಗೆ ಊಟಕ್ಕೆ ಹಾಕಲಿಕ್ಕಿಲ್ಲ' ಎಂದಳು ಲಚ್ಚಿಮಿ ಸೀತಮ್ಮನವರ ಮುಖ ನೋಡಿ.

'ಹಾಂ. ಹೊಸ ಹೆಂಡತಿ ಬಂದ ಮೇಲೆ ಅವಳದೇ ರಾಜ್ಯ. ನನಗೇ ಅವಳು ಊಟ ಹಾಕಬೇಕಾದೀತು' ಎಂದರು ಸೀತಮ್ಮ.

'ನಿನಗೆ ಒಳ್ಳೇದಾಯಿತಲ್ಲ! ಕೆಲಸ ಮಾಡಿ ಮಾಡಿ ಸಣ್ಣ ಆಗಿದ್ದೇನೆಂತ ಗೊಣಗುಟ್ಟುತಿದ್ದೀಯಲ್ಲ! ಮತ್ತೆ ಕೂತಲ್ಲಿ ಅನ್ನಹಾಕಿದರೆ ನಿನ್ನ ಗಂಟೇನು

ಹೋಯ್ತು ?' ಎಂದು ಗೋವಿಂದರಾಯರು ಹೆಂಡತಿಯನ್ನು ಪ್ರಶ್ನಿಸಿದರು.

'ಆಗತ್ಯ ಆಗಲಿ. ಇನ್ನೊಂದಲ್ಲ, ಎರಡು ಮಾಡಿಕೊಳ್ಳಿ. ಜ್ವರ ಬಂದಾಗ ಕಾಲು ಒತ್ತಲು ಒಂದು ಜನವಾದರೂ ಆದೀತು. ನಾನೇನು ತಡೆಯುವುದಿಲ್ಲ. ನನಗೂ ಪರಮಗುಣ' ಎಂದು ಸೀತಮ್ಮ ಒಪ್ಪಿಕೊಂಡು ಹೊರಟರು.

ಎಲ್ಲರ ನಗು ನಿಂತ ಮೇಲೆ ಗೋವಿಂದರಾಯರು ಪುನಃ ಮಾತೆತ್ತಿ 'ಹಾಂ, ಕುಶಾಲ್ ಸಾಕು. ಒಂದು ಪಾಡ್ದನ ಹೇಳು ಲಚ್ಮಕ್ಕ. ಬಾಯಿಯೊಳಗೆ ಪುಳ್ಕೊಟ್ಟಿ ಹಾಕಿಕೊಂಡಿದ್ದೀಯಾ ಏನು ? ಹೇಳು' ಎಂದು ಒತ್ತಾಯ ಮಾಡಿದರು.

ಪಾರ್ವತಿ ತಾ ನ ನ ನಾ ತಾನ ತೇಲಾಡಿಸಿದಳು ಗಾಳಿಯಲ್ಲಿ. ಅವಳ ಆ ಕೊರಳ ವೀಣಾತಾನಕ್ಕೆ ಸರಿಯಾಗಿ ಲಚ್ಮಕ್ಕ ತನ್ನ ಪಾಡ್ದನ ಪೋಣಿಸಿದಳು.

'ಅಂ, ತಾ ನ ನ ನ ನಾ, ದಾನೆ ಪಣ್ಕೆ ಕೋಟಿ ಚೆನ್ನಯ್ಯನ ಮಹಿಮೆನ್' ಎಂದು ಲಚ್ಮಕ್ಕ ಕೋಟಿ ಚೆನ್ನಯ್ಯರ ಕಥೆಯ ಪಾಡ್ದನ ತೆಗೆದಳು. ಒಂದು ಸೊಲ್ಲು ಮುಗಿದ ಕೂಡಲೇ ಹಸೀನ್ ಮತ್ತು ಪಾರೋತಿ ಅಂ ತಾ ನ ನ ನಾ' ಎಂದು ಪಲ್ಲವಿ ಹಾಡಿ ಹಿಮ್ಮೇಳದ ಧ್ವನಿಗೈದರು.

ಆಲಾಪನೆ ಕೇಳಿದ ಕೋಣಗಳು ಕಿವಿ ನಿಗುರಿಸಿದುವು. ಅವುಗಳ ಕಾಲಗತಿ ಮುಂದವಾದುದನ್ನು ಕಂಡ ಬೋರ, 'ಒ ಓ, ಓ, ಓಲೆ, ಓ ಬೇಲೆ' ಎಂದು ರಾಗ ಎಳೆದ. ಈ ತಾನ ವಿತಾನಕ್ಕೆ ಸರಿಯಾಗಿ ಕೋಣಗಳೂ ಹೆಜ್ಜೆಯಿಟ್ಟುವು. ಈ ಧ್ವನಿತರಂಗದೊಂದಿಗೆ ಗಾಳಿಯೂ ನಲಿದಾಡಿತು. ನೆಟ್ಟ ಬತ್ತದ ಸಸಿಗಳ ಹಸುರು ಅಲಗುಗಳಂತಹ ಎಲೆಗಳು ತಲೆದೂಗಿದುವು.

ಜಡಿಮಳೆ ಆರಂಭವಾದಾಗ, ನೆಟ್ಟನೇಜಿ ಹಸುರೊಡೆದು ನೆಲದಲ್ಲಿ ಭದ್ರ ವಾಯಿತು. ನೆಟ್ಟಾಗ ನೀಡಿಕೊಂಡಿದ್ದ ಹಳೇ ಒಣಗಿದ ಎಸಳುಗಳು ನೀರ ಮೇಲೆ ಬಿದ್ದು ಕೊಳೆತುವು. ಕೊಳೆತ ವಸ್ತುಗಳನ್ನು ತಿನ್ನಲು ಸಣ್ಣ ಸಣ್ಣ ತರು ಮೀನುಗಳು ನುಸುಳಿದುವು ನೀರಲ್ಲಿ. ಕಪ್ಪೆಗಳ ಬಳಗಕ್ಕೂ ಕಡಿಮೆಯಿರಲಿಲ್ಲ. ಅವುಗಳ ಟ್ರ್ರಂ ಟ್ರ್ರಂ ಕೂಗಾಟ ರಾತ್ರಿ ಮಲಗಿದ್ದ ಮನೆಯವರೆಲ್ಲರಿಗೂ ಕೇಳಿಸುತ್ತಿತ್ತು. ನೀರುಕೋಳಿಗಳು ಬೆಳಗಿನ ಜಾವಕ್ಕೆ 'ಕುಂವಾ ಕುಂವಾ' ಎಂದು ಕರೆದುವು. ಮಳೆಗೆ ತಲೆ ಮೈ ತೋಯದಂತೆ ಗೊರಬು ಹಾಕಿಕೊಂಡು ಗದ್ದೆಗಳ ಹುಣಿಗಳ ಮೇಲೆ ಗೋವಿಂದರಾಯರು ನಡೆದಾಗ ಒಂದೊಂದೇ ಕಪ್ಪೆಗಳು ಬುಳುಕ್ ಬುಳುಕ್ ಎಂದು ಗದ್ದೆಯ ನೀರಿಗೆ ನೆಗೆದುವು. ನೀರು

ಕೋಳಿ ಅಲ್ಲಿಂದೆದ್ದು ಗದ್ದೆಯ ಮತ್ತೊಂದು ಮೂಲೆಗೆ ಹಾರಿ ಸಸಿಗಳ ನಡುವೆ ಅಡಗಿತು. ಹುಣಿಗಳ ಬದಿಗಳಲ್ಲಿ ಹುಲ್ಲುಗಳೊಂದಿಗೆ ಗರ್ಗ, ಕದಿಕೆ, ಕಡಿರು ಬೇರು, ನಾಚಿಕೆ ಮುಳ್ಳು, ಒಂದೆಲಗ ಸಸ್ಯಜಾತಿಗಳೂ ಬೆಳೆದುವು. ಗದ್ದೆಗಳನ್ನು ಸಿಂಹಾವಲೋಕಿಸಿ ಮರಳಿದಾಗ ಗೋವಿಂದರಾಯರು ಒಂದೆಲಗವನ್ನು ಹೆರಿದು ನೀರಲ್ಲಿ ತೊಳೆದು ತರುವ ಪದ್ಧತಿ. ಅದನ್ನು ಅಡಿಗೆ ಮನೆಗೆ ತಂದು, 'ಸುವರ್ಣ ಗಡ್ಡೆ ಕುಂಬಳ ಸವುತೆಗಳನ್ನು ದಿನಾ ತಿಂದು ತಿಂದು ನನಗೂ ಬೇಸರವಾಗಿದೆ. ಬೇರೇನಿದೆ ಈ ಮಳೆಗಾಲಕ್ಕೆ ಎಂದೆನ್ನುತ್ತಿದ್ದೆಯಲ್ಲ? ಇಗೋ ತಿಮರೆ. ತಂಬ್ಳಿ ಮಾಡು ನೋಡೋಣ' ಎಂದು ಹೆಂಡತಿಗೆ ನುಡಿಯುವರು.

'ಆದರಲ್ಲಿ ಸಣ್ಣ ಹುಳವಿದ್ದೀತು. ನನಗೆ ಕಣ್ಣು ಸರಿ ಕಾಣುವುದಿಲ್ಲ. ಅದು ಅವಸರಕ್ಕೆ ಆಗುವ ಕೆಲಸವೂ ಅಲ್ಲ. ಒಂದು ಮಿನಿಟು ನೀವೇ ಕುಳಿತು ಅದನ್ನು ನೋಡಿ ಕೊಡಿ' ಎಂದು ಸೀತಮ್ಮ ಹೇಳುವರು.

'ಆಗಲಿ, ಸೀತಾದೇವಿಯ ಅಪ್ಪಣೆ! ಶಿರಸಾವಹಿಸಲಾಯ್ತು!' ಎಂದು ಮುಗುಳು ನಗುತ್ತ ಅಲ್ಲೇ ಕುಳಿತು ಒಂದೊಂದೇ ಒಂದೆಲಗದ ಬಳ್ಳಿಯಲ್ಲಿ ನಾಲ್ಕೈದು ಕಡೆ ಬಿಟ್ಟ ಬೇರನ್ನು ಕಿತ್ತೊಗೆದು, ನೋಡಿ, ಪಾತ್ರೆಯಲ್ಲಿ ತುಂಬಿಸುವರು. ಒಂದೊಂದು ದಿನ ಮನೆಯ ಮುಂದಿನ ಗುಡ್ಡಕ್ಕೆ ತೆರಳಿ ಅವರು ಕೇಪಳ ಹೂವನ್ನು ತರುವುದುಂಟು. ಉದ್ದಿನ ಕಾಳುಗಳೊಂದಿಗೆ ಕೇಪಳದ ಹೂಗಳನ್ನೂ ಹುರಿದು ಹೆರೆಮಣೆಯಲ್ಲಿ ತೆಂಗಿನ ಹೂವನ್ನು ಹೆರೆದುಹಾಕಿ ಉಪ್ಪು, ಹುಳಿ, ಮೆಣಸುಗಳೊಂದಿಗೆ ಕಡೆದರೆ ಕೇಪಳದ ಬಜ್ಜಿಯೂ ಬಾಯಿಗೆ ರುಚಿ. ಆದರೆ ಮಳೆಗಾಲದಲ್ಲಿ ಅದು ಅಪರೂಪ ವಸ್ತು. ಆಗ ಒಂದೆಲಗವೇ ಗತಿ. ಒಂದೆಲಗದ ಎಲೆ ಕೀಳುವಾಗ ಒಂದೊಂದೇ ಹಿಂದಿನ ಮುಂದಿನ ಮಂದಿ ಬಂಧುಗಳ ಮಧುರ ಮಾತುಗಳನ್ನು ಅವರು ಹೆಂಡತಿಯ ಮುಂದೆ ಹೇಳುವುದುಂಟು. ಮಳೆಗಾಲದ ದಿನಗಳು ಸಲ್ಲುತ್ತ ಬಂದುದರಿಂದ ಈಗ ಹರಿಯ ಸುದ್ದಿಯನ್ನೇ ಅವರು ತೆಗೆದರು—'ಹರಿ ಹೊರಡುತ್ತಾನಂತಲ್ಲೇನೆ? ಎಲ್ಲಿಗೆ ಏನು ಎಂದು ಏನಾದರೂ ನಿನ್ನೊಡನೆ ಹೇಳಿದನೇನು?'

"ಅದನ್ನೆಲ್ಲ ನಾನು ಯಾಕೆ ಕೇಳುತ್ತೇನೆ? ಅವನೂ ಯಾಕೆ ಹೇಳುತ್ತಾನೆ? ಎಲ್ಲಿಗೆ ಹೋಗುತ್ತಾನೆಂದು ಅವನಿಗೂ ಗೊತ್ತಿಲ್ಲ. ಆದರ ಮಾತೆತ್ತಿದರೆ 'ಎಲ್ಲಿಗಾದರೂ ಸರಿ' ಎಂದು ಬಿಡುತ್ತಾನೆ. ಒಟ್ಟು ನನ್ನ ದುರಾದೃಷ್ಟ!" ಎಂದು ಅವರು ಕಣ್ಣೀರು ಸುರಿಸಿದರು.

ಹರಿ ಮನೆ ಬಿಟ್ಟು ಹೊರಟಾಗಲೂ ಸೀತಮ್ಮನವರು ಬಹಳ ಅಳ ತೊಡಗಿದರು. 'ಯಾಕೆ ಅಳುತ್ತೀ? ಅವನೇನು ಪೆದ್ದಂಭಟ್ಟನೇನು? ನಾಲ್ಕು ಅಕ್ಷರ ಕಲಿತಿದ್ದಾನಲ್ಲ! ಎಲ್ಲಾದರೂ ಬದುಕಿಯಾನು! ಸಹರಾ ಮರುಭೂಮಿಗೆ ತೆರಳಿದರೂ ತನ್ನ ಹೊಟ್ಟೆ ತಾನು ತುಂಬಿಸಿಕೊಳ್ಳದೆ ಇರಲಾರ. ಇಲ್ಲಿದ್ದರೆ ಅವನಿಂದಾಗುವ ಕೆಲಸವಾ ಇದೆಲ್ಲ? ಒಂದು ಕೊಡ ನೀರೆಳೆಯುವ ದೇಹತ್ರಾಣ ಅವನಿಗಿಲ್ಲ. ಪೆನ್ ಹರಿದರೇ ಅವನ ಪ್ರಾಣ ಉಳಿದೀತು. ನಿನಗೆ ಮರುಳು' ಎಂದು ಗೋವಿಂದರಾಯರು ಸ್ವಲ್ಪ ರೇಗಿಯೇ ಸಂತೈಸಬೇಕಾಯ್ತು. ಆದರೂ ಮನೆಯ ಮೇಲಿರುವ ರಸ್ತೆಯವರೆಗೂ ಸೀತಮ್ಮನವರು ಕಣ್ಣುಗಳನ್ನೊರಸಿಕೊಳ್ಳುತ್ತ ಬಂದರು.

'ನೀನು ಇರಮ್ಮ, ನಾನು ಬರುತ್ತೇನೆ' ಎನ್ನುತ್ತ ಹರಿ ನಮಸ್ಕರಿಸಿದ.

'ನಾವು ಜೀವಂತವಿರುವ ವರೆಗೆ ವರುಷಕ್ಕೊಮ್ಮೆಯಾದರೂ ಬಾರದೆ ಇರಬೇಡ' ಎಂದು ಗದ್ಗದಿತ ಕಂಠದಿಂದ ಬೀಳ್ಕೊಟ್ಟರು ತಾಯಿ.

'ಬದುಕಿದ್ದರೆ ಬರುತ್ತೇನೆ' ಎಂದುಸುರಿ ಹರಿ ಹೊರಟ.

೬

ಗೋವಿಂದರಾಯರು ಅಲ್ಲಿಂದಲೇ ಮಗನನ್ನು ಬೀಳ್ಕೊಳ್ಳಲಿಲ್ಲ. ಮುಂಡಾಜೆಯ ವರೆಗೆ ತೆರಳಿ, ಬಸ್ಸಿನಲ್ಲಿ ಅವನನ್ನು ಕುಳ್ಳಿರಿಸಿ ಬರಲು ಅವರೂ ಅವನನ್ನು ಹಿಂಬಾಲಿಸಿದರು. ಅವರ ಮನಸ್ಸು ವ್ಯಸನದಿಂದಿದೆ. ಮಗನೊಡನೆ ಹೃದಯ ಬಿಚ್ಚಿ ನಾಲ್ಕು ಮಾತುಗಳನ್ನಾಡಲು ಮನಸ್ಸಾಗಿದೆ. ಮನೆಯಲ್ಲಿ ಅದಕ್ಕೆ ಅವಕಾಶವೂ ಇರಲಿಲ್ಲ. ದಾರಿಯಲ್ಲಿ ಯಾರ ಆತಂಕವೂ ಇಲ್ಲ. ಏಕೆಂದರೆ ಈ ರಸ್ತೆಯಲ್ಲಿ ಮನುಷ್ಯ ಸಂಚಾರವೇ ಕಡಿಮೆ. ಆದುದರಿಂದ ಸ್ವಲ್ಪ ದೂರ ಬಂದ ಬಳಿಕ ಅವರು ಒಂದೊಂದೇ ಮಾತು ತೆಗೆದರು—

'ಹರಿ, ನೀನು ಮನೆಯಿಂದ ಹೊರಟು ಬಂದೆ, ನಿಜ. ಎಲ್ಲಿಗೆ ಹೊರಟಿದ್ದೀ? ಯಾವ ಊರಿಗೆ?' ಎಂದು ಮತ್ತೆ ಹಿಂದೆ ಕೇಳಿದ್ದ ಪ್ರಶ್ನೆಯನ್ನೇ ಪುನರುಚ್ಚರಿಸಿದರು.

'ಎಲ್ಲಾದರೂ ಹೋದ' ಎಂದು ಹಿಂದಿನ ಉತ್ತರವೇ ಬಂತು.

“ಎಲ್ಲಾದರೂ ಎಂದು ಮತ್ತೆ ಹೇಳುತ್ತೀಯಲ್ಲ? ನನ್ನೊಡನೆ ಮುಚ್ಚುಮರೆ ಮಾಡಬೇಡ. ನಾನು ನಿನ್ನನ್ನು ತಡೆಯುವುದಿಲ್ಲ. ‘ಇಲ್ಲೇ ಇರು’ ಎಂದು ಹೇಳಿ ಇರಿಸಿಕೊಳ್ಳಲು ನನಗೆ ತ್ರಾಣವೂ ಇಲ್ಲ. ನಿನ್ನ ಅಣ್ಣನಿಗೆ ಅನುಕೂಲವಿಲ್ಲವೆಂಬುದು ನಿನಗೂ ಗೊತ್ತು. ಆದುದರಿಂದ ನಿನ್ನನ್ನು ವೃಥಾ ತಡೆಯಲು ನನಗಿಷ್ಟವಿಲ್ಲ! ಒಮ್ಮೊಮ್ಮೆ ಯೋಚಿಸಿದರೆ ಅದಕ್ಕಾಗಿ ನಾನು ವ್ಯಸನಪಡುವುದೂ ತಪ್ಪೆಂದೆನಿಸುತ್ತದೆ. ಆದರೆ ನೀನಿನ್ನೂ ಸಣ್ಣವ. ನಿನ್ನಷ್ಟು ವಯಸ್ಸಿಗೆ ಬಂದಾಗ ನಾನು ಎಸ್. ಎಸ್. ಎಲ್. ಸಿ ಯಲ್ಲೂ ಇದ್ದಿರಲಿಲ್ಲ. ನೀನು ಆ ಪರೀಕ್ಷೆ ಮುಗಿಸಿದ್ದೀ. ಈಗ ಮನೆ ಬಿಟ್ಟು ಹೊರಟಿದ್ದಿ. ನಮಗೆ ಪಿತ್ರಾರ್ಜಿತ ಮನೆಯೂ ಇಲ್ಲ. ಇದ್ದುದನ್ನು ಕಳೆದುಕೊಂಡೆವು. ಆದುದರಿಂದ ನೀನು ಮನೆಯಲ್ಲಿ ಇರಬೇಕೆಂದು ನಾನು ಒತ್ತಾಯ ಮಾಡುವುದರಲ್ಲಿ ಅರ್ಥವೂ ಇಲ್ಲ. ಅವರವರ ತಲೆಗೆ ಅವರವರದೇ ಕೈ. ಅವರ ದಾರಿಯನ್ನು ಅವರೇ ನೋಡಿಕೊಳ್ಳಬೇಕಾಗಿದೆ. ಆದರೆ, ಹೊರಟಾಗ ಯಾವ ದಾರಿ, ಯಾವ ಗುರಿ, ಎಂಬುದರ ಕಲ್ಪನೆಯಾದರೂ ಮನುಷ್ಯನಿಗೆ ಬೇಕು. ಅದಕ್ಕಾಗಿ ಕೇಳಿದೆ.”

ಏನೊಂದೂ ತೋಚದ ಹರಿ, ‘ಯಾವ ದಾರಿ? ಹೋದದ್ದೇ ದಾರಿ, ಮುಟ್ಟಿದ್ದೇ ಗುರಿ’ ಎಂದ.

ಗೋವಿಂದರಾಯರಿಗೆ ಅದು ರುಚಿಸಲಿಲ್ಲ. ಅವರ ಧ್ವನಿ ಸ್ವಲ್ಪ ಏರಿತು. ‘ಹೀಗ ಮಾತನಾಡಿದರೆ ಏನರ್ಥ?’ ಎಂದು ಅವರು ಪ್ರಶ್ನಿಸಿ ಮತ್ತೂ ನುಡಿದರು—

“ಹಿಂದೊಮ್ಮೆ ಕೂಡ ಈ ವಿಷಯ ಬಂದಾಗ, ‘ಎಲ್ಲಾದರೂ ಹೋದ. ಬೇಡಿ ತಿಂದ’ ಎಂದು ನುಡಿದಿದ್ದೆ. ನಿನಗೆ ನೆನಪಿದೆಯಾ? ನೀನು ಕುಶಾಲಿಗೆಂದೆಯೋ ಅಥವಾ ತಿಳಿದು ಹೇಳಿದೆಯೋ ನಾನರಿಯೆ. ಅದೇನಿದ್ದರೂ ಬೇಡಿ ತಿನ್ನುವ ವಿಚಾರ ಎಂದೆಂದೂ ತಲೆಯಲ್ಲಿ ಸುಳಿಯಕೂಡದು. ಕೈಲಾಗವರು, ಕೈ ಕಾಲುಗಳಿಲ್ಲದವರು ಬೇಡುವರು. ಬೀಡಿಲ್ಲದವರು ಬೇಡುವರು. ಬೇಡುವ ಮೊದಲು ಮಾನ ಮರ್ಯಾದೆಗಳೆಲ್ಲವನ್ನೂ ಬಿಡಬೇಕಾಗುತ್ತದೆ. ಮಾನ ಹೋದ ಮೇಲೆ ಮಾನವ ಬದುಕಿ ಏನು ಫಲ? ದ್ರೌಪದೀ ಉದಯರಾಗದಲ್ಲಿ ಒಂದು ಪದ್ಯವಿದೆ. ‘....ಪಾವಕನ ಜ್ವಾಲೆಯಲಿ ಹೊಕ್ಕು ಹೊರಡಲು ಬಹುದು। ತೀವಿರ್ದ ಮಡುವ ಧುಮುಕಲು ಬಹುದು। ಗರಳವನು ಸೇವಿಸಲು

ಬಹುದು ಜಗದಿ॥ ಸಾವಿಗಂಜದೆ ಕೊರಳ ಕತ್ತರಿಸಿಕೊಂಡರು ಬಹುದು ಗಳಬಹುದು। ಜೀ
ಇದ್ದಂತೆ ಲಜ್ಜೆಯ ತೊರೆಯನಾರೈ। ಆವ ಪರಿಯದ್ದಂಭಟ್ಟನಲ್ಲಿ ನಿನ್ನ ನಂಬಿ
ಅನಾಥೆಯಾ ಅಭಿಮಾನ ಕಾಯೋ॥' ಎಂದು ನಾನು ಏನು! ಸಂಹಾಡುತ್ತಿದ್ದುದನ
ನೀನು ಕೇಳಿರಲೂಬಹುದು. ಮಾನ ಎಂದರೆ ಅಷ್ಟು ದೊಟ್ಟಿಸಿಕೊಳ್ಳುವ ದು. ಮಾ
ಮರ್ಯಾದೆ ಬಿಟ್ಟವನು ಊರಿಗೆ ದೊಡ್ಡವನು ಎಂಬ ಗಾದೆಯೇ ಓ ಕೊಳ್ಳ. ಗುಂಟಲ್ಲ

'ಇಲ್ಲಪ್ಪಯ್ಯ, ನಾನು ಸುಮ್ಮನೆ ಒಂದು ಮಾತಿಗೆ ಹೇಳಿದೆ, ತಮಾಷೆಗೆ.'

'ಆಗಲಿ. ತಮಾಷೆಗೇ ಆಗಲಿ. ನಿನ್ನ ಬಾಯಿಂದ ದೇವರು ಆಡಿಸಿದ್ದೂ ಒಳ್ಳೆಯದಾಯಿತು. ಇಲ್ಲದಿದ್ದರೆ ನಾನು ಹೇಳಬೇಕಾದ ಸಂದರ್ಭವೂ ಬರುತ್ತಿದ್ದಿಲ್ಲ. ನೀನು ಪರವೂರಿಗೆ ಹೊರಟಾಗ ನಾಲ್ಕು ಹಿತೋಪದೇಶ ಮಾಡಬೇಕಾದುದು ನನ್ನ ಕರ್ತವ್ಯ. ಪರಸ್ಥಳದಲ್ಲಿ ಯಾವ ಪರಿಸ್ಥಿತಿ ಬರಬಹುದೆಂದು ಊಹಿಸುವುದೂ ಕಷ್ಟ. ಭವಿಷ್ಯದ ಗರ್ಭದಲ್ಲಿ ಏನೇನು ಅಡಗಿದೆಯೋ ಯಾರು ಬಲ್ಲರು? ಬೇಡುವ ಕಾಲವೇ ಒದಗಬಹುದು. ಯಾರಿಗೂ ಬೇಡವಾದ ಕಂಗಾಲತನ ಬಂದೀತು. ಆದರೆ ಏನಾದರೂ ಆದಕ್ಕಿಳಿಯ ಬೇಡ. ಅದಕ್ಕಿಂತ ದೊಡ್ಡ ಅಪಮಾನ ಬೇರೊಂದಿಲ್ಲ. ಅಂದಿಗೆ ನಮ್ಮ ಅಧಃಪತನವಾದಂತೆಯೇ ಸೈ. ಸ್ವಾಭಿಮಾನಿಗೆ ಅದು ಹೇಳಿದುದಲ್ಲ. ಸ್ವಾಭಿಮಾನ ನಮ್ಮ ಜನರಲ್ಲಿ ಶೂನ್ಯವಾಗಿರುವುದರಿಂದಲೇ ನಾವು ಅಧೋಗತಿಗಿಳಿದಿದ್ದೇವೆ, ನಮ್ಮ ದೇಶವೂ ಅಧೋಗತಿಗಿಳಿದಿದೆ. ಪಾಪ, ಗಾಂಧಿ ಮಹಾತ್ಮ ಒಮ್ಮಿಂದೊಮ್ಮೆಯೇ ಏನು ಮಾಡಿಯಾನು?'

'ಹೌದು. ಏನು ಮಾಡಿಯಾರು ಗಾಂಧಿಜಿ? ಅವರು ಜಾದೂ ವಿದ್ಯೆ ಕಲಿತಿಲ್ಲ' ಎಂದುಸುರಿದ ಹರಿ.

'ಜಾದೂವಿದ್ಯೆ ಉಪಯೋಗಿಸಿದರೂ ಬ್ರಿಟಿಷರು ಬಗ್ಗುವವರಲ್ಲ. ಮಹಾ ಕುತಂತ್ರಿಗಳು ಅವರು, ಮಾಯಾವಿಗಳು. ಬಂಗಾಲ ಗೆದ್ದು ಗೌಡಬಂಗಾಳಿ ವಿದ್ಯೆಯನ್ನು ಕಲಿತಿದ್ದಾರೆ. ಅವರಿಗೆ ಗಾಂಧೀ ಮಹಾತ್ಮನ ಅಸಹಕಾರವೊಂದೇ ಮದ್ದು.'

ಹರಿ ಆಲಿಸುತ್ತ ನಡೆದ.

'ಹೌದಾ ಹರಿ, ನೀನೂ ಗಾಂಧಿ ಚಳುವಳಿಯಲ್ಲಿ ಸೇರುತ್ತೀಯಾ ಏನುತ್ತೆ? ಹಾಗೆ ಲಕ್ಷಣ ಕಾಣಿಸುತ್ತಿದೆ ನನಗೆ ನಿನ್ನ ಮಾತಿನಿಂದ' ಎಂದು ಪುನಃ ಕೇಳಿದರು ತಂದೆ.

‘ ಸೇರಿದರೆ ನಿಮಗೇನಾದರೂ ಬೇಸರ ಇದೆಯಾ ? ’

ಅದಕ್ಕೆ ಉತ್ತರ ಕೊಡುವ ಮೊದಲು ಗೋವಿಂದರಾಯರು ಸ್ವಲ್ಪ ತಡೆದರು. ಇದಿರಿಗೆ ಏರೂ ಬಂದಿತು. ಉಬ್ಬಸ ಬಿಡುತ್ತಾ ಮೌನದಿಂದ ಏರಿ ಸಮತಟ್ಟಾದ ರಸ್ತೆಯಲ್ಲಿ ನಾಲ್ಕು ಮಾರು ನಡೆದ ಮೇಲೆ ಉತ್ತರ ಕೊಟ್ಟರು—

‘ ನನಗೇಕೆ ಬೇಸರ ? ಅದು ನಿನ್ನಿಷ್ಟ. ಅದಕ್ಕೂ ನಾನು ಅಡ್ಡ ಬರುವುದಿಲ್ಲ. ಆದರೆ ಮೊದಲು ನೀನೇ ಎದೆ ಗಟ್ಟಿ ಇದೆಯೋ ಇಲ್ಲವೋ ಎಂದು ಮುಟ್ಟಿಕೋ. ಗಟ್ಟಿಯಿದ್ದರೆ ಸರಿ. ಅಳ್ಳೆದೆಯವರಿಂದ ಅದು ಆಗುವ ಹೋಗುವ ಕೆಲಸವಲ್ಲ. ಹೆದರಿಕೆಯಿದ್ದವರು ಅರ್ಧದಲ್ಲೇ ಗಾಂಧಿಯನ್ನು ನಡುನೀರಲ್ಲಿ ತೊರೆದುಬಿಡುವರು. ಆದರಿಂದ ಯಾರಿಗೂ ಹಿತವಾಗಲಾರದು. ಆದುದರಿಂದ ಸೇರುವುದೇ ಆದರೆ ಮೊದಲು ನಿರ್ಭಯನಾಗಿರಬೇಕು. ನಿರ್ಭಯನಾಗಿದ್ದ ಮನುಷ್ಯನಿಗೆ ಪೋಲೀಸರ ದೊಣ್ಣೆ, ಈಟಿ, ಬಂದೂಕು, ಬಾಂಬು ಜೈಲುಗಳ ಭಯವಿಲ್ಲ. ನಿರ್ಭೀತಿಯೇ ಎಲ್ಲವನ್ನೂ ಇದಿರಿಸುವ ಗುರಾಣಿ.’

‘ ಅದು ಸತ್ಯ. ಗಾಂಧೀಜಿ ಆ ಸ್ಥಿತಿಗೆ ಮುಟ್ಟಿದ್ದಾರೆ. ಆದುದರಿಂದಲೇ ಬಲಿಷ್ಠ ಬ್ರಿಟಿಷ್ ಸಾಮ್ರಾಜ್ಯವನ್ನೂ ಪ್ರತಿಭಟಿಸುವ ಧೈರ್ಯ ಅವರಲ್ಲಿದೆ.’

‘ ಹೌದು, ಗಾಂಧಿ ನಿರ್ಭಯ ಪುರುಷ. ಅದರೊಂದಿಗೆ ಅವನು ನಿರಹಂಕಾರಿ. ಸ್ವಾಭಿಮಾನವಿದ್ದರೂ ಮಮಕಾರವಿಲ್ಲ. ಮಮಕಾರವೇ ದುರಹಂಕಾರ. ನಿರಹಂಕಾರ ಮತ್ತು ದುರಹಂಕಾರ ಈ ಎರಡು ಪದಗಳಲ್ಲಿ ಒಂದು ಅಕ್ಷರ ವ್ಯತ್ಯಾಸ. ಆದರೆ ಅರ್ಥವೆಷ್ಟು ಭಿನ್ನ? ಒಂದು ಸಾತ್ವಿಕ ಶಕ್ತಿ, ಇನ್ನೊಂದು ತಾಮಸಿಕ ಶಕ್ತಿ. ತಾಮಸಿಕ ದುರಹಂಕಾರವೇ ಕೌರವನ ಮೃತ್ಯುವಿಗೆ ಕಾರಣ. ನಿರಹಂಕಾರವೇ ಮಹಾತ್ಮನ ಏಳ್ಗೆಯ ಮೂಲ. ಅದರೊಂದಿಗೆ ನಿರ್ವಂಚನೆಯ ಕರ್ಣಕವಚವನ್ನೂ ಧರಿಸಿದ್ದಾನೆ ಅವನು. ಸತ್ಯ, ಸದಾಚಾರ, ಅಹಿಂಸೆ ಇವೆಲ್ಲ ನಿರ್ವಂಚನಾಶಕ್ತಿಯ ವಿವಿಧ ಸ್ವರೂಪಗಳು. ನಿರ್ಭೀತಿ, ನಿರಹಂಕಾರ, ನಿರ್ವಂಚನೆ ಮೂರನ್ನೂ ದಾರಿಯ ಬುತ್ತಿಯನ್ನಾಗಿ ಕಟ್ಟಿಕೊಂಡರೆ ಅಗ್ನಿ ಸುಡಲಿಕ್ಕಿಲ್ಲ, ನೀರು ದಾರಿ ಬಿಟ್ಟುಕೊಟ್ಟೀತು. ಆಗ ಯಾವ ಮನುಷ್ಯ ಏನು ಮಾಡಿಯಾನು ನಿನಗೆ? ನೀನು ಯಾರಿಗೂ ತಲೆತಗ್ಗಿಸಬೇಕಾಗಿಲ್ಲ ಈ ಜಗತ್ತಿನಲ್ಲಿ.’

ಹರಿ ಅನನುಭವಿ. ವಯಸ್ಸೂ ಕಿರಿದು. ಗೋವಿಂದರಾಯರು ಆಡಿದ್ದೆಲ್ಲ ಸಂಪೂರ್ಣ ಅರ್ಥವಾಯಿತೆಂದು ಹೇಳಲಿಕ್ಕಾಗದು. ಆದರೂ ತಂದೆಯ ಬಗೆಗೆ

ಬಹಳ ಗೌರವದ ಭಾವ ಅವನ ಹೃದಯದಲ್ಲಿ ತಲೆದೋರಿತು. ಅವನು ಸುಮ್ಮನೆ ' ಹುಂ, ಹುಂ ' ಎಂದು ಹೇಳುತ್ತ ಬಂದ. ಮಾತಿನಲ್ಲಿ ದಾರಿ ನಡೆದುದೂ ಗೊತ್ತಾಗಲಿಲ್ಲ. ಮುಂಡಾಜೆ ಸಮೀಪಿಸಿದುದನ್ನು ಕಂಡು ' ಹರಿ, ನೀನು ಎಲ್ಲಿಗೆ ಹೊರಟೆ ? ಯಾವ ಊರಿಗೆ ? ' ಎಂದು ಗೋವಿಂದರಾಯರು ಪುನಃ ಬಹಳ ಕನಿಕರದಿಂದ ಕೇಳಿದರು.

ಅವನ ಕಣ್ಣುಗಳಲ್ಲಿ ನೀರು ತುಂಬಿತು—' ಈಗಂತೂ ಮಂಗಳೂರಿಗೆ. ಅಲ್ಲಿ ಏನೇನಾಗುತ್ತದೋ ನೋಡಬೇಕು. ಏನೂ ಕೆಲಸ ಕೈಗೂಡದಿದ್ದರೆ ಮುಂಬಯಿಗೆ' ಎಂದು ಹರಿ ಮನಸ್ಸಿನಲ್ಲಿದ್ದುದನ್ನು ನುಡಿದ.

' ಹಾಂ, ಹಾಗೆ ಹೇಳಿದೆಯಲ್ಲ ? ಅದೇ ನನಗೆ ಪರಮ ಸಂತೋಷ. ಆಗಲಿ, ದೇವರು ನಿನಗೆ ಒಳ್ಳೆಯದನ್ನೇ ಮಾಡಲಿ ' ಎಂದು ಅವರು ಆಶೀರ್ವದಿಸಿ ಸ್ವಲ್ಪ ಹೊತ್ತು ಮೌನವಾಗಿಯೇ ದಾರಿಯನ್ನತಿಕ್ರಮಿಸುತ್ತ ನಡೆದರು. ರಸ್ತೆಯ ಮಧ್ಯ ಅಲ್ಲಲ್ಲಿ ಹೊಂಡಗಳು ಬಿದ್ದಿದ್ದುವು. ಕೆಲವೆಡೆ ಚೂಪು ಬೆಣಚು ಕಲ್ಲುಗಳು. ಅವುಗಳ ಮೇಲೆ ನಡೆದ ಗೋವಿಂದರಾಯರಿಗೆ ಮತ್ತೇನೋ ನೆನಪಾದಂತಾಗಿ, ' ಈ ದಾರಿಯಂತೆ ನಿನ್ನ ದಾರಿಯೂ ಬಹಳ ಕಷ್ಟದ್ದು ಮಗನೇ ' ಎಂದು ಆರಂಭಿಸಿದರು.

" ಮಂಗಳೂರು ಅಥವಾ ಮುಂಬಯಿ ! ಮಂಗಳೂರಿಗಿಂತ ಮುಂಬಯಿ ದೊಡ್ಡದು. ಮಂಗಳೂರು ಟೌನು. ಮುಂಬಯಿ ದೊಡ್ಡ ಸಿಟಿ. ನೀನು ಸಿಟಿಗೇ ಹೊರಟಂತೆ ತೋರುತ್ತದೆ ' ಕಾಸಿದ್ದರೆ ಕುಡಿಯಾಲ ಇಲ್ಲದಿದ್ದರೆ ನಡೆಯೆಲ ' ಎಂದು ಹಿರಿಯರ ಗಾದೆಯೇ ಉಂಟು. ಹಾಗಿರುವಾಗ ಮುಂಬಯಿ ಕಥೆ ಏನು? ನಿನ್ನ ಕೈಯಲ್ಲಿ ಕಾಸಿಲ್ಲ. ಯಾರು ಮಾತನಾಡಿಸುತ್ತಾರೆ ನಿನ್ನನ್ನು ? ಹಣವಿಲ್ಲದವನನ್ನು ಹೆಣವೂ ಕಣ್ಣೆತ್ತಿ ನೋಡುವುದಿಲ್ಲ. ಹಣವಂತನ ಕಾರಿನಡಿ ಬಿದ್ದು ಹೆಣವಾದರೆ ಆ ಕಾರಿನವನೂ ಹಣಿಕಿ ನೋಡಲಾರ. ಹಣಕ್ಕೆ ಗುಣವಿಲ್ಲ. ಸತ್ಯ ಅಸತ್ಯ, ನ್ಯಾಯ ಅನ್ಯಾಯ, ಧರ್ಮ ಅಧರ್ಮ, ಇವುಗಳನ್ನೂ ಹಣವಂತನು ಲಕ್ಷಿಸಲಾರ. ಒಂದಕ್ಕೆ ಎರಡು ವಸೂಲುಮಾಡುವುದು ಅನ್ಯಾಯವೆಂದು ನಾವು ಕಂಡರೆ ಅದು ಅವನ ಬಿಜಿನೆಸ್ ದೃಷ್ಟಿಯಲ್ಲಿ ನ್ಯಾಯ. ಬಡವರಿಗೆ ಅಧರ್ಮ ಮಾಡುದು ಅವನ ಧರ್ಮವಾಗುತ್ತದೆ. ತಿಂಗಳಿಗೆ ಹದಿನೈದು ರೂಪಾಯಿ ಸಂಬಳ ಕೊಟ್ಟರೂ ಗುಮಾಸ್ತ ೧೫ ಗಂಟೆ ದುಡಿಯಬೇಕೆನ್ನುವನು. ಅದು ' ಸೇವಾ ಧರ್ಮ' ಎಂದು ' ದೊಡ್ಡವರು ಎಂಬವರಿಂದ ' ಬೋಧಿಸಲು ಅವನು ಮರೆಯುವು

ದಿಲ್ಲ. ಬಡವರ ನೆತ್ತರು ಹೀರುವ ನವನಾಗರಿಕತೆಯ ವಿಧಾನಗಳು ಇವೆಲ್ಲ. ಬಡವರಿಗೆ ರಕುತವೊಂದೇ ಏಕೆ, ಆಸ್ತಿಯಿದ್ದರೆ ಅದಕ್ಕೂ ಅವನು ಕೈಕೊಡು ವನು. ಅವನಿಗೆ ಚಂದದ ಹೆಂಡತಿ ಹೆಣ್ಮಕ್ಕಳಿದ್ದರೆ ಅವರ ಮೇಲೂ ಕಣ್ಣೇ. ಆಚಾರ ವಿಚಾರ, ಕಾಯದೆ ಕಾನೂನು ಯಾವುದೂ ಇಲ್ಲ ಅವನಿಗೆ. ಅದೆಲ್ಲ ಬಡವರಿಗೆ ಮಾತ್ರ.'

'ಹಾ, ಬಡವರ ಸ್ಥಿತಿಯೇ?' ಎಂದು ಉದ್ಗರಿಸಿದ ಹರಿ.

'ಹೌದು, ಬಡವನ ಸ್ಥಿತಿ ಬಹಳ ಹೀನ. ಬಡೆಯಲ್ಪಟ್ಟವನೇ ಬಡವ. ಆದರೆ ಬಡೆಸಿಕೊಂಡ ಬಡವನೂ ಸಂದರ್ಭ ದೊರೆತರೆ ಮತ್ತೊಬ್ಬ ಬಡವನನ್ನೂ ಬಡೆಯುತ್ತಾನಲ್ಲ! ಇದೇ ದುರ್ದೈವದ ಸಂಗತಿ. ಒಬ್ಬನ ನೌಕರಿ ತೆಗೆಸಲು, ಅವನ ವಿರುದ್ಧ ಚಾಡಿ ಹೇಳಲು, ಬೆನ್ನಿನ ಮೇಲೆ ತಿವಿಯಲು, ನಾಲ್ಕು ಜನರ ಮುಂದೆ ಅಪಮಾನ ಮಾಡಲು ಹೇಸುವುದಿಲ್ಲವಲ್ಲಾ ಅವನು! ಬಡತನ ದಿಂದ ಶ್ರೀಮಂತಿಕೆಗೆ ಏರಿದ ಮೇಲೂ ಬಡವರನ್ನು ಬಡೆಯುತ್ತಾನಲ್ಲಾ ಅವನು! ಈ ಬಡಬಾಗ್ನಿಗೆ ಬಲಿಬೀಳಬಾರದು ಬಡವ! ಇಕೋ, ಅದಕ್ಕೆ ಒಂದೇ ಉಪಾಯ ಹೇಳುತ್ತೇನೆ. ಎಲ್ಲರನ್ನೂ ಪ್ರೀತಿಸು. ಗಾಂಧಿ ಮಂತ್ರ ಇದೇ. ಬ್ರಿಟಿಷರ ಮೇಲೆ ಅವನಿಗೆ ಸಿಟ್ಟಿದೆಯಾ? ಇಲ್ಲ' ಎಂದು ನಕ್ಕರು ಗೋವಿಂದರಾಯರು.

ಹರಿಗೂ ನಗು ಬಂದಿತು.

'ಕಾಲೇಜಿಗೆ ಅಪ್ಪಯ್ಯ ಕಳಿಸಲಿಲ್ಲವೆಂದಾಗಲೀ ಅಣ್ಣಾ ಹಣ ಕೊಡಲಿಲ್ಲ ಎಂದಾಗಲೀ ನಿನಗೆ ಸಿಟ್ಟಿಲ್ಲವಲ್ಲ?' ಎಂದು ಕೊನೆಯದಾಗಿ ಕೇಳಿದರು ಅವರು.

ಹರಿ ತಂದೆಯ ಮೋರೆ ನೋಡಿ, 'ಇಲ್ಲ ಅಪ್ಪಯ್ಯ. ಎಳ್ಳಷ್ಟೂ ಸಿಟ್ಟಿಲ್ಲ' ಎಂದುತ್ತರ ಕೊಟ್ಟ.

ಅವರ ಕಣ್ಣಲ್ಲಿ ನೀರು ತುಂಬಿತು. ಅವನಿಗೆ ಟಿಕೆಟ್ ತೆಗೆಸಿ ಕೊಟ್ಟು ಕಿಸೆಯಲ್ಲಿ ಒಂದು ನೋಟನ್ನೂ ತುರುಕಿದರು. ಬಸ್ ಬಿಡುವ ಹೊತ್ತಿಗೆ 'ಬರುತ್ತೇನೆ ಅಪ್ಪಯ್ಯ' ಎಂದು ಹೇಳಿ ಕಣ್ಣುಗಳನ್ನೊರಸಿಕೊಂಡ. 'ಆಗಲಿ' ಎಂದೆನ್ನಲು ಅವರ ನಾಲಿಗೆಯೇ ಹೊರಡಲಿಲ್ಲ. ಕೈಯೆತ್ತಿದರು ಮಾತ್ರ.

ಮೋಟಾರು ಹೊರಟ ಮೇಲೆ ಗೋವಿಂದರಾಯರ ಕೈ ಕಾಲುಗಳಲ್ಲಿದ್ದ ಚೈತನ್ಯವೂ ಹೋಯಿತು. ಹಾಟೇಲಿಗೆ ಪ್ರವೇಶಿಸಿ ಕಾಫಿ ಕುಡಿದು, ಒಂದು

ಮುಕ್ಕಾಲಿನ ನಸ್ಯವನ್ನು ಬುರುಡೆಗೆ ತುಂಬಿಸಿದರು. ಮನೆಗೆ ಅವಶ್ಯವಿದ್ದ ಕೆಲವು ಸಾಮಾನುಗಳನ್ನು ಗಂಟು ಕಟ್ಟಿ ಹೆಗಲ ಮೇಲೇರಿಸಿ ಮನೆಯ ದಾರಿ ಹಿಡಿದರು. ಆದರೆ, ಎಷ್ಟು ನಡೆದರೂ ದಾರಿ ಸಾಗಲೊಲ್ಲದು. ಕಾಲು ಸೋತುವು. ಮೈಯಿಂದ ಬೆವರಿಳಿದು ಅಲ್ಲಲ್ಲಿ ಅಂಗಿ ಮೈಗೆ ಅಂಟಿಕೊಂಡಿತು. ರಸ್ತೆಯ ಪಕ್ಕದಲ್ಲಿದ್ದ ಗೋಳಿಮರದ ನೆರಳಲ್ಲಿ ಒಮ್ಮೆ ಕುಳಿತರು. ಮತ್ತೆ ಒಂದೆರಡು ಮೈಲು ನಡೆದು ಬೂರುಗದ ನೆರಳಲ್ಲಿ ಆಶ್ರಯ ಪಡೆದರು. ಆ ಮರದಡಿ ಬೇಸಿಗೆಯ ಬಿಸಿಲಿಗೆ ಒಡೆದು ಚಲ್ಲಾಪಿಲ್ಲಿಯಾಗಿ ಬಿದ್ದ ನೂರಾರು ಕಾಯಿಗಳು ಮಳೆಗಾಲದಲ್ಲಿ ಮೊಳಕೆ ಒಡೆದಿದ್ದುವು. ಕೆಲವು ಗಿಡಗಳನ್ನು ಕಿತ್ತು ಕೋಟಿನ ಕಿಸೆಯೊಳಗೆ ತುಂಬಿಸಿ ಹೊರಟರು. ರಸ್ತೆ ಬಿಟ್ಟು ಮನೆಗೆ ತಿರುಗುವಲ್ಲಿ ತಿರುಗದೆ ಮತ್ತೂ ಅರ್ಧ ಮೈಲು ಮುಂದಕ್ಕೆ ಬಂದಾಗ, 'ಹಾಂ, ಎಲ್ಲಿಗೆ ಬಂದೆ' ಎಂದು ಯೋಚಿಸಿ ಪುನಃ ಹೊರಳಿ ಮನೆ ಮುಟ್ಟಿದರು. ಮನೆಗೆ ಬಾಗಿಲು ಎಳೆದಿತ್ತು. 'ಹಿಡಿ, ಹಿಡಿಯೋ' ಎಂದು ಸೀತಮ್ಮನವರು ಬೈಲಲ್ಲಿ ಗುಲ್ಲೆಬ್ಬಿಸುತ್ತಿದ್ದುದು ಕೇಳಿಸುತ್ತಿತ್ತು. 'ಏನು, ಏನು?' ಎಂದು ಕೇಳುತ್ತ ಗೋವಿಂದರಾಯರು ಬೈಲಿಗೆ ಬಂದರು. 'ಮಂಗಗಳ ಉಪದ್ರ. ಮತ್ತೇನು? ಅವುಗಳಿಗೂ ನಮ್ಮ ಮೇಲೆ ಹಗೆತನ! ಬತ್ತದ ಕೊರಳನ್ನು ತಿನ್ನಲು ಗದ್ದೆಗಳಿಗೆ ಇಳಿದಿವೆ' ಎಂದು ಸೀತಮ್ಮನವರು ನುಡಿದರು. ಮರಗಳ ಮೇಲೆ ಕುಳಿತು ಟರ್ ಟರ್ ಎಂದು ಬೆದರಿಸುತ್ತಿದ್ದ ಮಂಗಗಳ ಮೇಲೆ ಕಲ್ಲೆಸೆಯುತ್ತಿದ್ದ ಮೋಹನ.

'ಹಿಡಿ ಹಿಡಿ ಎಂದರೆ ಮಂಗಗಳಿಗೆ ಹೆದರಿಕೆಯಾದೀತಾ? ಹಿಡಿ ಕಲ್ಲೆಸೆದರೆ ಅವುಗಳಿಗೆ ತಾಗುತ್ತದಾ? ಮನೆಯಿಂದ ಒಂದು ಡಬ್ಬ ತಾ. ಅದನ್ನು ಒಂದು ಮರಕ್ಕೆ ಕಟ್ಟಿ ಬಡೆದರೆ ಹೆದರುತ್ತವೆ' ಎಂದು ಅವರು ಸೂಚಿಸಿದರು. ಮೋಹನ ಮನೆಗೋಡಿ ಹಳೇ ಡಬ್ಬವೊಂದನ್ನು ತಂದು ಕೋಲಿನಿಂದ ಡಬಡಬ ಬಡೆದ. ಮಂಗಗಳೆಲ್ಲ ಬೆದರಿ ದಿಕ್ಕುಪಾಲಾದುವು.

ಬತ್ತದ ಬೆಳೆಗೆ ಮಂಗಗಳ ಕಾಟವೊಂದೇ ಅಲ್ಲ. ಹಗಲಿಗೆ ಗಿಳಿಗಳ ದಳಗಳೂ ಬಂದು ಕೊರಳಿನ ಮೇಲೆ ಕುಳಿತು ಕಳಕಳ ಕಳಾರವನ್ನೆಬ್ಬಿಸಿದುವು. ಅವುಗಳನ್ನು ಹೆದರಿಸಲು ಬೈಹುಲ್ಲಿನ ತಟ್ಟೇರಾಯನನ್ನು ತಯಾರಿಸಿದರು. ಮನುಷ್ಯಾಕೃತಿಯ ಈ ತಟ್ಟೇರಾಯನಿಗೆ ಹರಕು ಅಂಗಿ ತೊಡಿಸಿ ಸುಣ್ಣದ ಬೊಟ್ಟು ಬರೆದ ಒಡೆದ ಮಡಿಕೆಯ ಕುಲಾವಿಯನ್ನಿಟ್ಟರು ತಲೆಗೆ. ಉದ್ದ

ಕೋಲಿಗೆ ತಟ್ಟೇರಾಯನನ್ನು ಕಟ್ಟಿ ಗದ್ದೆಯ ಮಧ್ಯೆ ಆ ಕೋಲನ್ನೂ ಊರಿದರು. ಅಂದಿನಿಂದ ಗಿಳಿಗಳು ಬೆದರಿ ಬರಲಿಲ್ಲ. ಈ ಚಿಂತೆ ದೂರವಾಯ್ತೆಂದು ನಿಶ್ಚಿಂತೆಯಿಂದಿರುವಂತಿರಲಿಲ್ಲ. ರಾತ್ರಿ ಉಳೆಗಳ ಹಿಂಡುಗಳೇ ಬಂದು ಬೆಳೆಯನ್ನು ಪುಡಿ ಎಬ್ಬಿಸಿದುವು. 'ಅಯ್ಯೋ ನಮ್ಮ ಗ್ರಹಚಾರವೇ! ಈ ಜಿಂಕೆಗಳ ಹಿಂಡನ್ನು ತಡೆಯಲು ಗದ್ದೆಯ ಹುಣಿಯಲ್ಲೇ ರಾತ್ರಿ ಜಾಗರಣೆ ಮಾಡಬೇಕಾಯಿತೇ ಹೇಗೆ? ನಮ್ಮ ಮನೆಯಲ್ಲಿ ಒಂದು ಕೋವಿಯೂ ಇಲ್ಲ. ಬೋರನ ಕೈಯಲ್ಲಿ ಒಂದು ಕೇಪಿನ ಕೋವಿಯಾದರೂ ಇದೆ. ಹೇಳಿದರೆ ಒಂದು ಗುಂಡು ಹಾರಿಸಿಯಾನು' ಎಂದು ಸೀತಮ್ಮನವರು ತೋಡಿಕೊಂಡರು. ಅವರೇಂದಂತೆ ಬೆಳದಿಂಗಳು ಬಿದ್ದ ದಿನ ನೋಡಿ ಬೋರನೂ ಬಂದ.

ಆದರೆ ಗದ್ದೆಯ ಹುಣಿಯಲ್ಲಿ ಮುಸುಕು ಹಾಕಿ ಕಾಯಲು ಅವನಿಗೂ ಹೆದರಿಕೆ. ಹಾವು ಬಂದರೇನು ಗತಿ? ಕೇಪಿನ ಕೋವಿ ಹೆಬ್ಬುಲಿಗೂ ಈಡಲ್ಲ; ನಾಯಿಹುಲಿಗೆ ಮಾತ್ರ ಸಾಕು. ಆದುದರಿಂದ ರಾತ್ರಿ ಅವನು ಬಿಸಿ ನೀರಿನ ಕೊಟ್ಟಗೆಯಲ್ಲೇ ಕಂಬಳಿ ಹಾಸಿ ಕುಳಿತ. ಕೊಟ್ಟಗೆಗೆ ಬಿದಿರಿನ ತಟ್ಟಿ ಕಟ್ಟಿ ಅಡರು ಸಿಕ್ಕಿಸಿದ್ದರು. ಬಾಗಿಲಿಗೆ ಮಡಲಿನ ಮುಚ್ಚಳ. ಅದನ್ನು ಎಳೆದು ಕೊಂಡು ಕುಳಿತ ಬೋರನಿಗೆ ಮಧ್ಯರಾತ್ರಿಯ ಹೊತ್ತಿಗೆ ಕಣ್ಣು ಜೊಂಪು ಹಿಡಿಯಿತು. 'ಬೋರಾ ನಿದ್ದೆ ಬಂದಿತಾ?' ಎಂದು ರಾತ್ರಿ ಆಗಾಗ ಗೋವಿಂದರಾಯರು ಕಿಟಕಿಗೆ ಮೊಗ ಆನಿಸಿ ಕೇಳುತ್ತಿದ್ದರು. ಒಮ್ಮೆ ಕೇಳಿದಾಗ ಎಚ್ಚರವಾಗಿ ಅಡರಿನ ಕಿಂಡಿಗಳಿಂದ ನೋಡಿದ. ಕೊಟ್ಟಗೆಯ ಸಮೀಪ ಹಂದಿಗಳು ದಾಡೆಗಳಿಂದ ನೆಲ ಒಕ್ಕುತ್ತಿದ್ದವು. ಕಿಂಡಿಯಲ್ಲೇ ಕೋವಿಯ ನಳಿಗೆಯನ್ನು ತೂರಿ ಒಂದು ಹಂದಿಗೆ ಈಡಿಟ್ಟ ಬೋರ. ಗುರ್ ಗುರ್ ಎಂದು ಗುರುಗುಟ್ಟಿ ದಿಕ್ಕುಪಾಲಾಗಿ ಓಡತೊಡಗಿತು ಹಂದಿಯ ಹಿಂಡು. ಬೋರ ಬೆದರಿ ಮುಖಮಂಟಪಕ್ಕೆ ಓಡಿ ಬಂದ. ಗುಂಡಿನ ಶಬ್ದ ಕೇಳಿ ಗೋವಿಂದರಾಯರೂ ಬಾಗಿಲು ತೆರೆದು ಮುಖಮಂಟಪಕ್ಕೆ ಕಾಲಿಟ್ಟರು. 'ಜಿಂಕೆ ಸತ್ತಿತಾ? ಓಡಿ ಬಂದೆಯಲ್ಲಾ?' ಎಂದು ಅವರು ಕೇಳಿದರು.

'ಓಡಿ ಬರುವುದೇ ಜಿಂಕೆಯಲ್ಲ ಹಂದಿ. ಹಂದಿಗೆ ಮೈಮೇಲೆ ಗುಂಡು ಬಿದ್ದರೆ ನಾಟುವುದೇ ಇಲ್ಲ. ಅರ್ಧ ಪೆಟ್ಟಾದ ಹಂದಿಗೆ ವೈರ ಬಹಳ. ಎದುರಿಗೆ ಏನು ಸಿಕ್ಕಿದರೂ ದಾಡೆಯಿಂದ ಸೀಳಿಬಿಡುತ್ತದೆ. ಹುಲಿ ಕೂಡಾ ಹೆದರುತ್ತದಯ್ಯ ಹಂದಿಗೆ' ಎಂದು ವರಾಹ ಮಹಾತ್ಮೆಯನ್ನು ವರ್ಣಿಸಿದ ಬೋರ.

‘ಆಗಲಿ. ಜೀವ ಎಲ್ಲಕ್ಕಿಂತ ದೊಡ್ಡದು. ನೀನು ಇಲ್ಲೇ ಮಲಗು’ ಎಂದು ಹೇಳಿ ಗೋವಿಂದರಾಯರು ಒಳಗಿನಿಂದ ಒಂದು ಚಾಪೆಯ ಸುರುಳಿ ಹೊರಗಿಟ್ಟರು.

ಬೆಳಿಗ್ಗೆ ಎದ್ದು ನೋಡಿದಾಗ ಕೆಸುವು, ಮರಸಣಿಗೆ, ಮರಗೆಣಸುಗಳನ್ನೆಲ್ಲ ಹಂದಿಗಳು ದಾಡೆಗಳಿಂದ ಒಕ್ಕಿ ತಿಂದಿದ್ದು ಕಂಡುಬಂದಿತು. ‘ಹಾಂ, ಇದಕ್ಕೊ ಬಂತಾ ಕಾಲ?’ ಎಂದು ಗೋವಿಂದರಾಯರು ಅಡ್ಡಾದಿಡ್ಡಿಯಾಗಿ ಬಿಡ ಕಿತ್ತು ಬಿದ್ದ ಗಿಡಗಳನ್ನು ಪುನಃ ದರಗಳಲ್ಲಿ ನೆಟ್ಟರು.

‘ನಿಮಗೆ ಬೇರೆ ಕಸುಬಿಲ್ಲ. ಯಾಕೆ ಸುಮ್ಮಗೆ ಅದನ್ನೆಲ್ಲ ನೆಟ್ಟು ಹಂದಿಗಳಿಗೆ ಆಹಾರ ಮಾಡುತ್ತೀರಿ?’ ಎಂದು ಸೀತಮ್ಮನವರು ಒರಲಿದರು.

ವಾಸನೆ ಮೂಸಿ ತೆರಳುವ ಬೇಟೆನಾಯಿಗಳಂತೆ ಹಂದಿಗಳ ಕಾಲ ಹೆಜ್ಜೆಗಳ ಗುರುತು ಹಿಡಿದು ಬೋರ ನಡೆದ. ಒಂದೆಡೆ ನೆತ್ತರಿನ ಕಲೆಗಳೂ ಕಾಣಿಸಿದುವು. ಗದ್ದೆಯಲ್ಲಿ ಹಂದಿ ಹೊರಳಾಡಿದ್ದರಿಂದ ಸಸಿಗಳೆಲ್ಲ ಪುಡಿ ಪುಡಿಯಾಗಿದ್ದುವು. ಗಾಯವಾದ ಹಂದಿ ಎಲ್ಲಾದರೂ ಬಿದ್ದಿರಬೇಕೆಂದು ಬೋರನ ಆಶೆ. ಆದರೆ ಎಲ್ಲೆಲ್ಲಿ ಹುಡುಕಿದರೂ ಸಿಗಲಿಲ್ಲ. ತೆಂಕು ಬದಿಯ ದಟ್ಟಡವಿ ಸೇರಿರಬೇಕೆಂದು ನಂಬಿ ಅಲ್ಲೂ ಅಲ್ಲಲ್ಲಿ ನುಸುಳಿ ನೋಡಿ ‘ಸಿಗಲಿಲ್ಲಯ್ಯ. ಈಡು ತಪ್ಪಿತು. ಅದರ ತಲೆಗೆ ಬೀಳಬೇಕಿತ್ತು ಗುಂಡು!’ ಎಂದು ಹೇಳಿ, ‘ಅಯ್ಯಾ, ನಿಮ್ಮ ತೆಂಕು ಕಾಡಿನಲ್ಲಿ ಒಳ್ಳೆಮೆಣಸಿನ ಬೀಳು ಭಾರೀ ಇದೆ. ಯಾವ ಮರ ನೋಡಿದರೂ ಅದರ ಬೀಳುಗಳೇ. ಈ ವರುಷ ಬೇಸಿಗೆಗೆ ಒಂದು ಕಳಸೆ ಒಳ್ಳೆಮೆಣಸಾದೀತು. ಕೊಯ್ಯದೆ ಬಿಡಬೇಡಿ’ ಎಂದು ತಿಳಿಸಿದ. ಆವನೊಡನೆ ಗೋವಿಂದರಾಯರು ಪುನಃ ತೆರಳಿ ನೋಡಿಬಂದರು. ‘ಹಂದಿಯ ನೆವದಿಂದ ಒಳ್ಳೆಮೆಣಸಿನ ಸಂಶೋಧನೆಯಾಯಿತಲ್ಲ?’ ಎಂದು ಆವರು ಹಿಗ್ಗಿದರು. ‘ಈ ಕಾಡಿನಲ್ಲಿ ಯಾವ ಮಹಾರಾಯ ನೆಟ್ಟಿದ್ದ ಈ ಬಳ್ಳಿಗಳನ್ನು?’ ಎಂದು ಸೀತಮ್ಮನವರು ಆಶ್ಚರ್ಯ ವ್ಯಕ್ತಪಡಿಸಿದರು.

‘ಅಮ್ಮಾ, ಯಾರು ನೆಡುತ್ತಾರೆ? ಯಾರೂ ನೆಡಬೇಕೆಂದಿಲ್ಲ. ಮಲೆಯಲ್ಲಿ ತಾನಾಗಿ ಬೆಳೆಯುತ್ತದೆ. ಕುದುರೆಮುಖ, ಎಳ್ನೀರ್, ಬಲ್ಲಾಳ ರಾಯದುರ್ಗದ ಮಲೆಗಳಲ್ಲಿ ಮುಡಿ ಮುಡಿ ಬೆಳೆಯುತ್ತದೆ. ಎಲ್ಲ ಕೊಯ್ದರೆ ಅನೇಕ ಗಾಡಿಗಳಾಗಬಹುದು. ಕೊಯ್ಯುವವರಿಲ್ಲ ಅಷ್ಟನ್ನು. ದಾರಿ ಸಿಗುವುದಿಲ್ಲ ಆ ಬಳ್ಳಿಯ ಹತ್ತಿರ ತೆರಳಲಿಕ್ಕೆ. ಅಲ್ಲಲ್ಲಿ ಕೈಗೆ ಸಿಕ್ಕಿದುದನ್ನು ಹರಿದುಕೊಂಡು

ಬರುತ್ತಾರೆ. ಕೈಗೆ ಸಿಗುವ ವಸ್ತು ಒಳ್ಳೆಮೆಣಸೊಂದೇ ಎಂದು ತಿಳಿದಿರಾ? ಸೀಗೆ, ಏಲಕ್ಕಿ, ಬೆತ್ತಕೂಡಾ ಬೇಕಾದಷ್ಟಿವೆ. ಉಳಿ ಕೊಂಬು, ಆನೆ ಕೊಂಬುಗಳೂ ದೊರೆಯುತ್ತವೆ. ಹಲಸು, ಮಾವಿನ ಮರಗಳಿಗೂ ಕಡಿಮೆ ಇಲ್ಲ.'

'ಹೌದಾ, ಮಾವಿನಹಣ್ಣು ಇದೆಯಾ? ಯಾರು ನೆಟ್ಟರು ಅಲ್ಲಿ?'

'ಯಾರು ನೆಡಬೇಕು? ಪಕ್ಕಿ ಪರಣೆ ತಿಂದು ಬಿದ್ದ ಗೊರಟುಗಳೇ ಮರವಾಗಿವೆ. ಒಂದು ಮರವಿದ್ದರೆ ಸಾಕು. ಹತ್ತು ವರುಷಗಳಲ್ಲಿ ಹತ್ತು ಸಾವಿರವಾಗುತ್ತದೆ ಅದರ ಸಂತಾನ' ಎಂದು ಗೋವಿಂದರಾಯರು ತಿಳಿಸಿದರು.

'ಮಾವಿನಕಾಯಿ ಕೊಯ್ಯುತ್ತಿದ್ದರೆ ಉಪ್ಪಿನಕಾಯಾದರೂ ಹಾಕಬಹುದಿತ್ತು' ಎಂದು ಸೀತಮ್ಮ ಬಾಯಿಗೆ ನೀರು ತಂದುಕೊಂಡರು.

'ಇನ್ನೆರಡು ವರುಷಗಳಲ್ಲಿ ಕಸಿ ಗಿಡಗಳಲ್ಲೇ ತೋತಾಪುರಿಕಾಯಿಗಳಾಗುತ್ತವೆ. ಎಷ್ಟು ಉಪ್ಪಿನಕಾಯಿ ಹಾಕಿ ಉಣಬಡಿಸುತ್ತೀ ನೋಡುತ್ತೇನೆ. ನಿನಗದೇ ಯೋಚನೆ. ಬತ್ತ ಕೊಯ್ದು ಅಂಗಳಕ್ಕೆ ಹೇಗೆ ಬಂದೀತೆಂದು ನನಗೆ ಚಿಂತೆಯಾಗಿದೆ. ಸಮಯಕ್ಕೆ ಯಾರೂ ಸಿಗದಿದ್ದರೆ ಗದ್ದೆಗೇ ಸಮರ್ಪಣೆ' ಎಂದು ಅವರು ಕೃಷ್ಣಾರ್ಪಣ ಮಾಡುವವರಂತೆ ಬೊಗಸೆಗಳನ್ನೆತ್ತಿಬಿಟ್ಟರು.

ಅವರು ಊಹಿಸಿದಂತೆ ಸಕಾಲಕ್ಕೆ ಹೆಣ್ಣಾಳುಗಳನ್ನು ಕರೆಸುವುದೇ ಕಷ್ಟವಾಯ್ತು. ಬೋರ, ತುಕ್ರ, ಅಹ್ಮದರ ಮನೆಗೆ ಅನೇಕ ಸಲ ಓಡಾಡಿದರು. ಲಚ್ಚಿಮಿ ಏಳನೇ ತಿಂಗಳಲ್ಲೇ ಪ್ರಸವಿಸಿ ಹಾಸಿಗೆ ಹಿಡಿದಿದ್ದಳು. ಗೇಣುದ್ದದ ಮಗು ಉಳಿದಿರಲಿಲ್ಲ. ಅವಳು ಉಳಿದುದೇ ದೊಡ್ಡದು. ಪಾರ್ವತಿಯ ಕೈಕಾಲುಗಳಿಗೆ ನೀರು ಬಂದಿತ್ತು. ಗುಳಿ ಸೇರಿದ್ದ ಕೆನ್ನೆಗಳೂ ಉಬ್ಬಿದ್ದುವು ಕೆಂಡ ಬಿದ್ದು ಬಂದ ಪೊಕ್ಕಳದಂತೆ. ಹಸೀನ್‌ಬೀಬಿ ನರಳುತ್ತಿದ್ದರೂ ಗೋವಿಂದರಾಯರ ಒತ್ತಾಯಕ್ಕೆ ಅಹ್ಮದ್ ಬ್ಯಾರಿ ಕಳಿಸಿದ. ಬಂದಾಗ ಅವಳು ಇನ್ನಿಬ್ಬರನ್ನು ಕರೆದುಕೊಂಡು ಬಂದಳು. ಹಾಗೂ ಹೀಗೂ ಬತ್ತದ ಕೆಯ್ಯಿ ಕೊಯ್ದರು. ಬ್ಯಾರಿ ಮತ್ತು ಬೋರ ಸೂಡಿಗಳನ್ನು ಒಂದರ ಮೇಲೊಂದಿಟ್ಟು ಹೊರೆ ಕಟ್ಟಿ ಅಂಗಳಕ್ಕೆ ಹೊತ್ತು ತಂದು ಹಾಕಿದರು. ಕೆಲವು ದಿವಸಗಳವರೆಗೆ ಅವು ಬಿಸಿಲಲ್ಲಿ ಇನ್ನಷ್ಟು ಒಣಗಿದವು. ಸೀತಮ್ಮನವರು ಸಗಣಿ ನೀರಿನಿಂದ ಅಂಗಳ ಸಾರಿಸಿದ ಮೇಲೆ ಅಂಗಳದ ಮಧ್ಯದಲ್ಲಿ ಹೊಡೆಮುಂಚವನ್ನಿಟ್ಟು ಸೂಡಿಗಳನ್ನು ಹೊಡೆದರು. ಸೀತಮ್ಮನವರೂ ತಲೆಗೊಂದು ಟೈರಾಸ್ ಸುತ್ತಿಕೊಂಡು ಬಂದು ಕೂಡಿಕೊಂಡರು. ಬತ್ತ ಪ್ರತ್ಯೇಕಿಸಿ ಬೈಹುಲ್ಲಿನ

ಸೂಡಿಗಳನ್ನು ಹಟ್ಟಿಯ ಬಳಿ ಅಂಗಳದ ಒಂದಂಚಿನಲ್ಲೇ ಮೂಟೆ ಒಟ್ಟಿದರು. ಬತ್ತವನ್ನು ಬಿಸಿಲಿಗೆ ಒಣಗಿಸಿ, ಕಸಕಡ್ಡಿಯನ್ನು ತೂರಿ ಮುಖಮಂಟಪದಲ್ಲಿ ಹೇರಿದಾಗ ಏಳು ಕೆರೆಯ ನೀರು ಕುಡಿದಂತಾಯಿತು ಗೋವಿಂದರಾಯರಿಗೆ. ಮೊದಲನೇ ವರುಷದ ಬೇಸಾಯಕ್ಕೇ ಅವರ ಮೈ ಮೋರೆಯ ಮೇಲೆ ಬೆವರು ಧಾರಾಕಾರವಾಗಿ ಹರಿಯಿತು. ಮೋಹನ ರಾತ್ರಿಯಿಡೀ ಕೈ ಮೈ ತುರಿಸಿ ಕೊಂಡು ಅಳತೊಡಗಿದ.

ಆಳುಗಳಿಗೆ ಸಂಬಳ ಕೊಡಲು ರಾಜ ವಾರದ ಕೊನೆಯ ರಜಾದಿನ ಮನೆಗೆ ಬಂದಾಗ ಬೇಸಾಯದ ಕಷ್ಟಗಳನ್ನೆಲ್ಲ ಅವನ ಮುಂದೆ ವಿವರಿಸಿದರು. ಒಕ್ಕಲು ಪಕ್ಕಲುಗಳಿದ್ದರೆ ಬೇಸಾಯ. ಇಲ್ಲದಿದ್ದರೆ ಮನೆಯಲ್ಲೇ ನಾಲ್ವರು ಗಟ್ಟಿಮುಟ್ಟಿನ ಗಂಡಸರು ಹೆಂಗಸರು ಇರಬೇಕು. ಅದಿಲ್ಲದೆ ಎಲ್ಲ ಆಳುಗಳಿಂದಲೇ ಮಾಡಿಸು ವುದು ವ್ಯರ್ಥ. ಈ ಊರಲ್ಲಿ ನಾಲ್ಕಾಣೆ ಕೊಟ್ಟರೂ ಆಳು ಸಿಗುವುದಿಲ್ಲ. ಸಿಕ್ಕರೂ ನಮ್ಮ ಹೊತ್ತಿಗೆ ಆಗುವವರಲ್ಲ. ಎಲ್ಲಕ್ಕೂ ಹಣ ತೆತ್ತು ಬಿತ್ತಿದರೂ ಈ ಹಂದಿ ಹರಿಣ ಮೊದಲಾದ ಕಾಡುಪ್ರಾಣಿಗಳ ಕಾಟ ಬೇರೆ. ಬಂಬೂಚು ರೋಗವೂ ತಪ್ಪಿದ್ದಲ್ಲ. ಅಳಿದುಳಿದ ಬತ್ತ ಸಕಾಲಕ್ಕೆ ಅಂಗಳಕ್ಕೆ ಬಿದ್ದೀತೆಂಬ ಧೈರ್ಯವಿಲ್ಲ. ಈ ಸಲ ಅಷ್ಟು ಮಾಡಬೇಕಾದರೆ ಕುರಿಕೋಣ ಬಿದ್ದು ಹೋಯ್ತು. ಇನ್ನು ಬತ್ತ ಬೇಯಿಸಿ, ಕುಟ್ಟಿ, ಅಕ್ಕಿ ಮಾಡಬೇಕು. ಅದಕ್ಕಷ್ಟು ಕೂಲಿ ಸಲ್ಲುತ್ತದೆ. ಅವಳಿಂದಲೇ ಎಲ್ಲ ಬತ್ತ ಕುಟ್ಟಲು ಸಾಧ್ಯವಿಲ್ಲ. ಈಗಲೇ ಅವಳ ಬೆನ್ನು ಬಗ್ಗಿದೆ. ಹೀಗೇ ಆದರೆ ಇನ್ನು ನಾಲ್ಕು ವರುಷ ಅವಳು ಬದುಕ ಲಿಕ್ಕಿಲ್ಲ' ಎಂದು ಅವರು ಭವಿಷ್ಯನುಡಿದರು.

ತಾಯಿ ಬತ್ತ ಕುಟ್ಟಿದ ಸುದ್ದಿ ಕೇಳಿ 'ಯಾರು ಹೇಳಿದರು ಅವಳಿಗೆ ಇದನ್ನೆಲ್ಲ ಮಾಡಲಿಕ್ಕೆ? ಬತ್ತವನ್ನೇ ಮಾರಿಬಿಡೋಣ. ಬಂಗಾಡಿ ಪೇಟೆಗೆ ಹೇಳಿಕಳಿಸಿದರೆ ಗಾಡಿ ತಂದು ಅಳೆದು ಒಯ್ಯುತ್ತಾರೆ' ಎಂದು ರಾಜ ರೇಗಿದ.

'ಹೌದು, ಬತ್ತವನ್ನೇ ಅಳೆಯಬಹುದು. ಆದರೆ ಅವ್ವಲ್ ಬೆಳ್ತಿಗೆ ಮುಡಿ ಅಕ್ಕಿಗೇ ಮೂರು ರೂಪಾಯಿ ದೊರೆಯುವುದು ಹರಹರ. ಬತ್ತಕ್ಕೆ ಎರಡೋ ಎರಡೂವರೆಯೋ? ಆಳು, ಕಾಳು, ಕೂಲಿ ಕುಂಬಳಗಳಿಗೆಲ್ಲ ಆದಿಯಿಂದ ಅಂತ್ಯದ ವರೆಗಿನ ಲೆಕ್ಕಾಚಾರ ಮಾಡಿದರೆ ಅದರದ್ದು ಅದಕ್ಕೇ ಆದಂತೆ ಕಾಣುತ್ತದೆ' ಎಂದು ತಂದೆ ಗುಣಿಸಿದರು.

ಆದು ನಿಜವೆಂದು ರಾಜನಿಗೂ ಮನದಟ್ಟಾಯಿತು. ಮುಂಗೋಪವೂ

ಇಳಿಯಿತು. ಅವನೂ ವಿಚಾರವಶನಾದ ಮುಖಮಂಟಪದಿಂದ ಇಳಿದು ಬಿಸಿ-ನೀರುಕೊಟ್ಟಿಗೆಗೆ ಬಂದ. ಕೊಟ್ಟಿಗೆಯ ಬದಿಗೆ ಒಂದು ಗದ್ದೆಯ ಕಳದಲ್ಲಿ ನೂರಾರು ತೆಂಗು ಮತ್ತು ಕಂಗಿನ ಸಸಿಗಳು ಹರಿವೆ ಕಳದಂತೆ ತಲೆ ಎತ್ತಿದ್ದುವು. ಆ ಕಳಕ್ಕೆ ಪ್ರದಕ್ಷಿಣೆ ಬಂದು ಅಲ್ಲೇ ಸ್ವಲ್ಪ ಹೊತ್ತು ನಿಂತ. ಆ ಮೇಲೆ ತನಗೆ ತಾನೇ ಪ್ರದಕ್ಷಿಣೆ ಬಂದು ಬೆಟ್ಟುಗದ್ದೆಗಳನ್ನೂ ಮಜಲುಗದ್ದೆಗಳನ್ನೂ ಸಿಂಹಾವಲೋಕಿಸಿದ. ಏನು ವಿಚಾರ ಹೊಳೆಯಿತೋ ಏನೊ? 'ಅಪ್ಪಯ್ಯಾ, ಇಲ್ಲಿ ಬನ್ನಿ. ಇಲ್ಲಿ ಬನ್ನಿ' ಎಂದು ಕೂಗಿ ಕರೆದ.

ಗದ್ದೆಯಿಂದ ರಾಜ ಒಮ್ಮೆಂದೊಮ್ಮೆಯೇ ಕೂಗಿ ಕರೆದುದರಿಂದ ಗೋವಿಂದ ರಾಯರು ಗಾಬರಿಯಾದರು. 'ಏನು? ಏನಾಯ್ತು? ಹಾವು ಉಂಟಾ?' ಎಂದು ಕೇಳುತ್ತ ಕೇಳುತ್ತ ಓಡಿಬಂದರು. 'ಏನಿಲ್ಲ. ಒಂದು ವಿಚಾರವನ್ನು ನಿಮಗೆ ಕೇಳೋಣವೆಂದು ಕರೆದೆ' ಎಂದು ರಾಜ ಉತ್ತರಿಸಿದ ಮೇಲೆ ಅವರು ದೀರ್ಘ ಶ್ವಾಸಬಿಟ್ಟರು. ತೆಂಗು ಕಂಗು ಸಸಿಗಳ ಬಳಿ ಅವರು ಬಂದು ನಿಂತ ಮೇಲೆ 'ಅಪ್ಪಯ್ಯ, ಈ ತೆಂಗಿನ ಸಸಿಗಳನ್ನು ಗದ್ದೆಗಳ ಹುಣಿಗಳ ಮೇಲೆ ನೆಡೋಣ. ಆದರೆ ಕಂಗಿನ ಸಸಿಗಳನ್ನು ಆ ರೀತಿ ಬೆಳೆಸುವುದು ಬೇಡ. ಈ ಬೆಟ್ಟು ಮಜಲುಗಳಲ್ಲೇ ಹೊಂಡ ತೆಗೆಸಿ ಸಸಿಗಳನ್ನಿಟ್ಟರೆ ದೊಡ್ಡ ತೋಟ ವಾಗುತ್ತದಲ್ಲ? ಸಸಿಗಳು ಬೇಸಿಗೆಗೆ ಒಣಗುವ ಭಯವೂ ಇಲ್ಲ. ಕಟ್ಟದ ನೀರಿದೆ ಬೇಕಾದಷ್ಟು' ಎಂದು ತನ್ನ ಹೊಸ ವಿಚಾರವನ್ನು ತಿಳಿಸಿದ ರಾಜ.

'ಅದು ನಿಜ' ಎಂದುತ್ತರವಿತ್ತ ಗೋವಿಂದರಾಯರು ಸ್ವಲ್ಪ ತಡೆದು, 'ಆದರೆ ಬೆಳೆ ಬರಲು ಬಹಳ ಕಾಲ ಬೇಕು. ಗದ್ದೆಯಾದರೆ ವರುಷ ವರುಷ ಫಲ ದೊರೆಯುತ್ತದೆ. ಮನೆಗೆ ಅಕ್ಕಿ ಪೇಟೆಯಿಂದ ಕೊಳ್ಳಬೇಕಾಗಿಲ್ಲ' ಎಂದರು.

'ಗದ್ದೆ ಅವಶ್ಯವಿದ್ದರೆ ಬೈಲುಗದ್ದೆಗಳಿವೆಯಲ್ಲ? ಮನೆಗೆ ಬೇಕಾದ ಬತ್ತಕ್ಕೆ ಅಷ್ಟು ಸಾಕು. ಅಲ್ಲದೆ ಒಮ್ಮೆಯೇ ಈ ಎಲ್ಲ ಗದ್ದೆಗಳಲ್ಲಿ ತೋಟ ಬೆಳೆಸಲು ಸಾಧ್ಯವೂ ಇಲ್ಲ. ಅದಕ್ಕೆ ಹಣ ಎಷ್ಟು ಬೇಕು? ಆ ಬನದಲ್ಲಿದ್ದ ಕೊಪ್ಪರಿಗೆ ಅಗೆಯಬೇಕಾದೀತು. ಅದೆಲ್ಲ ಇಂದು ನಾಳೆ ಆಗುವ ಹೋಗುವ ವ್ಯಾಪಾರವಾ? ಈ ವರುಷ ಸ್ವಲ್ಪ ಸಸಿಗಳನ್ನು ನೆಟ್ಟ. ಮುಂದಿನ ವರುಷ ಸ್ವಲ್ಪ. ಈ ಎಲ್ಲ ಗದ್ದೆಗಳು ಮುಗಿದ ಮೇಲೆ ಹಟ್ಟಿಯ ಬಡಗು ದಿಕ್ಕಿನ ಎಲ್ಲ ಭೂಮಿಯಲ್ಲೂ ಬೆಳೆಸಿಬಿಡೋಣ. ಮತ್ತೆ ಈ ಆಳುಗಳ ಹಂಗಿಲ್ಲ. ಕಾಡುಪ್ರಾಣಿಗಳ ಉಪದ್ರ ವವೂ ತಪ್ಪುತ್ತದೆ. ನೀವು ಹೇಳಿದ ಹಾಗೆ ಒಕ್ಕಲಿದ್ದರೇ ಗದ್ದೆ ಇಟ್ಟುಕೊಳ್ಳುವು

ದರಲ್ಲಿ ಅರ್ಥವಿದೆ. ನಮ್ಮಿಂದ ಈ ಕೆಲಸ ಆದೀತಾ ಹೋದೀತಾ ?'

ಅವನ ವಿಚಾರಕ್ಕೆ ಗೋವಿಂದರಾಯರೂ ಒಪ್ಪಿದುದರಿಂದ 'ಈ ವರುಷ ಎಲ್ಲೆಲ್ಲಿ ತೆಂಗಿನ ಸಸಿಗಳನ್ನು ನೆಡಬೇಕು? ಎಷ್ಟು ಅಂತರಕ್ಕೊಂದು ಸಸಿ? ಯಾವ ಬೆಟ್ಟುಗದ್ದೆಯಲ್ಲಿ ತೋಟ ಆರಂಭಿಸಬೇಕು?' ಮೊದಲಾದ ವಿಷಯ ಗಳನ್ನು ಚರ್ಚಿಸುತ್ತ ತಂದೆ ಮಗ ಈ ಗದ್ದೆಯಿಂದ ಆ ಗದ್ದೆಗೆ, ಆ ಹುಣಿ ಯಿಂದ ಈ ಹುಣಿಗೆ, ಮತ್ತೆ ಮತ್ತೆ ತಿರುಗಿ, ಮಧ್ಯಾಹ್ನವಾದುದರಿಂದ ಹಸಿದು ಊಟಕ್ಕೆ ಬಂದರು. ಊಟವಾದ ಮೇಲೆ ಬಿಸಿಲಲ್ಲೇ ರಾಜ ಬಂಗಾಡಿ ಪೇಟೆಗೆ ಹೋಗಿ ಬಾಡಿಗೆಗೆ ಎರಡು ಎತ್ತಿನ ಗಾಡಿಗಳನ್ನು ಹೊಡೆಸಿಕೊಂಡು ಬಂದ. ಮುಖಮಂಟಪದಲ್ಲಿ ಒಟ್ಟಿದ್ದ ಬತ್ತದ ರಾಶಿಯನ್ನು ಗೋಣಿಚೀಲ ಗಳಿಗೆ ತುಂಬಿಸಿ ಗಾಡಿಗೆ ಹೇರಿದರು. ರಾತ್ರಿ ಊಟಮಾಡಿ ಗಾಡಿಯೊಂದಿಗೆ ಹೊರಡಲು ರಾಜ ಸಿದ್ಧವಾದಾಗ ಗೋವಿಂದರಾಯರು 'ರಾತ್ರಿ ನೀನೂ ಹೊರಟೆಯಲ್ಲ? ಬೆಳಗ್ಗೆ ಎದ್ದು ಹೊರಡಬಹುದಿತ್ತು' ಎಂದು ಆಕ್ಷೇಪಿಸಿದರು.

'ಇಲ್ಲ. ಮುಂಡಾಜೆಗೆ ಈ ಗಾಡಿಗಳೂ ಬರುತ್ತವೆ. ಅಲ್ಲಿ ಕೆಲವರನ್ನು ಕಂಡು ಬಾಳೆ ಗಿಡಗಳನ್ನು ಕೊಡಲು ಕೇಳಬೇಕಾಗಿದೆ. ಬೇಕಾದಷ್ಟು ಅಡಿಕೆ ತೋಟಗಳಿವೆ ಅಲ್ಲಿ. ಗಾಡಿಗಳಲ್ಲಿ ಬಾಳೆ ಸಸಿಗಳನ್ನು ಕಳಿಸುತ್ತೇನೆ. ಆಳು ಗಳನ್ನು ಕರೆಸಿ ತೋಟ ಆರಂಭಿಸಿ. ಮಣ್ಣಿನಲ್ಲಿ ಈಗ ತೇವವಿದೆ' ಎಂದು ಅವನು ಸಮಾಧಾನಪಡಿಸಿ ಗಾಡಿಗಳ ಹಿಂದೆ ಹೊರಟ.

'ತೋಟ ಆರಂಭಿಸಿ' ಎಂದು ಹೇಳಲು ಸುಲಭ. ಆದರೆ ಜಾದೂ ವಿದ್ಯೆಯ ಪ್ರಯೋಗದಂತೆ ಒಂದೆರಡು ಕ್ಷಣದಲ್ಲಿ ಮುಗಿಯುವ ಕೆಲಸವಲ್ಲ ಅದು. ಮೊದಲು ಗದ್ದೆಗಳಲ್ಲಿ ಮೂರು ಹೆಜ್ಜೆಗೊಂದರಂತೆ ಮೊಣಗಂಟು ಆಳದ ವರೆಗಿನ ಗುಳಿಗಳನ್ನು ತೋಡಬೇಕು. ಆ ಹೊಂಡಗಳಿಗೆ ಸೊಪ್ಪು ಸವರಿ ಅಗೆದ ಮಣ್ಣನ್ನೇ ಸ್ವಲ್ಪ ಜಾರಿಸಬೇಕು. ಆ ಮೇಲೆ ಒಂದು ಹೊಂಡದಲ್ಲಿ ಬಾಳೆಯ ಸಸಿಯನ್ನೂ ಇನ್ನೊಂದರಲ್ಲಿ ಕಳದಿಂದ ಕಿತ್ತು ತಂದ ಅಡಿಕೆ ಸಸಿ ಯನ್ನೂ ನೆಡುವುದು ಪದ್ಧತಿ. ಬಾಳೆಯ ನೆರಳಿಲ್ಲದಿದ್ದರೆ ಕಂಗಿನ ಸಸಿ ಬಾಳ ಲಾರದು. ಒಮ್ಮೊಮ್ಮೆ ಅದೂ ಸಾಕಾಗದೆ ಸಸಿಯನ್ನು ಅಡರಿನಿಂದ ಹೊದೆಸ ಬೇಕಾಗುವುದು. ಹೊಸ ಬೇರು ಹುಟ್ಟಿ ಪಸರಿಸಿದಾಗ ಅಡರನ್ನೂ ಅದರ ಬುಡಕ್ಕೇ ನೂಕಿ ಮಣ್ಣು ಚಲ್ಲುವುದೂ ಇದೆ. ಅಡಿಕೆಯ ಸಸಿ ದೊಡ್ಡದಾಗುವ ಮೊದಲೇ ಬಾಳೆಯ ಗಿಡ ಗೊನೆಬಿಡುತ್ತದೆ. ಅದರ ಬುಡದಲ್ಲಿ ಅನೇಕ

ಕಂದುಗಳು ಹುಟ್ಟುತ್ತವೆ. ಕಂದುಗಳನ್ನು ಒಂದೊಂದೇ ಅಗೆದು ಬೇರೆ ಕಡೆ ತೋಟ ಬೆಳೆಸಲು ಉಪಯೋಗಿಸುವರು. ಮೊದಲಿನ ಹೊಂಡದಲ್ಲಿ ಮತ್ತೊಂದು ಅಡಿಕೆಸಸಿ ನೆಡುವುದು ಈ ಮಲೆನಾಡಿನ ಕ್ರಮ. ಅಷ್ಟ ರೊಳಗೆ ಅದರ ಒತ್ತಿನ ಅಡಿಕೆಸಸಿ ಮನುಷ್ಯನಷ್ಟು ಎತ್ತರ ಬೆಳೆದಿರುತ್ತದೆ. ಒಂದರ ಸೋಗೆಯನ್ನು ಮತ್ತೊಂದು ಕಂಗು ಸ್ಪರ್ಶಿಸುತ್ತದೆ.

ಕಂಗಿನ ತೋಟದಲ್ಲಿ ಕಂಗುಗಳೆ; ತೆಂಗು ಸುಳಿಯುವಂತಿಲ್ಲ. ಏಕೆಂದರೆ ತೆಂಗಿನ ಸುಳಿ ದೊಡ್ಡದು. ಅದು ಕಂಗಿನ ಬೆಳವಣಿಗೆಯನ್ನು ತಡೆಯುತ್ತದೆ. ಕಂಗುಗಳು ಕೊಕ್ಕರೆಯ ಕಾಲುಗಳಂತೆ ಬೆಳೆಯುವ ಭಯವುಂಟು. ಆದುದ ರಿಂದ ತೆಂಗುಗಳಿಗೆ ಗದ್ದೆಯ ಹುಣಿಗಳೇ ಯೋಗ್ಯ ಸ್ಥಾನ. ಹತ್ತಿರ ಹತ್ತಿರ ಆ ಸಸಿಗಳನ್ನು ನೆಡುವಂತೆಯೂ ಇಲ್ಲ. ಆದುದರಿಂದ ಹತ್ತು ಹೆಜ್ಜೆಗಳಿ ಗೊಂದರಂತೆ ಹೊಂಡ ತೆಗೆಯಲು ಗೋವಿಂದರಾಯರು ಹಾರೆಯಿಂದ ಅಗೆದು ಗುರುತು ಮಾಡಿದರು. ಹೊಸ ಸಿರಿಮುಡಲಿನ ಸುಳಿ ಬರುವ ವರೆಗೆ ಅಡರು ಚುಚ್ಚಿದರೆ ಸಾಕು. ಬಾಳೆಯ ನೆರಳಿನ ಅಗತ್ಯ ಅದಕ್ಕಿಲ್ಲ. ಕಂಗಿನ ತೋಟಕ್ಕೆ ಮಾತ್ರ ಬಾಳೆ ಬೇಕು. ಬಾಳೆ ಬಾಳಿನ ಗಿಡವೆಂದು ತಿಳಿದು ಆವರು ಒಂದನ್ನೂ ಬಿಸುಡಲಿಲ್ಲ. ಕಂಗಿನ ಸಸಿಗಳಿಗೆ ಬಾಗೀರಥಿ ಬಾಯಿ ಹಾಕಿದೆಯೆಂದು ಚಲ್ಲ ಲಿಲ್ಲ. ಒಂದು ಸಾಲು ಮುಗಿದ ಮೇಲೆ ಮತ್ತೊಂದು. ಒಂದೊಂದು ಸಾಲಿನ ಮಧ್ಯೆ ಬೇಸಿಗೆಗೆ ನೀರು ಹರಿಸಲು ತೋಡು. ಇವೆಲ್ಲ ಕೆಲಸ ಮುಗಿಯುತ್ತಾ ಬಂದಾಗ ಬೇಸಿಗೆಯ ಬಿಸಿಲೇ ಬಂದಿತು. ಮತ್ತೆ ನೀರಿನ ಕಾಲಿವೆ ಕೆರೆಸುವ, ಕಟ್ಟ ಕಟ್ಟುವ, ಕೆಲಸಕ್ಕೆ ಆವರು ಸೊಂಟಕಟ್ಟಿದರು. ಆ ಮೇಲೆ ಮಳೆಗಾಲ ಮೊದಲಾಗುವ ವರೆಗೆ ತೋಟಗಳಿಗೆ ನೀರು ಹರಿಸುವ ಕೆಲಸವೇ.

ಮಳೆ ಗಗನದಿಂದ ಇಳಿಯತೊಡಗಿದ ಮೇಲೆ ಯಥಾ ಪ್ರಕಾರ ಬೈಲು ಗದ್ದೆಯ ಬೇಸಾಯ. ಹೊಸ ಅಡಿಕೆ ಕಳಗಳ ರಚನೆ, ಗೇರುಬೀಜದ ಬಿತ್ತಿಗೆ ಗಳೂ ಪ್ರಾರಂಭ. ಮಳೆ ಇಳಿಮುಖವಾಗಿ ನೆರೆ ನೀರು ಇಳಿದು ಹೊಳೆಯಾಚೆಯ ಆಳುಗಳು ಬಂದ ಕೂಡಲೇ ಹೊಸ ಹೊಸ ಬೆಟ್ಟುಗದ್ದೆ ಮಜಲುಗದ್ದೆಗಳಲ್ಲಿ ಬಾಳೆಯ ಕಂದುಗಳನ್ನೂ ಅಡಿಕೆ ಸಸಿಗಳನ್ನೂ ನೆಡಬೇಕು. ಹೀಗೆ ಮಳೆಗಾಲ ಬೇಸಿಗೆ ಕಾಲಗಳಲ್ಲೆಲ್ಲ ಕೆಲಸವೇ ಕೆಲಸ. ಬಿಡುವೇ ಇಲ್ಲ ಗೋವಿಂದರಾಯರಿಗೆ. ಸೀತಮ್ಮನವರಿಗಾದರೂ ಅಷ್ಟೆ. ಮನೆಗೆಲಸ, ಬಾಗೀರಥಿಯ ಸೇವೆಗಳಲ್ಲೇ ಅವರ ಕೈಕಾಲು ತಳೆದು ಹೋದುವು. ಎಲ್ಲಾದರೂ ಅಪರೂಪಕ್ಕೆ ಮಕ್ಕಳು

ಮರಿ ಬಂದಾಗ ಮಾತ್ರ ಅವರು ಒಂದೆರಡು ಗಳಿಗೆ ಹಾಯಾಗಿ ಕುಳಿತು ಸುಖ ದುಃಖದ ಮಾತುಕತೆ ಆಡಿದರು.

ಮಕ್ಕಳೂ ಬಂದರು. ಆಗಾಗ ರಾಜ ಹೆಂಡತಿ ಮಕ್ಕಳೊಂದಿಗೆ ಬಂದು ಎರಡು ದಿನಗಳಿದ್ದು ಮರಳಿದ. ಗಂಡನನ್ನು ಕೂಡಿ ಚೊಚ್ಚಲು ಮಗುವನ್ನೆತ್ತಿ ಕೊಂಡು ಬಂದು ಅಜ್ಜ ಅಜ್ಜಿಯರ ಕಾಲುಗಳಿಗೆ ಎರಗಿಸಿ ಕಮಲೆ ಎರಡು ವಾರ ಉಳಿದಳು. ವ್ಯಾಪಾರವಿಲ್ಲದ ಒಂದು ಮಳೆಗಾಲದಲ್ಲಿ ಶಿವರಾಯ ಸುಗುಣಳನ್ನು ಕಟ್ಟಿಕೊಂಡು ಬಂದು ತನ್ನ ಮಗುವನ್ನು ತೋರಿಸಿದ. ಒಂದು ಬೇಸಿಗೆಗೆ ಹರಿ ಬಂದ. ಒಂದು ವಸಂತ ಕಾಲದಲ್ಲಿ ಗುಲಾಬಿ ತನ್ನ ಮಕ್ಕ ಳೊಂದಿಗೆ ಒಕ್ಕಲಾದಳು. ಒಬ್ಬೊಬ್ಬರ ಮಕ್ಕಳಲ್ಲಿ ಒಂದೊಂದು ಸುಖ ಅನು ಭವಿಸಿದರವರು. ಒಂದರ ಅಂದಚಂದವನ್ನು ಗೋವಿಂದರಾಯರು ಹೊಗಳಿ ದರೆ ಇನ್ನೊಂದರ ಅಂಗಾಂಗವನ್ನು ಮುದ್ದಿಟ್ಟು ಸರ್ವಾಂಗಸುಖ ಪಡೆದರು ಸೀತಮ್ಮ. ಹೊಟ್ಟೆ ಎಳೆದುಕೊಂಡು ಹರಿವ ಮಗು ಕೈಗೆ ಸಿಕ್ಕಿದುದನ್ನು ಬಾಯಿಗೆ ತುರುಕಿಸಲೆತ್ನಿಸಿದಾಗ ಒಬ್ಬರು ಬಂದು ಎತ್ತಿಕೊಂಡರು. ಒಂದರ ತೊದಲುನುಡಿ ಕೇಳಿದಷ್ಟೂ ತೃಪ್ತಿಯಿಲ್ಲ. ಮತ್ತೊಂದರ ಕಾಲುಗೆಜ್ಜೆಯ ಸದ್ದೇ ಸಾಕು. ತಂದೆಯಂತೆ ಒಂದು ಮಗುವಿದೆಯೆಂದು ಒಬ್ಬರೆಂದಾಗ ಮತ್ತೊಬ್ಬರು ನಕ್ಕರು. ಕಮಲದ ಲತೆಯಲ್ಲಿ ಒಂದು ಬೆಳ್ದಾವರೆ ಅರಳಿತು ಎಂದಾಗ ಮಗಳು ಕಮಲೆಯ ಮೊಗದಾವರೆ ಅರಳಿತು. ಗುಲಾಬಿಯ ಮಕ್ಕಳಿಗೆ ತಾಯಿಯ ಬಣ್ಣವೆಂದಾಗ 'ಅಲ್ಲ, ಗುಲಾಬಿ ಹೂಗಳ ಬಣ್ಣ' ಎಂದು ಹೇಳಿ ಅವಳು ನಗಿಸಿದಳು. 'ಈ ಹೂಗಳು ನಿನ್ನ ಕೈಯಲ್ಲಿರಲಿ. ತುರುಬಿಗೆ ಗುಲಾಬಿಯಿರಲಿ' ಎಂದು ಸೀತಮ್ಮ ಗುಲಾಬಿ ಹೂಗಳನ್ನು ಮುಡಿಸಿದರು. ತನ್ನ ಮಕ್ಕಳು, ತಂದ ಮಕ್ಕಳು ಎಂಬ ಭೇದವಿಲ್ಲದೆ ಎಲ್ಲ ರಿಗೂ ಮನೆಯಲ್ಲಿ ನೆಟ್ಟು ಬೆಳೆಸಿದ ಎಲ್ಲ ಪ್ರಕಾರದ ಹೂಗಳನ್ನು ಕೊಟ್ಟರು. ಹೂಗಳಾದರೂ ಎಷ್ಟು? ಎಷ್ಟು ಮುಡಿದರೂ ಮುಗಿಯದು. ಆ ಮಲ್ಲಿಗೆ ಗಳಲ್ಲೂ ಅನೇಕ ವಿಧ. ಅದನ್ನು ಮುಡಿದು ಮುಡಿದು ಬೇಸರ ಬಂದಾಗ ಬೇಲಿ ಯಲ್ಲಿ ಬೆಳೆದ ಗೋರಟೆ, ಮರದಡಿ ಉದುರಿದ ರೆಂಜೆ, ಮರದ ರೆಂಬೆಗಳಲ್ಲಿ ಮೊಳೆಗಳಂತೆ ಒಡೆದ ಸುರಗೆ, ನದಿಯ ದಡದಲ್ಲಿ ದೊರೆತ ಕೇದಿಗೆ, ನೀರಿನ ಕಾಲಿವೆಯ ಇಕ್ಕೆಲಗಳಲ್ಲಿ ನೆಟ್ಟ ಸುಳ್ಳಿಗಳನ್ನೂ ತುರುಬುಗಳಿಗೆ ತುರುಕಿಸಿದರು. ಹೂಗಳ ಸುವಾಸನೆಗೆ ತುರುಬು ಗಮಗಮಿಸಿದ್ದು ಒಂದು ಕಡೆಗಿರಲಿ, ನೈ ಮನ

ಮನೆಗಳೂ ಪರಿಮಳಿಸಿದುವು.

ಅಪರೂಪಕ್ಕೆ ಬಂದ ಮಕ್ಕಳಿಗೆ ಸ್ನಾನ ಪಾನ ಊಟ ಉಪಚಾರಗಳನ್ನು ಮಾಡದೆ ಗತ್ಯಂತರವಿಲ್ಲ. ತಾವು ಮಕ್ಕಳ ತಾಯಂದಿರಾದರೂ ಸೀತಮ್ಮನವರ ಕೈಗಳಿಂದ ಎಣ್ಣೆ ಶಿಕ್ಕಿಸಿಕೊಳ್ಳಲು ಗುಲಾಬಿ ಕಮಲೆಯರ ಆಶೆ. ಸುಭಾಷಿಣಿ ಮತ್ತು ಸುಗುಣ ಕೂಡಾ ನಾಚುವುದಿಲ್ಲ. ನೀರು ಮನೆ ಬಾಗಿಲಲ್ಲಿ ಹರಿಯುತ್ತಿದೆ. ಕ್ರಯಕೊಟ್ಟು ಕೊಂಡ ಕಟ್ಟಿಗೆಯೂ ಅಲ್ಲ. ಆದುದರಿಂದ ಒಬ್ಬೊಬ್ಬರು ಒಂದೊಂದು ದಿನ ಒಂದೊಂದು ಗುಡಾಣ ಬಿಸಿ ನೀರನ್ನು ಎರೆದುಕೊಂಡರು. ಸಣ್ಣ ಮಕ್ಕಳಂತೆ ತಿಂಡಿ ತಿನಸುಗಳನ್ನು ಬೇಡಿ ತಿನ್ನಲಾರಂಭಿಸಿದರು. ಮಲೆನಾಡಿನಲ್ಲಿ ಹಲಸಿನ ಹಣ್ಣನ್ನು ತಿನ್ನುವವರೇ ಇಲ್ಲ. ಬೋರನನ್ನು ಅಲ್ಲಲ್ಲಿ ಕಳಿಸಿ ಅನೇಕ ಹಣ್ಣುಗಳನ್ನು ತರಿಸಿ, ಅದರ ಸೋಳೆಗಳನ್ನು ಅಕ್ಕಿಯೊಂದಿಗೆ ಕಡೆದು ತೇಗಿನ ಎಲೆಯಲ್ಲಿ ಮುದ್ದೆ ಮುದ್ದೆ ಇಟ್ಟು ಬೇಯಿಸಿದ ಗಟ್ಟಿ ತಿಂದರು. ಸೇವಿಗೆ, ತೆಂಗಿನಕಾಯಿ ಹಾಲೆಂದರೆ ಕಮಲೆಯ ಗಂಡನಿಗೆ ಇಷ್ಟ. ಸುಭಾಷಿಣಿಗೆ ದೋಸೆಯ ಮೇಲೆ ಪ್ರೀತಿ. ಅವರವರಿಗೆ ರುಚಿಯಾದುದನ್ನು ಹೇಳಿ ಕೇಳಿ ಮಾಡಿ ತಿಂದರು. ಹಬ್ಬ ಹುಣ್ಣಿಮೆಗಳಲ್ಲಿ ಅಕಸ್ಮಾತ್ ಮಕ್ಕಳು ಒದಗಿದರೆ ಆಗ ನಡೆಯುವ ಭಕ್ಷ ಪರಮಾನ್ನಗಳೇ ಬೇರೆ. ನಾಗರಪಂಚಮಿಗೆ ಉಂಡ್ಲುಕ, ಮೋದಕಗಳಾದರೆ ದೀಪಾವಳಿಗೆ ದೋಸೆಯ ರಾಶಿಯನ್ನೇ ತಯಾರಿಸುವರು. ಯುಗಾದಿ ಹಬ್ಬಕ್ಕೆ ಮುಂಡಗೆ ಒಲಿ ತರಿಸಿ, ಮುಳ್ಳು ತೆಗೆದು ಬೆಂಕಿಯಲ್ಲಿ ಬಾಡಿಸಿ ಬೀಸುವ ಕಲ್ಲಿನಂತೆ ಮಡಚಿಟ್ಟು ಆ ಮೇಲೆ ಉದ್ದ ತೊಟ್ಟೆ ಕುತ್ತುವರು. ಕಡೆದ ಅಕ್ಕಿಯ ಬಂದ ಈ ತೊಟ್ಟೆಗಳಿಗೆ ಸುರಿದು ಇಡ್ಲಿ ಪಾತ್ರೆಯಲ್ಲಿ ಬೇಯಿಸಿ ಕಡುಬು ಮಾಡುವುದು ಕ್ರಮ. ಅದು ಉಪ್ಪಿನಕಾಯಿ ರಸ ಮುಟ್ಟಿಸಿಕೊಂಡು ತಿನ್ನಲೂ ರುಚಿ, ತೆಂಗಿನಕಾಯಿಯ ಹಾಲು ತೆಗೆದು ಬೆಲ್ಲ ಏಲಕ್ಕಿ ಬೆರಸಿ ಕಲಸಿಕೊಂಡು ತಿನ್ನಲೂ ಸೊಗಸು. ಸೊಗಸಿನ ಈ ತಿಂಡಿ ತೀರ್ಥ ಸವಿದ ಮಕ್ಕಳಿಗೆ ಹೊರಡಲು ಕಾಲೇ ಬರಲಾರದು. ಎರಡು ದಿನವೆಂದು ಹೇಳಿ ಬಂದವರು ಎರಡು ವಾರ ಇದ್ದು ತೆರಳಿದರು. ಅವರು ಇದ್ದಷ್ಟು ದಿನ ಮನೆಯಲ್ಲಿ ಸಂತೆಯಷ್ಟು ಗದ್ದಲ. ಶೀತ, ಜ್ವರ, ವಾತ, ಪಿತ್ಥ ಯಾವುದೂ ಗೊತ್ತಾಗಲಿಲ್ಲ. ಅವರು ಒಬ್ಬೊಬ್ಬರೇ ತೆರಳಿ ಮನೆ ಬರಿದಾದ ಮೇಲೆ ಮತ್ತೆ ಬೇಸರದಿಂದ ಮರುಗಿದರು ಸೀತಮ್ಮ.

‘ನಮಗೆ ವನವಾಸವೇ ಗತಿ. ಒಂದು ದಿನ ಒಂದು ಕಡೆ ತೆರಳಲಿಕ್ಕಿಲ್ಲ. ದೇವರು ಏನು ಬರೆದಿದ್ದಾನೋ ನನ್ನ ಹಣೆಯಲ್ಲಿ’ ಎಂದು ನುಡಿಯಲಾರಂಭಿಸಿದರು ಅವರು.

ಒಂದೆಡೆ ಏಕೆ ? ಬೇಕಾದ ಕಡೆ ಹೋಗು. ಬರೇ ಕೈಯಲ್ಲಿ ತೆರಳಬೇಡ. ಕೈಯಲ್ಲಿ ಒಂದು ಕೋವಿ ಹಿಡಿದುಕೋ. ಈಗ ಯುದ್ಧ ಆರಂಭವಾಗಿದೆಯಂತೆ. ನಿನ್ನನ್ನೂ ಸೇರಿಸಿಕೊಳ್ಳುತ್ತಾರೆ ಸೈನ್ಯದಲ್ಲಿ. ಬಲಿ ಕೊಡಲು ನಮ್ಮ ಎಷ್ಟು ಸೈನ್ಯವಿದ್ದರೂ ಬೇಕು ಬ್ರಿಟಿಷರಿಗೆ. ಈ ಪ್ರಮೀಳಾ ದಂಡು ದೊರೆತರಂತೂ ಅವರಿಗೆ ಬಹಳ ಆನಂದ. ಹಿಟ್ಲರನ ಸೈನಿಕರು ಸ್ತ್ರೀ ಸೈನ್ಯ ನೋಡಿ ಯುದ್ಧವನ್ನೇ ಮಾಡಲಿಕ್ಕಿಲ್ಲ. ನೋಡು ಒಂದು ಕೈ !’ ಎಂದು ಅವರು ಪರಿಹಾಸ ಮಾಡಿದರು.

‘ನನ್ನನ್ನು ಕಳಿಸಲು ಹುಷಾರಿದ್ದೀರಿ. ಸರಿ. ಮೊದಲು ಗಂಡಸರನ್ನು ಎಳೆದುಕೊಂಡು ಹೋಗುತ್ತಾರಂತೆ. ನೀವು ಹೊರಡಬೇಕು ಮೊದಲು.’

‘ನನ್ನನ್ನು ಎಳೆದುಕೊಂಡು ಹೋಗುವವ ಬ್ರಹ್ಮ. ನಾನು ಎದುರಿಗೆ ಗುಂಡು ಹಾರಿಸುವ ಬದಲು ಕೋವಿಯನ್ನು ಹಿಂದೆ ತಿರುಗಿಸಿ ಬ್ರಿಟಿಷರನ್ನೇ ಹೊಡೆಯಲುಂಟು. ನಾನು ಜರ್ಮನರ ಕಡೆ. ೧೯೧೪-೧೮ ರ ಯುದ್ಧದಲ್ಲಿ ತಮಗೆ ಸಹಾಯ ನೀಡಿದ ಗಾಂಧಿಗೆ ಏನು ಕೊಟ್ಟರು ಬ್ರಿಟಿಷರು? ‘ಕೊಡುತ್ತೇವೆ’ ಎಂದು ನಂಬಿಸಿ ತಮ್ಮ ಬೇಳೆ ಬೆಂದ ಮೇಲೆ ಮತ್ತೆ ಕೊಟ್ಟದ್ದು ಮೋಸವೇ, ಸ್ವರಾಜ್ಯವಲ್ಲ. ಈ ಸಲ ಯಾರು ಕೊಡುತ್ತಾರೆ ಅವರಿಗೆ ಸಹಾಯ ? ನಾನು ಒಂದು ಕಾಸು ಕೊಡಲಿಕ್ಕಿಲ್ಲ.’

‘ಕೊಡಲು ನಿಮ್ಮ ಹತ್ತಿರ ಉಂಟು ಕುಬೇರನ ಬೊಕ್ಕಸ !’ ಎಂದು ವ್ಯಂಗ್ಯವಾಗಿ ನಕ್ಕರು ಸೀತಮ್ಮ.

‘ಕುಬೇರನಲ್ಲದಿದ್ದರೂ ಕುಚೇಲನಲ್ಲವಲ್ಲ? ಹೀಗೆಯೇ ಇನ್ನೂ ನಾಲ್ಕಾರು ವರುಷ ಹೋಗಲಿ. ಮತ್ತೆ ನೋಡು ವಿಮಾನ, ವಿಮಾನದಲ್ಲಿ ಹಾರಾಡುತ್ತೇವೆ.’

ಅವರು ಮಾತು ಮುಗಿಸುವಷ್ಟರಲ್ಲಿ ಆಕಾಶದಲ್ಲಿ ಗುಡುಗಿನಂತೆ ಬುಡು ಬುಡು ಬುಡುಬುಡಿಕೆಯನ್ನು ಬಡೆದಂತಾಯ್ತು. ‘ವಿಮಾನ ! ವಿಮಾನ ! ಅಪ್ಪಯ್ಯ, ವಿಮಾನ !’ ಎಂದು ಕೂಗಿದ ಮೋಹನ.

ಗೋವಿಂದರಾಯರು ಅಂಗಳಕ್ಕೆ ಬಂದು ನಿಂತು ನೋಡಿದರು. ಸೀತಮ್ಮನವರು ಮುಸುರೆ ಕೈಯಲ್ಲೇ ದಡದಡ ದೌಡು ಬಂದರು.

‘ಕುದುರೆಮುಖಕ್ಕೆ ಎಲ್ಲಾದರೂ ತಾಗಿದರೆ ವಿಮಾನದ ರೂಪ ಉಳಿದೀತಾ? ಅದರೊಳಗೆ ಕುಳಿತವರ ಎಲುಬಿನ ಪುಡಿಯೂ ಸಿಕ್ಕಲಿಕ್ಕಿಲ್ಲ’ ಎಂದು ಸೀತಮ್ಮನವರು ಎದೆಗೆ ಕೈಯಿಟ್ಟುಕೊಂಡರು.

‘ಇದು ಯುದ್ಧ! ಮಹಾಯುದ್ಧ! ಮನುಷ್ಯನ ಪ್ರಾಣಕ್ಕೆ ಬೆಲೆಯಿಲ್ಲ. ನಿನಗೇನು ಗೊತ್ತುಂಟು?’ ಎಂದು ಹೇಳುತ್ತ ಗೋವಿಂದರಾಯರು ಮುಖ ಮಂಟಪಕ್ಕೆ ಬಂದು ನಸ್ಯ ಏರಿಸುತ್ತ ಯುದ್ಧದ ಬಗೆಗೆ ಯೋಚಿಸತೊಡಗಿದರು ದಂಡಿಗೆ ಹೋಗುವವರ ಹಾಗೆ.

೧೦

ಗೋವಿಂದರಾಯರು ಯುದ್ಧಕ್ಕೆ ಹೋದವರಲ್ಲ. ಯುದ್ಧವನ್ನು ಅವರು ಕಂಡೂ ಇಲ್ಲ. ಅವರ ಜೀವಮಾನದಲ್ಲಿ ೧೯೧೪–೧೮ರ ಮಹಾಯುದ್ಧ ನಡೆದಿತ್ತೇನೋ ನಿಜ. ಭಾರತವನ್ನು ಬ್ರಿಟಿಷರು ತಮ್ಮ ಗಾಡಿಗೆ ಜೋಡಿಸಿದ್ದರೂ ಈ ದೇಶದಲ್ಲಿ ಕಾಳಗ ನಡೆದಿರಲಿಲ್ಲ. ಆದರೆ ಜನ ದುಃಖದ ಬಂಡಿಯನ್ನು ಮಾತ್ರ ಎಳೆಯಬೇಕಾಯ್ತು. ಮುಡಿ ಅಕ್ಕಿಗೆ ಮೂರು ರೂಪಾಯಿ ಇದ್ದುದು ಮೂವತ್ತಕ್ಕೆ ಏರಿತು. ರಾವ್ ಬಹಾದ್ದೂರ್, ದಿವಾನ್ ಬಹಾದ್ದೂರ್, ಖಾನ್ ಬಹಾದ್ದೂರ್, ಪದ ಪದವಿಗಳ ಆಶೆಯಿಂದ ವಂತಿಗೆ ಕೂಡಿಸಿ ಆಳುವ ಮಹಾನುಭಾವರ ಕೃಪಾದೃಷ್ಟಿ ಪರಿಪುಷ್ಟರಾಗಲೆತ್ನಿಸಿದ ಜನರುಂಟು. ತಿಂಗಳಿಗೆ ಹತ್ತಿಪ್ಪತ್ತು ರೂಪಾಯಿ ಸಂಬಳವೂ ದೊರೆಯದ, ಅದೂ ಸಕಾಲಕ್ಕೆ ಕೈಸೇರದ ಶಾಲಾ ಮಾಷ್ಟ್ರನ್ನೂ ಅವರು ಬಿಟ್ಟಿರಲಿಲ್ಲ. ಹೀಗಾಗಿ ಸಂಸಾರದಲ್ಲಿ ಆಚೆಯ ದಂಡೆ ಕಾಣದೆ ಮುಳುಗೇಳುತ್ತಿದ್ದ ಗೋವಿಂದರಾಯರು ಅನಂತ ಕಷ್ಟ ನಷ್ಟಗಳಿಗೆ ಈಡಾಗಿದ್ದರು. ಆ ಕಟು ಅನುಭವವು ಇನ್ನೂ ಅವರ ಸ್ಮರಣೆಯಲ್ಲಿದೆ. ಆದುದರಿಂದ ಮತ್ತೆ ಮಹಾಯುದ್ಧ ಆರಂಭವಾಯಿತೆಂದು ಮಂಗಳೂರಿನಿಂದ ಬಂದ ರಾಜ ತಿಳಿಸಿದಾಗ, ‘ಹಾ, ಹಾ’ ಎಂದು ಹಾಹಾಕಾರ ತೆಗೆದರು ಅವರು. ‘ಏನು ಅನರ್ಥವಿದು! ಎಂಥಾ ವಿಪತ್ತು ಇದು, ಪ್ರಳಯ! ಅಗ್ನಿ ಪ್ರಳಯ’ ಎಂದು ತತ್ತರಿಸಿದರು. ‘ಈ ಯುದ್ಧ ಎಷ್ಟು ಕಾಲದ ವರೆಗೆ ಎಳೆಯುತ್ತದೋ? ಈ ಕಣ್ಣುಗಳಿಂದ ಏನೇನು ಕಾಣಲಿದೆಯೋ? ಯಾವ

ಯಾವ ದುಃಖ ದುಮ್ಮಾನಗಳನ್ನು ಸಹಿಸಲಿದೆಯೋ?' ಎಂದು ಅವರು ಚಡಪಡಿಸತೊಡಗಿದರು. ಇವೆಲ್ಲವುಗಳಿಗಿಂತ ಮೂರನೇ ಮಗ ಹರಿಯ ಚಿಂತೆ ಬಹಳವಾಯ್ತು ಅವರಿಗೆ.

ಹರಿ ಮನೆಯಿಂದ ಹೊರಟು ಹೋದ ಮೇಲೆ ಮಂಗಳೂರಿನ ಒಂದು ಪತ್ರಿಕಾ ಕಚೇರಿಯಲ್ಲಿ ಕೆಲಸಕ್ಕೆ ಸೇರಿಕೊಂಡ. ಅಲ್ಲಿರುವಾಗಲೇ ಗಾಂಧೀ ಗಾಳಿ ಬೀಸಿತು ಅವನಿಗೆ. ದೊಡ್ಡವರೊಡನೆ ಕೂಡಿಕೊಂಡು ದೊಡ್ಡವರ ಮಕ್ಕಳೊಡನೆ ತಾನೂ ಆರು ಮೊಳದ ದೇಶೀಪಂಚೆ, ಗಾಂಧೀಟೊಪ್ಪಿ ಹಾಕಿಕೊಂಡು ಹಳ್ಳಿ ಹಳ್ಳಿ ಅಲೆದ. ಈ ಹೊತ್ತು ಅಲ್ಲಿ ಮೀಟಿಂಗ್, ನಾಳೆ ಇಲ್ಲಿ ಸಭೆ. ಇಲ್ಲಿ ಈ ಬಂಗಾಡಿಯ ಮಲೆನಾಡಿನ ಕೊಂಪೆಗೆ ಬಂದಾಗಲೂ ಅವನು ಒಂದು ದಿನ ತೆಪ್ಪಗೆ ಕುಳಿತುಕೊಂಡಿರಲಿಲ್ಲ. ಬಂಗಾಡಿ ಪೇಟೆಯ ಜಾತ್ರೆ, ಕೊಲ್ಲಿ ಜಾತ್ರೆಗಳ ಕಾಲಕ್ಕೆ ಮಿತ್ರರೊಡನೆ ಸಭೆ ಸೇರಿಸಿದ. ಪೋಲೀಸರಿಗೆ ಅವನ ಮೇಲೆ ಕಣ್ಣು. ಬೇಟೆಯ ನಾಯಿಗಳಂತೆ ಅವನನ್ನು ಹಿಂಬಾಲಿಸುತ್ತಿದ್ದರು ಸಿ. ಐ. ಡಿ. ಗಳು. ಕೊನೆಗೆ ಈ ಜಿಲ್ಲೆಯಿಂದ ಅವನು ಉತ್ತರ ಕರ್ನಾಟಕಕ್ಕೆ ಹೋದ. ಜಿಲ್ಲೆ ಬಿಟ್ಟು ಪರ ಜಿಲ್ಲೆಗೆ ತೆರಳುವ ಮುಂಚೆ ಕೂಡಾ ಅವನು ಊರಿಗೆ ಬಂದಿದ್ದ. ತಾಯಿ, ದೊಡ್ಡಣ್ಣ, ಪರಿಪರಿಯಾಗಿ ಹೇಳಿಕೊಂಡರು—“ಇನ್ನು ಸಾಕು. ನಿನಗೆ ಈ ಚಳುವಳಿ ಬೇಡ. ಹೊಟ್ಟೆಹೊರೆಯುವುದೇ ಕಷ್ಟ ನಮ್ಮಂತವರು. ನಮಗೆ ಹಿಂದಿಲ್ಲ ಮುಂದಿಲ್ಲ. ನೆರೆಯಲ್ಲಿ ಹೋಗುವಾಗ ಹಗ್ಗ ಎಸೆಯುವವನು ಒಬ್ಬನೂ ಇಲ್ಲ. ಮನೆಯಲ್ಲಿ ಬೇಕಾದಷ್ಟು ತಿನ್ನಲು ಉಣ್ಣಲು ಇದ್ದರೆ ಅದೊಂದು ಬೇರೆ. ಶ್ರೀಮಂತರಾದರೆ ಗಾಂಧಿಟೊಪ್ಪಿ ಹಾಕಿಕೊಂಡರೂ ನಡೆಯುತ್ತದೆ. ಅವರ ಸಮೀಪ ಹಾಯ್ದು ಹೋಗಲು ಪೋಲೀಸರೂ ಹೆದರುವರು. ಕೆಂಪು ಮುಂಡಾಸಿನವರು ಬಂದಾಗ ಬಿಳಿಟೊಪ್ಪಿಗೆ ತೆಗೆದಿಟ್ಟು ಜರದ ರುಮಾಲು ಸುತ್ತಿ ವೇಷ ಕಟ್ಟಲೂ ಅವರಿಗೆ ಗೊತ್ತಿರುತ್ತದೆ. ನಿನ್ನಿಂದ ಅದೆಲ್ಲ ಅಶಕ್ಯ. ತಾವು ಪರದೆಯ ಹಿಂದೆ ಕುಳಿತು ನಿನ್ನಂತಹ ಬಡಪಾಯಿಗಳನ್ನೇ ಅವರು ರಂಗಸ್ಥಳಕ್ಕೆ ನೂಕುವರು. ‘ಸತ್ತರೆ ಸಾಯಲಿ’ ಎಂದೆನ್ನುವರವರು. ಯಾರ ಮಕ್ಕಳ ವಿಷಯಕ್ಕೆ ಯಾರಿಗೆ ಸುಖದುಃಖ? ಜೀವ ಕೊಡುವವರು ನೀವು. ಜೀವ ಬಿಡುವವರು ನೀವು. ನಾಳೆ ಸ್ವರಾಜ್ಯ ಸಿಕ್ಕಿದರೂ ನಿಮಗೆ ಲಭಿಸುವ ಮಹಾಭಾಗ್ಯ ಅಷ್ಟರಲ್ಲೇ ಇದೆ. ‘ನಾನು ಹೀಗೆ ಮಾಡಿದ್ದೆ. ನಾನು ಅಂಥವ, ಇಂಥವ. ಸಂತೆಗೆ ಹೋಗಿ ಮೆಂತೆ ಕದ್ದವ’

ಎಂದು ಜಂಬ ಕೊಚ್ಚಿಕೊಂಡು ಯಾರ್ಯಾರು ಗಾಂಧಿ ಟೊಪ್ಪಿ ಹಾಕಿಕೊಂಡು ಬರಲುಂಟು. ರಾವ್‌ಸಾಹೇಬ್, ರಾವ್‌ಬಹಾದ್ದೂರುಗಳು ಬಿಳಿ ಟೊಪ್ಪಿ ಧರಿಸದಿದ್ದರೆ ಮತ್ತೆ ಕೇಳು. ಮುನಿಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡ್, ಪಂಚಾಯ್ತ್ ಬೋರ್ಡ್ ಎಲ್ಲವನ್ನೂ ಅವರು ನುಂಗುವರು. ಮತ್ತೆ ಮುಖ ನೋಡಿ ಮಣೆ ಇಡುವರು. ಜಾತಿ ನೋಡಿ ಮಾತನಾಡಿಸುವರು. ಜಾತ್ಯಾತೀತನನ್ನು ಪ್ರೀತಿಸುವವರು ವಿರಳ. ಶ್ರೀಮಂತಿಕೆಗೆ ಜಾತಿಯಿಲ್ಲ. ಸಿರಿವಂತಿಕೆಯೇ ಒಂದು ಜಾತಿ. ಸಿರಿಯಿಲ್ಲದವನನ್ನು ದೂರ ಸರಿಸುವರು. ಸುಲಿದು ಆ ಕಾರ್ನಾಡ್ ಸದಾಶಿವರಾಯರನ್ನೇ ದೂರ ಸರಿಸಿದರು ಈ ಜನ. ನಿನ್ನಂಥವನನ್ನು ಜೀವದಿಂದ ಬಿಟ್ಟರೆ ದೊಡ್ಡದು" ಎಂದು ಬಗೆ ಬಗೆಯಾಗಿ ಬೇಡಿಕೊಂಡರು. ಆದರೆ ಯಾವುದೂ ಅವನ ಎದೆಗೆ ನಾಟಲಿಲ್ಲ. 'ಇಳಿದಾಗಿದೆ ಒಮ್ಮೆ. ಒಂದೇ ಸಾಯಬೇಕು, ಇಲ್ಲದಿದ್ದರೆ ಬದುಕಬೇಕು. ಅಲ್ಲಿಯವರೆಗೆ ಸರಿ' ಎಂದು ಹೇಳಿ ನಡೆದುಬಿಟ್ಟ ಅವನು.

'ಸಾವಿಗೂ ಅವನು ಹೆದರಲಾರ. ಈ ಸಲ ಸತ್ಯಾಗ್ರಹ ಆರಂಭವಾದರೆ ಬ್ರಿಟಿಷರು ಬರೇ ಬೆತ್ತ ಪ್ರಯೋಗ, ಅಶ್ರುವಾಯು ಉಪಯೋಗ, ದೊಣ್ಣೆ ಪ್ರಹಾರಗಳಿಗೇ ಬಿಡಲಿಕ್ಕಿಲ್ಲ. ಯುದ್ಧದ ರೊಚ್ಚಿನಿಂದ ಕಂಡ ಕಂಡಲ್ಲಿ ಗುಂಡುಗಳನ್ನೆಸೆಯಬಹುದು. ಮಾಣಿ ಎಲ್ಲಿ ಈ ಹುಲಿಗಳ ಬಾಯಿಗೆ ಬೀಳುತ್ತದೋ? ಎಲ್ಲಿ ಕೈಕಾಲು ಮುರಿದುಕೊಳ್ಳುತ್ತಾನೋ?' ಎಂದು ಗೋವಿಂದರಾಯರು ಹಗಲಿರುಳು ಪರಿತಪಿಸಿದರು. ರಾಜ ಬಂದು 'ಗಾಂಧೀಜಿಯವರು ಹೋರಾಟ ಆರಂಭಿಸಿದರು' ಎಂದು ಹೇಳಿ, ದೇಶದ ಎಲ್ಲ ಕಡೆಗಳಲ್ಲಿ ನಡೆದ ಗುಂಡಿನ ಹೊಡೆತದ ಹತ್ಯಾಕಾಂಡದ ಕರುಣಕತೆಗಳನ್ನೆಲ್ಲ ವಿವರಿಸಿದ. 'ನಿನ್ನ ಎದೆ ಗಟ್ಟಿಯಿದೆಯೋ ಇಲ್ಲವೋ ನೀನೇ ಮುಟ್ಟಿ ನೋಡಿಕೊ. ದೊಣ್ಣೆ, ಈಟಿ, ಬಾಣ, ಬಾಂಬುಗಳಿಗೂ ಎದೆಯೊಡ್ಡುವ ನಿರ್ಭೀತಿ ಬೇಕು' ಎಂದು ಹಿಂದೊಮ್ಮೆ ಮಗನ ಮುಂದೆ ಗೋವಿಂದರಾಯರು ಆಡಿದ್ದರೂ ಈಗ ಪುತ್ರವಾತ್ಸಲ್ಯದಿಂದ ತಳಮಳಿಸಿದರು. ಹರಿಯ ಕಾಗದವೂ ಬಂದಿರಲಿಲ್ಲ ಇತ್ತೀಚೆ. ಆದುದರಿಂದ ಅವರಿಗೆ ಇನ್ನಷ್ಟು ಗಾಬರಿ. 'ಏನಾದರೂ ವರ್ತಮಾನ ಇದೆಯಾ? ಕಾಗದ ಬಂತಾ?' ಎಂದು ರಾಜ ಬಂದಾಗಲೆಲ್ಲ ಪದೇ ಪದೇ ಕೇಳಿದರು. 'ಹರಿಯನ್ನು ಎರೆಸ್ಟ್ ಮಾಡಿದರಂತೆ. ಪತ್ರಿಕೆಗಳಲ್ಲಿ ಸುದ್ದಿ ಬಂದಿದೆ' ಎಂದು ಒಮ್ಮೆ ರಾಜ ಬಂದಾಗ ಸುದ್ದಿ ತಂದ. ಅದನ್ನು ಕೇಳಿದ ಮೇಲೆ, 'ಅಷ್ಟೇ ಆಯಿತಲ್ಲ?'

ಎಂದು ನಿಟ್ಟುಸಿರುಬಿಟ್ಟರು.

ಆದರೆ ಸೀತಮ್ಮನವರು ಮಾತ್ರ ಕಣ್ಣೀರು ಸುರಿಸಲಾರಂಭಿಸಿದರು. 'ನಮ್ಮ ಕುಟುಂಬದಲ್ಲಿ ಯಾರೂ ಜೈಲಿಗೆ ಹೋಗಿಲ್ಲ. ಅವನು ದುಡುಕಿ ಎಂಥ ಕಾರ್ಯಕ್ಕೆ ಕೈಯಿಕ್ಕಿದ? ಇನ್ನು ಅವನಿಗೆ ಯಾರು ಹೆಣ್ಣು ಕೊಡುತ್ತಾರೆ? ಜೈಲಿನಲ್ಲಿ ಎಣ್ಣೆ ಇದೆಯಾ? ಉಣ್ಣೆಕಂಬಳಿ ಹೊದ್ದು, ರಾಗಿ ಮುದ್ದೆ ತಿಂದು ಹೇಗೆ ಬದುಕುತ್ತಾನೆ?' ಎಂದು ಅಳತೊಡಗಿದರು. ಅಳು ಅವರ ಜೀವನಕ್ಕೆ ಅಂಟಿಕೊಂಡಿತು.

ಕೇಳಿ ಕೇಳಿ ಬೇಸರವಾದಾಗ ರೇಗಿ ಮಾತನಾಡಿಯೇ ಅವರ ಬಾಯಿ ಮುಚ್ಚಲೆತ್ನಿಸಿದರು ಗೋವಿಂದರಾಯರು— "ನಿನಗೆ ಮರುಳು. ಅವನು ಕದ್ದು ಕಣ್ಣಾನೂರು ಜೈಲಿಗೆ ಹೋದನೇನು? ಅವನೊಬ್ಬನೇ ಅಲ್ಲ. ಎಂಥೆಂಥ ಲಕ್ಷಾಧೀಶರ ಮಕ್ಕಳೂ ಇದರಲ್ಲಿ ಸೇರಿಕೊಂಡಿದ್ದಾರೆ. ಜವಾಹರಲಾಲರೇನು ಸಾಮಾನ್ಯ ಪುರುಷರೇ? ಪಟೇಲರು, ಪ್ರಸಾದರು ಅವರೆಲ್ಲ ಪುಂಡಪೋಕರಿಗಳೇ? ಗಾಂಧಿಯೊಟ್ಟಿಗೆ ದೊಡ್ಡ ವಾನರಸೇನೆಯೇ ಹೋಗಿದೆ ಜೈಲಿಗೆ. ಇದರಲ್ಲಿ ಅಪಮಾನವಿಲ್ಲ. ಯಾರೂ ಹೆಣ್ಣುಕೊಡದಿದ್ದರೆ ಬೇಡ. ಯಾವ ಹೆಣ್ಣನ್ನೂ ಅವನು ಮಾಡಿಕೊಂಡಾನು. ಅವನು ಹೆಣ್ಣು ಹೆಂಗುಸಲ್ಲವಲ್ಲ? ಗಂಡಸು ಎಂತ ಆದಮೇಲೆ ಎಲ್ಲಾದರೂ ಅವನಿಗೊಂದು ಹೆಂಗುಸನ್ನು ಬ್ರಹ್ಮ ಸೃಷ್ಟಿಸಿರಲೇ ಬೇಕು. ನೀನ್ಯಾಕೆ ಚಿಂತೆ ಪಡುತ್ತೀ? ನೀನು ಹೀಗೆಲ್ಲ ನೇತ್ರಾವತಿ ಹರಿಸಿದರೆ ನಾನೂ 'ಗಾಂಧೀ-ಕಿ-ಜೈ' ಎಂದು ನಾಳೆ ಹೊರಟುಬಿಡುತ್ತೇನೆ ನೋಡು" ಎಂದು ಗದರಿಸಿದರು.

'ನಾಳೆ ಏಕೆ? ಈ ಹೊತ್ತೇ ಹೊರಡಿ. ಕಾಶೀ ಯಾತ್ರೆ ಮಾಡಿ ಬಂದಾಯ್ತು. ಇನ್ನೊಮ್ಮೆ ಗಾಂಧಿ ಮಹಾತ್ಮರ ಹೆಸರು ಹೇಳಿ ಜೈಲು ಯಾತ್ರೆ ಮಾಡಿ ಬನ್ನಿ. ಜೀವಂತವಿರುವಾಗಲೇ ಒಮ್ಮೆ ಅದನ್ನೂ ನೋಡಿಬಿಡುತ್ತೇನೆ.'

"ಜೈಲಿಗೆ ನಾನೂ ಹೋಗುತ್ತಿದ್ದೆನಲ್ಲ! ಏನು ಮಾಡಲಿ ಹೇಳು. ನಾಲ್ಕು ಜನರ ನಾಲಿಗೆಗೆ ಬೆದರಿ ಕುಳಿತಿದ್ದೇನೆ. ದಮಯಂತಿಯನ್ನು ಕಾಡಿನಲ್ಲಿ ಅಗಲಿದ ನಳ ಮಹಾರಾಯನಂತೆ ನಿನ್ನನ್ನೂ ಈ ಅರಣ್ಯದಲ್ಲಿ ಬಿಟ್ಟು ತೆರಳಿದನೆಂದು ನಾಳೆ ಲೋಕಾಪವಾದ ಬಾರದೆ ಇರಲಿಕ್ಕಿಲ್ಲ. 'ಸಾಯುವ ಕಾಲಕ್ಕೆ ಮಾಳಪ್ಪ ಮೀನು ತಿಂದು ಸತ್ತ' ಎಂದು ಜನರು ಆಡಿಕೊಳ್ಳುವುದು ಬೇಡ ಮತ್ತೆ."

'ಓಹೋಹೋ, ನನ್ನ ಸುಖ ದುಃಖ ನೋಡಿ ನೀವು ಹಿಂದೆ ಉಳಿದಿದ್ದೀರೊ? ಬೇಷ್. ಈಗ ನೀವೇ ಸಾಕಿ ಸಲುಹುತ್ತಿದ್ದೀರಾ ನನ್ನನ್ನು? ನನ್ನ ಕೈ ಕಾಲು ಹರಿದಾಡುವವರೆಗೆ ರಾಜ ಒಪ್ಪತ್ತು ಕೂಳು ಹಾಕಿಯಾನು.'

'ರಾಜನ ಮೇಲೆ ನಂಬಿಗೆ ನಿನಗೆ! ಗಂಡ ಮುದುಕನಾದ ಮೇಲೆ ಮಕ್ಕಳೇ ಊರುಗೋಲೆಂಬುದು ನಿಜ. ಆದರೆ ರಾಜ ಭೋಜ ಮಹಾರಾಜರ ದರ್ಬಾರ್ ಈಗ ಎಲ್ಲಿದೆ? ಅವರ ಧಾಂ ಧೀಂ ಡಕ್ಕ ಢೈಲ್ ವೈಭವವೆಲ್ಲ ಈಗ ಗತವೈಭವ. ಖಜಾನೆ ಬರಿದಾದ ಮೇಲೆ ತಾಳ ತಂಬೂರಿ ಹಿಡಿದು ಭಜನೆ ಮಾಡುವುದೊಂದೇ ಗತಿ. ಯುದ್ಧ ಸುರುವಾದ ಮೇಲೆ ರಾಜನದೂ ಅದೇ ಸ್ಥಿತಿ. ಸಂಸಾರ ಸಾಗಿಸುವುದೇ ಏಳು ಹನ್ನೊಂದಾಗಿದೆ ಅವನಿಗೆ. ಕಾಲಿಗೆಳೆದರೆ ತಲೆಗಿಲ್ಲ, ತಲೆಗೆಳೆದರೆ ಕಾಲಿಗಿಲ್ಲ. ಇನ್ನೂ ಕೆಲವು ವರುಷ ಯುದ್ಧ ಇದೇ ರೀತಿ ಸಾಗಿದರೆ ಏನೇನಾಗುತ್ತದೋ? ಜಪಾನು ಬಾಂಬೆಸೆಯುತ್ತಿದೆಯೆಂದು ಮುಂಬಯಿ ಮದ್ರಾಸ್ ಪಟ್ಟಣಗಳಿಂದ ಜನ ಓಡಿ ಬಂದಂತೆ ಮಂಗಳೂರಿನಿಂದಲೂ ಹೆಂಡತಿ ಮಕ್ಕಳೊಂದಿಗೆ ಅವನು ಓಡಿ ಬರಲುಂಟು' ಎಂದು ಗೋವಿಂದರಾಯರು ಮಗನ ದುರವಸ್ಥೆಯನ್ನು ನೆನೆದು ವಿಷಾದಿಸಿದರು.

ಅವರೆಂದಂತೆ ಯುದ್ಧ ಆರಂಭವಾದಂದಿನಿಂದ ರಾಜನ ಪರಿಸ್ಥಿತಿಯನ್ನು ಹೇಳಲಳವಲ್ಲ. ಎರಡು ಸಂಸಾರಗಳ ಭಾರ ಹೊರಲಾರದ ಹೊರೆಯಾಯ್ತು ಅವನಿಗೆ. ಅವನದು ಪೇಟೆಯ ಸಂಸಾರ. ಎಷ್ಟು ತಂದು ಹಾಕಿದರೂ ಇನ್ನೊಂದು ಗಳಿಗೆಗೆ ಬರಿದು. ಬಂಗಾಡಿ ಸಂಸಾರಕ್ಕೆ ವೆಚ್ಚ ಹೆಚ್ಚಿಲ್ಲದಿದ್ದರೂ ಕೃಷಿಗೆ ಮಾತ್ರ ತುಂಬಾ ವೆಚ್ಚ. ಒಂದಕ್ಕೆ ನಾಲ್ಕರಷ್ಟು ವೆಚ್ಚ! ಆದರೆ ಸಂಬಳ ವಿಶೇಷ ಹೆಚ್ಚಾಗಲಿಲ್ಲ. ಗಿಂಬಳ ತಿನ್ನಲು ಅವನದು ಆಫೀಸರ್ ಕೆಲಸವಲ್ಲ. ಅವನು ಬರೇ ಗುಮಾಸ್ತ. ಗುಮಾಸ್ತರನ್ನು ಯಾರು ಕೇಳಬೇಕು? ಒಂದು ಸಿಂಗಲ್ ಕಾಫಿ ಕೊಡುವವರಿಲ್ಲ ಅಪರೂಪಕ್ಕೆ. ರಸ್ತೆ, ರೆವಿನ್ಯೂ, ಅಬಕಾರಿ, ಪೋಲೀಸ್ ದಫ್ತರ್‌ಗಳಲ್ಲಿ ಗುಮಾಸ್ತರಾಗಿದ್ದವರಿಗೆ ಹುಲಿಗಳೊಂದಿಗೆ ನರಿ ಗುಳ್ಳೆನರಿಗಳಿಗೂ ಪಾಲು ಸಿಗುವುದು ಸಹಜ. ಆದರೆ ರಾಜನಿಗೆ ತುಟ್ಟಿ ಭತ್ತೆಯೊಂದೇ ಗಿಂಬಳ. ಅದು ಮಂಗಳೂರು ನಗರದಲ್ಲಿ ಚಹಾ, ಕಾಫಿ, ಸಾಬೂನುಗಳಿಗೆ ಸಾಲದು. ರೇಶನ್ನಿಗೂ ಒಂದು ಪೈ ಉಳಿಯುವುದಿಲ್ಲ. ರೇಶನ್ನಿನಲ್ಲಿ ಮುಡಿ ಮುಡಿ ಅಕ್ಕಿ ಸಿಕ್ಕುವುದೂ ಇಲ್ಲ. ಆಫೀಸಿಗೆ ತೆರಳುವ ದಾರಿಯಲ್ಲಿ ಎರಡು ಸಲ

ಹೋಟ್ಲಿಗೆ ಹೋಗಲೇಬೇಕು. ಆದರಿಂದ ಒಂದಕ್ಕೆ ಎರಡು ಖರ್ಚು. ಒಂದಕ್ಕೆ ಎರಡು ಬೆಲೆ. ಒಂದು ಪದಪ್ರಾಸ ಅಷ್ಟೆ. ಆದರೆ ಮಾರ್ಕೇಟಿಗೆ ಒಂದು ಗಳಿಗೆ ತೆರಳಿದರೆ ಒಂದಕ್ಕೆ ಹತ್ತರಷ್ಟು ಬೆಲೆಯೆಂದು ಗೊತ್ತಾಗುವುದು. 'ಅದು ಒಂದಿದ್ದರೆ ಇನ್ನೊಂದಿಲ್ಲ. ಬೇಕಾದ ವಸ್ತುವೊಂದೂ ಮಾರ್ಕೇಟಿನಲ್ಲಿಲ್ಲ' ಎಂದು ಬಂಗಾಡಿ ಮನೆಗೆ ಬಂದು ಊಟಕ್ಕೆ ಕುಳಿತಾಗ ತಾಯಿ ತಂದೆಗಳ ಮುಂದೆ ರಾಜ ತೋಡಿಕೊಳ್ಳುವುದುಂಟು.

'ಅಬ್ಬಾ ದೇವರೇ, ಕಲಿಕಾಲ ಬಂತು' ಎಂದು ಸೀತಮ್ಮನವರು ನುಡಿಯುವರು. ಅವರಿಗೆ ಹೆಚ್ಚಿಗೆ ಅರ್ಥವಾಗುತ್ತಿರಲಿಲ್ಲ.

ಆದರೆ ಗೋವಿಂದರಾಯರು ಮಾತ್ರ, 'ಹಾಗಾದರೆ ನಮ್ಮ ಜಿಲ್ಲೆಯಲ್ಲಿ ಬೆಳೆದ ಅಕ್ಕಿಯೆಲ್ಲ ಎಲ್ಲಿ ಹೋಯ್ತು?' ಎಂದು ಪ್ರಶ್ನಿಸುವರು.

'ಹೋಗುವುದೆಲ್ಲಿಗೆ? ಬ್ಲೇಕ್ ಮಾರ್ಕೇಟಿಗೆ!'

'ಹೀಗಾದರೆ ಸರಕಾರವಿದ್ದು ಏನು ಪ್ರಯೋಜನ? ಈ ಪೋಲೀಸ್, ಈ ಸೈನ್ಯ, ಎಲ್ಲ ಏತಕ್ಕೆ? ಬ್ಲೇಕ್ ಮಾರ್ಕೇಟ್ ನಿಲ್ಲಿಸಲಾಗದ ಈ ಬ್ರಿಟಿಷರಿಗೆ ಹಿಟ್ಲರನನ್ನು ಕೊಲ್ಲಿಸಲು ಸಾಧ್ಯವಾದೀತಾ?'

"ಮನಸ್ಸಿದ್ದರೆ ಮಾರ್ಗವಿದೆ. ಅವರಿಗೆ ಮನಸ್ಸು ಇಲ್ಲವಲ್ಲ ನಮ್ಮ ಜನರ ಮೇಲೆ. ತೈಮೂರ್ ಬೇಕು, ಈ ಸರ್ಕಾರ ಬೇಡ. ಯಾರಿಗೆ ಯಾರ ಮೇಲೆ ಕರುಣೆ? ಸುಂಕದವರಿಗೆ ಸುಖದುಃಖವೇನು ಗೊತ್ತು? ಯಾರು ಸತ್ತರೆ ಯಾರಿಗೆ ದುಃಖ? ಬಂಗಾಲದಲ್ಲಿ ೩೦ ಲಕ್ಷ ಜನ ಹೊಟ್ಟೆಗಿಲ್ಲದೆ ಸತ್ತರು! ನಮ್ಮ ದೇಶದ ಎಲ್ಲ ಜನ ಸತ್ತರೂ ಅವರು ಪಿಟಕ್ ಎನ್ನಲಿಕ್ಕಿಲ್ಲ. 'ನಾವೇ ಸಾಯುತ್ತಿದ್ದೇವೆ' ಎನ್ನುತ್ತಿದ್ದಾರೆ ಅವರು. 'ನಮಗೇ ಕೊಡಿ, ಮುಡಿ ಮುಡಿ ಅಕ್ಕಿ ಕೊಡಿ. ರೊಕ್ಕ ಕೊಡಿ. ನಿಮ್ಮ ಮಕ್ಕಳನ್ನು ಕೊಡಿ' ಎಂದು ಕೇಳುತ್ತಾರೆ. ಅವರಿಗೆ ಅಷ್ಟು ಸಿಕ್ಕರಾಯ್ತು. ಅಷ್ಟನ್ನು ಯಾರು ಕೊಟ್ಟರೂ ಅವರಿಗೆ ಆನಂದ. ಅಷ್ಟನ್ನು ಕೊಟ್ಟು ಯಾರು ಏನು ಮಾಡಿದರೂ ನಡೆಯುತ್ತದೆ. ಎಲ್ಲ ಲಂಚದ ಮಹಿಮೆ. ಇದು ಲಂಚ ಪ್ರಪಂಚ. ಲಂಚ ಕೊಟ್ಟರೆ ಹಗಲಿಗೂ ಲೋರಿ ಲೋರಿ ಅಕ್ಕಿ ಸಕ್ಕರೆ ಸಿಮೆಂಟ್ ಬಂದು ಬೀಳುತ್ತದೆ ಬ್ಲೇಕ್ ಮಾರ್ಕೇಟಿಗೆ. ಬ್ಲೇಕ್ ಮಾರ್ಕೇಟ್ ಮಾಡಿ ಮಾಡಿ ಜಮೀನ್ದಾರರೂ ವ್ಯಾಪಾರಿಗಳೂ ಧನ್ಯ ಧನ್ಯರಾಗಿ ಹೋದರು. ಅವರ ಮೋಟಾರ್ ಕಾರುಗಳೇನು? ಅವರ ಹೆಂಡತಿ ಮಕ್ಕಳ ಮೈಮೇಲಿನ ಆಭರಣಗಳೇನು?

ಉಪ್ಪರಿಗೆ ಮನೆಗಳೇನು? ಏರಿದರು ಮೇಲಕ್ಕೆ! ಗಗನಕ್ಕೇ ಏರಿದರು."

'ಹೌದು, ಗಗನಕ್ಕೇ ಏರಿದರು, ಹದ್ದುಗಳ ಹಾಗೆ. ಆದರೆ ರಣಹದ್ದುಗಳು ಎಷ್ಟು ಮೇಲಕ್ಕೇರಿದರೂ ಅವುಗಳ ದೃಷ್ಟಿ ನೆಲದಲ್ಲಿ ಸತ್ತು ಕೊಳೆತ ಕಳೇಬರ ಗಳ ಕಡೆಗೇ. ಜನರ ಪ್ರೇಮಾದರ ಗಳಿಸಿ ಅವರು ಮೇಲಕ್ಕೇರಿದರು ಎಂದೆನ್ನಬೇಡ.'

'ಯಾರು ಕೇಳುತ್ತಾರೆ ನಿಮ್ಮ ಜನರನ್ನು? ಜನರ ಪ್ರೀತಿ, ವಿಶ್ವಾಸ, ಪ್ರೇಮ, ಆದರ, ಸದಾಚಾರ ಇವೆಲ್ಲ ನಮ್ಮ ನಿಮ್ಮಂತವರ ಮಾತು. ಅವರಿಗೇನಿಲ್ಲ. ಅವರೆದೆ ಕಲ್ಲು. ಬ್ಲೇಕ್ ಮಾರ್ಕೇಟ್ ಮಾಡಿ ಮಾಡಿ, ಹೆಣತಿಂದು, ಹೆಣತಿಂದು, ರಕುತ ತುಂಬಿ ತುಂಬಿ, ಅದು ಹರಿಯಲು ದಾರಿ ಕಾಣದೆ ಎದೆ ಕಲ್ಲಾಗಿದೆ. ಕಲ್ಲುಗಳಿಗೆ ತಲೆ ತಲೆ ಬಡೆದುಕೊಂಡು ಪ್ರಯೋಜನವಿಲ್ಲ.'

'ಹೀಗಾದರೆ ಏನು ಗತಿ? ಯುದ್ಧ ಮುಗಿದ ಮೇಲಾದರೂ ಸ್ವಲ್ಪ ಪರಿಸ್ಥಿತಿ ಸುಧಾರಿಸುತ್ತದೋ ಏನೋ? ಸ್ವರಾಜ್ಯವಾದರೂ ಲಭಿಸುತ್ತಿದ್ದರೆ ಗಾಂಧಿ ಏನಾದರೂ ಮಾಡುತ್ತಿದ್ದ! ಬಡವರಿಗೆ ಬರ್ಕತ್ತಿಲ್ಲ ಹೀಗಾದರೆ.'

'ಬಡವರಿಗೆ ಯಾವಾಗಲೂ ಬರ್ಕತ್ತಿಲ್ಲ. ಬಡವರ ಕೈವಾರಿ ಮಹಾತ್ಮರಂತೂ ಈಗ ಆಗಾಖಾನ್ ಅರಮನೆಯಲ್ಲಿದ್ದಾರೆ! ಈಗ ಸದ್ಯಕ್ಕೆ ಸ್ವರಾಜ್ಯವಿಲ್ಲ. ಯುದ್ಧ ಮುಗಿವ ವರೆಗೂ ಸ್ವರಾಜ್ಯದ ಮಾತೆತ್ತಲು ಬ್ರಿಟಿಷರು ಬಿಡುವುದಿಲ್ಲ. ಯುದ್ಧ ಮುಗಿದ ಮೇಲಿನ ಮಾತು? ಸ್ವರಾಜ್ಯ ಸಿಕ್ಕಿದ ಮೇಲಿನ ಮಾತು? ಆಗ ರಾತ್ರಿ ಬೆಳಗಾಗುವುದರಲ್ಲಿ ಇಂದಿನ ಈ ಹೊಲಸು ಹೋಗುತ್ತದೆಂದು ತಿಳಿದಿರಾ? ಯುದ್ಧಕಾಲದಲ್ಲಿ ಬ್ಲೇಕ್ ಮಾರ್ಕೇಟ್ ಮಾಡಿ ರುಚಿ ಸಿಕ್ಕಿದೆ ಅನೇಕರಿಗೆ, ಹುಲಿಗೆ ನರಮಾಂಸದ ರುಚಿ ದೊರೆತ ಹಾಗೆ. ಒಮ್ಮೆ ನರಭಕ್ಷಕನಾದ ಹುಲಿ ಮತ್ತೆ ದನಕರುಗಳನ್ನೂ ಮುಟ್ಟುವುದಿಲ್ಲ. ಮನುಷ್ಯನನ್ನು ಕಂಡಲ್ಲಿ ಹಾರುತ್ತದೆ ಅವನ ಮೈ ಮೇಲೆ. ಗಾಂಧಿಯವರ ರಕ್ತ ಹೀರಲೂ ಇವರು ಹೇಸುವವರಲ್ಲ. ಅವರ ಪುಣ್ಯ ಪ್ರಭಾವದಿಂದ ಎಲ್ಲಾದರೂ ನಮಗೆ ಸ್ವರಾಜ್ಯ ದೊರೆತು ಗಾಂಧೀ ರಾಜ್ಯ ಬಂದರೆ, ಅದನ್ನು ತಳಬುಡ ಮೇಲೆ ಕೆಳಗೆ ಮಾಡದೆ ಬಿಡಲಾರರು. ಇವರನ್ನು ಮರ್ದನ ಮಾಡಲಿಕ್ಕೆ ಬೇಕು ಗುದಿಗೆಶಾಸ್ತ್ರ! ಬೇಕು ಹಿಟ್ಲರ್! ಹಿಟ್ಲರನ ರಾಜ್ಯದಲ್ಲಿ ಇಂಥವರು ಇರುತ್ತಿದ್ದರೆ ಇವರನ್ನು ದೇಶ ದ್ರೋಹಿಗಳೆಂದು, ಕೊಲೆ ಪಾತಕಿಗಳೆಂದು ತಿಳಿದು ಸಾಲಾಗಿ ನಿಲ್ಲಿಸಿ ಢಂ, ಢಂ, ಢಂ, ಗುಂಡು ಹಾರಿಸುತಿದ್ದ.'

ರಾಜ ಔಡುಗಚ್ಚಿ 'ಥಂ, ಥಂ, ಥಂ,' ಎಂದಾಗ ಗೋವಿಂದರಾಯರ ಎದೆಗುಂಡಿಗೆಯ ರಕ್ತವೂ ಥಂ, ಥಂ, ಹಾರಲಾರಂಭಿಸಿತು. 'ಮಾರಾಯ, ನೀನು ಇದೇ ರೀತಿ ಮಂಗಳೂರು ಪೇಟೆಯಲ್ಲಿ ಮಾತನಾಡಿದರೆ ನಿನ್ನನ್ನು ಜೈಲಿಗೆ ಕೊಂಡು ಹೋದಾರು. ಸ್ವಲ್ಪ ಮೆಲ್ಲಗೆ ಮಾತನಾಡು' ಎಂದು ಸಮಾಧಾನ ಪಡಿಸಲೆತ್ನಿಸಿದರು.

'ಹೋ, ಒಯ್ಯಲಿ. ಹರಿ ಹೇಗೂ ಹೋಗಿದ್ದಾನೆ. ನನಗೇನು? ತಮ್ಮನೊಡನೆ ಅಣ್ಣ. ಅಣ್ಣತಮ್ಮ ಇಬ್ಬರನ್ನು ದೇಶಕ್ಕೆ ಕೊಟ್ಟಂತಾಗುತ್ತದೆ. ಇಲ್ಲಿ ಇರುವುದಕ್ಕಿಂತ ಜೈಲೇ ಪರಮಗುಣ. ಇಲ್ಲಿ ನಾನು ಇದ್ದು ಏನು ಪ್ರಯೋಜನವಾಗಿದೆ? ಯುದ್ಧ ಸುರು ಆದ ಮೇಲೆ ಒಂದು ಹೊಸ ಗದ್ದೆಯನ್ನು ಮಾಡಿಸಿಲ್ಲ. ಒಂದು ಹೊಸ ತೋಟ ನೆಟ್ಟಿಲ್ಲ. ಮೊದಲು ಮಾಡಿದ್ದೇ ನಾಲ್ಕಾರು ಎಕರೆ. ಅದರಲ್ಲಿ ದೊರೆತುದನ್ನು ಅದಕ್ಕೇ ಸುರಿದು ಊರ್ಜಿತ ಮಾಡೋಣವೆಂದರೆ, ಅಕ್ಕಿಯನ್ನು ಹೊಟ್ಟೆ ತಿಂದಿತು. ತೋಟದಲ್ಲಿ ಇನ್ನೂ ಬೆಳೆ ಬಂದಿಲ್ಲ. ಹಟ್ಟಿಯ ಹಿಂಬದಿ ಇರುವ ಹತ್ತು ಹದಿನೈದು ಎಕರೆ ಸ್ಥಳದಲ್ಲಿ ಯಾವಾಗ ಕೃಷಿ ಮಾಡಿಸಬೇಕು? ಇನ್ನು ಅಲ್ಲಿದ್ದ ಕೊಪ್ಪರಿಗೆ ಅಗೆಯಬೇಕು! ಇಲ್ಲದಿದ್ದರೆ ಸಾಧ್ಯವಿಲ್ಲ. ಅಗೆದು ಬಿಡುತ್ತೇನೆ ಅದನ್ನು.'

ಏನೋ ಕಷ್ಟದ, ಸಿಟ್ಟಿನ, ಆವೇಶದಲ್ಲಿ 'ಕೊಪ್ಪರಿಗೆ ಅಗೆಯುತ್ತೇನೆ' ಎಂದು ನುಡಿದನೆಂದು ಗೋವಿಂದರಾಯರು ಭಾವಿಸಿದ್ದರು. ಆದರೆ ಮತ್ತೊಮ್ಮೆ ರಾಜ ಮನೆಗೆ ಬಂದಾಗ ಹತ್ತು ಹದಿನೇಳು ವರುಷದ ಮೋಹನನನ್ನು ಕಳಿಸಿ ಆಳುಗಳನ್ನು ಕರೆಸಿದ. ಅವರೊಂದಿಗೆ ಹಾರೆ ಪಿಕ್ಕಾಸ್ ಹಿಡಿದುಕೊಂಡು ಅಣ್ಣ ತಮ್ಮ ತೆರಳಿದರು. ಎಲ್ಲಿಗೆ ಏನು ಎಂದವರು ಹೇಳಲಿಲ್ಲ, ಗೋವಿಂದರಾಯರು ಕೇಳಲಿಲ್ಲ. ಮೋರಿಸ್, ಅನಾನಾಸ್ ಗಿಡಗಳನ್ನು ತಂದುದರಿಂದ ಎಲ್ಲಾದರೂ ಮಣ್ಣು ಅಗತೆ ಮಾಡಿಸಲು ತೆರಳಿರಬೇಕೆಂದು ಅವರ ಊಹೆ. ಈ ಮೊದಲು ಎಷ್ಟೋ ಸಲ ಗಾಳಿ, ತೇಗು, ನಿಂಬೆ, ಕಿತ್ತಳೆ, ಮಾದಳ ಗಿಡಗಳನ್ನು ತಂದಾಗ ತಾನೇ ತನಗೆ ಬೇಕಾದಲ್ಲಿ ರಾಜ ನೆಟ್ಟದ್ದೂ ಇದೆ. ಆದುದರಿಂದ ಗೋವಿಂದರಾಯರು ತಮ್ಮ ಕೆಲಸದಲ್ಲೇ ಮಗ್ನರಾದರು. ತೋಟದಲ್ಲಿ ಬಿದ್ದ ತೆಂಗು ಕಂಗಿನ ಮಡಲುಗಳನ್ನು ಹೆಕ್ಕಿ ಒಂದೆಡೆ ರಾಶಿ ಒಟ್ಟುವ ಕೆಲಸ ಅವರದು. ರಾಜ ಬಂದುದರಿಂದ ಪಲ್ಯ ಹುಳಿ ಏನು ಮಾಡಲೆಂದು ಸೀತಮ್ಮನವರು ತರಕಾರಿ ದರಗಳಲ್ಲಿ ಅತ್ತಿತ್ತ ಸುಳಿಯುತ್ತಿದ್ದರು.

ಬಾಳೆಗಿಡದ ಗೊನೆಯ ತುದಿಯಲ್ಲಿದ್ದ ಪೂಂಬೆಯನ್ನು ತಂದು ಅದನ್ನಾದರೂ ಬಜ್ಜಿ ಮಾಡೋಣವೆಂದು ತೋಟದೊಳಗೂ ಪ್ರವೇಶಿಸಿದರು. ಅಷ್ಟರಲ್ಲಿ 'ಅಪ್ಪಯ್ಯ, ಹಾವು! ಹಾವು! ಹಾವು!' ಎಂದು ಮೋಹನ ಕೂಗುವುದು ಕೇಳಿತು.

'ಹಾರೆ ಪಿಕ್ಕಾಸ್ ಅಲ್ಲೇ ಬಿಡಿ. ಮನೆಗೆ ಓಡಿ. ಮನೆಗೆ ಬೇಗ ಓಡಿ' ಎಂದು ರಾಜ ಕೂಗಿದ.

'ಅನರ್ಥ ಆಯಿತೇ. ಏ, ಅನರ್ಥ ಆಯಿತು' ಎಂದು ಗೋವಿಂದರಾಯರು ಹೆಂಡತಿಗೆ ಕೇಳಿಸುವಂತೆ ನುಡಿದು ತೋಟದಿಂದ ಅಂಗಳದ ಕಡೆ ಓಡಿದರು.

'ಏನು ಏನು?' ಎಂದು ಏನೂ ತಿಳಿಯದವರಂತೆ, ಏನೋ ಅಸ್ಪಷ್ಟ ದುಃಖದಿಂದ ಸೀತಮ್ಮನವರೂ ಅಂಗಳಕ್ಕೆ ಬಂದರು.

'ಹಾವು! ನಾಗರ ಹಾವು! ದೊಡ್ಡದು. ಹೆಡೆ ಬಿಡಿಸಿ ಓಡಿಸಿಕೊಂಡು ಬಂತು' ಎಂದು ಹೇಳುತ್ತಿರುವ ಮೋಹನ ಅಂಗಳಕ್ಕೆ ಹಾರುತ್ತ ಬಂದ. ಅವನ ಬೆನ್ನ ಹಿಂದೆ ರಾಜ, ಬೋರ, ತುಕ್ರ, ಅಹ್ಮದರು ಓಡಿ ಬಂದರು. ಅವ ರೊಬ್ಬರೂ ಚಕಾರ ಶಬ್ದ ತೆಗೆಯಲಿಲ್ಲ.

'ಹಾವು ಯಾಕೆ ಓಡಿಸಿಕೊಂಡು ಬಂತು? ಎಲ್ಲಿದೆ? ಏನು ಕೊಪ್ಪರಿಗೆ ಅಗೆಯಲು ಹೋಗಿದ್ದಿರಾ?' ಎಂದು ಗೋವಿಂದರಾಯರು ಕೇಳಿದರು.

ಅವರೊಬ್ಬರೂ ಉತ್ತರ ಕೊಡಲಿಲ್ಲ. 'ಹೌದಪ್ಪಯ್ಯ. ಅಗೆಯಲಿಕ್ಕೆ ಹೋಗಿದ್ದೆವು. ಹಾರೆ ಪಿಕ್ಕಾಸಿನಿಂದ ಮಣ್ಣು ಅಗೆದು ನಾಗನ ಕಲ್ಲು ಸರಿಸಿದಾಗ ಬಿಲದಿಂದ ದೊಡ್ಡ ಸರ್ಪ ಬುಸುಗುಟ್ಟುತ್ತಾ ಬಂತು. ಅಣ್ಣ ಮೇಲಿನ ದರೆ ಯಿಂದ ಕೆಳಗೆ ಹಾರಿದ. ಇಲ್ಲದಿದ್ದರೆ ಹೊಡೆದು ಬಿಡುತ್ತಿತ್ತು' ಎಂದು ಶ್ವಾಸ ಬಿಡುತ್ತ ಹೇಳಿದ ಮೋಹನ.

ಸೀತಮ್ಮನವರ ಕಾಲು ಕುಸಿದುವು.

'ಅಯ್ಯೊ, ಅಯ್ಯೊ. ನಾನು ಸತ್ತುಹೋಗಿದ್ದೆನಾ? ನನ್ನನ್ನು ಒಂದು ಮಾತು ಕೇಳಬಹುದಿತ್ತಲ್ಲಾ? ಈಗ ಸ್ವಲ್ಪ ಹೆಚ್ಚುಕಡಿಮೆಯಾಗುತ್ತಿದ್ದರೆ ಅನರ್ಥವೇ ಆಗುತ್ತಿತ್ತು. ನಮ್ಮ ಮಣ್ಣಿನಲ್ಲಿ ಕೊಪ್ಪರಿಗೆಯಿದ್ದರೆ ಎಲ್ಲಿ ಹೋಗುತ್ತದೆ? ಈಗಲ್ಲದಿದ್ದರೆ ಮತ್ತೆ ಸಿಗಬಹುದು. ನಿನಗಲ್ಲದಿದ್ದರೆ ನಿನ್ನ ಮಗನಿಗೆ ದೊರೆತೀತು. ಅದು ಸಿಗುವುದೂ ಬಿಡುವುದೂ ಅವರವರ ದಶನಾದಿ ಫಲ. ಅಗೆದರೆ ಮಾತ್ರ ಸಿಗುತ್ತದಾ? ಭೋಗವಿಲ್ಲದವರು ಅಗೆದರೆ ಬಂಗಾರ

ವೆಲ್ಲ ಮಸಿಯ ತುಂಡುಗಳಂತೆ ಕಾಣುತ್ತದೆ ಕಣ್ಣಿಗೆ. ಅಗೆಸುವುದಾದರೂ ಅದಕ್ಕೆ ನಾಗದರ್ಶನದ ಕ್ರಮವಿದೆ. ನಾಗಮಂಡಲ ಮಾಡಿಸುವ ಹರಕೆ ಹೊರ ಬೇಕು. ಅಂಜನ ಹಾಕಿ ನೋಡಬೇಕು ಎಲ್ಲಿದೆಯೆಂದು! ಇದನ್ನೆಲ್ಲ ಬಿಟ್ಟು ಏಕಾ ಏಕಿ ಹೋಗಿ ಅಗೆದರೆ ಹಾವು ಬಾರದೆ ಇದ್ದೀತಾ?'

ಗೋವಿಂದರಾಯರು ಮಾತು ಮುಗಿಸಿರಲಿಲ್ಲ. ಅಷ್ಟರಲ್ಲಿ 'ಅಪ್ಪಯ್ಯ ಹಾವು! ಅಂಗಳಕ್ಕೆ ಬಂತು. ಮುಖಮಂಟಪಕ್ಕೆ ಬನ್ನಿ' ಎಂದ ರಾಜ. ಮೋಹನ, ತುಕ್ರ, ಬೋರ, ಅಹ್ಮದ್ ಬ್ಯಾರಿ, ರಾಜ ಎಲ್ಲರೂ ಮುಖ ಮಂಟಪಕ್ಕೆ ತೆರಳಿದರು. ಸೀತಮ್ಮನವರು ಮೆಟ್ಟಲು ಹತ್ತಿ ಮುಖಮಂಟಪಕ್ಕೆ ಬಂದು ನಾಲಿಗೆ ಬಾರದೆ, ಅಳಲೂ ಗೊತ್ತಾಗದೆ ತಬ್ಬಿಬ್ಬಾಗಿ ತಲೆಗೆ ಕೈಯಿಟ್ಟು ಕೊಂಡು ಅಂಗಳವನ್ನೇ ನೋಡತೊಡಗಿದರು.

ಕೇದಗೆ ಬಣ್ಣದ ಮಾರುದ್ದದ ನಾಗರ ಹಾವು ಅಂಗಳದಲ್ಲಿ ಕಾಣಿಸಿತು. ಅದು ಒಮ್ಮೆ ಹರಿಯುತ್ತದೆ, ಒಮ್ಮೆ ನಿಂತು ಹೆಡೆಯರಳಿಸಿ, ನಾಲಿಗೆ ಚಾಚಿ ಸುತ್ತಲೂ ನೋಡುತ್ತದೆ! 'ಅದು ಮೇಲೆ ಬರಲಿ. ಅದನ್ನು ಇಂದು ಕೊಂದೇ ಸಿದ್ಧ' ಎನ್ನುತ್ತ ರಾಜ ಮನೆಯೊಳಗೆ ಉದ್ದದ ಬೆತ್ತ ಹುಡುಕಲಾರಂಭಿಸಿದ. 'ಅಪ್ಪಯ್ಯ, ಮೇಲಕ್ಕೆ ಬನ್ನಿ' ಎಂದ ಮೋಹನ ಮೇಲಿಂದಲೇ. 'ಅಯ್ಯಾ, ನಾಗರಹಾವಿಗೆ ವೈರ ಬಹಳ. ಬನ್ನಿ ಮೇಲಕ್ಕೆ!' ಎಂದ ಬೋರ. 'ಅದು ಯಾರಿಗಾದರೂ ಕಚ್ಚಲಿ. ಅದನ್ನು ಇಡುವುದಿಲ್ಲ. ನಾನು ಮುಸಲ್ಮಾನ್' ಎಂದ ಅಹ್ಮದ್ ಬ್ಯಾರಿ. ಸೀತಮ್ಮನವರು ಕೆಳಗಿಳಿದು ಗೋವಿಂದರಾಯರ ಕೈ ಹಿಡಿದೆಳೆಯಲು ಯತ್ನಿಸಿದರು. ಅವರು ಕೈಕೊಸರಿಕೊಂಡು ನುಡಿದರು:—

'ನೀನು ಬಿಡು, ಬಿಡು. ಅದು ಕಚ್ಚಲಿ. ಅದು ಮುಖಮಂಟಪಕ್ಕೆ ಏರಲಿ. ಯಾರನ್ನು ಕಡಿಯುತ್ತದೆ ನೋಡುತ್ತೇನೆ. ಮಕ್ಕಳನ್ನು ಕಡಿದರೆ ಮುಗಿ ಯಿತಾ? ನಾನು ಜೀವಂತ ಇದ್ದೇನಲ್ಲ! ಅದನ್ನು ಜೀವಂತ ಬಿಟ್ಟೇನಾ? ಅದನ್ನು ಬಿಡು, ಅದರ ಸಂತಾನವೊಂದನ್ನೂ ಉಳಿಸುವುದಿಲ್ಲ. ಮಲಬಾರಿನಿಂದ ಮಾಪಿಳ್ಳೆಯವರನ್ನು ಕರೆಸಿ, ಬನವೆಲ್ಲ ಅಗೆಸಿ, ಹಾವುಗಳ ಮೊಟ್ಟೆ ಮರಿ ಗಳನ್ನೂ ನಿರ್ನಾಮಮಾಡಿ, ಬೈಹುಲ್ಲು ಹಾಕಿ ಸುಡಿಸಿ, ಆ ಬನದಲ್ಲೇ ಅವುಗಳ ಎಲುಬುಗಳನ್ನು ಹುಗಿಯಲುಂಟು ನಾನು. ಇಷ್ಟರವರೆಗೆ ಸರ್ಪವನ್ನು ಪೂಜಿ ಸುತ್ತ ಬಂದಿದ್ದೇನೆ. ದೇವರ ಪೆಟ್ಟಗೆಯಲ್ಲಿ ಸುಬ್ರಮಣ್ಯ ಇದ್ದಾನೆ. ದಿನಂಪ್ರತಿ ನಾನು ಹಾಲೆರೆಯುತ್ತಿದ್ದೇನೆ. ನಾಗರಪಂಚಮಿ ದಿನ ಬನಕ್ಕೂ ಎರೆದುದುಂಟು.

ಈ ಹಾವು ಹಾರಾಡಲಿ. ಆ ಸುಬ್ರಮಣ್ಯನನ್ನು ಬಾವಿಗೆ ಹಾಕಿ, ಆ ಬನದ ನಾಗಕಲ್ಲುಗಳನ್ನು ನೇತ್ರಾವತಿಗೆ ಎಸೆದು ಬಿಡುತ್ತೇನೆ. ನೋಡೋಣ, ಅದು ಮುಖಮಂಟಪ ಹತ್ತಲಿ.'

ಮುಖಮಂಟಪದ ಕಡೆ ತಲೆಯಿಟ್ಟು ತೆರಳುತ್ತಿದ್ದ ನಾಗರಹಾವು ನಿಂತಿತು. ಅಂಗಳದ ಮಧ್ಯೆ ಹಾಗೆಯೇ ಹೆಡೆಯುರಳಿಸುತ್ತ ನಿಂತಿತು. ಅತ್ತಿತ್ತ ಕದಲಲಿಲ್ಲ. ಆದರ ಬಾಲ ಮಾತ್ರ ಅತ್ತಿತ್ತ ಹಂದಾಡುತ್ತಿತ್ತು.

ಗೋವಿಂದರಾಯರು ಧ್ವನಿ ಇಳಿಸಿ ಮನುಷ್ಯರೊಡನೆ ಮಾತನಾಡುವವ ರಂತೆ ಆ ಹಾವನ್ನುದ್ದೇಶಿಸಿ ಹೇಳಿದರು—

'ಮನುಷ್ಯರ ಜೀವಕ್ಕೆ ಬಂದರೆ ಅವರು ನಿನಗೆ ಹಾಲೆರೆಯುತ್ತಾರಾ? ಹೊಡೆದು ಕೊಂದುಬಿಡುತ್ತಾರೆ. ಮಕ್ಕಳು ಮರಿ ಕೊಟ್ಟು ನೀನು ಏನಾದರೂ ಉಪಕಾರ ಮಾಡಿದರೆ ನಾಗಕಲ್ಲು ಮಾಡಿಸಿ, ಕೊಪ್ಪರಿಗೆ ಕೊಟ್ಟು ಜನರಿಗೆ ನೆರವಾದರೆ ನಾಗಮಂಡಲ ಬರೆಸಿ, ನಲಿದು ನಿನ್ನನ್ನು ಸ್ತುತಿಸುತ್ತಾರೆ. ನೀನು ಇಷ್ಟು ಭೋಗಿಯಾದುದು ಏತಕ್ಕೆ? ನಿಧಿಯಿದ್ದಲ್ಲಿ ಕುಳಿತು ಜೀನನಂತೆ ಕಾಯುತ್ತೀ ಎಂದು ಹೇಳುತ್ತಾರೆ ಹಿರಿಯರು. ಅದು ಹೌದಾ? ಹೌದಾದರೆ ಬಡಜನರಿಗೆ ಹಣದ ಮೇಲೆ ಆಶೆಯುಂಟಾಗುವುದು ಸಹಜವೇ. ಕೊಪ್ಪರಿಗೆ ದೊರೆತರೆ ತಮ್ಮ ಕಷ್ಟಗಳೆಲ್ಲ ಪರಿಹಾರವಾಗುವುವು ಎಂದು ಅವರು ನಂಬಿ ಆಗೆಸಲು ಬಯಸುತ್ತಾರೆ. ಹೊರತು ನಿನಗೆ ಅಪಾಯ ಮಾಡಬೇಕು, ನಿನ್ನನ್ನು ಕೊಲ್ಲಬೇಕು ಎಂಬ ಉದ್ದೇಶ ಅವರಿಗಿರುವುದಿಲ್ಲ. ಕೊಪ್ಪರಿಗೆ ಬಿಟ್ಟು ಕೊಡಲು ನಿನಗೆ ಇಷ್ಟವಿಲ್ಲದಿದ್ದರೆ ಬುಸ್ ಬುಸ್ ಬೆದರಿಸಿ ಬಿಡು. ಮನುಷ್ಯರ ಅಸುವನ್ನೇ ಉಗಿವಷ್ಟು ಕೋಪವೇಕೆ ನಿನಗೆ? ದೇವರಿಗೆ ಕೋಪವಿಲ್ಲವಂತೆ. ಅವನು ದಯಾಸಮುದ್ರನಂತೆ. ಅವನೇ ವಿಷ ಕುಡಿದು ಗರಳಕಂಠನಾದ. ಅವನ ಕಂಠದಲ್ಲಿ ನಿನ್ನನ್ನು ಸುತ್ತಿಕೊಂಡಿದ್ದಾನಂತೆ. ಅವನಂತೆ ನಿನಗೆ ಕಂಠ ದಲ್ಲಿ ಗರಳವಿಲ್ಲದಿದ್ದರೂ ವಿಷದ ಕೋರೆಹಲ್ಲುಗಳಲ್ಲುಂಟು. ಕೊರಳಿಗೆ ಬಂದವರು ಅವನ ಕೊರಳಿಗೆ ಬಿದ್ದರೆ ಅವನು ನೀರಲ್ಲಿ ಮುಳುಗಿಸುವುದಿಲ್ಲ. ಅವನ ಕೊರಳಲ್ಲೇ ಇರುವ ನೀನು ಕೊರಳು ಕೊಯ್ಯುತ್ತೀಯಲ್ಲ! ನೀನು ದೇವರಾ? ದೇವರಾಗಿದ್ದರೆ ಕಲಿಕಾಲದಲ್ಲಿ ನಿನಗೂ ಕೆಟ್ಟ ಬುದ್ಧಿ ಬಂದಿತು, ಬಿಡು. ಕಲಿ ಕಾಲದಲ್ಲಿ ನೀನು ಜನಕ್ಕೆ ಕೆಡುಕು ಮಾಡಿದರೆ ನಿನ್ನನ್ನೂ ಅವರು ಬಿಡಲಿಕ್ಕಿಲ್ಲ. ಉಪಕಾರ ಮಾಡಿದವರಿಗೇ ಅಪಕಾರ ಮಾಡುತ್ತಾರೆ! ಕೋಪಾಕಾರ,

ರೌದ್ರಾವತಾರ ತಾಳಿದವರನ್ನು ಬಿಟ್ಟಾರೇನು? ಬಿಡಲಿಕ್ಕಿಲ್ಲ. ಆದುದರಿಂದ ನೀನು ಸುಮ್ಮನೆ ಬಂದ ದಾರಿಗೆ ಸುಂಕವಿಲ್ಲವೆಂದು ತೆರಳಿ ಬಿಡು. ನಿನಗೆ ಇನ್ನು ಮುಂದೆ ಯಾರೂ ಏನೂ ಮಾಡುವುದಿಲ್ಲ. ನಡೆ' ಎಂದು ತೆರಳಲು ಕೈಯಿಂದ ಸಂಜ್ಞೆ ಮಾಡಿದರು.

ಹಾವು ಹೆಡೆ ಮಡಚಿ ಹೊರಳಿ ಹೊರಟಿತು. 'ಪೋ, ಪೋ. ಇನ್ನು ಬರಬೇಡ. ತೆಂಗಿನಮರದಲ್ಲಿ ಸಿಂಯ್ಯಾಳ ಆಗಲಿ. ನಿನಗೆ ಮೊದಲು ಎರೆಯುತ್ತೇನೆ' ಎಂದು ಗೋವಿಂದರಾಯರು ಅದರ ಬೆನ್ನ ಹಿಂದೆಯೇ ಹೊರಟರು. ಅಂಗಳದ ಅಂಚಿನವರೆಗೆ ಅದು ಹರಿದುದು ತೋರಿತು ಅವರಿಗೆ. ಮತ್ತೆ ಕಾಣಸಲಿಲ್ಲ. 'ಎಲ್ಲಾದರೂ ಬಿಲ ಸೇರಿರಬೇಕು. ಮತ್ತೆ ಬಂದು ಏನಾದರೂ ಗದ್ದಲ ಎಬ್ಬಿಸೀತು. ಹಾವಿನ ಹಗೆತನ ಬಹಳ ವರುಷಗಳ ವರೆಗೆ ಇರುತ್ತದೆ' ಎಂದು ಬೋರ ನುಡಿದ. ತುಕ್ರ ಆದಕ್ಕೊಂದು ಉದಾ ಹರಣೆ ಕೊಟ್ಟ. 'ಅದ್ ಬರ‍್ಲಿ. ಆನ್ ಅದರ ಮಂಡೆ ಒಡೆಯದಿದ್ದರೆ ಆನ್ ಬ್ಯಾರಿಗಳ ಕುಟ್ಟೆ ಅಲ್ಲೆ' ಎಂದು ಅಹ್ಮದ್ ಬ್ಯಾರಿ ಹಾರಿಸಿದ. ಮಾತಿನಲ್ಲೇ ಸ್ವಲ್ಪ ಕಾಲ ಕಳೆದ ಮೇಲೆ ಅವರು ಹೊರಟು ಹೋದರು. ರಾತ್ರಿ ರಾಜ ನನ್ನು ಮನೆಯಲ್ಲಿಟ್ಟುಕೊಳ್ಳಲು ಅವರಿಗೂ ಧೈರ್ಯವಾಗಲಿಲ್ಲ. ಆದುದರಿಂದ ಬೇಗ ಊಟ ತೀರಿಸಿ ಅವನನ್ನು ಮುಂಡಾಜೆಗೆ ಕಳಿಸಿಕೊಡಬೇಕೆಂದೂ ನಿರ್ಧ ರಿಸಿದರು. ಅವನು ಹೊರಟಾಗ ಅವನ ಬೆನ್ನ ಹಿಂದೆಯೇ ಮಾತನಾಡುತ್ತಾ ಗೋವಿಂದರಾಯರು ಬಂದರು. ಯಾವಾಗಲೂ ರಸ್ತೆ ಮುಟ್ಟಿಸುತ್ತಿದ್ದವರು ಇಂದು ಒಂದು ಮೈಲಿನ ವರೆಗೂ ನಡೆದರು. 'ರಾಜ, ಇಂದು ಆದದ್ದು ಆಗಿ ಹೋಯ್ತು. ಇನ್ನು ಮುಂದೆ ನಾನು ಬದುಕಿರುವ ವರೆಗೆ ನನ್ನನ್ನು ಕೇಳದೆ ಯಾವ ಕೆಲಸಕ್ಕೂ ದುಡುಕಬಾರದು' ಎಂದು ಸಾರಿ ಹೇಳಿದರು.

ಸಪ್ಪಗೆ ಮೋರೆ ಮಾಡಿಕೊಂಡಿದ್ದ ರಾಜ ಉತ್ತರ ಕೊಡದೆ ಸಮ್ಮತಿ ಸೂಚಕವಾಗಿ ತಲೆ ಅಲ್ಲಾಡಿಸಿದ.

ಸ್ವಲ್ಪ ಹೊತ್ತಿನ ಮೇಲೆ ಮತ್ತೆ ಗೋವಿಂದರಾಯರು ಕೇಳಿದರು—'ಏನು, ನಿನಗೆ ಹಣದ ಅನಾನುಕೂಲತೆ ಬಹಳವಾಗಿದೆಯಾ? ನನ್ನೊಡನೆ ಬಿಚ್ಚಿ ಹೇಳು. ಮುಚ್ಚು ಮರೆ ಮಾಡಬೇಡ. ಅಂಥ ಕಷ್ಟ ಏನು ಬಂದಿದೆ ಹೇಳು.'

'ಇಲ್ಲಿಯ ವರೆಗೆ ಬಂದಿದೆ' ಎಂದು ಉತ್ತರ ಕೊಡುತ್ತ ತನ್ನ ಕುತ್ತಿಗೆ ತೋರಿಸಿದ ರಾಜ.

'ಎಂದರೆ, ಸಾಲ ಗೀಲ ಮಾಡಿದ್ದೇಯಾ?'

'ಆಗದೆ ಮತ್ತೆ ಹೇಗೆ ನಡೆಯಬೇಕು ಇದೆಲ್ಲ ಸನ್ಯಾಸಿ ಸಂಸಾರ?'

'ಸಾಲವಾಗಿದೆ' ಎಂಬ ರಹಸ್ಯವನ್ನು ರಾಜ ಒಡೆದಾಗ ಗೋವಿಂದ ರಾಯರ ಎದೆಯೊಡೆದಂತಾಯಿತು. ಸಾಲದಿಂದಲೇ ಅವರ ಹಿರಿಯರ ಆಸ್ತಿ ಮುಳುಗಿದ್ದೂ ಅವರ ಸ್ಮರಣೆಗೆ ಬಂದಿತು. ಮತ್ತೆ ಅದೇ ಗತಿ ಬಂದಿತಲ್ಲ ಎಂದು ಅವರು ತಲ್ಲಣಿಸಿದರು. ಅದನ್ನು ಪ್ರದರ್ಶಿಸದೆ, 'ಎಷ್ಟಾಗಿದೆ ಸಾಲ? ಬಹಳ ಆಗಿದೆಯಾ?' ಎಂದು ಪ್ರಶ್ನಿಸಿದರು.

'ಬಹಳವೇನಲ್ಲ. ಆದರೆ ಅವನ ಕಿಟಿ ಕಿಟಿ ಬಹಳವಾಗಿದೆ. ಏನು ಮಾಡ ಬೇಕೆಂದು ಗೊತ್ತಾಗುವುದಿಲ್ಲ. ಆಸ್ತಿ ಅಡವು ಹಾಕಿದರೆ ಹೇಗೆ, ಎಂಬ ವಿಚಾರ.'

'ಯಾರ ಆಸ್ತಿ ನೀನು ಅಡವು ಹಾಕುತ್ತೀ? ಇದು ನಿನ್ನದೇನು? ಯಾರು ಬೆಳಿಗ್ಗೆಯಿಂದ ಸಂಜೆಯ ವರೆಗೆ ದುಡಿದವರು? ಈ ಆಸ್ತಿಯಲ್ಲಿ ಇಷ್ಟು ವರುಷಗಳ ವರೆಗೆ ಯಾರು ಬೆವರು ಸುರಿಸಿದವರು? ಜ್ವರವೆಂದು ಲೆಕ್ಕಿಸಲಿಲ್ಲ. ವೃದ್ಧಾಪ್ಯವೆಂದು ಕೈಕಾಲು ಬಿಟ್ಟುಕೊಂಡು ಹಾಸಿಗೆಯ ಮೇಲೆ ಮಲಗಲಿಲ್ಲ. ಗಾಳಿ, ಬಿಸಿಲು, ಮಳೆಗಳಿಗೆ ಮೈ ಒಡ್ಡಿ ದುಡಿದವರು ಯಾರು? ಇದು ನಿನ್ನ ಆಸ್ತಿಯಲ್ಲ. ಅಡವು ಹಾಕಲಿಕ್ಕೆ ನಿನಗೆ ಅಧಿಕಾರವೇನಿದೆ? ಮಾರಾಟ ಮಾಡಲೂ ನಿನಗೆ ಅಧಿಕಾರವಿಲ್ಲ. ಇನ್ನು ಸಾಯುವ ಕಾಲಕ್ಕೆ ಮನೆಯಿಲ್ಲದೆ ಮತ್ತೆ ಉಡುಪಿಗೆ ತೆರಳಿ ಬ್ರಹ್ಮರಥದ ಕೊಟ್ಟಿಗೆಯಲ್ಲಿ ನಾವಿಬ್ಬರೂ ಬಿದ್ದು ಸಾಯಬೇಕೆಂದು ನಿನ್ನ ಮನಸ್ಸೆ?' ಎಂದು ರೇಗಿ ಹೇಳಿದರು ತಂದೆ.

ಮಗನ ಮೋರೆ ಮತ್ತೂ ಚಿಕ್ಕದಾಯಿತು.

ಮತ್ತೆ ನಾಲ್ಕು ಹೆಜ್ಜೆಯಿಟ್ಟ ಮೇಲೆ ಅವರು ನುಡಿದರು—'ರಾಜ, ಅಡವು ಅಥವಾ ಮಾರಾಟದ ಅದೊಂದು ಕೆಲಸಕ್ಕೆ ಕೈ ಹಾಕಬೇಡ. ಇಷ್ಟರ ವರೆಗೆ ಮಾಡಿದ್ದೆಲ್ಲ ಗುಡ್ಡಕ್ಕೆ ಮಣ್ಣು ಹೊತ್ತಂತಾಗುತ್ತದೆ. ಸಾಲಕ್ಕೆ ಏನಾದರೂ ಒಂದು ವಿಲೆವಾರಿ ಮಾಡೋಣ. ನೀನು ಇನ್ನೊಮ್ಮೆ ಯಾವಾಗ ಬರುತ್ತೀ?'

'ಸಂಬಳ ಆದ ಮೇಲೆ.'

'ಸಂಬಳ ಆದ ಮೇಲೆ ಬಾ. ಸಾಲ ತೀರಿಸಲು ನಾನೊಂದು ಉಪಾಯ ಹೇಳುತ್ತೇನೆ' ಎಂದು ಅವನಿಗೆ ವಿಶ್ವಾಸದ ಆಶ್ವಾಸನ ಕೊಟ್ಟು ಮನೆಗೆ ಮರಳಿ ದರು. ಮುಖಮಂಟಪದಲ್ಲೇ ಕುಳಿತಿದ್ದರು ತಾಯಿ ಮತ್ತು ಕಿರಿಮಗ. ಗೋವಿಂದ

ರಾಯರು ಮೆಟ್ಟಿಲು ಏರಿ ಬಂದುದನ್ನು ಕಂಡೊಡನೆಯೇ ಸೀತಮ್ಮನವರು ಸೆರಗಿನಿಂದ ಕಣ್ಣುಗಳನ್ನೊರಸಿಕೊಂಡರು. ಅದು ಕಣ್ಣಿಗೆ ಬಿದ್ದುದರಿಂದ, 'ಯಾಕಳುತ್ತಿದ್ದೀ? ನಿನಗೇನಾಯಿತು ಈಗ?' ಎಂದು ಅವರು ಸಿಟ್ಟಾದರು.

'ನನಗೆ ಏನೂ ಆಗಲಿಲ್ಲ. ಮೊನ್ನೆ ಜ್ವರ ಬಂದಾಗ ನಾನು ಕಣ್ಮುಚ್ಚಿದ್ದರೆ ಒಳ್ಳೆಯದಾಗುತಿತ್ತು. ಇದನ್ನೆಲ್ಲ ನೋಡಲು ದೇವರು ಇನ್ನೂ ಇಟ್ಟಿದ್ದಾನೆ.'

'ಆಯ್ತೇನೀಗ?'

'ಆಗುವುದೇನು? ಮೋಹನನೂ ಹೋಗುತ್ತಾನಂತೆ!'

ಎದೆಗೆ ಚೂರಿ ನೆಟ್ಟಂತಾಯಿತು ಗೋವಿಂದರಾಯರಿಗೆ. ಅವರು ತಬ್ಬಿಬ್ಬಾದರು. ಮೋಹನನ ಕಡೆ ಅವರ ದೃಷ್ಟಿ ಹರಿಯಿತು. ಮುಖ ಮಂಟಪದ ದಂಡೆಯ ಮೇಲೆ ಅವನು ಕುಳಿತಿದ್ದ. ಚೈರಾಸ್ ಮಾತ್ರ ಉಟ್ಟಿದ್ದುದರಿಂದ ಕೈ ಮೈ ಎಲ್ಲ ಕಾಣುತ್ತಿತ್ತು. ದುಂಡು ದುಂಡು ಕೈಕಾಲು. ಹತ್ತು ಹದಿನಾರು ವರುಷದ ಎಳೆಯ ಹುಡುಗ. ಎಳೆ ಬಾಳೆಯ ದಿಂಡಿನಂತಿದ್ದ. ಎತ್ತಲೋ ದೃಷ್ಟಿ. ಏನೋ ವಿಚಾರ. ಯಾವ ಯೋಚನೆ ಮಾಡುತ್ತಿದ್ದಾನೆ ಇವನು? ಅವನ ಕೆದರಿದ ತಲೆಗೂದಲಿನ, ತಲೆಬುರುಡೆಯೊಳಗಿನ ಮಿದುಳಲ್ಲಿ ಏನು ನಡೆಯುತ್ತದೆ? ಅವನ ಮೋರೆ ನಿಸ್ತೇಜವೇಕಾಗಿದೆ? ಈ ಪ್ರಶ್ನೆಗಳು ಗೋವಿಂದರಾಯರ ತಲೆಯಲ್ಲಿ ಮಳೆಗಾಲದ ಮಿಂಚುಗಳಂತೆ ಮಿಂಚಿದವು. ಹೆಂಡತಿಯ ಕಡೆ ನೋಡಿ, 'ಎಲ್ಲಿಗೆ ಹೋಗುತ್ತಾನಂತೆ?' ಎಂದು ಕೇಳಿದರು.

'ಎಲ್ಲಿಗಾದರೂ. ಅವನಿಗೆ ಇಲ್ಲಿ ಈ ಮನೆಯಲ್ಲಿರಲು ಭಯವಾಗುತ್ತದೆಯಂತೆ.'

'ಇಷ್ಟೇ ಏನು? ಅವನೊಬ್ಬನೇ ಇದ್ದಾನಾ ಈ ಮನೆಯಲ್ಲಿ? ನಾವಿದ್ದೇವಲ್ಲ? ನಾವಿರುವವರೆಗೆ ಭೀತಿ ಏತರದು?' ಎಂದು ನುಡಿದು, 'ಹೌದೋ, ನಿನಗೆ ಅಷ್ಟು ಹೆದರಿಕೆಯೇನು? ಈಗ ದೊಡ್ಡವನಾಗಿದ್ದಿ?' ಎಂದು ಮಗನನ್ನುದ್ದೇಶಿಸಿ ಮಾತನಾಡಿದರು.

'ಇಲ್ಲ. ನಾನಿರುವುದಿಲ್ಲ.'

'ಏಕೆ ಇರುವುದಿಲ್ಲ?'

'ಏಕೆ ಇರಬೇಕು? ಈ ಜ್ವರ, ಈ ಹಾವುಗಳ ಕಾಟ, ಈ ಬಡತನದ ಕಷ್ಟ ಯಾರಿಗೆ ಬೇಕು? ಯಾರ ಮನೆಯಲ್ಲಿ ಏಕೆ ಇರಬೇಕು? ಯಾರ

ಯಾರ ಮನೆಯಲ್ಲಿ ಯಾರು ಯಾರು ಇರಬೇಕು ? ನಿಮಗಾದರೆ ಬಿಟ್ಟದ್ದಲ್ಲ. ನನಗೇನು? ನಾನು ಏಕಿರಬೇಕು ? ಅದಕ್ಕೇ ನಾನು ಹೊರಡುತ್ತೇನೆ.'

ಮೋಹನನ ಒಂದೊಂದು ಮಾತು ಒಂದೊಂದು ಬಾಣದಂತೆ ಗೋವಿಂದ ರಾಯರ ಮೈ ಮನಸ್ಸುಗಳಿಗೆ ನೆಟ್ಟಿತು. ಒಂದೊಂದನ್ನೇ ಕಿತ್ತು ತಡವರಿಸಿ ಕೊಳ್ಳುವವರಂತೆ ಅವರು ಸಮಾಧಾನದಿಂದಲೇ ನುಡಿದರು—

'ನೀನು ಎಲ್ಲಿಗೆ ಹೋಗುತ್ತಿ ?'

'ಎಲ್ಲಿಗಾದರೂ.'

"ಎಲ್ಲಿಗಾದರೂ ಎಂದರೆ? 'ಎಲ್ಲಿಗಾದರೂ' ಎಂದು ಹರಿ ಹೇಳಿದ್ದರೆ ಅದಕ್ಕೊಂದು ಅರ್ಥವಿತ್ತು. ಹರಿಯಂತೆ ನೀನು ನಾಲ್ಕಕ್ಷರ ಕಲಿತಿಲ್ಲವಲ್ಲ?"

ಅವರ ಮಾತು ಪೂರ್ಣ ಮುಗಿಯುವುದರೊಳಗೇ ಮೋಹನ ನಿಲ್ಲಿಸಿ ನುಡಿದ—'ನೀವು ನನಗೆ ಕಲಿಸಲಿಲ್ಲವಲ್ಲ? ಶಾಲೆಗೆ ಕಳಿಸುತ್ತಿದ್ದರೆ ನಾನೂ ಕಲಿಯುತ್ತಿದ್ದೆ. ನನ್ನನ್ನು ಈ ಕಾಡಿಗೆ ಕರೆದುಕೊಂಡು ಬಂದು ಗೊಬ್ಬರ ಹೊರಲು ಹಚ್ಚಿದಿರಿ.'

ಗೋವಿಂದರಾಯರು ತಲೆಗೆ ಕೈಯಿಟ್ಟುಕೊಂಡು, 'ಹೌದು, ನನ್ನ ತಪ್ಪಾಯ್ತು' ಎಂದು ಬಿಸುಸುಯ್ದರು.

ಮೋಹನ ಮಾತಿಗೆ ಮಾತು ಪೋಣಿಸಿದ—'ಅವರೆಲ್ಲ ನಿಮ್ಮ ಮಕ್ಕಳು! ನಾನು ನಿಮ್ಮ ಮಗನಾ? ಎಲ್ಲೋ ದಾರಿಯಲ್ಲಿ ಬಿದ್ದಿದ್ದಿರಬೇಕು ನಾನು. ಎತ್ತಿಕೊಂಡು ಬಂದಿರಿ ಸಕಾಲಕ್ಕೆ. ಅದಕ್ಕೇ ನನಗೆ ಈ ಗತಿ ಬಂತು. ಅತ್ತ ವಿದ್ಯೆಯೂ ಇಲ್ಲ, ಇತ್ತ ಗದ್ದೆಯೂ ಇಲ್ಲ. ತ್ರಿಶಂಕು ಸ್ವರ್ಗ. ಕೈಯಲ್ಲಿ ಒಂದು ಗೆರಟೆ ಕೋಲು ಹಿಡಿದರೆ ಸರಿ ಇನ್ನು. ಅಲ್ಲಿಗೇ ಬಂದಿದೆ. ಸಾಬೂನಿ ಗೊಂದು ಮುಕ್ಕಾಲು ಬೇಕಾದರೆ ನಿಮ್ಮನ್ನು ಬೇಡಬೇಕು ನಾನು.'

'ಇಷ್ಟು ಮಾತಾಡಿದವನು ಅಪ್ಪಯ್ಯನಿಗೆ ನಾಲ್ಕು ಹೊಡೆದು ಬಿಡು. ಎಂದರೆ ಹುಟ್ಟಿಸಿದ್ದಕ್ಕೆ ಸಾರ್ಥಕವಾಗುತ್ತದೆ' ಎಂದರು ಸೀತಮ್ಮ.

'ಅಂಥ ಮಗನನ್ನು ಹುಟ್ಟಿಸಿದಿರಿ ಏತಕ್ಕೆ?' ಎಂದು, ಯಾವ ಮಾತನ್ನಾಡಬೇಕು ಯಾವ ಮಾತನ್ನಾಡಬಾರದು ಎಂಬ ಸಾರಾಸಾರ ವಿಚಾರ ವಿಲ್ಲದ ಮೋಹನ ನುಡಿದು ಬಿಟ್ಟ.

'ಅವನಿಗೆ ಹುಡುಗಬುದ್ಧಿ. ನಿನಗೂ ಹುಡುಗಾಟಿಕೆಯಾ? ನೀನು ಸ್ವಲ್ಪ ಸುಮ್ಮಗಿರು ನೋಡೋಣ' ಎಂದು ಹೆಂಡತಿಯನ್ನು ಗೋವಿಂದ

ರಾಯರು ತಡೆದರು.

ಇನ್ನು ಬುದ್ಧಿ ಬರುತ್ತದೆ ಕೊಳ್ಳಿಯಲ್ಲಿ! ವರುಷ ಹದಿನಾರು ದಾಟಿತು. ನಿಮಗೆ ಹೇಗೆ ಮಾತನಾಡುತ್ತಿದ್ದಾನೆ ನೋಡಿದಿರಾ? ರಾಜ ಇದ್ದಿರಬೇಕಿತ್ತು ಈಗ. ಅವನ ಹಲ್ಲು ಒಂದೂ ಉಳಿಯುತ್ತಿದ್ದಿಲ್ಲ. ಅವನು ಮನೆಗೆ ಬಂದಾಗ ಇಲಿಯ ಹಾಗೆ ಒಳಗೇ ಇರುತ್ತಿದ್ದ. ಅವನು ರಸ್ತೆ ಹಿಡಿದನೆಂದು ಗೊತ್ತಾದ ಕೂಡಲೇ ಇಲಿ ಹೋಗಿ ಹೆಬ್ಬುಲಿಯಾಗುತ್ತಾನೆ.'

'ಥೂ, ನೀನು ಮಾತನಾಡಬೇಡ.'

'ಇಲ್ಲ, ನಾನು ಮಾತನಾಡುವುದಿಲ್ಲ. ನನಗೇಕೆ? ನೀವು ಏನು ಬೇಕಾದರೂ ಮಾಡಿಕೊಳ್ಳಿ' ಎಂದು ಉಸುರಿ ಸೀತಮ್ಮ ಒಳಗೆ ಹೊರಟು ಹೋದರು.

ಗೋವಿಂದರಾಯರು ಮೂಗಿಗೆ ಒಂದು ಚಿಟಿಕೆ ನಸ್ಯ ಏರಿಸಿ ಮತ್ತೆ ಶಾಂತಚಿತ್ತದಿಂದಲೇ ಮೋಹನನ ಮುಂದೆ ಮೋಹದ ಸಂಗತಿಗಳನ್ನು ಅರುಹಿದರು— 'ಹೌದಾ ಮೋಹನಾ?'

ನಿರುತ್ತರ

'ಮೋಹನಾ, ಮಾತನಾಡು. ಸಿಟ್ಟಾಗಬೇಡ. ಗಂಡ ಹೆಂಡತಿಯ ಸಿಟ್ಟು, ಅಣ್ಣ ತಮ್ಮಂದಿರ ಸಿಟ್ಟು, ತಂದೆ ಮಕ್ಕಳೊಳಗಿನ ಸಿಟ್ಟು, ಇವೆಲ್ಲ ಒಂದು ಕ್ಷಣಮಾತ್ರದ್ದು. ನೀನು ಏನೆಂದರೂ ನನಗೆ ಸಿಟ್ಟಿಲ್ಲ. ಈಗ ಹೇಳಿದ್ದಕ್ಕೂ ಸಿಟ್ಟು ಮಾಡಲಾರೆ. ಏಕೆಂದರೆ, ನೀನು ನುಡಿದಂತೆ ನಿನಗೂ ನಾಲ್ಕಕ್ಷರ ಕಲಿಸದೆ ಇದ್ದದ್ದು ನನ್ನ ತಪ್ಪೇ. ಆದರೆ, ಅವರ ಮೇಲೆ ಅಧಿಕ ಪ್ರೇಮ ವಿದ್ದುದರಿಂದ ಅವರಿಗೆ ನಾನು ಕಲಿಸಿದ್ದೂ ಅಲ್ಲ. ಶಾಲೆಗೆ ನಿನ್ನನ್ನು ಕಳಿಸದೆ ಇದ್ದದ್ದು ತಾತ್ಸಾರದಿಂದಲೂ ಅಲ್ಲ. ಕಲಿಸಲು ಆಗಲಿಲ್ಲ. ನೀನು ಚಿಕ್ಕವ ನಿದ್ದಾಗಲೇ ಇತ್ತ ಬಂದುಬಿಟ್ಟೆವು. ಇಲ್ಲಿ ಸಮೀಪ ಶಾಲೆ ಇರಲಿಲ್ಲ. ಪರ ಊರಿನಲ್ಲಿರುವ ಶಾಲೆಗಳಿಗೆ ಕಳಿಸಲು ಅನುಕೂಲವಾಗಲಿಲ್ಲ. ಅಣ್ಣನ ಕೈ ಕೂಡ ಗಿಡ್ಡವಾಯಿತು ದಿನದಿಂದ ದಿನಕ್ಕೆ. ಹೀಗಾಗಿ ದಿನಗಳು ಕಳೆದವು. ದೊಡ್ಡವನಾಗಲಿ, ಏನಾದರೂ ಒಂದು ದಾರಿಗೆ ಹಚ್ಚೋಣ ಎಂದು ಮನಸ್ಸಿನೊಳಗೇ ಮಂಡಿಗೆ ತಿನ್ನುತ್ತಿದ್ದೆ. ಏನೋ ಪೂರ್ವಜನ್ಮದ ವಾಸನಾಫಲದಿಂದ ದೊಡ್ಡಣ್ಣ ಈ ಆಸ್ತಿ ಮಾಡಿದ. ಪೂರ್ವ ಜನ್ಮದ ಸುಕೃತವಲ್ಲದಿದ್ದರೆ ಇದು ಅವನ ಕೈಗೆ ಲಭಿಸಿದ್ದಾದರೂ ಹೇಗೆ? ನಾವು ಎಲ್ಲಿ ಹುಟ್ಟಿದವರು? ಎಲ್ಲಿ ಬೆಳೆದವರು? ಈ ಮಲೆನಾಡಿಗೆ ಇಷ್ಟರವರೆಗೆ ಯಾರು ಕಾಲಿಟ್ಟಿದ್ದಾರೆ?

ಏನೋ ದೈವದಾಟ ಇದೆ ಇದರಲ್ಲಿ. ಅದೇ ಎಳೆದುಕೊಂಡು ಬಂದಿತು ನಮ್ಮನ್ನೆಲ್ಲ. ನಾನಂತೂ ಮುದುಕನಾದೆ. ಇನ್ನು ಎಷ್ಟು ವರುಷ ಬದುಕುತ್ತೇನೆ ನಾನು? ತೆಂಗಿನಮರಗಳಲ್ಲಿ ಫಲಬಿಡುವ ಹೊತ್ತಿಗೆ, ಕಂಗುಗಳಲ್ಲಿ ಬೆಳೆ ಬರುವ ವೇಳೆಗೆ ನಾನು ಉಳಿಯುವುದೂ ಸಂಶಯ. ನನಗಷ್ಟು ಭರವಸೆ ಇಲ್ಲ. ನಾನು ಕಣ್ಮುಚ್ಚಿದ ಮೇಲೆ ನೀನಾದರೂ ಇಲ್ಲಿ ಉಳಿದು ಅಣ್ಣನಿಗೆ ನೆರವಾಗಬಹುದೆಂದು ಒಂದು ಆಶೆಯನ್ನಿಟ್ಟುಕೊಂಡಿದ್ದೆ. ಏಕೆಂದರೆ, ಶಿವರಾಯನಂತೂ ಮೂಲ್ಕಿ ಗಟ್ಟಿಯಾಗಿ ಹಿಡಿದ. ಹರಿ ಪರದೇಶಿ. ಗಾಂಧೀ ಪಾರ್ಟಿಯಲ್ಲಿ ಸೇರಿ ಸರ್ವಸ್ವವನ್ನೂ ತ್ಯಾಗ ಮಾಡಿದ್ದಾನೆ. ಅವನಿಗೆ ಯಾವುದರ ಮೇಲೆಯೂ ಆಶೆಯಿಲ್ಲ. ಜೀವದ ಮೇಲೆಯೇ ಅವನಿಗೆ ಆಶೆ ಇಲ್ಲದ ಬಳಿಕ ಆಸ್ತಿ, ಪಾಸ್ತಿ, ನೌಕರಿ, ದುಡ್ಡು ದುಗ್ಗಾಣಿ, ಇವುಗಳನ್ನೆಲ್ಲ ಎಲ್ಲಿ ಲಕ್ಷಿಸುತ್ತಾನೆ? ಯಾರ ಲಕ್ಷವೂ ಇಲ್ಲ ಅವನಿಗೆ. ಅವನು ಇಲ್ಲಿ ಇರಲಾರ. ಇದ್ದರೂ ಬದುಕಲಾರ. ಅಷ್ಟು ನಿತ್ರಾಣಿ. ಆದುದರಿಂದ ನೀನು ಇಲ್ಲಿ ಉಳಿದರೆ ಅಣ್ಣನಿಗೊಂದು ಊದುಗಂಬವಾಗಬಹುದೆಂದು ನನ್ನ ಕಲ್ಪನೆಯಾಗಿತ್ತು. ಆದು ಹುಚ್ಚು ಕಲ್ಪನೆಯೆಂದು ಇಂದು ಗೊತ್ತಾಯಿತು.'

ಸ್ವಲ್ಪ ಹೊತ್ತು ಅವರು ತಡೆದು ಬೈರಾಸಿನಿಂದ ಮೋರೆ ಮೈಗಳನ್ನು ಒರಸಿಕೊಂಡರು. ಮೋಹನ ತುಟಿ ಬಿಚ್ಚಲಿಲ್ಲ. ತಂದೆಯೇ ಮಾತನಾಡಿದರು–

'ನೀನು ಇಂದು ಈ ರೀತಿ ನನ್ನ ಭ್ರಮನಿರಸನಗೊಳಿಸಿದುದರಿಂದ ಕೆಡುಕಾಗಲಿಲ್ಲ. ಹಿತವೇ ಆಯ್ತು. ದೇವರೇ ನಿನಗೆ ಆ ರೀತಿ ಬುದ್ಧಿ ಕೊಟ್ಟ. ನಿನಗೆ ಬುದ್ಧಿ ಇದೆ. ನೀನು ಮೊದ್ದಲ್ಲ. ಈಗ ಇದು ಹುಡುಗಬುದ್ಧಿ, ನಿಜ. ನೀನು ಬೆಳೆದಂತೆ, ನಿನ್ನ ಅನುಭವ ಬೆಳೆದಂತೆ, ಆ ಬುದ್ಧಿ ಪರಿಪಕ್ವವಾಗುತ್ತದೆ. ಜೀವನದ ಅನುಭವವೇ ಬುದ್ಧಿ ಇಲ್ಲದವರಿಗೆ ಬುದ್ಧಿಗಲಿಸುತ್ತದೆ. ಅದಕ್ಕಿಂತ ದೊಡ್ಡ ಪಾಠ ಬೇರೊಂದಿಲ್ಲ. ಜೀವನವೇ ಒಂದು ಶಾಲೆ. ಅದಕ್ಕಿಂತ ಬೇರೊಂದು ಶ್ರೇಷ್ಠವಾದ ಶಾಲೆಯಿಲ್ಲ. ಶಾಲೆ ಕಾಲೇಜುಗಳಿಗೆ ತೆರಳಿ, ನಾಲ್ಕು ಇಂಗ್ಲಿಷ್ ಅಕ್ಷರಗಳನ್ನು ಓದಿದವರು ವಿದ್ಯಾವಂತರೆಂದು ತಿಳಿದೆಯಾ? ಬಿ. ಎ; ಎಂ. ಎ; ಐ. ಸಿ. ಎಸ್ ಎಂದು ತಮ್ಮ ಹೆಸರುಗಳ ಮುಂದೆ ಡಿಗ್ರಿಗಳನ್ನು ಬರೆದುಕೊಂಡವರೆಲ್ಲರೂ ಜ್ಞಾನಿಗಳೆಂದು ಹೇಳಬಲ್ಲೆಯಾ? ಕಲಿತವರೇ ಹೆಚ್ಚಾಗಿ ದೇಶದ್ರೋಹಿಗಳಾಗಿ ಬ್ರಿಟಿಷರ ಗುಲಾಮಗಿರಿ ಮಾಡುತ್ತಿದ್ದಾರೆ. ನಮ್ಮನ್ನೂ ಗುಲಾಮರನ್ನಾಗಿ ಮಾಡಿದ್ದಾರೆ. ಗಾಂಧೀ ಮಹಾತ್ಮನನ್ನು ಯಾರು

ಹಿಡಿದರು ? ನಿನ್ನಣ್ಣ ಹರಿಯನ್ನೂ ಜೈಲಿನಲ್ಲಿಟ್ಟವರು ಯಾರು ? ಮುಂಬಯಿ ಕಲಕತ್ತೆಗಳಲ್ಲಿ ಸ್ತ್ರೀ ಪುರುಷರ ಮೇಲೆ ಗುಂಡು ಹಾರಿಸಿದರೆಂದು ರಾಜ ಹೇಳಿದ್ದುದನ್ನು ಕೇಳಿದೆಯಲ್ಲ, ಯಾರು ಹಾರಿಸಿದರು ? ಎಲ್ಲ ನಮ್ಮವರೇ. ಇವರು ಕಲಿತವರು ನಿಜ. ಆದರೆ ಏನು ಕಲಿತವರು ? ಸ್ವಜನ ದ್ರೋಹ, ಸ್ವದೇಶ ದ್ರೋಹ, ಬಂಧು ದ್ರೋಹ, ಬಂಧನದಲ್ಲಿಟ್ಟ ದ್ರೋಹಗಳನ್ನು ಕಲಿತವರು ಎಂದು ಕರೆಯುವುದು ಸೊಗಸು. ಇವರು ವಿದ್ಯಾವಂತರಲ್ಲ. ಪುಸ್ತಕದ ಹಾಳೆಗಳನ್ನು ಮಗುಚಿ ಹಾಕಿದ ಮಾತ್ರಕ್ಕೇ ಅದು ವಿದ್ಯೆಯಾಗಲಾರದು. ಅಂತಹ ವಿದ್ಯೆ ನಿನ್ನಲ್ಲೇ ಇದೆ. ನಿನ್ನ ಎದೆಯಲ್ಲಿದೆ. ಪ್ರೀತಿ, ದಯೆ, ನಿನ್ನೆದೆಯಲ್ಲಿ ತುಂಬಿ ತುಳುಕಿದಾಗ ನೀನು ದೊಡ್ಡ ವಿದ್ಯಾವಂತನಾಗುತ್ತಿ. ಅವುಗಳಿಲ್ಲದ ವಿದ್ಯೆ ಮಣ್ಣುಮುದ್ದೆ.'

ಮೋಹನ ಆಲಿಸುತ್ತಿದ್ದ.

"ಇದು ನನ್ನ ಆಸ್ತಿಯಲ್ಲ. ನಾನು ಏಕಿರಬೇಕು ಇಲ್ಲಿ ?' ಎಂಬ ಭಾವನೆ ನಿನ್ನದು. ಇನ್ನೂ ಕೆಲವು ದಿನಗಳು ಉರುಳಿದರೆ 'ಅಣ್ಣನಿಗೆ ಆಸ್ತಿ ಮಾಡಿ ಕೊಟ್ಟರಿ. ನನಗೇನಿದೆ ?' ಎಂದು ನೀನು ಜರೆಯಬಹುದು. ಆದರೆ ನಿನಗೂ ಒಂದು ದೊಡ್ಡ ಆಸ್ತಿಯಿದೆ. ನಿನಗೂ ಕೈಕಾಲುಗಳೆಲ್ಲವನ್ನೂ ದೇವರು ಸರಿಯಾಗಿ ಕೊಟ್ಟಿದ್ದಾನೆ. ಯಾವ ಅಂಗಕ್ಕೂ ಊನವಿಲ್ಲ. ಇದೇ ದೊಡ್ಡ ಆಸ್ತಿ. ಈ ಆಸ್ತಿಯಲ್ಲಿ ಬುದ್ಧಿಯ ಬೀಜ ಬಿತ್ತು. ದುಡಿ, ಬೆಳೆಸು. ಅಕ್ಕಿ ಬೆಳೆಸು, ಅನಾನಾಸ್ ಬೆಳೆಸು. ಒಂದು ಎಮ್ಮೆ ಕಟ್ಟಿ ಮೇಯಿಸು. ಎಮ್ಮೆಯ ಹಾಲನ್ನು ನಾಲ್ಕು ಮಕ್ಕಳಿಗೆ ನೀನು ಕೊಟ್ಟರೆ ಎಂ. ಎ. ಕಲಿತವರಿಗಿಂತ ಹೆಚ್ಚು ಜನಹಿತಕಾರ್ಯ ನೀನು ಸಾಧಿಸಿದೆಯೆಂದು ನಾನು ತಿಳಿಯುತ್ತೇನೆ. ದನ ಸಾಕಲು, ದನದ ಸಗಣಿಯ ಗೊಬ್ಬರ ಮಾಡಲು, ಎತ್ತುಗಳನ್ನು ಗದ್ದೆಗಳಲ್ಲಿ ಕಟ್ಟಲು, ಆ ಗದ್ದೆಗಳಲ್ಲಿ ಬಿತ್ತಿ ಬೆಳೆಸಿದ ಅಕ್ಕಿ ಕುಟ್ಟಲು ನೀನು ಕಲಿತರೆ ಅದೂ ಒಂದು ವಿದ್ಯೆಯೇ. ನೀನೂ ವಿದ್ಯೆ ಗಳಿಸಿದೆಯೆಂದು ನಾನು ಹೆಮ್ಮೆಪಡುತ್ತೇನೆ. ಕೋಟಿ ವಿದ್ಯೆಗಳಿಗಿಂತ ಮೇಟಿವಿದ್ಯೆಯೇ ಮೇಲು. ನೀನು ಸಾವಿರಾರು ರೂಪಾಯಿ ತೆತ್ತರೂ ಈ ವಿದ್ಯೆ ನಿನಗೆ ಲಭಿಸಲಾರದು. ಇದು ಅಸಹ್ಯವಲ್ಲ. ನಮ್ಮ ಹಿರಿಯರು ಗೋಪಾಲಕರು. ಗೋವುಗಳನ್ನು ಪೂಜಿಸಿದರು. ಗೋವುಗಳನ್ನು ಪೂಜಿಸಿ ನಮ್ಮ ಹಿರಿಯರೇ ವೇದ ಉಪನಿಷತ್ತುಗಳ ಜ್ಞಾನ ಬೀರಿದರು. ಅವರು ಇಂದಿನ ಕಾಲೇಜುಗಳಿಗೆ ತೆರಳಿದ್ದಿರಲಿಲ್ಲ. ತಿಳಿ.

ನೀನು ತಿಳಿದೆಯೋ ಇಲ್ಲವೋ? ನೀನಿನ್ನೂ ಎಳೆಬಾಳೆ. ನಾನಾಡಿದುದೆಲ್ಲ ನಿನಗೆ ಅರ್ಥವಾಗಲಿಕ್ಕಿಲ್ಲ; ಆದರೆ ತಿಳಿದುದನ್ನು ನೆನಪಿನಲ್ಲಿಟ್ಟುಕೋ. ಯಾವಾಗಲೂ ನಾನು ಹೇಳಲಾರೆ. ಹೇಳಲು ಬಹಳ ಕಾಲ ಬದುಕಲಾರೆ. ಆದರೆ, ನೀನು ದೊಡ್ಡವನಾದ ಬಳಿಕ, ಎಂದಾದರೊಂದು ದಿನ ನನ್ನ ಮಾತು ಸತ್ಯವೆಂದು ತೋರಬಹುದು ನಿನಗೆ. ”

ಇನ್ನೇನೇನು ಹೇಳುವವರಿದ್ದರೊ ಏನೋ! ಯಕ್ಷಗಾನ ಆಟದ ಮಧ್ಯೆ ಸ್ತ್ರೀವೇಷ ಬಂದಂತೆ ಬಂದು ‘ ಸಾಕು ನಿಮ್ಮ ರಾಮಾಯಣ. ನೀವು ಹೇಳಿದುದನ್ನೆಲ್ಲ ಈ ಕಿವಿಯಿಂದ ಕೇಳಿ ಆ ಕಿವಿಯಿಂದ ಬಿಟ್ಟ. ಅವನ ಗುಣ ಸ್ವಭಾವ ನನಗೆ ನೀವು ಹೇಳಬೇಕಾ? ಏಳಿ, ಏಳಿ, ಊಟಕ್ಕೆ’ ಎಂದು ಊಟಕ್ಕೆ ಎಬ್ಬಿಸಿದರು ಸೀತಮ್ಮ.

ಮಕ್ಕಳ ಸ್ವಭಾವ ತಾಯಿಗೆ ಹೊಳೆದಂತೆ ಇನ್ನಾರಿಗೆ ತಿಳಿದೀತು ? ಮಗು ಹೊಟ್ಟೆಯಲ್ಲಿದ್ದಾಗಲೇ ಗೊತ್ತಾಗುತ್ತದೆ ಅವರಿಗೆ ಅದರ ಗುಣ. ಹೊಟ್ಟೆಗೆ ಎರಡು ಮೂರು ತಿಂಗಳಾಗುವಾಗಲೇ ಅದು ಬೇಕು ಇದು ಬೇಕು ಎಂದು ಮಗು ಬಯಸುತ್ತದೆ. ಆ ಬಯಕೆಗಳ ಮೇಲಿಂದಲೇ ಮಗುವಿನ ಶೀಲವನ್ನು ಊಹಿಸುವರು. ಹೊಟ್ಟೆಯಲ್ಲಿ ಅತ್ತಿತ್ತ ಮಗು ಸರಿದಾಗ ಅವರು ಏನನ್ನೋ ತಿಳಿಯುವರು. ಮೂರು ವರುಷದ ಮಗುವಿನ ಬುದ್ಧಿ ಪರಿಕಿಸುವರು. ಏಳು ವರುಷ, ಹದಿನಾಲ್ಕು ವರುಷಗಳ ಮೆಟ್ಟಲುಗಳನ್ನೇರಿದಾಗ ಆಗುವ ಬದಲಾವಣೆಗಳನ್ನು ನಿರೀಕ್ಷಿಸುವರು. ಆ ಮೇಲೆ ಅವರ ನಡೆ ನುಡಿಗಳಿಂದ ಹಾವಭಾವಗಳಿಂದ ಗುಣ ನಿರ್ಣಯಿಸುವರು. ಹಲಸಿನ ಬೀಜವನ್ನು ಸೆರಗಿನಲ್ಲಿ ಗಂಟು ಕಟ್ಟಿದಂತೆ ಹಣ್ಣನ್ನು ಕಟ್ಟುವುದು ಅಶಕ್ಯ. ಕಟ್ಟಿ ಕೊಳ್ಳಲೆತ್ನಿಸುವುದರಲ್ಲಿ ಅರ್ಥವೂ ಇಲ್ಲ. ಅವರವರ ಸ್ವಬುದ್ಧಿಗೆ ತಿಳಿದಂತೆ ಮಾಡಲು ಬಿಟ್ಟು ಬಿಡುವುದೇ ಪರಮೋಚಿತವೆಂದು ಸೀತಮ್ಮನವರ ಜೀವನದ ಅನಂತ ಅನುಭವಗಳಲ್ಲೊಂದಾಗಿದೆ. ಆದುದರಿಂದಲೇ ಅವರು ಆ ರೀತಿ ಹೇಳಿದರು.

ಸೀತಮ್ಮನವರು ಹೇಳಿದಂತೆ ಗೋವಿಂದರಾಯರು ಮಾಡಿದ ಉಪದೇಶವೆಲ್ಲ ಬೋರ್ಗಲ್ಲಿನ ಮೇಲೆ ಹೊಯ್ದ ನೀರಿನಂತೆಯೇ ಆಯಿತು. ಒಂದು ದಿನ ರಾತ್ರಿ ಬಂಗಾಡಿಪೇಟೆಯಲ್ಲಿ ನಡೆದ ತಾಳ ಮದ್ದಲೆಗೆ ಅವರು ತೆರಳಿದ್ದರು. ಬೆಳಿಗ್ಗೆ ಮನೆಗೆ ಮರಳಿದಾಗ ಸೀತಮ್ಮನವರು ಒಲೆಯ ಮುಂದೆ ಕುಳಿತು ತಲೆಯ ಮೇಲೆ ಎರಡೂ ಕೈಗಳನ್ನಿಟ್ಟುಕೊಂಡು ಅಳುತ್ತಿದ್ದರು.

'ಯಾಕೆ ಅಳುತ್ತಿದ್ದಿ? ನಿನ್ನ ಕಣ್ಣೀರು ನೋಡಿ ನನಗೆ ಸಾಕಾಗಿದೆ. ನಿನ್ನ ಕಣ್ಣುಗಳಲ್ಲಿ ಎಷ್ಟು ನೀರಿಟ್ಟಿದ್ದಾನೆ ದೇವರು?'—ರಾಯರು ಗದರಿಸಿದರು.

'ಮೋಹನ ಹೊರಟು ಹೋಗಿಬಿಟ್ಟ' ಎಂದು ಗದ್ಗದಿತ ಕಂಠದಿಂದ ಸೀತಮ್ಮ ತಿಳಿಸಿದರು.

'ಹೌದಾ? ನಿಜವಾ?'

'ಹೌದು, ನಿಜ. ಅವನ ಬಟ್ಟೆಬರೆ, ಚಿಕ್ಕ ಟ್ರಂಕ್ ಒಂದೂ ಇಲ್ಲ. ರಾತ್ರಿ ನನ್ನ ಸಮೀಪವೇ ಮಲಗಿದ್ದ. ಬೆಳಗುಮುಂಜಾನೆ ಎದ್ದು ದಾರಿ ಹಿಡಿದನೆಂದು ತೋರುತ್ತದೆ. ಮುಂಡಾಜೆಯ ವರೆಗೆ ಬೋರನನ್ನಾದರೂ ಅಟ್ಟಿರಿ.'

ಗೋವಿಂದರಾಯರು ಅಡಿಗೆಮನೆಯ ಅಗಳಿಯ ಮೇಲೆ ಕುಳಿತರು. 'ಯಾಕೆ ಕಳಿಸಬೇಕು ಬೋರನನ್ನು?' ಎಂದವರು ಪ್ರಶ್ನಿಸಿ ಅದಕ್ಕೆ ತಾವೇ ಉತ್ತರ ಕೊಟ್ಟರು—'ಅವನು ಸಿಗಲಿಕ್ಕಿಲ್ಲ. ಬೋರ ಕಂಡರೂ ಎಳೆದುಕೊಂಡು ಬರಲಿಕ್ಕಾಗುತ್ತದೇನು? ಎಳೆದು ತಂದರೂ ಮನಸ್ಸಿಲ್ಲವೆಂದ ಮೇಲೆ ನಿಲ್ಲಲಾರ. ಹಕ್ಕಿಯ ರೆಕ್ಕೆ ಬಲಿತ ಮೇಲೆ ಗೂಡಿನಲ್ಲೇ ಇರಬೇಕೆಂದು ತಾಯಿ ಬಯಸಿದರೆ ಅದು ಸಾಧ್ಯವಾ ಹೇಳು? ಅವನು ಮೂರಾರು ವರುಷದ ಮಗುವಲ್ಲ. ಬಳೆ ತೊಟ್ಟ ಹೆಣ್ಣೂ ಅಲ್ಲ. ಹೆಣ್ಣಾದರೆ ಯಾರಾದರೂ ಎಳೆದಾರೆಂದು ಭೀತಿ! ಅವನ ಬಗೆಗೆ ನಮಗೇಕೆ ಭಯ? ಬಿಡು. ಬಿಡು ಚಿಂತೆ. ನಿನಗೆ ಮರುಳು.'

'ಮಾಣಿಗೆ ನಾಲ್ಕು ಇಂಗ್ಲಿಷ್ ಅಕ್ಷರವೂ ಇಲ್ಲ. ಎಲ್ಲಿ ಹೋಗಿ ಏನು ಮಾಡುತ್ತಾನೆ?'

"ಇಂಗ್ಲಿಷ್ ಕಲಿತವರು ಉದ್ಧಾರ ಮಾಡಿದರು! ನಾಲ್ಕಕ್ಷರ ಇಂಗ್ಲಿಷ್ ಬಂದೊಡನೆಯೇ ಸರಸ್ವತಿ ಅವನಿಗೆ ಒಲಿಯಲಿಲ್ಲ. ಭಾಗ್ಯಲಕ್ಷ್ಮಿ ಬರಲಿಲ್ಲ. ಎದೆ ಸೀಳಿದರೆ ಒಂದಕ್ಷರವಿಲ್ಲದ ಎಷ್ಟು ಜನ ಪರವೂರಿಗೆ ತೆರಳಿ ಹೋಟ್ಲು ಇಟ್ಟು ಭಾಗ್ಯವಂತರಾಗಿಲ್ಲ! ಹರಿ ಊರಿಗೆ ಬಂದಾಗ ಏನೆಂದಿದ್ದ? 'ಅಪ್ಪಯ್ಯಾ, ಇಂದಿನ ಕಾಲಕ್ಕೆ ಕಾಶಿ, ಕೈಲಾಸ, ರಾಮೇಶ್ವರಗಳಿಗೆ ತೆರಳಿದರೂ ತಿಂಡಿ ತೀರ್ಥಕ್ಕೆ ಕಡಿಮೆಯಿಲ್ಲ. ಶಿವ, ಪಾರ್ವತಿ, ಗಜಾನನ ಟೀ ಕಾಫಿ ಕ್ಲಬ್‌ಗಳನ್ನು ಬದರಿಯಲ್ಲೂ ತೆರೆದಿದ್ದಾರೆ. ಇಂದಿನ ಕಾಲಕ್ಕೆ ಬಿಜಿನೆಸ್ ಎಂದರೆ ಹೋಟ್ಲು ಬಿಜಿನೆಸ್. ಅವರು ಗಳಿಸಿದ ಹಣ, ಅವರು ಮಾಡಿದ ಆಸ್ತಿ ಅಷ್ಟಿಷ್ಟಲ್ಲ. ಅವರ ಕೈ ಹಿಡಿದವರಿಲ್ಲ. ಅಷ್ಟ ಮಠಗಳನ್ನು ಬಗಲಿಗೆ ಹಾಕಿಕೊಳ್ಳುವ ಹಾಗಿದ್ದಾರೆ ಒಬ್ಬೊಬ್ಬರು' ಎಂದು ಹೇಳಿದ್ದ. ನಿನಗೆ ನೆನಪಿದೆಯಾ? ಎಲ್ಲ

ಅವನವನು ಹುಟ್ಟಿದ ಗಳಿಗೆ. ಶ್ರೀಕೃಷ್ಣ ಪರಮಾತ್ಮನ ಕೃಪೆ! ಒಳ್ಳೇದಾಗಿದ್ದರೆ ಅವನ ಹಣೆಬರಹ. ನಾವು ಅದನ್ನೇ ಬಯಸೋಣ. ಕೆಟ್ಟದಾದರೆ ಮನೆಗೆ ಒಮ್ಮೆಯಾದರೂ ಬಾರದೆ ಇದ್ದಾನಾ?"

ಆದರೂ, ಈಗ ಬಂದಾನು ಮತ್ತೆ ಬಂದಾನು ಎಂದು ಆಶಿಸಿದರು ಸೀತಮ್ಮ. ಅಡಿಗೆಮನೆಯಲ್ಲಿ ಕುಳಿತಾಗ ಮುಖಮಂಟಪದಲ್ಲಿ ಸ್ವಲ್ಪ ಶಬ್ದವಾದರೆ ಬಂದು ಹಣಕುವರು. ರಸ್ತೆಯಲ್ಲಿ ಯಾರಾದರೂ ಮಾತನಾಡಿದ್ದು ಕಿವಿಗೆ ಬಿದ್ದರೆ ಮುಖಮಂಟಪಕ್ಕೆ ಬಂದು ಆಲಿಸುವರು. 'ನಿಮ್ಮಲ್ಲಿ ಬಂದಿದ್ದನಾ? ನಿಮಗೇನಾದರೂ ಸುದ್ದಿ ಇದೆಯಾ?' ಎಂದು ಗುಲಾಬಿ, ಕಮಲೆಯರಿಗೆ ಪತ್ರ ಬರೆದರು. ರಾಜ ಬಂದಾಗ ಪ್ರಶ್ನಿಸಿದರು. ಶಿವರಾಯನಿಗೆ ಸುದ್ದಿ ಮುಟ್ಟಿಸಿದರು. ಆದರೆ ಮೋಹನನ ಪತ್ತೆಯಿಲ್ಲ. ಗೋವಿಂದರಾಯರು ತಮ್ಮ ದುಃಖ ನುಂಗಿಕೊಂಡರು. ಹಸಿಕಟ್ಟಿಗೆ ಒಲೆಗಿಟ್ಟಾಗ ಒಂದು ತುದಿಯಿಂದ ಒಸರುವ ರಸದಂತೆ ಸೀತಮ್ಮನವರ ಹೃದಯ ಬೆಂದು ಬಿಸಿನೀರು ಹೊರಸೂಸಿತು ಕಣ್ಣಿನಿಂದ. ರಾತ್ರಿ ನಿದ್ದೆಯೂ ಬರಲಿಲ್ಲ ಅವರಿಗೆ.

ನಿದ್ದೆ ಬಾರದ ಒಂದು ರಾತ್ರಿ ಮುಖಮಂಟಪದಲ್ಲಿ ಮನುಷ್ಯರ ಕಾಲ ಸಪ್ಪಳ ಕೇಳಿಸಿತು ಅವರಿಗೆ. ಆ ಮೇಲೆ 'ಅಮ್ಮಾ, ಅಮ್ಮಾ' ಎಂದು ಕರೆದಂತಾಯ್ತು. ಮಗನ ಧ್ವನಿಯನ್ನು ಗುರುತಿಸಿದರು ಸೀತಮ್ಮ. ಆದರೆ ಒಮ್ಮೆಯೇ ಬಾಗಿಲು ತೆರೆಯಲು ಭಯ. ಆದುದರಿಂದ 'ಯಾರೋ ಬಂದಿದ್ದಾರೆ, ಕರೆಯುತ್ತಿದ್ದಾರೆ' ಎಂದು ಹೇಳಿ ಗಂಡನನ್ನು ಎಬ್ಬಿಸಿದರು. ಚಿಮಣಿ ದೀಪ ಹೊತ್ತಿಸಿ ಗೋವಿಂದರಾಯರು ಬಾಗಿಲಿನ ಬಳಿ ಬಂದು 'ಯಾರು? ಯಾರು?' ಎಂದು ಎರಡು ಮೂರು ಸಲ ಕೇಳಿದರು.

'ಅಪ್ಪಯ್ಯಾ, ನಾನು. ಹರಿ.'

'ಓಹೋ ನೀನೋ?' ಎಂದು ಉದ್ಗರಿಸಿದ ಗೋವಿಂದರಾಯರು ಬಾಗಿಲು ತೆರೆದು, ಮುಖಮಂಟಪಕ್ಕೆ ಕಾಲಿಟ್ಟಾಗಲೇ 'ಮಧ್ಯರಾತ್ರಿಗೆ ಸೂರ್ಯ ಮೂಡಿದಂತಾಯಿತಲ್ಲ?' ಎಂದರು. ಇನ್ನೇನೋ ಹೇಳುವವರಿದ್ದರು. ಆದರೆ ಹರಿಯ ದುಸ್ತು ಕಂಡು ಆಶ್ಚರ್ಯವಾಯಿತು ಅವರಿಗೆ. ಖಾಕಿ ಚಲ್ಲಣ, ಖಾಕಿ ಅಂಗಿ, ಹೇಟು ಬೂಟುಗಳನ್ನು ಹಾಕಿದ್ದ. ಅಲ್ಲದೆ ಜೊತೆಗೆ ಅದೇ ಡ್ರೆಸ್ಸಿನ ಇನ್ನಿಬ್ಬರು.

'ಯಾರವರು?' ಎಂದು ಕೇಳಿದರು ಅವನ ತಂದೆ.

'ಅವರು ಧಾರವಾಡದ ನನ್ನ ಮಿತ್ರರು. ಇವರು ಕುಲಕರ್ಣಿ. ಇದು

ಅವರ ತಂಗಿ ಸುವಾಸಿನಿ.'

'ತಂಗಿ ಸುವಾಸಿನಿ?' ಎಂದು ತಬ್ಬಿಬ್ಬಾಗಿ ಕೇಳಿದರು ಅವರು. ಏಕೆಂದರೆ ತಂಗಿಯೆಂದರೆ ಪುಲ್ಲಿಂಗವಲ್ಲ. ಸುವಾಸಿನಿ ಎಂಬ ಹೆಸರೂ ಸ್ತ್ರೀಲಿಂಗವೇ. ಡ್ರೆಸ್ ಮಾತ್ರ ಗಂಡಸಿನದು.

'ಇದೇನು ವಿಚಿತ್ರ?' ಎಂಬ ಮಾತುಗಳು ಗೋವಿಂದರಾಯರ ಬಾಯಿಂದ ಜಗುಳಿದುವು.

'ಎಲ್ಲ ವಿಚಿತ್ರವೇ. ಈ ಡ್ರೆಸ್ ಹಾಕಿಕೊಳ್ಳದಿರುತ್ತಿದ್ದರೆ ಪೋಲೀಸರ ಕೈಗೆ ಬೀಳುತ್ತಿದ್ದೆವು. ಅವರ ಕಣ್ಣಿಗೆ ಮಣ್ಣೆರಚಿ ಬಂದೆವು. ಎಲ್ಲ ನಾಳೆ ಹೇಳುತ್ತೇನೆ ರಾಮಾಯಣ' ಎಂದು ಹರಿ ನುಡಿದ.

ಧಾರವಾಡ ಯಾವ ದೇಶ; ಬಂಗಾಡಿ ಯಾವ ಊರು? ಗುರುತಿಲ್ಲ, ಪರಿಚಯವಿಲ್ಲ. ಹೆಣ್ಣು ಹುಡಿಗಿ! ಈ ಕಣ್ಣು ಕಾಣದ ಕತ್ತಲೆಯಲ್ಲಿ ಪ್ರತ್ಯಕ್ಷವಾದುದನ್ನು ನೋಡಿ ಸೀತಮ್ಮನವರಿಗೆ ಅತ್ಯಂತ ಸೋಜಿಗವೆನಿಸಿತು. ತಮ್ಮ ಬಾಯಿಗೆ ಕೈಯಿಟ್ಟುಕೊಂಡು ಆ ಗಂಡು ಹುಡುಗಿಯನ್ನು ಮಿಕಿ ಮಿಕಿ ನೋಡುತ್ತಿದ್ದರು ಅವರು.

'ಸುವಾಸಿನೀ, ಒಳಗೆ ಹೋಗು. ಇಲ್ಲೇನೂ ಗಾಬರಿಯಿಲ್ಲ. ಇದು ನನ್ನ ಅಮ್ಮ, ಅಪ್ಪಯ್ಯ. ಬೇರೆ ಯಾರಿಲ್ಲ ಇಲ್ಲಿ. ಇರುವುದೆಲ್ಲ ಹುಲಿ, ಕರಡಿ, ತೋಳ ಹಾವುಗಳೇ' ಎಂದ ಹರಿ.

'ಅಮ್ಮಾ! ಅಬ್ಬ! ಅಬ್ಬ!' ಎಂದು ಸುವಾಸಿನಿ ಅಲ್ಲೇ ನಿಂತುಕೊಂಡಳು.

'ಹೋಗು ಹೋಗು. ಆ ಪ್ರಾಣಿಗಳೆಲ್ಲ ಮನೆಯೊಳಗಿಲ್ಲ. ಮನೆಯಲ್ಲೇನೂ ಹೆದರಿಕೆಯಿಲ್ಲ. ಇದು ನಿನ್ನ ಮನೆಯೆಂದೇ ತಿಳಿ' ಎಂದು ಮತ್ತೂ ತಿಳಿಸಿದ ಆ ಹುಡುಗಿಗೆ.

'ಬಾರಮ್ಮ' ಎಂದು ಕರೆದರು ತಾಯಿ.

ಸುವಾಸಿನಿ ತೊಟ್ಟ ಉಡುಪು ಬಿಚ್ಚಿ ಬೇರೆ ಸೀರೆಯನ್ನುಟ್ಟುಕೊಂಡಾಗ, 'ಇವಳು ಯಾವ ಊರಿನ ಚಿತ್ರಾಂಗದೆ?' ಎಂದು ಸೀತಮ್ಮನವರು ಯೋಚಿಸಿದರು. ಎಲ್ಲ ಬೆಳಗಾದ ಮೇಲೆ ಗೊತ್ತಾಗುತ್ತದಲ್ಲ ಎಂದು ಸುಮ್ಮನಾದರು.

ಆ ದಿನ ಬೇಗನೇ ಬೆಳಗಾಯಿತು. ಹಕ್ಕಿಗಳು ಚಿಲಿಪಿಲಿ ಉಲಿವ ಮೊದಲೇ ಗೋವಿಂದರಾಯರೆದ್ದು ಚಾಪೆಯ ಮೇಲೆ ಕುಳಿತು, ಹರಿ ಒಮ್ಮೆ ಬಂದಾಗ ತಂದಿದ್ದ ಬಿಳಿ ಕಂಬಳಿಯನ್ನು ಹೊದೆದುಕೊಂಡು, 'ಭಯ ನಿವಾರಣವು ಶ್ರೀ ಹರಿಯ ನಾಮಾ | ಜಯ ಪಾಂಡುರಂಗ ವಿಟ್ಠಲ ನಿನ್ನ ನಾಮಾ' ಎಂದು ಹರಿನಾಮ ಸ್ಮರಣೆಯನ್ನು ಸ್ಮರಿಸಿ ನುತಿಸಿದರು. ಉದಯರಾಗದ ಒಂದು ಸೊಲ್ಲು ಮುಗಿಯುವುದರೊಳಗೆ 'ಹರಿ, ಹರೀ' ಎಂದು ಸೀತಮ್ಮನವರೂ ಎದ್ದರು. ಮೈ ಮೈ ಕಾಣುವ ನಸುಕಿನ ಎಳೆ ಬೆಳಕಿಗೇ ಬಿಸಿನೀರಿನ ಕೊಟ್ಟಿಗೆಗೆ ಬಂದು ಮೊದಲಿನ ರಾತ್ರಿಯೇ ನೀರು ತುಂಬಿಸಿಟ್ಟಿದ್ದ ಗುಡಾಣದ ಒಲೆಗೆ ಮಡಲಿನ ಒಲಿಗಳನ್ನು ತಳ್ಳಿ ಬೆಂಕಿ ಹಚ್ಚಿದರು. ಸೋಗೆಯ ದಂಡಿನ ಒಣಗಿದ ಕೊತ್ತಳಿಗೆಗಳನ್ನೂ ತುರುಕಿದರು. ಬೆಂಕಿ ಭಗ್ಗೆಂದು ಪ್ರಜ್ವಲಿಸಿದೊಡನೆಯೇ ದೊಡ್ಡ ಕೊಳ್ಳಿಯನ್ನು ಎಳೆದು ತಂದು ಒಲೆಗೆ ತೂರಿದರು. ಪ್ರಾತರ್ವಿಧಿ ಮುಗಿಸಿದಾಗಲೇ ಅವರ ಸ್ವರ ಕೇಳಿದ ಬಾಗೀರಥಿ 'ಅಮ್ಮಾ, ಅಮ್ಮಾ' ಎಂದು ಕರೆಯಿತು. 'ಹೌದು, ನಾನೆದ್ದುದು ನಿನಗೆ ಗೊತ್ತಾಯಿತು. ಸ್ವಲ್ಪ ತಡೆ. ಏನು ಅವಸರ ನಿನಗೆ?' ಎಂದು ಕೊಟ್ಟಿಗೆಯಿಂದಲೇ ನುಡಿದು ಮತ್ತೆ ಮನೆಗೆ ಬಂದರು. ರಾತ್ರಿ ಉಳಿದ ಅನ್ನ ಹುಳಿ ಸಾರುಗಳನ್ನೆಲ್ಲ ಅಕ್ಕಚ್ಚಿಗೆ ಕೂಡಿಸಿ ಬಾಗೀರಥಿಯ ಮುಂದೆ ತಂದಿಟ್ಟರು. ಅದು ಗುಟುಕು ಗುಟುಕು ಎಳೆದು ಸುರಿದಾದ ಮೇಲೆ ಹಟ್ಟಿಯ ಅಟ್ಟದಿಂದ ಬೈಹುಲ್ಲನ್ನು ಎಳೆದು ಬೈಪಣೆಗೆ ಕೊಡಹಿದರು.

ಗೋಸೇವೆ ಮುಗಿದ ಬಳಿಕ ಪತಿ ಮಕ್ಕಳ ಸೇವೆಗೆ ಆರಂಭ. ಹಟ್ಟಿಯಿಂದ ಮರಳಿದಾಗಲೇ ಸಗಣಿ ಮುದ್ದೆ ಹಿಡಿದುಕೊಂಡು ಬಂದು ಅಡಿಗೆ ಮನೆ ಶುದ್ಧ ಮಾಡುವುದೂ ಅವರ ಪದ್ಧತಿ. ಆ ಮೇಲೆ ಕಾಫಿಗೆ ಸಿದ್ಧತೆ. ಅವರಿಗಾಗಲಿ ಗೋವಿಂದರಾಯರಿಗಾಗಲಿ ಕಾಫಿ ಕುಡಿದರೇ ಸಾಕು. ವಯಸ್ಸಾದುದರಿಂದ ಬೆಳಿಗ್ಗೆ ತಿಂಡಿ ತಿಂದರೆ ಜೀರ್ಣವೂ ಆಗುವುದಿಲ್ಲ. ಆದರೆ ಮಕ್ಕಳಿಗೆ ತೀರ್ಥದೊಂದಿಗೆ ಪ್ರಸಾದ ಇಷ್ಟ. ಆದ್ದರಿಂದ ಮಕ್ಕಳು ಬಂದಾಗ ಅವರು ಕಾಫಿಯೊಂದಿಗೆ ಬಾಯಾಡಿಸಲು ಏನಾದರೂ ತಿಂಡಿ ಮಾಡದೆ ಇಲ್ಲ. ಅದರಲ್ಲೂ ಈಗ ಹರಿ ಅಪರೂಪಕ್ಕೆ ಬಂದಿದ್ದಾನೆ. ದೂರದ ಮಿತ್ರರನ್ನು

ಸಂಗಡ ಕಟ್ಟಿಕೊಂಡು ಬಂದಿದ್ದಾನೆ ಬೇರೆ. ತಮ್ಮ ಬಡತನವೇನಿದ್ದರೂ ಅತಿಥಿಗಳು ಬಂದಾಗ ಅದನ್ನು ಮುಚ್ಚಿಕೊಳ್ಳದಿದ್ದರೆ ಗೌರವಕ್ಕೆ ಕಡಿಮೆ. ಆದುದರಿಂದ ಅವರು ಏಳುವುದರೊಳಗಾಗಿ ದೋಸೆಯನ್ನಾದರೂ ಮಾಡಿಬಿಡಬೇಕೆಂದು ಸೀತಮ್ಮನವರು ಬೇಗನೇ ಎದ್ದಿದ್ದಾರೆ. ದೋಸೆಯೊಂದಿಗೆ ಅವಲಕ್ಕಿಗೆ ಬೆಲ್ಲ, ಹೆರೆದ ತೆಂಗಿನ ಹೂ ಬೆರಸಿ ಒಂದೊಂದು ಮುಷ್ಟಿ ಹಾಕಿದರಾಯಿತು ಎಂದು ಅವರು ಭಾವಿಸಿದರು. ಮೊಸರಿಗೂ ಕಡೆಗೋಲು ಹಾಕದಿದ್ದರಾಯಿತು ಎಂದು ನಿರ್ಧರಿಸಿದರು. ಒಲೆಯ ಬಳಿಯಲ್ಲೇ ಬಳಕ್ಕೆ ಕಟ್ಟಿದ್ದ ಕೆಲವು ಜೋಕು ಮೈಸೂರು, ಕದಳಿ, ಬೂದಿ ಬಾಳೆ ಗೊನೆಗಳೂ ಅವರ ದೃಷ್ಟಿಗೆ ಬಿದ್ದುವು. ಮೇಲಿನ ಪಣಿಯೆಗಳಲ್ಲಿ ಇನ್ನೂ ಕಸುಕಾಯಿ; ಕೆಳಗಿನವು ಕೆಲವಕ್ಕೆ ಹಳದಿ ಬಣ್ಣ ಬಂದಿದೆ. 'ಎರಡೆರಡು ಹಣ್ಣು ಕೊಟ್ಟರಾಯಿತು' ಎಂದವರು ಮನಸ್ಸಿನೊಳಗೆ ಹೇಳಿಕೊಂಡರು.

ಸೀತಮ್ಮನವರು ಚಾಪೆ ಬಿಟ್ಟ ಮೇಲೆ ಇಷ್ಟೇ ಹೊತ್ತಿಗೆ ಕಾಫಿ ಸಿದ್ಧವೆಂದು ಗೋವಿಂದರಾಯರಿಗೆ ಚನ್ನಾಗಿ ಗೊತ್ತು. ಅಷ್ಟರೊಳಗಾಗಿ ಅವರ ಉದಯರಾಗ ಮುಗಿಯುತ್ತದೆ. ಕೊಟ್ಟಗೆಗೆ ತೆರಳಿ ಮಾವಿನೆಲೆಯಿಂದ ಹಲ್ಲುಜ್ಜಿ, ಬಿಸಿ ನೀರಿನಿಂದ ಬಾಯಿ ಮುಕ್ಕುಳಿಸಿ, ಕೈಕಾಲು ತೊಳೆದುಕೊಂಡು "ಆಯ್ತೇನೇ, ಆಯ್ತೇನೆ, ಈ ಹೊತ್ತು ಬೆಳಗಿನ ಜಾವಕ್ಕೇ ಹಸಿವಾಗಿ ಬಿಟ್ಟಿತು ನೋಡು. 'ಅದು ತಿಂದರೆ ನಿಮಗೆ ಆಗಲಿಕ್ಕಿಲ್ಲ; ಇದು ತಿಂದರೆ ಅಜೀರ್ಣವಾದೀತು' ಎಂದು ಹೇಳಿ ಸುಮ್ಮನೆ ಹೆದರಿಸುತ್ತಿ. ಹಪ್ಪಳ ಗಿಪ್ಪಳ ಏನಾದರೂ ಉಂಟಾ?" ಎಂದು ಮಾತನಾಡುತ್ತ ಮಾತನಾಡುತ್ತ ಅಡಿಗೆ ಮನೆಗೇ ಬಂದು ಒಲೆಯ ಹತ್ತಿರ ಕುಳಿತು ಒಲೆಯ ಶಾಖಕ್ಕೆ ಕೈಯಿಡುವರು. ಕಾಫಿ ಸೋಸುವವರೆಗೂ ಅವರಿಗೆ ಪುರುಸೊತ್ತಿಲ್ಲ. ಒಂದೆರಡು ಹಪ್ಪಳ ಸುಟ್ಟು ಕೊಟ್ಟರೇ ಅವರಿಗೆ ಸಮಾಧಾನ. ಏನಿಲ್ಲದಿದ್ದರೆ ಕೊನೆಗೆ ಒಂದು ಗೆಣಸನ್ನಾದರೂ ಕೆಂಡಕ್ಕೆ ಹಾಕದೆ ಉಪಾಯವಿಲ್ಲ. ಒಂದು ಚೂರು ತಿಂದ ಮೇಲೆ ಒಂದು ಗುಟುಕು ಕಾಫಿ ಕುಡಿಯಲೇ ಬೇಕು. ಇಲ್ಲದಿದ್ದರೆ ಗಂಟಲಲ್ಲಿ ಇಳಿಯುವುದಿಲ್ಲ ಎಂದೆನ್ನುವರು. ತಿನ್ನುವ ವಸ್ತು ಕೈಯಲ್ಲಿ ಉಳಿದು ಲೋಟ ಬರಿದಾಗುವಂತಿಲ್ಲ. 'ಈ ಹೊತ್ತು ಕಾಫಿ ಸ್ವಲ್ಪ ಬಂತು ನನ್ನ ಪಾಲಿಗೆ' ಎಂದು ಉಳಿದ ಕಾಫಿಯ ಪಾತ್ರೆಯನ್ನು ನೋಡುವರು. 'ನಿಮಗೊಂದು ಗುಡಾಣ ಕಾಫಿ ಬೇಕು' ಎಂದು ಸೀತಮ್ಮನವರು ತಮ್ಮ ಪಾಲಿನದನ್ನೂ

ಸ್ವಲ್ಪ ಸುರಿಯುವರು. ಕಾಫಿಯೂ ಪಡ್ಪೋಶಿಯಾದರೆ ಅವರಿಗೆ ಖುಷಿಯಾಗುವಂತಿಲ್ಲ. ಸ್ವಲ್ಪ ಪುಡಿ ಕಡಿಮೆಯಾದರೆ, 'ಇದು ಕಾಪಿಯಲ್ಲ ಪಾಪಿ' ಎಂದು ಹೆಸರಿಡುವರು. ಕೈ ತಪ್ಪಿ ಪುಡಿ ಬಹಳ ಬಿದ್ದ ದಿನ, 'ಹಾಂ, ಈ ಸ್ಟ್ರಾಂಗ್ ಕಾಫಿ ಕುಡಿದರೆ ಉರಿಮೂತ್ರವೇ ಸರಿ' ಎಂದು ಆಕ್ಷೇಪಿಸಿ 'ಹಾಲಿಗೆ ಆಸೆ ಮಾಡಿದೆಯಾ?' ಎಂದು ಹಾಲಿನಾಶೆ ತೋರಿಸುವರು. 'ನೀವು ತೀಟ್ ಸಣ್ಣ ಮಕ್ಕಳ ಹಾಗೆ ಮಾಡುತ್ತೀರಿ. ನಾನಾದುದರಿಂದ ಆಯ್ತು. ಇನ್ನು ಯಾರಾದರೂ ನಿಮ್ಮ ಕೈ ಹಿಡಿಯುತ್ತಿದ್ದರೆ ಪಡ್ಚ, ಪಡ್ಚವಾಗುತ್ತಿದ್ದಳು. ಎಂಟೇ ದಿನಗಳಲ್ಲಿ ಅವಳ ರೂಪು ಉಳಿಯುತ್ತಿದ್ದಿಲ್ಲ' ಎಂದು ಸೀತಮ್ಮನವರು ನುಡಿದು ಅವರ ಲೋಟಕ್ಕೆ ಹಾಲು ಬಗ್ಗಿಸುವರು.

ಇದೆಲ್ಲ ಅವರಿಬ್ಬರೇ ಇರುವಾಗ ಚಂದ. ಜನರ ಮುಂದೆ, ಮಕ್ಕಳ ಮುಂದೆ, ಮಕ್ಕಳಾಟಿಕೆ ಮರುಳುಬುದ್ಧಿ ತೋರಿಸಿದರೆ ಅವರು ನಕ್ಕಾರು. ಸೀತಮ್ಮನವರು ಮಕ್ಕಳ ಮೂಲಕ ಹೇಳಿ ಕಳಿಸಿದಾಗಲೇ ರಾಯರು ಇಟ್ಟ ಮಣೆಯ ಮೇಲೆ ಬಂದು ಕಾಲು ಅಟ್ಟಿ ಕಟ್ಟಿ ಕುಳಿತುಬಿಡುವರು. ಅವರು ಕರೆಕಳಿಸಲು ಹೊತ್ತಾಗಬಾರದೆಂದು ಮಕ್ಕಳನ್ನು ಬೇಗನೇ ಎಬ್ಬಿಸಿ ಬಿಡುವರು. ಎಬ್ಬಿಸಲು ಬೆಳಗು ಮುಂಜಾನೆ ಉದಯರಾಗವನ್ನೇ ಸ್ವಲ್ಪ ಗಟ್ಟಿಯಾಗಿ ಎಳೆದುಬಿಟ್ಟರೆ ಸರಿ. ಅದರಂತೆ ಇಂದು ಕೂಡಾ, 'ನಿದ್ರೆ ಸಾಲದೆ ಮಗನೆ। ನಿದ್ರೆ ಸಾಲದೆ ಮಗನೆ। ನಿದ್ರೆ ಸಾಲದೆ ಮಗನಿಗೆ॥ ಪದ್ಮಸಖನುದಿಸಿದನು ಪದ್ಮಂಗಳರಳಿದುವು॥ ಪದ್ಮನಾಭನೆ ಏಳು ಪದ್ಮಭವ ನಿನ್ನ ಪದ। ಪದ್ಮ ದರುಶನಕೆ ಬಂದಿಳಿದನಂಬರದಿಂದ। ಪದ್ಮಲನೆ ಏಳು ಹರಿಯೇ' ಎಂದು ಮಲಗಿ ನಿದ್ದೆ ಹೋಗಿದ್ದ ಮಗನನ್ನು ಎಬ್ಬಿಸಿದರು. ಹರಿಯೊಂದಿಗೆ ಕುಲಕರ್ಣಿಯವರೂ ಎದ್ದು ಕಣ್ಣುಗಳನ್ನೊರಸಿಕೊಂಡರು. ಸುವಾಸಿನಿಯೂ ಎದ್ದು ಸೀರೆ ಸರಿಪಡಿಸಿಕೊಂಡು ಅಡಿಗೆಮನೆಗೆ ಬಂದಳು.

'ಬಾರಮ್ಮ, ನಿದ್ದೆ ಸರಿ ಬಂತಾ ನಿನಗೆ?' ಎಂದು ಕರೆದು ಮಾತನಾಡಿಸಿದರು ದೋಸೆ ಹೊಯ್ಯುತ್ತಿದ್ದ ಸೀತಮ್ಮ.

'ಹೋ, ಒಳ್ಳೇ ನಿದ್ದೆ ಬಂತು.'

'ಹೌದು. ನಡೆದು ಎಲ್ಲರೂ ಬಳಲಿದ್ದೀರಿ. ರಾತ್ರಿ ಊಟ ಕೂಡಾ ಸೊನ್ನೆಯೆಂದು ಕಾಣುತ್ತದೆ. ಮಲಗಿದ ಮೇಲೆ ನನಗೆ ಹೊಳೆಯಿತು. ನಿಮಗೆಲ್ಲ ನಿದ್ದೆ ಬಂದುದರಿಂದ ಮತ್ತೆ ಎಚ್ಚರಿಸಲಿಲ್ಲ. ಬೇಗನೇ ಕಾಫಿ ಕುಡಿದರಾಯ್ತೆಂದು

ಬಿಟ್ಟೆ. ಬಾ. ಹಲ್ಲುಜ್ಜಿಕೋ' ಎಂದು ಬಿಸಿನೀರಿನ ಕೊಟ್ಟಿಗೆಗೆ ಕರೆದುಕೊಂಡು ಬಂದರು.

ಕುಲಕರ್ಣಿಯವರೊಂದಿಗೆ ಬಂದು ಅಲ್ಲಿ ಹಲ್ಲು ತಿಕ್ಕುತಿದ್ದ ಹರಿ, 'ಸುವಾಸಿನೀ, ನಮ್ಮಪ್ಪಯ್ಯ ಹಲ್ಲುಜ್ಜಲು ದೇಶೀ ಬ್ರಶ್ ತಯಾರಿಸಿದ್ದಾರೆ. ನಿನಗೊಂದು ಬೇಕಾ?' ಎಂದು ಕೈ ಹಿಡಿಕೆಯೊಳಗಿದ್ದ ಗಾಂಧೀ ಬ್ರಶ್ ತೋರಿಸಿದ.

ಸುವಾಸಿನಿ ನೋಡಿ 'ನನಗೆ ಗೊತ್ತಾಗಲಿಲ್ಲ' ಎಂದಳು.

'ನಿನಗೆ ಹೇಗೆ ಗೊತ್ತಾದೀತು? ಧಾರವಾಡದಲ್ಲಿ ಗೇರುಬೀಜದ ಮರವನ್ನೇ ಕಂಡಿರಲಿಕ್ಕಿಲ್ಲ. ಇಕೋ, ಆ ಮರವೇ ಗೇರುಮರ' ಎಂದು ಕೈ ನೀಡಿ ಅಗಳಿನಲ್ಲಿದ್ದ ಮರಗಳನ್ನು ತೋರಿಸಿದ. ಆ ಮೇಲೆ ಗುಡಾಣದ ಬಳಿ ಬಿದ್ದಿದ್ದ ಅದರ ಎಲೆಗಳನ್ನು ತೋರಿಸಿ, 'ಇದು ಅದರ ಎಲೆ. ಇದನ್ನು ಹೀಗೆ ಮಡಚಿ ಬ್ರಶ್ ಮಾಡಬೇಕು. ಇದರ ಬೆಲೆ ಮೊದಲು ಕಾಸಿದ್ದರೆ ಈಗ ಯುದ್ಧ ಕಾಲವಾದುದರಿಂದ ಒಂದಾಣೆ. ನಿಮಗೆ ಸ್ಯಾಂಪಲ್ ಫ್ರೀ' ಎಂದು ಹೇಳಿ ಅಣ್ಣ ತಂಗಿಗೊಂದೊಂದು ಕೊಟ್ಟ.

'ಇನ್ನೂ ನಿನ್ನ ಕುಶಾಲ್ ಬಿಟ್ಟಿಲ್ಲ' ಎಂದರು ಸೀತಮ್ಮ.

'ಅಯ್ಯೋ, ಅದನ್ನು ಅವರು ಕೊಟ್ಟರುಂಟು. ಜೈಲಿನಲ್ಲೂ ಅವರು ನಗಿಸುತ್ತಿದ್ದರು. ಇಲ್ಲದಿದ್ದರೆ ನಮಗೆ ಹೊತ್ತೇ ಹೋಗುತ್ತಿದ್ದಿಲ್ಲ' ಎಂದು ಕುಲಕರ್ಣಿಯವರು ಕೂಡಿಸಿದರು.

'ನೀವು ಹೋಗಿದ್ದಿರಾ ಜೈಲಿಗೆ?'

'ಹೌದು. ನಾನೂ ನಿಮ್ಮ ಮಗನೂ ಒಟ್ಟಿಗಿದ್ದೆವು.'

'ಅಮ್ಮಾ, ಅವರು ಮಾತ್ರವಲ್ಲ. ಸುವಾಸಿನಿ ಕೂಡಾ ಇದ್ದಳು ಜೈಲಿನಲ್ಲಿ.'

'ಹೌದಾ? ಹೌದಾ? ನಿಜವಾ?' ಎಂದು ಅತಿ ಆಶ್ಚರ್ಯದಿಂದ ಕೇಳಿದ ಸೀತಮ್ಮ ಮತ್ತೆ ಸುವಾಸಿನಿಯನ್ನು ಕಣ್ತುಂಬ ನೋಡಿದರು. 'ಹೌದು ನಿಜ' ಎಂದು ಯಾರೂ ಹೇಳುವ ಅವಶ್ಯಕತೆ ಇರಲಿಲ್ಲ. ರಾತ್ರಿ ಸೀರೆ ಉಡುವಾಗಲೇ 'ಇದು ಗಾಂಧೀ ಸೀರೆ' ಎಂದು ಹೇಳಿದ್ದಳು ಸುವಾಸಿನಿ. ತೊಟ್ಟ ರವಕೆಗೂ ಖಾದಿ ಬಟ್ಟೆ. ಕಿವಿಗೆ ಬೆಂಡೋಲೆ, ಕೊರಳಿಗೆ ಒಂದು ಚೈನ್, ಕೈಗೆ ಗಾಜಿನ ಬಳೆಗಳನ್ನೂ ಅವಸರ ಅವಸರದಿಂದ ರಾತ್ರಿ ಇಟ್ಟುಕೊಂಡದ್ದನ್ನು ಮಸುಕು ದೀಪದ ಬೆಳಕಿನಲ್ಲೇ ಸೀತಮ್ಮ ಕಂಡಿದ್ದರು. 'ಇವಳು ಸಾಮಾನ್ಯ ಹುಡುಗಿ

ಯಿಲ್ಲ. ಬಹಳ ಧೈರ್ಯಶಾಲಿನಿ' ಎಂದು ಮನಸ್ಸಿನಲ್ಲಿ ಎಂದುಕೊಂಡು 'ಹೆಂಗಸರಿಗೆ ಪ್ರತ್ಯೇಕ ಜೈಲಿದೆಯಂತೆ ನಿಜವಾ?' ಎಂದು ಗೂಢಾರ್ಥದ ಪ್ರಶ್ನೆ ಕೇಳಿದರು.

'ಹೌದಮ್ಮ, ಸ್ತ್ರೀಯರಿಗೆ ಪ್ರತ್ಯೇಕ ಜೈಲೇ ಇದೆ. ಗಂಡಸರನ್ನೂ ಹೆಂಗಸರನ್ನೂ ಒಟ್ಟಗಿಟ್ಟರೆ ಜೈಲಲ್ಲಿ ತೊಟ್ಟಿಲನ್ನೂ ಕಟ್ಟಬೇಕಾದೀತು' ಎಂದು ಕುಲಕರ್ಣಿ ಸಹಜವಾಗಿ ಹೇಳಿದರು.

ಸೀತಮ್ಮನವರಿಗೆ ನಗು ಬಂದಿತು. 'ನೀವೂ ನನ್ನ ಮಗನಂತೆ ಬಹಳ ಕುಶಾಲ್ ಬಾಯಿ' ಎಂದು ಹೇಳಿ ಅವರು ಹೊರಟುಹೋದರು. ಅವರು ಮನೆಯೊಳಗೆ ಮರೆಯಾದ ಮೇಲೆ ಸುವಾಸಿನಿ, 'ಅಣ್ಣಾ, ಹಾಗೆಲ್ಲ ನುಡಿದರೆ ಅವರಿಗೆ ಬೇಸರವಾದೀತು. ವಯೋವೃದ್ಧರ ಮಧ್ಯೆ ವಿನೋದ ಬೇಡ' ಎಂದು ಮುನಿಸು ತೋರಿಸಿದಳು.

'ಬಿಡು ನಿನ್ನ ಒಣ ಉಪದೇಶ. ನಮ್ಮ ತಂದೆಯವರ ವಿನೋದ ಕೇಳಿದರೆ ನೀನೇನೆನ್ನುತ್ತೀಯೊ! ನಕ್ಕುನಗಿಸುತ್ತಾರೆ' ಎಂದು ಹರಿ ಉಸುರಿದ.

ಅಷ್ಟರಲ್ಲಿ ತೋಟದೊಳಗಿನಿಂದ ಬಂದ ಗೋವಿಂದರಾಯರು ಹೂಗಳಿಂದ ತುಂಬಿದ್ದ ಹರಿವಾಣವನ್ನು ಸುವಾಸಿನಿಗೊಪ್ಪಿಸಿ, 'ಕಟ್ಟಿ ಮುಡಿದುಕೋ ಮಗಳೇ. ಬೇಕಾದಷ್ಟಿವೆ ಇನ್ನೂ. ಕೊಯ್ದು ಕೊಯ್ದು ಪೂರೈಸುವುದಿಲ್ಲ. ಇಲ್ಲಿ ಯಾರೂ ಮುಡಿಯುವವರಿಲ್ಲ. ಇವನ ತಾಯಿಗೆ ಅದರಲ್ಲೆಲ್ಲ ಇಷ್ಟವಿಲ್ಲ. ನಿನಗೆ ತೃಪ್ತಿಯಾಗುವವರೆಗೆ ಮುಡಿದುಕೋ' ಎಂದು ನುಡಿದರು.

'ಎಷ್ಟು ಹೂವು! ಎಷ್ಟು ಚಂದದ ಹೂಗಳು! ನಾನು ಇಂಥ ಹೂವುಗಳನ್ನು ಎಂದೂ ನೋಡಿಲ್ಲ' ಎಂದು ಸುವಾಸಿನಿ ಹರಿವಾಣದಿಂದ ಒಂದೊಂದೇ ಹೂಗಳನ್ನು ತೆಗೆದು 'ಇದು ಯಾವ ಹೂ? ಇದರ ಹೆಸರೇನು!' ಎಂದು ಹರಿಗೆ ಪ್ರಶ್ನಿಸಿ ತಿಳಿದುಕೊಂಡಳು.

'ಮಾತಿನಲ್ಲೇ ವೇಳೆಗಳೆಯಬೇಡಿ. ಬನ್ನಿ, ಬನ್ನಿ. ಕಾಫಿ ತಣ್ಣಗಾಯ್ತು' ಎಂದು ಸೀತಮ್ಮನವರು ಕರೆದುದರಿಂದ ಎಲ್ಲರೂ ಒಳಗೆ ನುಸುಳಿದರು.

ಪಡಸಾಲೆಯಲ್ಲಿ ಒಬ್ಬೊಬ್ಬರಿಗೊಂದೊಂದರಂತೆ ಮಣೆ, ಲೋಟ, ಸೀಳಿದ ಬಾಳೆಯ ಎಲೆಗಳನ್ನಿಟ್ಟು ಸಜ್ಜುಗೊಳಿಸಿದ್ದರು ಸೀತಮ್ಮ. ಎಲ್ಲರೂ ಕುಳಿತ ಮೇಲೆ ದೋಸೆ ತಂದು ಬಡಿಸಿದರು. ಸುವಾಸಿನಿ ನಿಂತುಕೊಂಡುದನ್ನು ಕಂಡು 'ನೀನೂ ಕುಳಿತುಕೊಳ್ಳಮ್ಮಾ' ಎಂದು ಸೀತಮ್ಮನವರು ತಿಳಿಸಿದಾಗ

'ಅವರದೆಲ್ಲ ಆಗಲಿ' ಎಂದುತ್ತರವಿತ್ತಳು. 'ಕುಳಿತುಕೊ ಮತ್ತೆ ತೋಟ ಹೊಳೆಗಳನ್ನೆಲ್ಲ ನೋಡಿ ಬರೋಣ' ಎಂದು ಹರಿ ಕರೆದ ಮೇಲೆಯೇ ಮಣೆ ಸರಿಸಿ ಕುಳಿತಳು. 'ನಮ್ಮ ದೇಶದ ತಿಂಡಿ ತೀರ್ಥ ನಿಮಗೆ ರುಚಿಸುತ್ತದೋ ಇಲ್ಲವೋ?' ಎಂದು ಗೋವಿಂದರಾಯರು ಉಪಚರಿಸಿದರು. 'ನಾವೇನು ರಾಜನ ಹೊಟ್ಟೆಯಲ್ಲಿ ಹುಟ್ಟಿ ಬಂದಿಲ್ಲ. ನಾವೂ ನಿಮ್ಮಂತೆಯೇ. ಜೈಲಿನಲ್ಲಿ ಇಷ್ಟೂ ಸಿಗುತ್ತಿದ್ದಿಲ್ಲ' ಎಂದು ಕುಲಕರ್ಣಿಯವರು ಮರ್ಯಾದೆಯ ಮಾತುಗಳನ್ನಾಡಿದರು.

ಜೈಲಿನ ಮಾತು ಬಂದುದರಿಂದ ಗೋವಿಂದರಾಯರ ಕುತೂಹಲ ಕೆರಳಿ, 'ಜೈಲಿನಲ್ಲಿ ಏನೇನು ಕೊಡುತ್ತಿದ್ದರು?' ಎಂದು ಪ್ರಶ್ನಿಸಿದರು.

'ಅಯ್ಯೋ, ಅಲ್ಲಿನ ಕಥೆ ದೊಡ್ಡದು. ಮುಂಜಾನೆ ಜೋಳದ ಸಜ್ಜಿಗೆಯ ಗಂಜಿ. ಮಧ್ಯಾಹ್ನ ಒಣಗಿದ ಎರಡು ರೊಟ್ಟಿ, ಅರ್ಧ ಕಪ್ ಪಲ್ಯ. ರಾತ್ರಿಗೂ ಅಷ್ಟೆ. ಆದಿತ್ಯವಾರಕ್ಕೊಮ್ಮೆ ಗೋದಿಯ ರೊಟ್ಟಿ. ಅರ್ಧಮುಷ್ಟಿ ಬೆಲ್ಲ.'

'ಅನ್ನ?'

'ಹಲ್ಲಿಲ್ಲದವರಿಗೆ, ರೋಗಿಗಳಿಗೆ ಅನ್ನ.'

'ಮಜ್ಜಿಗೆ ಇಲ್ಲವೆ?'

'ಮಜ್ಜಿಗೆ ಕನಸಿನಲ್ಲೇ ಸರಿ.'

'ಹೇಗಿದ್ದಿರಪ್ಪಾ ಅಷ್ಟು ಕಾಲ ಅದನ್ನು ತಿಂದು? ಅದಕ್ಕೇ ಹರಿ ಇಷ್ಟು ಬಡವಾಗಿದ್ದಾನೆ' ಎಂದು ಸೀತಮ್ಮನವರು ನೊಂದು ನುಡಿದರು.

'ಜೈಲಿನಿಂದ ಬಂದಾಗ ಇದಕ್ಕಿಂತಲೂ ಕಡೆ ಇದ್ದೆ. ಇವರ ಮನೆಗೆ ಬಂದ ಮೇಲೆ ಬಿಡಲೇ ಇಲ್ಲ. ಇವರ ತಾಯಿ ತಂದೆ ಬಹಳ ಒಳ್ಳೆಯವರು. ಎಷ್ಟು ದಿನ ಇದ್ದರೂ ಅವರಿಗೆ ತೃಪ್ತಿಯಿರಲಿಲ್ಲ. ಹೊರಡುತ್ತೇನೆಂದಾಗ ಅಂಗಿ ಬಚ್ಚಿಡುತ್ತಿದ್ದರು' ಎಂದು ಹರಿ ವರ್ಣಿಸಿದ. ಸುವಾಸಿನಿಯ ಮೋರೆ ತಾವರೆಯಷ್ಟು ಅಗಲವಾಯಿತು.

'ಅವರನ್ನೂ ನಾಲ್ಕು ದಿನದ ಮಟ್ಟಿಗೆ ಕರೆದುಕೊಂಡು ಬರಬಹುದಿತ್ತಲ್ಲ ಮಗನೇ. ಧರ್ಮಸ್ಥಳ, ಉಡುಪಿ ನೋಡಿ ಬರುತ್ತಿದ್ದರು' ಎಂದು ಗೋವಿಂದ ರಾಯರು ವಿಷಾದಪಟ್ಟರು.

'ನಿಮ್ಮೆಲ್ಲರ ಗುರುತು ಪರಿಚಯವಾಯಿತಲ್ಲ? ಇನ್ನೊಮ್ಮೆ ಬಂದಾಗ ಮರೆಯುವುದಿಲ್ಲ' ಎಂದು ಕುಲಕರ್ಣಿಯವರು ಭರವಸೆಕೊಟ್ಟರು.

ಮಾತಿನಲ್ಲೇ ಒಂದೊಂದು ತುತ್ತು ಬಾಯಿಗೆ ಹೋಯಿತು. ಒಂದೊಂದೇ ದೋಸೆ ತಂದು ಹಾಕಿದರು ಸೀತಮ್ಮ. ಒಮ್ಮೆ ಸಿಹಿ ಅವಲಕ್ಕಿ, ಮತ್ತೊಮ್ಮೆ ಉಪ್ಪಿನಕಾಯಿ ರಸ, ಕೊನೆಗೆ ಮೊಸರು, ಸುರಿಯುತ್ತ ಬಂದರು. ಬೇಡ ಬೇಡವೆಂದರೆ ಕೇಳಲಾರರು. 'ಏನು ನಿಮಗೆ ದಾಕ್ಷಿಣ್ಯವಾ ?' ಎಂದು ಸೀತಮ್ಮ ನವರೆಂದರೆ, 'ನಮ್ಮ ಹಳ್ಳಿಯಲ್ಲಿ ರೇಶನ್ನಿಲ್ಲ. ನೀವು ಏನೂ ಗಾಬರಿಯಾಗ ಬೇಡಿ' ಎಂದು ಗೋವಿಂದರಾಯರು ನುಡಿದು 'ನಿಮ್ಮಲ್ಲಿ ರೇಶನ್ ಇದೆಯಾ ?' ಎಂದು ಕೇಳಿದರು.

'ಎಲ್ಲ ಕಡೆ ರೇಶನ್ ಇದೆ ಪಟ್ಟಣಗಳಲ್ಲಿ.'

'ಕೊಡುವ ಅಕ್ಕಿ ಸಾಲುತ್ತದಾ ?'

'ಎಲ್ಲಿಗೆ ಸಾಕಾಗುತ್ತದೆ? ಮಕ್ಕಳಿಗೂ ಹೊಟ್ಟೆ ತುಂಬುವುದಿಲ್ಲ. ಬ್ಲೇಕ್ ಮಾರ್ಕೇಟೇ ಗತಿ.'

'ಅಲ್ಲಿಯೂ ಬ್ಲೇಕ್ ಮಾರ್ಕೇಟಿದೆಯಾ ?'

'ಇದೆಯಾ ಎಂದು ಕೇಳುತ್ತೀರಾ ? ಎಲ್ಲಿ ರೇಶನ್ ಕಂಟ್ರೋಲ್‌ಗಳಿ ವೆಯೋ ಅಲ್ಲಿ ಕಳ್ಳಪೇಟೆ ಉಂಟೇ ಉಂಟು. ಯಾರು ಮಾಡದವರು ಬ್ಲೇಕ್ ಮಾರ್ಕೆಟ್ ? ರಾತ್ರಿ ಬೆಳಗಾಗುವುದರೊಳಗೆ ಕುಬೇರರಾಗಲು ಅವಕಾಶ ದೊರೆತರೆ ಯಾರು ಬಿಡುತ್ತಾರೆ ? ಹಳ್ಳಿಯ ರೈತರಿಂದ ಹಿಡಿದು ಲಕ್ಷಾಧೀಶರ ವರೆಗೆ ಎಲ್ಲರೂ ಅದೇ ಕೆಲಸದಲ್ಲಿ ತೊಡಗಿದ್ದಾರೆ.'

'ಕೆಟ್ಟುಹೋಯ್ತು ! ಕೆಟ್ಟುಹೋಯ್ತಪ್ಪಾ ನಮ್ಮ ದೇಶ ! ಯುದ್ಧ ಕಾಲದಲ್ಲಿ ನಮ್ಮ ಜನ ನೀತಿಗೆಟ್ಟರು. ನಮ್ಮ ಉದ್ಧಾರ ಹೇಗಾದೀತೋ ಆ ಪರಮಾತ್ಮನೇ ಬಲ್ಲ. ಸ್ವರಾಜ್ಯ ದೊರೆತ ಮೇಲೆ ಕಾಂಗ್ರೆಸ್ಸಿನವರು ಏನಾದರೂ ಸುಧಾರಿಸಿದರೆ ಸುಧಾರಿಸಬೇಕು. ಇಲ್ಲದಿದ್ದರೆ ನಮ್ಮ ದೇಶಕ್ಕೆ ಇದಕ್ಕಿಂತಲೂ ಹೆಚ್ಚು ಅಧೋಗತಿಯೇ ಸರಿ.'

'ಅಪ್ಪಯ್ಯ, ಕಾಂಗ್ರೆಸ್ಸಿನವರೇನು ಪರಿಶುದ್ಧರಾಗಿಯೇ ಉಳಿದಿಲ್ಲ. ಅವರಿಗೂ ರೋಗ ತಾಗಿದೆ' ಎಂದು ನಡುವೆ ಹರಿ ಬಾಯಿ ಹಾಕಿದ.

'ಹೌದಾ ಮಗನೇ ? ಹೌದಾ ?'

'ಹೌದು. ಅದನ್ನು ಹೇಳಲಳವಲ್ಲ. ಮೇಲೆ ಉಗುಳಿದರೆ ನಮ್ಮ ಮೋರೆಗೇ ಬೀಳುತ್ತದೆ. ಗಾಂಧೀಜಿ ಕೇಳಿದರೆ ಎದೆಯೊಡೆದುಕೊಂಡಾರು. ಚಳುವಳಿ ಆರಂಭವಾದ ಕೂಡಲೇ ಅನೇಕ ಕಾಂಗ್ರೆಸ್ಸಿಗರೂ ರೈಲ್ವೆ ಸ್ಟೇಶನ್ ಸುಟ್ಟರು.

ಟಪ್ಪಾಲು ಬಸ್ ನಿಲ್ಲಿಸಿ ಚೀಲಗಳನ್ನು ಒಡೆದರು. ಆಗ ದೊರೆತ ಹಣವನ್ನೆಲ್ಲ ಕೆಲವರು ಬಗಲಿಗೆ ಹಾಕಿಕೊಂಡು ಹಂಚಿಕೊಂಡರೆಂದು ಜನ ಹೇಳುತ್ತಿದ್ದಾರೆ. ಕೆಲವರು ಚಳುವಳಿ ನೆವಹೇಳಿ ಮುಂಬಯಿ, ದಿಲ್ಲಿ, ಅಹ್ಮದಾಬಾದ್‌ಗಳ ದೊಡ್ಡ ದೊಡ್ಡ ಶೇಟ್‌ಗಳಿಂದ ಹತ್ತು ಸಾವಿರ ೨೦ ಸಾವಿರ ನಿಧಿ ತಂದು ಅದರ ಬಹ್ವಂಶವನ್ನು ತಿಂದು ತೇಗಿದುದೂ ಇದೆ. ಇನ್ನು ಬ್ಲೇಕ್ ಮಾರ್ಕೇಟಿನ ವಿಷಯ! ಅದನ್ನು ಮಾಡದ ಕಾಂಗ್ರೆಸ್ ವ್ಯಾಪಾರಿಯೇ ಇಲ್ಲ.'

'ಬೇಲಿಯೇ ಹೊಲ ಮೇಯಲು ಆರಂಭಿಸಿದರೆ ಇನ್ನೇನು ಗತಿ? ನಾಳೆ ಸ್ವರಾಜ್ಯ ದೊರೆತ ಮೇಲೆ ಇವರು ಆಳುವ ಬಗೆ ಹೇಗೆ?'

'ಅಪ್ಪಯ್ಯ, ಸ್ವರಾಜ್ಯ ಲಭಿಸಿದ ಮೇಲೆ ಸ್ವಲ್ಪ ಕಾಲದವರೆಗೆ ಪರಿಸ್ಥಿತಿ ಭೀಕರ ಸ್ವರೂಪ ತಾಳಲುಂಟು. ಕಾಂಗ್ರೆಸ್ಸಿನವರೇ ತಂತಮ್ಮೊಳಗೆ ಅಧಿಕಾರ ಕ್ಕಾಗಿ ಬಡೆದಾಡಲುಂಟು. ಒಬ್ಬನನ್ನು ಮತ್ತೊಬ್ಬ ಕಡೆಗಣಿಸುತ್ತಾನೆ. ಬ್ಲೇಕ್ ಮಾರ್ಕೆಟ್ ಮಾಡುವವರಂತೂ ಗಾಂಧಿ ಟೊಪ್ಪಿಗೆ ಇಟ್ಟುಕೊಂಡು ಹಗಲುದರೋಡೆ ಮಾಡಲುಂಟು. ಇದೊಂದೇ ಅಲ್ಲ. ಇದರಂತೆ ಪಾಕಿಸ್ತಾನ ಪ್ರಶ್ನೆ, ಸಂಸ್ಥಾನಿಕರ ಪ್ರಶ್ನೆ, ಜಾತಿ ಜಾತಿ ದ್ವೇಷ, ಮೊದಲಾದ ನೂರಾರು ಸಮಸ್ಯೆಗಳಿವೆ. ಅಂತೂ ಇನ್ನು ಮುಂದೆ ಬಹಳ ಕಷ್ಟಗಳು ಬರಲಿವೆ.'

'ಈ ಸಮಸ್ಯೆಗಳನ್ನು ಹೇಗೆ ನಿವಾರಿಸುತ್ತೀರಿ?'

'ನಿವಾರಿಸುತ್ತಾರೆ. ನಿವಾರಿಸದೆ ಗತ್ಯಂತರವಿಲ್ಲ. ನಿವಾರಿಸಲೇ ಬೇಕು. ಕಷ್ಟಗಳಿವೆಯೆಂದು ಬಿಟ್ಟುಬಿಡಲಿಕ್ಕಾಗುವುದಿಲ್ಲ. ಸ್ವಲ್ಪ ಕಾಲದವರೆಗೆ ಕಷ್ಟ ಗಳನ್ನು ಅನುಭವಿಸಬೇಕಾಗುತ್ತದೆ. 'ಸ್ವಲ್ಪ ಸಮಯದವರೆಗೆ ಅನಾಯಕತ್ವ ವಾದರೂ ಚಿಂತೆ ಇಲ್ಲ. ಸ್ವರಾಜ್ಯ ಬೇಕು ನಮಗೆ' ಎಂದು ಗಾಂಧೀಜಿ ಹಿಂದೊಮ್ಮೆ ಹೇಳಿದ್ದರು. ಬರಲಿ. ಬರುವುದೆಲ್ಲ ಬರಲಿ, ಗೋವಿಂದನ ದಯೆಯೊಂದಿರಲಿ.'

'ಗೋವಿಂದನ ದಯೆಯೊಂದಿರಲಿ' ಎಂದಾಗ ಸುವಾಸಿನಿಗೆ ನಗು ಬಂದಿತು. ಮತ್ತೆ ಎಲ್ಲರೂ ನಕ್ಕು ಕೈತೊಳೆಯಲೆದ್ದರು. ಬಿಸಿನೀರಿನ ಕೊಟ್ಟಿಗೆಗೆ ತೆರಳಿದವರು ಅಲ್ಲಿಂದಲೇ ಕೃಷಿ ಪರಾಂಬರಿಸಲಾರಂಭಿಸಿದರು. ಗೋವಿಂದರಾಯರು ಕಸಿಗಿಡಗಳನ್ನು ತೋರಿಸಿ, 'ಇದು ಮುಂಡಪ್ಪ, ಇದು ನೀಲಂ, ಇದು ತಳಿಂಬರಂ, ಇದು ಗಿಳಿಮೂಗು, ಇದು ಬಹಳ ರುಚಿ, ಈ ತೋತಾಪುರಿ ಉಪ್ಪಿನಕಾಯಿಗೆ ಬಹಳ ಪಸಂದು' ಎಂದು ಒಂದೊಂದನ್ನೇ

ತಿಳಿಸಿದರು. ಅಲ್ಲಿಂದ ಕಂಗಿನ ತೋಟದೊಳಗೆ ಸುಳಿದರು. ಒಂದೊಂದೇ ಸೋಗೆ ಕಳಚಿ ಬಿದ್ದು ಬೆಳೆದ ಕಂಗುಗಳು ಮನುಷ್ಯನಿಗಿಂತ ಎತ್ತರವಾಗಿದ್ದುವು. ಒಂದೆರಡು ಕಂಗುಗಳಲ್ಲಿ ಪಿಂಗಾರ ಒಡೆದು ಅಕ್ಕಿಯ ಕಣಗಳಂತೆ ಅದರ ಹುಸಿ ಹೂಗಳು ನೆಲಕ್ಕೆ ಬಿದ್ದಿದ್ದುವು. ಒಂದು ತಾಳೆಯ ಮರಕ್ಕೊ ಕೊಂಬು ಬಂದಿತ್ತು. ಅದರ ಬುಡದಲ್ಲಿ ಬಿದ್ದಿದ್ದ ಹೂಗಳನ್ನು ಸುವಾಸಿನಿ ಹೆಕ್ಕಿಕೊಳ್ಳಲು ಬಗ್ಗಿದಳು. ಅದನ್ನು ಕಂಡ ಗೋವಿಂದರಾಯರು, 'ಸುವಾಸಿನೀ, ಏನು ಹೆಕ್ಕುತ್ತಿದ್ದಿ? ನನ್ನ ತೋಟಕ್ಕೆ ಬಂದಕೂಡಲೇ ನಿನ್ನ ಕೈಬೆರಳುಗಳ ಉಗುರುಗಳು ಉದುರಿಬಿದ್ದುವೋ ಏನು?' ಎಂದು ಹೇಳಿ ಎಲ್ಲರನ್ನೂ ನಗಿಸಿದರು. ಮತ್ತೊಮ್ಮೆ 'ಅಹಾ, ತೋಟದಲ್ಲಿ ಏನು ಸುವಾಸನೆ? ಎಂಥ ಗಮಗಮ ಪರಿಮಳ! ಇದು ತೋಟವಲ್ಲ ನಂದನವನ' ಎಂದು ಕುಲಕರ್ಣಿಯವರೆಂದುದನ್ನು ಆಲಿಸಿ, 'ಅದು ಸುವಾಸಿನಿಯ ಮಹಿಮೆ. ಆವಳು ಕಾಲಿಟ್ಟದ್ದೇ ತಡ, ತೋಟವೆಲ್ಲ ಸುವಾಸನೆಯಿಂದ ತುಂಬಿತು' ಎಂದು ಹೇಳಿ ಅವರನ್ನು ಆಹ್ಲಾದಗೊಳಿಸಿದರು. ತಾಳೆಯ ಗರಿಗಳಲ್ಲಿ ಚೀಂ ಚೀಂ ಅರಚುತ್ತಿದ್ದ ಹಕ್ಕಿಗಳ ಕಡೆ ಕೈನೀಡಿ 'ಇದು ತಾಳೆಯ ಗುಬ್ಬಿ' ಎಂದರು. ಕೆಂಪು ಬಣ್ಣದ ಕಾಗೆಗಿಂತ ದೊಡ್ಡ ಪಕ್ಷಿ ಹಾರಿದೊಡನೆಯೇ, 'ಇದು ಕುಪ್ಪುಳು ಹಕ್ಕಿ. ಕುಳ್ ಕುಳ್' ಎಂದು ಕೂಗುತ್ತದೆಯೆಂದರು. ಹೊಳೆಯ ದಡಕ್ಕೆ ಕರೆದುಕೊಂಡು ಬಂದು ಮಳೆಗಾಲದ ಅವತಾರವನ್ನು ವಿವರಿಸಿದರು. ಬೇಸಿಗೆಗೆ ಕಟ್ಟ ಕಟ್ಟುವ ಕತೆಯನ್ನು ಹೆಣೆದರು. ನೇತ್ರಾವತಿ ದಂಡೆಯ ಬಳಿಯಿದ್ದ ಒಂದು ಬಂಡೆಗಲ್ಲು ಏರಿ, 'ಇಕೊಳ್ಳಿ. ಹರಿ ಇಲ್ಲಿದ್ದಾಗ ಇದರ ಮೇಲೆಯೇ ಕುಳಿತು ಓದುತ್ತಿದ್ದ. ಅದನ್ನು ಕಂಡೊಡನೆಯೇ ಅವನ ನೆನಪಾಗುತ್ತದೆ ನನಗೆ. ಅದಕ್ಕೆ ಹರಿಶಿಲೆಯೆಂದೇ ಹೆಸರಿಟ್ಟದ್ದೇನೆ' ಎಂದು ತಿಳಿಸಿದರು. ಸುವಾಸಿನಿ ಹರಿಯಕಡೆ ನೋಡಿ ಮುಗುಳು ನಕ್ಕಳು. ಅಲ್ಲಿಂದ ಹೊರಳಿ ಮನೆಗೆ ಬಂದಮೇಲೂ ಗೋವಿಂದರಾಯರು ಸುಮ್ಮಗಿರಲಿಲ್ಲ. 'ಹೊಳೆಗೆ ಕಟ್ಟಿದ್ದ ಕಟ್ಟ ನೋಡಿ ಬರೋಣ'ವೆಂದರು. ಕುಲಕರ್ಣಿಯವರು ಒಲ್ಲೆನ್ನದೆ ಹೊರಟರು. ಹರಿಗೆ ಅದು ಹೊಸತಲ್ಲ. ಆದುದರಿಂದ ಅವನು ಮನೆಯಲ್ಲೇ ಉಳಿದ. ಸುವಾಸಿನಿ ಹೂಗಳನ್ನು ಹೆಣೆಯುತ್ತ ಕುಳಿತಳು.

ಕಟ್ಟಕಾಣಲು ಹೋದವರು ಮರಳಿದಾಗ ಮಧ್ಯಾಹ್ನದ ಊಟ ಸಿದ್ಧವಾಗಿತ್ತು. ಊಟ ತೀರಿಸಿ ಮಲಗಿದವರು ಕಾಫಿ ಹೊತ್ತಿಗೇ ಎದ್ದರು. ಮತ್ತೆ

ಅತ್ತಿತ್ತ ತಿರುಗಿದಾಗ ಸಂಜೆಯಾಯ್ತು. ಕತ್ತಲಾದೊಡನೆಯೇ ದೇವರಿಗೆ ದೀಪ ಹಚ್ಚಿ ಶಂಖ ಊದುವುದು ಸೀತಮ್ಮನವರ ನಿತ್ಯಕ್ರಮ. ಶಂಖದ ಧ್ವನಿ ಕೇಳಿ ಗೋವಿಂದರಾಯರೂ ಬಂದು ಮಣೆಯ ಮೇಲೆ ಕುಳಿತು ಧ್ಯಾನ ಮಗ್ನರಾಗುವರು. ಇಂದು ಸುವಾಸಿನಿ, ಹರಿ, ಕುಲಕರ್ಣಿಯವರೂ ಬಂದು ಕುಳಿತು ಗಾಂಧೀಜಿಯವರಿಗೆ ಬಹಳ ಪ್ರಿಯವಾಗಿದ್ದ 'ಯಂ ಬ್ರಹ್ಮಾ ವರುಣೇಂದ್ರ ಮರುತಃಸ್ತುನ್ವಂತಿ ದಿವ್ಯೈಃಸ್ತವೈಃ ...' ಸಾಯಂ ಪ್ರಾರ್ಥನೆಯನ್ನು ಆರಂಭಿಸಿ, ಭಗವದ್ಗೀತೆಯ ಎರಡನೇ ಅಧ್ಯಾಯದ ಕೊನೆಯ ಭಾಗವನ್ನು ಆರಿಸಿಕೊಂಡು, '....ಸ್ಥಿತ ಪ್ರಜ್ಞಸ್ಯಕಾ ಭಾಷಾ ಸಮಾಧಿಸ್ಥಸ್ಯ ಕೇಶವ....' ದಿಂದ 'ಏಷಾ ಬ್ರಾಹ್ಮೀ ಸ್ಥಿತಿಃ ಪಾರ್ಥ ನೈನಾಂ ಪ್ರಾಪ್ಯವಿಮುಹ್ಯತಿ'ಗೆ ಅಂತ್ಯಗೊಳಿಸಿದರು. ಅವರೊಂದಿಗೆ ಗೋವಿಂದರಾಯರೂ ಕೂಡಿಕೊಂಡದ್ದರಿಂದ ಕುಲಕರ್ಣಿಯವರಿಗೆ ಬಹಳ ಆಶ್ಚರ್ಯವಾಯಿತು. ಶ್ಲೋಕ ಮುಗಿದ ಮೇಲೆ, 'ನಮ್ಮ ಜೈಲಿನ ಪ್ರಾರ್ಥನೆ ನಿಮಗೆ ಹೇಗೆ ಗೊತ್ತಾಯಿತು?' ಎಂದು ಕೇಳಿದರು. ಗೋವಿಂದರಾಯರು ಮುಗುಳು ನಕ್ಕು, 'ಮಳೆಗಾಲಕ್ಕೆ ನಮಗೆ ಇದೂ ಒಂದು ಜೈಲೇ. ಹೊತ್ತೂ ಹೋಗುತ್ತಿದ್ದಿಲ್ಲ. ಆಗ ಗೀತೆಯನ್ನೂ ಓದಲು ಆರಂಭಿಸಿದೆ. ಈಗ ಆದಿಯಿಂದ ಅಂತ್ಯದ ವರೆಗೆ ಬಾಯಿಗೆ ಬರುತ್ತದೆ' ಎಂದು ನುಡಿದು, 'ನೀವು ಸೆರೆಮನೆಯಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದುದನ್ನು ಕೇಳಿ ನನಗೆ ಪರಮಾನಂದವಾಯಿತು. ಇನ್ನೂ ಒಂದೆರಡು ಹಾಡು ಹೇಳಿ. ನಾನು ಕೇಳುತ್ತೇನೆ. ದೇವರ ನಾಮ ಕೇಳಿದಷ್ಟು ಇನ್ನೂ ಕೇಳಬೇಕೆಂದಾಸೆಯಾಗುತ್ತದೆ ನನಗೆ' ಎಂದರು.

ಕುಲಕರ್ಣಿಯವರು, 'ರಘುಪತಿ ರಾಘವ ರಾಜಾರಾಂ। ಪತಿತ ಪಾವನ ಸೀತಾರಾಮ್॥' ಪದ ಹಾಡಿದರು. 'ಶ್ರೀ ರಾಘವಂ ದಶರಥಾತ್ಮಜಮಪ್ರಮೇಯಂ' ಚಿಟುಕು ಶ್ಲೋಕದಲ್ಲಿ ರಾಮಾಯಣ ಕಥಾ ವಿಸ್ತಾರವನ್ನು ಅರುಹಿದ ಹರಿ. 'ನೀನೂ ಒಂದು ಹೇಳು ಮಗಳೇ. ನಿನ್ನ ಕಂಠ ಬಹಳ ಮಧುರವಾಗಿದೆ' ಎಂದು ಸುವಾಸಿನಿಯ ಕಡೆ ನೋಡಿ ಗೋವಿಂದರಾಯರು ನುಡಿದರು. ಸುವಾಸಿನಿ ಬೆಡಗು ಬಿನ್ನಾಣಗಳನ್ನು ಮಾಡಿ ಮುದುಡಿಕೊಳ್ಳದೆ ಒಂದು ಹಿಂದೀ ಹಾಡನ್ನು ಹಾಡಿದಳು. ಗೋವಿಂದರಾಯರಿಗೆ ಪೂರ್ಣ ತಿಳಿಯಲಿಲ್ಲ. ಆದುದರಿಂದ ಹರಿ ಅರ್ಥ ವಿವರಿಸಿದ.

'ರಾಧೆ ಶ್ರೀಕೃಷ್ಣ ಪರಮಾತ್ಮನ ವಿರಹವನ್ನು ತಾಳಲಾರದೆ ಭಾವಪರ

ವಶಳಾಗಿ ಅವನಿಗೆ ಮೊರೆ ಇಡುತ್ತಿದ್ದಾಳೆ. 'ಕೃಷ್ಣಾ, ಏ ಕೃಷ್ಣಾ ನೀನೆಲ್ಲಿರುವೆ? ಎಲ್ಲಿ ಮಾಯವಾದೆ? ನಿನ್ನ ಕೊಳಲಿನ ಮಂಜುಳ ಗಾನ ಕಿವಿಯಲ್ಲಿ ಇನ್ನೂ ಪ್ರತಿಧ್ವನಿಸುತ್ತದೆ. ಎನ್ನ ಹೃದಯದ ವೀಣೆ ಇನ್ನೂ ಮಿಡಿಯುತ್ತಿದೆ. ದುಃಖದ ತಾನಗಳೇಳಲೆಂದು ನನ್ನನ್ನು ಪರಿಕಿಸುತ್ತೀಯಾ? ನಿನ್ನ ವಿರಹಕ್ಕಿಂತ ಅತಿಶಯವಾದ ದುಃಖವೇ ಇನ್ನೊಂದಿಲ್ಲ. ಅದು ಮರಣಕ್ಕಿಂತಲೂ ಭೀಕರ ವಾದುದು. ನಿನ್ನನ್ನಗಲಿ ಬದುಕಲಾರೆ. ನೀನಿಲ್ಲದ ಈ ಪ್ರಾಣ ತೃಣಸಮಾನ. ನಿನ್ನ ದರುಶನದಿಂದ ನನ್ನ ಎದೆ ಕಮಲದಂತೆ ಅರಳುತ್ತದೆ. ಇನ್ನು ತಡೆಯು ಬೇಡ. ಇದೋ, ಇಲ್ಲದಿದ್ದರೆ ಈ ಕಮಲದ ಹೂಗಳಿಂದ ತುಂಬಿರುವ ಈ ಕೊಳದಲ್ಲೇ ಈ ಹೂವು ಮುಳುಗಿಬಿಡುತ್ತದೆ.'

ಗೋವಿಂದರಾಯರು ರಾಧೆಯ ಈ ಭಕ್ತಿಗೆ ಮೆಚ್ಚಿ ತಾವೂ ಭಕ್ತಿಭಾವ ಪರವಶರಾದರು. ಸ್ವಲ್ಪ ಹೊತ್ತು ಮುಚ್ಚಿದ ಕಣ್ಣೆವೆಗಳನ್ನು ತೆರೆಯಲಿಲ್ಲ: 'ಇನ್ನೊಂದು ಹಾಡಮ್ಮಾ' ಎಂದು ಕಣ್ಣುಗಳನ್ನು ತೆರೆಯದೆನೇ ಅವರು ಬೇಡಿಕೊಂಡರು. ಸುವಾಸಿನಿ ಮಾತ್ರ ಸ್ವಲ್ಪ ಮೋರೆ ತಿರುಗಿಸಿದಳು. ಹಾಗೆ ತಿರುಗಿಸಿದಾಗ ಮೆಲ್ಲಗೆ ಸೆರಗಿನಿಂದ ಕಣ್ಣುಗಳನ್ನೊರಸಿಕೊಂಡದ್ದನ್ನು ಸೀತಮ್ಮ ನವರು ಕಂಡರು. ಆಗ ಮಿಂಚಿನಂತೆ ಏನೋ ಒಂದು ವಿಚಾರ ಅವರ ಮನಸ್ಸಿನ ಮೇಲೆ ಬೆಳಕು ಬೀರಿತು. 'ಸಾಕು. ಇನ್ನು ಊಟಕ್ಕೇಳಿ' ಎಂದು ಅವರು ಎಲ್ಲರನ್ನೂ ಎಬ್ಬಿಸಿದರು.

ಸೀತಮ್ಮನವರಿಗೆ ಹೊಳೆದ ಆ ಒಂದು ಭಾವವನ್ನು ಅವರು ಹೊರಗೆಡಹ ಲಿಲ್ಲ. ತಮ್ಮ ಎದೆಯ ಗೂಡಿನೊಳಗೇ ರಹಸ್ಯವಾಗಿಟ್ಟುಕೊಂಡರು. ಅವರ ನಡೆನುಡಿಯಲ್ಲಿ ಯಾವ ವ್ಯತ್ಯಾಸವೂ ತೋರಿ ಬರಲಿಲ್ಲ. ಆದರೆ ಸುವಾ-ಸಿನಿಯ ನಡೆನುಡಿಯ ಕಡೆ ಬಹಳ ಸೂಕ್ಷ್ಮದೃಷ್ಟಿ ಬಿದ್ದಿತು. ದಿನಗಳೆದಂತೆ ಅವರಿಗೆ ಒಂದೊಂದು ಹೆಚ್ಚು ಅರ್ಥವಾಗತೊಡಗಿತು. ಒಂದಕ್ಕಿನ್ನೊಂದರ ಸಂಬಂಧವನ್ನೂ ಅವರು ಹೆಣೆದರು. ಹರಿಯ ಧ್ವನಿ ಕೇಳಿದೊಡನೆಯೇ ಅವಳು ಮುಗುಳು ನಗುವಳು. ಅವನು ಬಂದಾಗ ಮೋರೆ ಅರಳುವುದು. ಅವನು ಮನೆಯಲ್ಲಿಲ್ಲದಿದ್ದರೆ ಮೊಗ ಸಪ್ಪಗೆಯಾಗುತ್ತದೆ. ಅವರೆಲ್ಲರ ಊಟವಾದ ಮೇಲೆಯೇ ತನ್ನೊಂದಿಗೆ ಊಟಕ್ಕೆ ಕುಳಿತುಕೊಳ್ಳುವಳು. ಅಣ್ಣನಿಗೆ ಚಾಪೆ ಹಾಸಿದಾಗ ಹರಿಗೂ ಹಾಸಿಕೊಡುವಳು. ಹರಿಯೂ 'ಸುವಾಸಿನೀ, ಸುವಾ-ಸಿನೀ' ಎಂದು ದಿನಕ್ಕೆ ನೂರು ಸಲ ಕರೆಯುತ್ತಾನೆ. 'ತಣ್ಣೀರು ಕುಡಿಯ

ಬೇಡ. ಜ್ವರ ಬಂದರೆ ನಾನು ಜವಾಬ್ದಾರನಲ್ಲ' ಎಂದು ಪದೇ ಪದೇ ಎಚ್ಚರಿಸು ತ್ತಾನೆ. ಅವಳ ಕಡೆ ನೋಡಿದಾಗ ಅವನ ದೃಷ್ಟಿಯಲ್ಲೂ ಬಹಳ ಅಂತಃಕರುಣ ತುಂಬಿರುತ್ತದೆ. ಅವಳ ಮಾತನ್ನು ತೀರ ಅಲಕ್ಷಿಸಲಾರ. ಒಂದು ದಿನ ಅದು ಸೀತಮ್ಮನವರಿಗೆ ಚನ್ನಾಗಿ ಮನವರಿಕೆಯಾಯಿತು. 'ಅವರೆಲ್ಲ ಎಣ್ಣೆ ಹಚ್ಚಿಕೊಂಡರು. ನೀನು ಅಭ್ಯಂಗನ ಮಾಡು. ತಲೆ ಜಟಾಧರನಂತಾಗಿದೆ' ಎಂದು ಎಣ್ಣೆ ತಂದು ಕೊಟ್ಟರೆ, 'ಬೇಡಮ್ಮ. ನಾಳೆ ನೋಡೋಣ. ಈ ಹೊತ್ತು ಅವರೆಲ್ಲ ಸ್ನಾನ ಮಾಡಲಿ' ಎಂದ. ಸೀತಮ್ಮನವರು ಸುವಾಸಿನಿಯ ಕೈಯಲ್ಲಿ ಕೊಟ್ಟು 'ನೀನಾದರೂ ಹೇಳಮ್ಮಾ. ನನ್ನ ಮಾತು ಕೇಳುವುದಿಲ್ಲ' ಎಂದು ಕಳಿಸಿದರು. ಆ ಮೇಲೆ ಸದ್ದಿಲ್ಲದೆ ತಲೆಗೆ ಎಣ್ಣೆ ಹಾಕಿ ತಿಕ್ಕಿಕೊಂಡ. ಇಷ್ಟಾದರೂ ಸೀತಮ್ಮನವರಿಗೆ ಖಚಿತವಾಗಲಿಲ್ಲ. ಏಕೆಂದರೆ ಅವರಿಬ್ಬರೇ ಇದ್ದಾಗ ಒಮ್ಮೆಯಾದರೂ ಗುಸು ಗುಸು ಮಾತನಾಡಲಿಲ್ಲ. ಒಬ್ಬರನ್ನೊಬ್ಬರು ಕದ್ದು ಮುಚ್ಚಿ ನೋಡಲು, ಭೆಟ್ಟಿಯಾಗಲು ಬಯಸಿ ನಡೆದುದಿಲ್ಲ. ಯಾರು ಇರಲಿ, ಇಲ್ಲದಿರಲಿ, ಗಟ್ಟಿಯಾಗಿಯೇ ಮಾತನಾಡುವರು. ಕುಶಾಲ್ ಆಡು ವರು. ಹರಟೆ ಹೊಡೆಯುವರು. ಗುಟ್ಟು ಗುಪ್ತ ವ್ಯವಹಾರವೇ ಇರಲಿಲ್ಲ. ಅದನ್ನು ನೆನೆದಾಗ 'ಇರಲಿಕ್ಕಿಲ್ಲ' ಎಂದೊಮ್ಮೆ ಮನಸ್ಸಿನೊಳಗೆ ಎಂದು ಕೊಳ್ಳುವರು. ಆದರೂ ಪರೀಕ್ಷೆಮಾಡಬೇಕೆಂದು ನಿರ್ಧರಿಸಿ ಒಂದು ದಿನ ಸುವಾಸಿನಿಯೊಬ್ಬಳೇ ಇದ್ದಾಗ, 'ಸುವಾಸಿನೀ, ನೀವು ಊರಿಗೆ ಹೋದ ಮೇಲೆ ನಮ್ಮ ಹರಿಯ ಲಗ್ನಕ್ಕೆ ಅಗತ್ಯ ಬರಬೇಕು. ಎಂಟು ದಿವಸಗಳ ಮೊದಲೇ ಪತ್ರ ಹಾಕುತ್ತೇನೆ. ಮಂಗಳೂರಿನ ಒಂದು ಹೆಣ್ಣು ನೋಡಿದ್ದಾರೆ. ಜಾತಕಗಳೆಲ್ಲ ಕೂಡಿ ಬರುತ್ತವೆ. ಐದು ಸಾವಿರ ರೂಪಾಯಿ ವರದಕ್ಷಿಣೆಯನ್ನೂ ಕೊಡುತ್ತಾರಂತೆ' ಎಂದು ಒರೆಗಲ್ಲಿಗೆ ನಾಣ್ಯವನ್ನು ತಿಕ್ಕಿದರು.

ಈ ಒಂದೊಂದು ಮಾತು ಒಂದೊಂದು ಬಾಣದಂತೆ ನೆಟ್ಟಿತು ಸವಾಸಿನಿಯ ಎದೆಗೆ. ಸಹಿಸಲಾರದ ವೇದನೆಯಾದುದನ್ನು ಅವಳ ಕಳೆಗುಂದಿದ ಮೋರೆಯ ಭಾವದಿಂದಲೇ ಸೀತಮ್ಮನವರು ಅರ್ಥಮಾಡಿಕೊಂಡರು. ಸುವಾಸಿನಿ ಏನೋ ನೆವ ಹೇಳಿ ಎದ್ದು ಅಡಿಗೆಮನೆಯಿಂದ ಪಡಸಾಲೆಗೆ ಬಂದಳು. ಅಲ್ಲಿಂದ ಮುಖಮಂಟಪಕ್ಕೆ ಕಾಲಿಟ್ಟಳು. ಅಲ್ಲಿಯೂ ನಿಲ್ಲದೆ ಅಂಗಳಕ್ಕೆ, ಅಂಗಳದಿಂದ ತೋಟಕ್ಕೆ, ತೋಟದಿಂದ ಹೊಳೆಯ ದಂಡೆಯಲ್ಲಿದ್ದ 'ಹರಿಶಿಲೆ'ಗೆ ಬಂದು ದೊಪ್ಪನೆ ಕುಸಿದು ಕುಳಿತಳು. ಮನೆಗೆ ಬಂದ ಹರಿ ಸುವಾಸಿನಿ

ಯನ್ನು ಕಾಣದೆ ‘ ಎಲ್ಲಿ ? ’ ಎಂದು ಕೇಳಿದ. ‘ ಈಗ ಇದ್ದಳು. ಹೊಳೆ ಕಡೆಗೆ ತೆರಳಿದಳೋ ಏನೋ ? ನೋಡು ’ ಎಂದರು ಸೀತಮ್ಮ. ‘ ಒಬ್ಬಳೇ ಹಾಗೆಲ್ಲ ಹೋಗಲು ಬಿಡಬಾರದು. ಎಲ್ಲಾದರೂ ಹಾವಿದ್ದೀತು ’ ಎಂದ ಹರಿ ‘ ಸುವಾಸಿನೀ, ಸುವಾಸಿನೀ, ಎಂದು ಕರೆಯುತ್ತ ಬಂದ. ಶಿಲೆಯ ಮೇಲೆ ಅವಳು ಕುಳಿತಿದ್ದುದು ಹರಿಗೆ ಕಾಣುತ್ತದೆ! ಅವನ ಧ್ವನಿ ಅವಳು ಕೇಳಬಲ್ಲಳು! ಆದರೂ ಓಗೊಡಲಿಲ್ಲ. ಹತ್ತಿರ ಬಂದರೂ ಹೊರಳಿ ನೋಡಲಿಲ್ಲ. ಹರಿ ಎದುರಿಗೆ ಬಂದು ‘ ಏನು ಸುವಾಸಿನೀ ? ಏನಾಯ್ತು ? ’ ಎಂದು ದೈನ್ಯದಿಂದ ಕೇಳಿದ.

ಅವಳ ಕಣ್ಣಿನಿಂದ ಕೆಲವು ಹನಿಗಳು ‘ ಹರಿಶಿಲೆ ’ಯ ಮೇಲೆ ಉರುಳಿದುವು.

‘ ಯಾಕೆ ಸುವಾಸಿನೀ ? ಏನಾಯ್ತು ? ’

‘ ನನ್ನನ್ನು ಇನ್ನು ಮುಂದೆ ಸುವಾಸಿನೀ ಎಂದು ಕರೆಯಬೇಡಿ. ಅವರು ಇವರು ಎಂದೆನ್ನಬೇಕು.’

‘ ಯಾಕೆ ? ’

‘ ಯಾಕೆಂದರೆ ಸುವಾಸಿನಿ ಜೀವದಿಂದಿಲ್ಲ.’

‘ ಏನಾಯ್ತು ಜೀವಕ್ಕೆ ? ’

‘ ಆಗುವುದೇನು ? ಆಗುವುದಾಯಿತು. ನಿಮಗೇಕೆ ನನ್ನ ವಿಚಾರ ? ನನ್ನ ಮಟ್ಟಿಗೆ ನಾನು, ನಿಮ್ಮ ಮಟ್ಟಿಗೆ ನೀವು. ನಿಮಗೆ ಮಂಗಳೂರಿನ ಹುಡುಗಿ ನೋಡಿದ್ದಾರಂತೆ. ಐದು ಸಾವಿರ ವರದಕ್ಷಿಣೆ ಕೊಡುತ್ತಾರಂತೆ. ಬೇಗನೇ ಮದುವೆ ಮಾಡಿಬಿಡುತ್ತಾರಂತೆ. ನೀವು ಸುಖದಿಂದಿರಿ.’

ಹರಿ ನಕ್ಕು ನುಡಿದ : ‘ ಓಹೋ, ಇಷ್ಟಕ್ಕೇ ನೀನು ಸಿಟಿದುಕೊಂಡು ಇಲ್ಲಿಯವರೆಗೆ ಬಂದೆಯೇನು ? ಓಹೋಹೋ, ಈಗ ನನಗೆ ಅರ್ಥವಾಯಿತು.’

ಸಿಟಿದುಕೊಂಡಲ್ಲ, ಸಿಟ್ಟುಗೊಂಡು. ಈ ನದಿಯಲ್ಲಿ ಹಾರಿಬಿಡಲಾ ಎಂದೆನ್ನಿಸುತ್ತದೆ ನನಗೆ. ’

‘ ಹಾರು. ಅಗತ್ಯವಾಗಿ ಹಾರು. ಇಲ್ಲೇ ಹಾರಬೇಡ, ನೀರು ಆಳವಿಲ್ಲ. ಇಲ್ಲೆಲ್ಲ ಹಾರಿದರೆ ಮತ್ತೆ ನಮಗೆಲ್ಲ ಪಜೀತಿ ಬರಲುಂಟು. ಪೋಲೀಸರು ಬಂದು ಮತ್ತೆ ಬೇಟಿಯಾಡಲುಂಟು. ನಾನೊಂದು ಆಳವಾದ ಗುಂಡಿ ತೋರಿಸುತ್ತೇನೆ. ಅಲ್ಲಿ ಹಾರಿದರೆ ಗುಳುಂ, ಗುಳುಂ, ಗುಳುಂ ! ಪತ್ತೆಯೇ ಸಿಗುವುದಿಲ್ಲ. ಬಾ. ಬಾ ’ ಎಂದು ಹರಿ ಸುವಾಸಿನಿಯ ಕೈಹಿಡಿದ. ಅವಳು ಕೈ ಕೊಸರಿಕೊಳ್ಳಲು ಅವಳ ಬಳಿಯೇ ಬಂದು ಕುಳಿತು, ‘ ಸುವಾಸಿನೀ, ನೀನಿನ್ನೂ

ನನ್ನನ್ನು ತಿಳಿದುಕೊಳ್ಳಲಿಲ್ಲ' ಎಂದುಸುರಿದ.

'ಏನೆಂದು ತಿಳಿದುಕೊಳ್ಳಲಿ? ನೀವು ಒಮ್ಮೆ ಕೂಡಾ ಒಂದು ಮಾತನ್ನೂ ಆಡಿಲ್ಲ.'

'ಇಲ್ಲ, ಆಡುವ ಆಗತ್ಯವೂ ಇಲ್ಲ. ಹೃದಯವನ್ನು ಮತ್ತೊಂದು ಹೃದಯವೇ ಅರಿಯಲು ಸಾಧ್ಯ.'

'ಅರಿತಿದ್ದೆ. ಆದರೆ ನಿಮ್ಮ ತಾಯಿ ಇಂದು ಹೇಳಿದ ಸುದ್ದಿ ಕೇಳಿ ಸಂಶಯ ಹುಟ್ಟಿತು.'

'ಇನ್ನೂ ಉಂಟಾ ಸಂಶಯ ?'

ಸುವಾಸಿನಿ ಲಜ್ಜೆಯಿಂದ ತಲೆ ತಗ್ಗಿಸಿದಳು. ಹರಿ ಅವಳ ಕೈ ಹಿಡಿದಾಗ ಅವಳು ಅದನ್ನು ಹಿಂದಕ್ಕೆ ಸೆಳೆದುಕೊಳ್ಳಲಿಲ್ಲ. ಒತ್ತೊತ್ತಿಗೆ ಕುಳಿತಿದ್ದುದರಿಂದ ಅವರ ಮೊಗಗಳೂ ಹತ್ತಿರ ಬಂದುವು. ತೋಟದೊಳಗಿನಿಂದ ಸುವಾಸನೆ ತೇಲಾಡಿ ಬಂತು ಗಾಳಿಯಲ್ಲಿ. ತೆಂಗು ಕಂಗಿನ ಗರಿಗಳು ಚವರಿ ಬೀಸಿದುವು. ಹೊಳೆಯ ಸಾಲಿನ ಮರಗಳ ತುತ್ತತುದಿಯಲ್ಲಿ ಕುಳಿತ ಕೋಗಿಲೆ 'ಕೂಹು, ಕೂಹು' ಎಂದು ತನ್ನ ಸವಿಗೊರಲನ್ನು ತೆರೆಯಿತು. 'ಸುವಾಸಿನೀ, ಸುವಾಸಿನೀ' ಎಂದು ಕರೆಯುತ್ತ ಕುಲಕರ್ಣಿಯವರು ಅಲ್ಲಿಗೆ ಬಂದರು.

'ಸುವಾಸಿನಿ ಈಗ ಒಂದು ಆಳವಾದ ಹೊಳೆಯ ಗುಂಡಿಗೆ ಹಾರಿಬಿಡುತ್ತಿದ್ದಳು' ಎಂದು ಹರಿ ತಿಳಿಸಿದ.

'ಹೌದೇನು ? ನೀವು ಹಿಡಿದಿರೋ ಇಲ್ಲವೊ ?'

'ಇಲ್ಲ. ಅದಕ್ಕಿಂತಲೂ ಆಳವಾದ ಎದೆಗುಂಡಿಗೆಗೇ ನೆಗೆದಳು' ಎಂದು ಹರಿ ಪ್ರಾರಂಭಿಸಿದ. ಬಹಳ ಹೊತ್ತಿನ ವರೆಗೆ ಆ ಶಿಲೆಕಲ್ಲಿನ ಮೇಲೆ ಒತ್ತೊತ್ತಿಗೆ ಕುಳಿತು ಮೂವರೂ ಮಾತನಾಡಿದರು.

ಬಹಳ ಹೊತ್ತಿನ ವರೆಗೆ ಅವರು ಬಾರದಿದ್ದುದನ್ನು ಕಂಡ ಸೀತಮ್ಮನವರು 'ಹೌದ್ರಿ. ಇಲ್ಲಿ ಬನ್ನಿ. ಒಂದು ಮಾತಿದೆ' ಎಂದು ಗೋವಿಂದರಾಯರನ್ನು ಕರೆದರು. ನಸ್ಯ ಏರಿಸುತ್ತ 'ಏನದು ? ಏನದು, ಅಷ್ಟು ರಹಸ್ಯ ?' ಎಂದು ಕೇಳುತ್ತ ಅವರು ಅಡಿಗೆಮನೆಗೆ ಬಂದು ಕುಳಿತರು. 'ಹರಿ ಮತ್ತು ಸುವಾಸಿನಿ ಗಂಡ ಹೆಂಡತಿಯರು ಹಾಗಿದ್ದಾರೆ' ಎಂದು ಪ್ರಸ್ತಾವನೆ ಓದಿದರು ಸೀತಮ್ಮ.

'ಹೌದಾ ?'

‘ ನಿಜ. ’

‘ ನನಗೇನೂ ಕಾಣಲಿಲ್ಲ. ಹರಿ ಬಹಳ ಫ್ರೀ ಆಗಿ ಮಾತಾಡುತ್ತಾನೆಂತ ತಿಳಿದು ನಿನ್ನ ಸಂಶಯವಾ ? ಅವನ ಸ್ವಭಾವವೇ ಹಾಗೆ. ಸುಭಾಷಿಣಿ ಬಂದಾಗಲೂ ಅವನು ಹರಟೆ ಹೊಡೆಯುತ್ತಿದ್ದ. ಗುಲಾಬಿ ಕಮಲೆಯರು ಬಂದಾಗ ಅವರ ಜುಟ್ಟು ಹಿಡಿದು ಎಳೆದಿದ್ದ. ಅವನು ಪಾಪ ಎಂದರೆ ಪಾಪ. ಅದಕ್ಕೇ ಹಾಗೆ ಎನ್ನುತ್ತಿದ್ದೆಯಾ ? ’

‘ ಅಲ್ಲ. ಮೇಲಿಂದ ಮೇಲೆ ಹಾಗೆಯೇ ತೋರುತ್ತದೆ. ಆದರೆ ಬಹಳ ಸೂಕ್ಷ್ಮ ದೃಷ್ಟಿಯಿಂದ ಕಂಡರೆ ಗೊತ್ತಾಗುತ್ತದೆ ’ ಎಂದು ಸೀತಮ್ಮನವರು ಕೆಲವು ಉದಾಹರಣೆಗಳನ್ನು ಕೊಟ್ಟರು.

“ ಒಳ್ಳೆಯದಾಯ್ತು ಬಿಡು. ‘ ಹರಿ ಜೈಲಿಗೆ ಹೋದ ಮೇಲೆ ಅವನಿಗೆ ಯಾರು ಹೆಣ್ಣು ಕೊಡುತ್ತಾರೆ ? ’ ಎಂದು ಅಳುತ್ತಿದ್ದೆ. ಇನ್ನೇನೂ ನೀನು ದುಃಖಪಡುವ ಕಾರಣವಿಲ್ಲ ನೋಡು. ”

‘ ಯಾವ ಊರು ? ಯಾವ ದೇಶ ? ’

‘ ಯಾವ ಊರಾದರೇನು ? ಹೆಣ್ಣು ತರಲು ಯಾವ ದೇಶವಾದರೇನು ? ಧಾರವಾಡವಲ್ಲ, ನನಗೆ ವಯಸ್ಸಿರುತ್ತಿದ್ದರೆ ಲಂಡನ್ನಿಗೆ ತೆರಳಿ ಒಂದು ಲೇಡಿ ಯನ್ನೇ ಕಟ್ಟಿಕೊಂಡು ಬರುತ್ತಿದ್ದೆ. ’

‘ ನಿಮಗೆ ಬರೇ ತಮಾಷೆ. ’

‘ ಹೌದು. ಮತ್ತೆ ಇದಕ್ಕೆ ದುಃಖಪಡಬೇಕಾ ? ನಿನಗೆ ಮರುಳು. ’

‘ ಹೌದು, ಮರುಳು ನನಗೆ. ನಮ್ಮ ಹೆಣ್ಮಕ್ಕಳು ಹೇಗಿದ್ದಾರೆ ? ತೊಳೆದು ಕೈ ಹಿಡಿಯಬೇಕು. ಸುಭಾಷಿಣಿ ಬಂದರೆ ರಾತ್ರಿ ದೀಪ ಹಚ್ಚುವುದೇ ಬೇಡ. ಸುಗುಣ ಸ್ವಲ್ಪ ಗಿಡ್ಡವಿದ್ದರೂ ಮದಿವಾಳ್ ಪಕ್ಕಿ. ಸುವಾಸಿನಿ ಹಾಗಿಲ್ಲ. ’

‘ ಏನಾಗಿದೆ ಅವಳಿಗೆ ? ‘

‘ ಹರಿ ಹೇಗಿದ್ದಾನೆ ? ಅವಳು ಹೇಗಿದ್ದಾಳೆ ? ’

‘ ಓಹೋಹೋ. ನಿನ್ನ ಮಾತಿನ ಅರ್ಥ ಈಗ ಆಯಿತು ನನಗೆ. ಹರಿ ಹುಡುಗನಾ ? ಅವನು ತಪ್ಪಿ ಹುಟ್ಟಿದ. ಹುಡುಗಿಯೇ ಆಗಬೇಕಿತ್ತು ಅವನು. ಕೊನೆಯ ಗಳಿಗೆಯಲ್ಲಿ ಹುಡುಗನಾದ. ’

ಸೀತಮ್ಮನವರು ನಕ್ಕರು.

ಗೋವಿಂದರಾಯರು ಅಲ್ಲಿಗೇ ನಿಲ್ಲಿಸಲಿಲ್ಲ. ‘ ಕೆಲವರು ಹೆಣ್ಣಿನ ಮೈ

ಬಣ್ಣಕ್ಕೆ ಮರುಳಾಗುವರು. ಮಣ್ಣು ಬೇಕು ಕೆಲವರಿಗೆ. ಐದಲ್ಲ ಹತ್ತು ಸಾವಿರ ವರದಕ್ಷಿಣೆ ಬೇಡುವವರೂ ಇದ್ದಾರೆ. ಅವರಿಗೆ ಅಷ್ಟು ದೊರೆತರೆ ಸಾಕು. ಅದೇ ಪರಬ್ರಹ್ಮವೆಂದು ತಿಳಿದುಬಿಡುವರು. ಅಷ್ಟರಿಂದಲೇ ಅವರ ಮೈ ಮನಸ್ಸನ್ನು ಸೂರೆಗೊಳ್ಳಲು ಸಾಧ್ಯ. ಅವರ ದೃಷ್ಟಿ ಇವುಗಳಾಚೆ ನಿಲುಕಲಾರದು. ಮನಸ್ಸು ಉನ್ನತ ಸೋಪಾನಕ್ಕೆ ಏರುವುದಿಲ್ಲ. ಕುದುರೆ ಮುಖದ ಕೋಡುಗಲ್ಲನ್ನು ಅವರು ಹತ್ತಲಾರರು. ಅಂತಃಕರಣದ ಹೊಂದಿಕೆ, ಭಾವ ಸಾಮರಸ್ಯಗಳಿಗೆ ಅವರು ಬೆಲೆ ಕೊಡುವುದಿಲ್ಲ. ಆದರೆ ಬೆಲೆ ಕೊಡುವ ಜೀವಗಳೂ ಉಂಟು. ಹರಿ–ಸುವಾಸಿನಿಯರು ಹಾಗಿರುವರೆಂದು ತೋರುತ್ತದೆ. ಒಲಿದವರು ಒಬ್ಬರನ್ನೊಬ್ಬರು ಮದುವೆಯಾಗುವುದು ಧರ್ಮ. ನಾವು ದೂರವಿರಿಸಲೆತ್ನಿಸುವುದು ಸರಿಯಲ್ಲ.'

'ನಾನೆಲ್ಲಿ ವಿಘ್ನ ತಂದೆ? ಇದ್ದುದನ್ನು ಹೇಳಿದರೆ ನನ್ನ ಮೇಲೆಯೇ ತಿರುಗಿ ಬಿದ್ದಿರಲ್ಲ? ಅಗತ್ಯಮಾಡಿಕೊಳ್ಳಲಿ. ಇಂದೇ ನನ್ನ ಕಣ್ಣೆದಿರಿಗೇ ಆಗಲಿ' ಎಂದು ಸೀತಮ್ಮನವರು ಆಡುತ್ತಿದ್ದಾಗಲೇ ಹೊರಗೆ ತೆರಳಿದ್ದ ಮೂವರೂ ಮರಳಿದರು.

ಮುಖಮಂಟಪದಿಂದಲೇ ಗೋವಿಂದರಾಯರು ಸುವಾಸಿನಿಯನ್ನು ಕರೆದರು. 'ಏ ಸುವಾಸಿನೀ, ಇಲ್ಲಿ ಬಾ ಮಗಳೇ. ಹರಿಯ ಕೋಟಿನ ಕಿಸೆಯಲ್ಲಿದ್ದ ಫೌಂಟನ್‌ಪೆನ್ ತಾ. ಒಂದು ಬಿಳಿ ಹಾಳೆಯನ್ನು ಇದ್ದರೆ ಕೊಡು' ಎಂದು ನುಡಿದರು. ಅವಳು ಕೊಡಲು ಬಂದಾಗ ಕೈಹಿಡಿದು ಕುಳ್ಳಿರಿಸಿ, ಹೇಳಿದರು: "ನಮ್ಮ ಹರಿಗೆ ಮಂಗಳೂರಿನ ಹೆಣ್ಣನ್ನು ನೋಡಿದೆ. ಅವರು ಐದು ಸಾವಿರ ವರದಕ್ಷಿಣೆ ಕೊಡುವರಂತೆ! ಐದು ಕೊಡುವವರಿಗೆ ಇನ್ನೈದು ಸಾವಿರ ಕೊಟ್ಟರೇನು ಮುಂಡೆಮೂರಿ? ಅವರ ಅಪ್ಪನ ಮನೆ ಗಂಟೇನು ವೆಚ್ಚವಾಗುತ್ತದೆ? ಬ್ಲೇಕ್‌ಮಾರ್ಕೆಟ್ ಮಾಡಿ ಮಾಡಿ ಹಣ ಗಳಿಸಿದ್ದಾರೆ ಲಕ್ಷಾಂತರ. ಕೊಡಲಿ ಒಂದು ಮೋಟಾರ್ ಕಾರ್. ಮದುವೆಯ ದಿನ ಒಂದು ಕ್ಷಣ ಮಾತ್ರ ಮದುಮಕ್ಕಳನ್ನು ಮೋಟಾರಿನಲ್ಲಿ ಮೆರವಣಿಗೆ ಮಾಡಿದರೆ ಸಾಲದು. 'ನಮ್ಮ ಕಂಡಿಶನ್ನಿಗೆ ಒಪ್ಪದಿದ್ದರೆ ನಿಮ್ಮ ಹುಡುಗಿ ಬೇಡ. ಊರಿನೊಳಗಿರುವುದು ನಿಮ್ಮದೊಂದೇ ಹುಡುಗೆಯಲ್ಲ. ಈ ಊರಲ್ಲದಿದ್ದರೆ ಮತ್ತೊಂದು. ಈ ಹುಡುಗಿಯಲ್ಲದಿದ್ದರೆ ಮಗುದೊಂದು. ಏನು ಊರು ಉರುಟಾಗಿ ಹೋಯ್ತೆಂದು ತಿಳಿದಿರಾ? ನಿಮ್ಮ ಅಪ್ಪನಂತಹ ಹುಡುಗಿ

ಯನ್ನು ನೋಡುತ್ತೇನೆ ಮಗನಿಗೆ' ಎಂದು ಬರೆದು ಬಿಡುತ್ತೇನೆ. ನೋಡು ಇದಕ್ಕೆ ನೀನೇನೆನ್ನುತ್ತೀ? ತಕ್ಷಣ, ತಕ್ಷಣ ಹೇಳಿ ಬಿಡು."

ಅವರ ಮಾತಿಗೆ ಏನು ಉತ್ತರ ಕೊಡಬೇಕೆಂದೇ ಸುವಾಸಿನಿಗೆ ತಿಳಿಯ ಲಿಲ್ಲ. ಇನ್ನಷ್ಟು ಸೋಜಿಗದಿಂದ ಅವಳು ಮೋರೆಗೆ ಕೈಯಿಟ್ಟುಕೊಂಡು ಕುಳಿತಳು. ಅವರ ತಂದೆಯ ಹೆಸರು ಕೇಳಿ ಗೋವಿಂದರಾಯರು ಪತ್ರ ಆರಂಭಿಸಿದುದರಿಂದ ಸುವಾಸಿನಿಗೆ ಮತ್ತೂ ಆಶ್ಚರ್ಯ. ಒಂದೊಂದು ಸಾಲು ಬರೆದಂತೆ ಅವಳ ಕೆನ್ನೆ ಕೆಂಪೇರತೊಡಗಿತು. ಮುಚ್ಚಿದ ತುಟಿಗಳು ಬಿಚ್ಚಿ ಅಗಲವಾದುವು. ಪೂರ್ಣ ಮುಗಿವವರೆಗೂ ಅವರು ಅವಳನ್ನು ಹೋಗ ಗೊಡಲಿಲ್ಲ. ಕಾಗದ ಮುಗಿಸಿ 'ಓದು, ಗಟ್ಟಿಯಾಗಿ ಓದು' ಎಂದು ಅವಳ ಕೈಯಲ್ಲಿಟ್ಟರು. ಮದುವೆಗೆ ಸಮ್ಮತಿ ಸೂಚಿಸಿ ಸುವಾಸಿನಿಯ ತಂದೆಗೆ ಗೋವಿಂದರಾಯರು ಪತ್ರ ಬರೆದಿದ್ದರು. ಒಕ್ಕಣೆ ಕೇಳಿದ ಕುಲಕರ್ಣಿಯವರಿಗೆ ಅತ್ಯಂತ ಹರುಷವಾಯಿತು. 'ನಿಮಗೆ ನಾವು ಋಣಿಗಳು' ಎಂದು ಅವರು ಕೈಜೋಡಿಸಿದರು. ಹರಿ ಅಡಿಗೆಮನೆಗೆ ತೆರಳಿದ. ಸುವಾಸಿನಿ ಪತ್ರವನ್ನು ಗೋವಿಂದರಾಯರ ಕೈಗಳಲ್ಲಿಟ್ಟು ನಮಸ್ಕಾರ ಮಾಡಿದಳು. 'ಮಗಳೇ, ಸುಮಂಗಲೀಭವ' ಎಂದು ಅವರು ಕೈಗಳಿಂದ ತಲೆಯನ್ನು ಪೂಸಿದರು. ಸೀತಮ್ಮನವರಿಗೆ ನಮಸ್ಕಾರ ಮಾಡಿದಾಗ ಅವರು ತೋಳುಗಳಿಂದ ಸುವಾಸಿನಿ ಯನ್ನು ಸೆಳೆದುಕೊಂಡು, 'ಚನ್ನಾಗಿ ಇರಿ. ನೀವು ಚನ್ನಾಗಿದ್ದರೆ ಅದೇ ನಮಗೆ ಆನಂದ. ಮತ್ತೇನನ್ನೂ ನಾವು ಅಪೇಕ್ಷಿಸುವುದಿಲ್ಲ' ಎಂದು ಅವಳ ಬೆನ್ನಿನ ಮೇಲೆ ಕೈಯ್ಯಾಡಿಸಿದರು. ಅಲ್ಲೇ ಕುಳಿತ್ತಿದ್ದ ಹರಿ ಹಿಂದಿನಿಂದ ಬಂದು ಸುವಾಸಿನಿಯ ಜಡೆ ಹಿಡಿದೆಳೆದು, 'ನಿನ್ನನ್ನು ಮದುವೆ ಆಗುವವರು ಯಾರು? ನಾನೋ ನನ್ನ ತಾಯಿಯೋ? ಮಾಡು, ನನಗೆ ನಮಸ್ಕಾರ ಮಾಡು' ಎಂದ.

'ಈಗ ನಿಮಗೆ ನಮಸ್ಕಾರವಿಲ್ಲ. ಏಕೆ, ಈಗಲೇ ಗಂಡನ ಹಕ್ಕು ಸ್ಥಾಪಿಸಲು ಹೊರಟರೇನು ಮತ್ತೆ? ಲಗ್ನದವರೆಗೆ ಅದು ಸಾಧ್ಯವಿಲ್ಲ. ಊಹುಂ' ಎಂದು ಕಡೆಗಣ್ಣಿನ ನೋಟದಿಂದಲೇ ಅವನನ್ನು ತಿವಿದಳು.

'ಹಾಂ, ಆಯ್ತು. ಫಜೀತಿ ಆಯ್ತು. ಸ್ವರಾಜ್ಯ ಲಭಿಸುವ ವರೆಗೆ ನಾನು ಲಗ್ನವಾಗುವಂತಿಲ್ಲ. ಅಷ್ಟರವರೆಗೆ ಒಂದು ನಮಸ್ಕಾರವೂ ಇಲ್ಲ ನನಗೆ. ಎಂಥಾ ಗಂಡ ನಾನು? ಗಂಡನಲ್ಲ ಗುಂಡ! ಪುಂಡ!'

ಅವನ ವಿನೋದದ ಮಾತು ಕೇಳಿ ಸೀತಮ್ಮನವರಿಗೆ ನಗುವನ್ನು ತಡೆಯ ಲಾಗಲಿಲ್ಲ. ಅವರಿಗೆ ಬಹಳ ತಮಾಷೆ ಕಂಡಿತು. ಸುವಾಸಿನಿ ನಮಸ್ಕರಿಸು ವಂತೆ ಮಾಡಿ ಅವರೂ ತಮಾಷೆ ಕಂಡರು. ಅವಳು ನಮಸ್ಕರಿಸಿದಾಗ ಹರಿ, ನಾನು ನಿನ್ನನ್ನು ಹೇಗೆ ಆಶೀರ್ವದಿಸಬೇಕು? ಅಷ್ಟ ಪುತ್ರೀ ಸೌಭಾಗ್ಯವತೀ ಭವ ಎಂದು ಹೇಳಿ ಬಿಡಲಾ?' ಎಂದು ನಗಿಸಿದ.

ಉತ್ತರ ಕೊಡದೆ ಸುವಾಸಿನಿ ಅಲ್ಲಿಂದೆದ್ದು ಪಡಸಾಲೆಗೆ ಓಡಿದಳು. ಒಂದೆರಡು ದಿನಗಳ ಮೇಲೆ ಗುಡ್ಡ ಬೆಟ್ಟ ಘೋರಾರಣ್ಯಗಳ ಮಧ್ಯೆ ಹಾದು ಹೋಗುತ್ತಿರುವ ಎಳ್ನೀರ್ ಘಟ್ಟದ ಒಳದಾರಿ ಹಿಡಿದು ಅವರೆಲ್ಲರೂ ಹೊರಟು ಹೋದರು.

ಅವರು ಹೋದ ಒಂದೆರಡು ದಿನಗಳಲ್ಲೇ ಗೋವಿಂದರಾಯರ ಮನೆಗೆ ಮೂವರು ಪೋಲೀಸರು ಬಂದರು. ಅವರ ರಾಕ್ಷಸ ಸ್ವರೂಪ ಕಂಡೇ ಸೀತಮ್ಮನವರ ಕೈಕಾಲು ನಡುಗಿದವು. ಗೋವಿಂದರಾಯರೂ ಮನೆಯಲ್ಲಿರ ಲಿಲ್ಲ. ತೋಟಕ್ಕೆ ನೀರು ಬಿಡುತ್ತ ಕುಳಿತಿದ್ದರು. ಅಲ್ಲಿಗೆ ಓಡಿ ಬಂದ ಸೀತಮ್ಮನವರು, 'ಹೌದ್ರಿ, ಪೋಲೀಸರು ಬಂದರು! ಪೋಲೀಸರು!' ಎಂದು ಹೆದರಿದ ಇಳಿಧ್ವನಿಯಲ್ಲಿ ನುಡಿದರು. 'ನನಗೆ ಕಿವಿ ಕೇಳಿಸುವುದಿಲ್ಲ ಸರಿ. ಗಟ್ಟಿಯಾಗಿ ಹೇಳು. ಯಾರು ಬಂದರು?' ಎಂದು ಕಿವಿಗೆ ಅಂಗೈ ಆನಿಸಿ ಕೇಳಿದರು ಅವರು.

'ಪೋಲೀಸರು!'

'ಯಾರು, ಪೋಲಿಗಳಾ?'

'ಅಲ್ಲ. ಪೋಲೀಸರು!'

'ಓಹೋ, ಕೇಳಿತು. ಈಗ ಕೇಳಿತು. ಪೋಲೀಸರು ಬಂದರಾ? ಇಷ್ಟೇ ಏನು? ಇಷ್ಟಕ್ಕೇಕೆ ಗಾಬರಿ ನಿನಗೆ?'

'ಗಾಬರಿಯಾಗದೆ ಮತ್ತೆ? ಅವರ ಕೆಂಪು ಮುಂಡಾಸೇನು! ಕೋವಿ ಗಳೇನು? ಬಿಚ್ಚುಗತ್ತಿಗಳೇನು?'

'ಥೂ, ನಿನಗೆ ಮರುಳು! ಇದಕ್ಕೆಲ್ಲ ಹೆದರಬೇಕೇಕೆ? ಕತ್ತಿ ತಂದಿದ್ದರೆ ಕಾಡು ಕಡಿಯಲಾಯಿತು. ಅವರು ಕೋವಿ ತಂದುದೂ ಒಳ್ಳೇದೇ. ಇಂದು ರಾತ್ರಿ ಹಂದಿ ಹೊಡೆಯಲು ಹೇಳಿಬಿಡುತ್ತೇನೆ.'

'ನೀವು ಬರಬೇಕಂತೆ.'

" ಬರಬೇಕು ? ' ಬರುತ್ತಾರೆ ಈಗ ' ಎಂದು ಹೇಳು ಹೋಗು. ಬಿಸಿಲಿಗೆ ಬಂದಿದ್ದಾರೆ. ಬೆವರು ಒರಸಿಕೊಂಡು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಲಿ. ಬಿಸಿ ನೀರು ಬೇಕಾಗಿದ್ದರೆ ಕೊಡು. ಈಗ ಬರುತ್ತೇನೆ. ನಾನು ಕಾಡಿಗೆ ಓಡಿಹೋಗುವುದಿಲ್ಲ. ಸ್ವಲ್ಪ ತಡೆದು ಬರುತ್ತೇನೆ" ಎಂದು ಹೆಂಡತಿಯನ್ನು ಕಳಿಸಿದರು.

ಸ್ವಲ್ಪ ತಡವಾದ ಮೇಲೆ ಒಬ್ಬ ಪೋಲೀಸನೇ ಬಂದು, ' ಏನು ? ಹೇಳಿ ಕಳಿಸಿದರೂ ಬರಲಿಲ್ಲ ? ' ಎಂದು ಅಹಂಕಾರ ತೋರಿಸಿದ.

' ಯಾಕೆ ಬರಬೇಕು ? ಪೋಲೀಸೆಂದರೆ ದೊಡ್ಡ ಕಲೆಕ್ಟರೇನು ? '

' ಕಲೆಕ್ಟರೇ. ಕಲೆಕ್ಟರರ ಅಧಿಕಾರವೂ ಇದೆ ಈಗ ನಮಗೆ. '

" ಕಲೆಕ್ಟರನ ಅಧಿಕಾರವಲ್ಲ, ನಿಮಗೆ ಎಲ್ಲ ಅಧಿಕಾರವಿದೆ. ಇಲ್ಲದ ಅಧಿಕಾರ ಯಾವುದು? ನಿಮ್ಮದೇ ರಾಜ್ಯ. ' ಪೋಲೀಸರ ರಾಜ್ಯವೇ ನಡೆದಿದೆ ಈಗ ' ಎಂದು ನನ್ನ ಮಗ ಹರಿ ಹೇಳಿಯೇ ಬಿಟ್ಟಿದ್ದಾನೆ " ಎಂದು ಹೇಳುತ್ತ ಮುಖಮಂಟಪಕ್ಕೆ ಬಂದರು.

' ನಿಮ್ಮ ಅಧಿಕ ಪ್ರಸಂಗ ಬೇಡ. ನಾವು ನಿಮ್ಮ ಹರಿಯನ್ನೇ ಹುಡುಕಲು ಬಂದದ್ದು. ಎಲ್ಲಿದ್ದಾರೆ ಅವರು ? '

' ಎಲ್ಲಿದ್ದಾರೆಂದು ನನ್ನನ್ನೇ ಕೇಳುತ್ತಿದ್ದೀರಲ್ಲ ? ನಿಮ್ಮ ಸರಕಾರವಿದೆ ; ನಿಮ್ಮ ಸೈನ್ಯವಿದೆ. ನಿಮ್ಮ ಪೋಲೀಸ್ ಪಡೆಯಿದೆ. ನಿಮ್ಮ ಸಿ. ಐ. ಡಿ. ಗಳಿದ್ದಾರೆ. ನಿಮ್ಮ ತಾಳಕ್ಕೆ ಸರಿಯಾಗಿ ಮೇಳಗಟ್ಟುವ ರಾವ್‌ಸಾಹೇಬ್, ರಾವ್‌ಬಹದ್ದೂರ್, ಖಾನ್ ಬಹದ್ದೂರುಗಳಿದ್ದಾರೆ. ನಿಮಗೆ ಗೊತ್ತು. ನಿಮ್ಮನ್ನೇ ನಾನು ಕೇಳಬೇಕೆಂದಿದ್ದೇನೆ. ಏನು ಮಾಡಿದಿರಿ ? ಎಲ್ಲಾದರೂ ಗುಂಡು ಹೊಡೆದು ರಸ್ತೆಯ ಬದಿಯ ತೋಡಿಗೆ ಎಸೆದಿರಾ ? ಎದೆಗೆ ತಿವಿದು ಈ ಕಾಡಿನಲ್ಲೇ ಎಲ್ಲಾದರೂ ಎಸೆದು ಬಂದಿರಾ? ಕಲ್ಲು ಕಟ್ಟಿ ಬಾವಿಗೆ ಹೊತ್ತು ಹಾಕಿದಿರಾ ? ಕೈಕಾಲು ಮುರಿದಿರಾ ? ಏನು ಸಮಾಚಾರ ? ಅವನ ಸುದ್ದಿಯಿಲ್ಲದೆ ಬಹಳ ಕಾಲವಾಯ್ತು. ಮುಪ್ಪಿನ ಕಾಲಕ್ಕೆ ಇದೊಂದು ಚಿಂತೆ ನಮಗೆ. ಅದನ್ನು ಹೇಳಿ ದುಃಖ ನಿವಾರಿಸುವುದನ್ನು ಬಿಟ್ಟು ನನ್ನನ್ನೇ ಕೇಳುತ್ತಿದ್ದೀರಿ. ಆಶ್ಚರ್ಯ. ಮತ್ತೆ ತಾಯಗರ್ಭದೊಳಗೆ ಹೊಕ್ಕಿಕೊಂಡನೆಂದು ಭಾವಿಸಿ ಇಲ್ಲಿ ಹುಡುಕಲು ಬಂದಿರೇನು ಮತ್ತೆ ? '

' ತಾಯಗರ್ಭವನ್ನು ಹೊಕ್ಕರೂ ನಾವು ಬಿಡುವುದಿಲ್ಲ ' ಎಂದೊಬ್ಬ ದರ್ಪದಿಂದ ನುಡಿದ.

'ನೀವು ಯಾಕೆ ಬಿಟ್ಟೇರಿ? ನಿಮಗೆ ತಾಯಿ ತಂದೆ, ಅಣ್ಣ ತಮ್ಮ, ಬಂಧು ಬಳಗ, ತಮ್ಮ ಮಂದಿ, ತಮ್ಮ ಜನ ಎಂಬ ಭಾವನೆಯೇ ಇಲ್ಲ. ಅದೆಂದೋ ಗೊತ್ತು ನಮಗೆ.'

ಈ ಮುದುಕ ಭಾರೀ ಮಾತನಾಡುತ್ತಿದ್ದಾನಲ್ಲಾ!' ಎಂದು ಒಬ್ಬ ಪೋಲೀಸು ಮತ್ತೊಬ್ಬನ ಮೋರೆ ನೋಡಿ ನುಡಿದ.

'ನಿಮ್ಮ ಸರಕಾರ! ನಿಮ್ಮ ಸರಕಾರ! ಎಂದು ಬಹಳ ಉದ್ದ ನಾಲಿಗೆ ಎಳೆಯುತಿದ್ದೀರಿ? ಇದೇನು ನಿಮ್ಮ ಸರಕಾರವಲ್ಲವೇ?' ಎಂದ ಇನ್ನೊಬ್ಬ.

'ಅಲ್ಲ.'

'ಯಾಕಲ್ಲ? ನಾವು ನಿಮ್ಮವರಲ್ಲವೇ?'

'ಅಲ್ಲ. ನಮ್ಮವರಾದರೆ ಇಷ್ಟು ದೌರ್ಜನ್ಯ ತೋರಿಸುತ್ತಿದ್ದಿರಾ? ನಮ್ಮ ದೇಶದಲ್ಲಿ ಹುಟ್ಟಿರಬಹುದು. ನಮ್ಮ ಗಾಳಿ, ನಮ್ಮ ಆಹಾರ ನೀವೂ ಸೇವಿಸುತ್ತಿರಬಹುದು. ನಮ್ಮ ಬಣ್ಣ ನಿಮಗೆ ಬಂದಿರಬಹುದು. ಆದರೆ ನೀವು ನಮ್ಮವರಲ್ಲ. ನೀವು ಬಣ್ಣ ಬದಲಾಯಿಸಿದವರು. ಎಲ್ಲಿಂದಲೋ ಬಂದ ವಿಲಾಯತಿ ಅಣ್ಣಂದಿರ ಅಣ್ಣ ತಮ್ಮಂದಿರು!'

'ಯಾಕಪ್ಪಾ ಒಣ ಚರ್ಚೆ?' ಎಂದು ಒಬ್ಬ ಪೋಲೀಸು ಮತ್ತೊಬ್ಬನಿಗೆ ಛೀ ಹಾಕಿದ.

"ಅದೆಲ್ಲ ಹೋಗಲಿ. ನೀವು ಸತ್ಯ ಹೇಳಿ. ನಿಮಗೆ ನಾವು ಏನೂ ಮಾಡುವುದಿಲ್ಲ. ನಿಮ್ಮ ಮೂರನೇ ಮಗ ಹರಿ ಇಲ್ಲಿ ಬಂದಿದ್ದರಂತೆ. ಇಂದಬೆಟ್ಟು, ನಾವೂರು, ಮಿತ್ತಬಾಗಿಲ್, ಬಂಗಾಡಿಗಳಲ್ಲೆಲ್ಲ ತಿರುಗಿ 'ಲೆವಿ' ಅಕ್ಕಿ ಸರಕಾರಕ್ಕೆ ಕೊಡಬಾರದೆಂದು ರೈತರಿಗೆ ದುರ್ಬೋಧನೆ ಮಾಡಿದ್ದರಂತೆ. ಸರಕಾರಕ್ಕೆ ಅದರ ರಿಪೋರ್ಟು ಬಂದಿದೆ. ಅರೆಸ್ಟ್ ಮಾಡಲು ನಮಗೆ ಆರ್ಡರಿದೆ. ಎಲ್ಲಿದ್ದಾರೆ ಅವರು?"

'ನನಗೇನು ಗೊತ್ತು?'

'ನೀವು ಹೀಗೆಲ್ಲ ಮಾತನಾಡಬೇಡಿ. ನಾವು ಕೊನೆಗೆ ನೀವೇ ಇದಕ್ಕೆ ಕಾರಣರೆಂದು ನಿಮ್ಮನ್ನೇ ಅರೆಸ್ಟ್ ಮಾಡಿ ಒಯ್ಯಲುಂಟು.'

'ಆಗತ್ಯ. ಈಗಲೇ ಮಾಡಿ. ಪಂಚೆ ಅಂಗಿ ಕೋಟು ಹಾಕಿಕೊಂಡು ಬರಲು ಪುರುಸೊತ್ತು ಕೊಡುತ್ತೀರಾ? ಅಥವಾ ಇದೇ ಬೈರಾಸಿನಿಂದಲೇ ಬರಲಾ?'

ಪೋಲೀಸರು ಮೌನದಿಂದ ಇದ್ದರು.

"ಯಾಕೆ ಮೌನ ತಾಳಿದಿರಿ? ಅರೆಸ್ಟ್ ಮಾಡಿ. ಬೇಕಾದರೆ ಈ ಹೊತ್ತು ಇಲ್ಲೇ ಇರಿ. ನನ್ನೊಂದಿಗೆ ಬನ್ನಿ. ನಾನು ಹಳ್ಳಿಗಳಿಗೆ ತೆರಳಿ ನಿಮ್ಮ ಇದಿರೇ ಅಕ್ಕಿಮುಡಿ ಒಂದನ್ನೂ ಈ ಬ್ರಿಟಿಷ್ ಸರಕಾರಕ್ಕೆ ಕೊಡಬೇಡಿರೆಂದು 'ದುರ್ಬೋಧನೆ' ಮಾಡುತ್ತೇನೆ ರೈತರಿಗೆ! ಯಾಕೆ ಕೊಡಬೇಕು ರೈತರು ಅಕ್ಕಿ? ಯಾರಿಗೆ ಯಾರು ಕೊಡಬೇಕು? ಯಾಕೆ ಕೊಡಬೇಕು? ಕೊಡಲು ಏನು ಉಪಕಾರ ಮಾಡಿದೆ ನಿಮ್ಮ ಸರಕಾರ ನಮ್ಮ ರೈತರಿಗೆ? ಯಾವ ಸರಕಾರ ನಮ್ಮ ಸುಖದುಃಖ ಕೇಳುತ್ತದೆ? ಒಂದು ವರುಷ ನೇಜಿಗೆ ಬಂಬೂಚು ರೋಗ ಬಂತು. ಕಾಡುಪ್ರಾಣಿಗಳು ಬಂದು ಬೆಳೆಯನ್ನು ನಾಶ ಮಾಡುವುದಂತೂ ತಪ್ಪಿದ್ದಲ್ಲ. ಒಂದು ಕೋವಿ ಲೈಸೆನ್ಸ್ ಕೊಡಬೇಕೆಂದರೆ ಕೊಡುವಂತಿಲ್ಲ. ಕೊಡಬೇಕಾದರೆ ನೂರು ಸಲ ಹೋಗಿ ಬರಬೇಕು. ಲಂಚ ಕೊಡಬೇಕು ನಿಮಗೆ. ಕೋವಿ ದೊರೆತರೂ ರೈತನ ಕಷ್ಟವೇನೂ ನೀಗಲಿಲ್ಲ ಅಲ್ಲಿಗೇ. ಆಚೆ ವರುಷ ನೇತ್ರಾವತಿಗೆ ನೆರೆ ಬಂದು ಗದ್ದೆ ಹೊಳೆ ಏಕ ಪ್ರಕಾರವಾಯಿತು. ನೆಟ್ಟ ನೇಜಿ ನಾಶವಾಗಿ ಗದ್ದೆಗಳಲ್ಲಿ ಉಸುಕು ತುಂಬಿತು. ಈ ವರುಷ ಬೋರನ ಎತ್ತು ಹುಲಿಬಾಯಿಗೆ ತುತ್ತಾಯಿತು. ತುಕ್ರನ ಹೆಂಡತಿ ಹೆತ್ತು ಪ್ರಾಣ ಬಿಟ್ಟಳು. ಅಹ್ಮದ್ ಬ್ಯಾರಿಗೆ ಮಲೇರಿಯಾ ಗಡ್ಡೆಯೇ ಆಗಿದೆ. ಜ್ವರ ಬಂದು ಬಂದು ಬ್ಯಾರಿ ಹಾಸಿಗೆಯಿಂದ ಏಳುವುದೇ ಇಲ್ಲ. ಯಾರು ಕೇಳುತ್ತಾರೆ ಅವರನ್ನು? ನೆರೆ ಹಾವಳಿಗೀಡಾದವರಿಗೆ ನಿಮ್ಮ ಸರಕಾರ ಏನಾದರೂ ಪರಿಹಾರ ಕೊಟ್ಟಿತಾ? ಎತ್ತು ಕಳೆದುಕೊಂಡವನಿಗೆ ಎತ್ತು ಕೊಡುತ್ತೀರಾ? ನರಳುವವರಿಗೆ ಒಂದು ಆಸ್ಪತ್ರೆಯುಂಟಾ ಈ ಊರಿಗೆ? ವರುಷ ವರುಷವೂ ಈ ಬಂಗಾಡಿಯಲ್ಲಿ ಜನಸಂಖ್ಯೆ ಕರಗುತ್ತಾ ಹೋಗುತ್ತಿದೆ ಹೊರತು ಏರುವುದಿಲ್ಲ. ಸತ್ತವರಂತೂ ಸತ್ತರು. ಇದ್ದವರೂ ಈ ಅವಾಂತರಗಳಿಂದ ಸತ್ತವರಂತೆಯೇ ಇದ್ದಾರೆ. ಅದರ ಮೇಲೆ ನಿಮ್ಮ ದರ್ಪ! ನಿಮ್ಮ ಕಾಯಿದೆ! ನಿಮ್ಮ ಕಾನೂನು! ನಿಮ್ಮ ಸರಕಾರ! ನಿಮಗೆ ಲೆವಿ ಕೊಡಬೇಕು ಅಕ್ಕಿ ಮುಡಿ! ನಿಮಗೆ ನಮ್ಮ ಸುಖ ದುಃಖ ಏನು ಗೊತ್ತಾಗುತ್ತದೆ? ತಿಂಗಳಾದ ಕೂಡಲೇ ಬರುತ್ತದೆ ಕಾಗದದ ಚೂರು. ಚಲ್ಲುತ್ತೀರಿ ನೀರಿನ ಹಾಗೆ. ಕಡಿಮೆ ಬಿದ್ದರೆ ಹೆದರಿಸಿ ಬೆದರಿಸಿ ತರುವ ವಿದ್ಯೆಯೂ ಗೊತ್ತುಂಟು! ನೋಡುವ, ಈ ಅರಣ್ಯದಲ್ಲಿ ಮನೆ ಮಾಡಿ ಈ ಕಷ್ಟಗಳಿಗೆಲ್ಲ ಎದೆಗೊಟ್ಟು ನಿಂತು ಒಂದು

ವರುಷ ಬೇಸಾಯ ಮಾಡಿ? ಆಗ ಯಾರಾದರೂ ಬಂದು 'ಅಕ್ಕಿ ಮುಡಿ ಉರಳಿಸು' ಎಂದರೆ ನೀವು ಅರ್ಧ ಬೆಲೆಗೆ ಉರುಳಿಸುತ್ತೀರಾ ನೋಡುವಾ."

ಗೋವಿಂದರಾಯರ ಆವೇಶದ ಮಾತು ಕೇಳಿ ಪೋಲೀಸರು ಸ್ತಬ್ಧರಾಗಿ ಹೋದರು. ಸೂರ್ಯ ನೆತ್ತಿಯಿಂದ ಇಳಿಯತೊಡಗಿದ್ದುದರಿಂದ ಅವರ ದರ್ಪವೂ ಸ್ವಲ್ಪ ಇಳಿಯಿತು.

'ಹೌದು ಸ್ವಾಮೀ. ನೀವು ಹೇಳುವುದೆಲ್ಲ ನಿಜ. ಆದರೆ ಏನು ಮಾಡುವುದು? ಈ ಒಂದು ಹೊಟ್ಟೆ ಇದೆಯಲ್ಲ? ಅದರ ಕರ್ಮಕ್ಕೆ ಈ ಕೆಲಸ ಮಾಡುತ್ತಿದ್ದೇವೆ' ಎಂದೊಬ್ಬ ಉಸುರಿದ.

ಗೋವಿಂದರಾಯರು ತಮ್ಮ ಹೊಟ್ಟೆಯನ್ನು ಮುಟ್ಟಿಕೊಂಡು ಹೇಳಿದರು: 'ಹೌದು ಹೊಟ್ಟೆಯ ಕರ್ಮ. ಆದರೆ ಅದು ನಿಮಗೆ ಮಾತ್ರವಲ್ಲ, ನನಗೂ ಇದೆ. ನನ್ನ ಮಕ್ಕಳಿಗಿದೆ, ನನ್ನ ಊರಿನವರಿಗಿದೆ. ನಮ್ಮ ದೇಶದ ಎಲ್ಲ ಜನಕ್ಕಿದೆ. ಜನರಿಗೆ ಮಾತ್ರವಲ್ಲ, ಪಶು ಪಕ್ಷಿ, ಕ್ರಿಮಿ ಕೀಟ, ಹಾವು ಚೇಳು, ಮೊದಲಾದ ಸಮಸ್ತ ಜಂತುಗಳಿಗಿದೆ. ಅವೂ ಒಂದಲ್ಲದಿದ್ದರಿನ್ನೊಂದು ವಿಧಾನದಿಂದ ಹೊಟ್ಟೆ ತುಂಬಿಸಿಕೊಳ್ಳುತ್ತವೆ. ಒಂದನ್ನು ಇನ್ನೊಂದು ನುಂಗುತ್ತದೆ. ಹುಲಿ ದನದ ಗಂಟಲು ಮುರಿದು ರಕ್ತ ಹೀರುತ್ತದೆ. ಹೆಬ್ಬಾವು ಇಡೀ ಜೀವವನ್ನೇ ಗುಳುಂ ಎಂದು ನುಂಗಿಬಿಡುತ್ತದೆ. ಮನುಷ್ಯರು ಈ ಹುಲಿ ಹೆಬ್ಬಾವುಗಳಿಗೆ ಸಮವಾ? ಮನುಷ್ಯನಿಗೆ ದೇವರು ಬುದ್ಧಿ ಕೊಟ್ಟಿದ್ದಾನಲ್ಲಾ! ಸದಸದ್ವಿವೇಕವನ್ನಿತ್ತಿದ್ದಾನಲ್ಲಾ! ಅದನ್ನು ಈ ರೀತಿ ದುರುಪಯೋಗಗೊಳಿಸುವುದಾ? ಹೊಟ್ಟೆಯ ಹೆಸರಿನಲ್ಲಿ ನಿಶ್ಶಸ್ತ್ರ ಸ್ತ್ರೀ ಪುರುಷರ ಮೇಲೆ ಗುಂಡುಹಾರಿಸುವುದೇನು? ನಿಮ್ಮ ಬಿಚ್ಚುಗತ್ತಿಗಳಿಂದ ಅವರ ಕೋಮಲ ಎದೆಗಳಿಗೆ ಗಂಟಲುಗಳಿಗೆ ತಿವಿಯುವುದೇನು? ಗಂಟಲು ಮುರಿವ ವನ್ಯಹುಲಿಗಳಿಗಿಂತಲೂ ಮನುಷ್ಯ ಕ್ರೂರನಾದನಲ್ಲಾ! ಹುಲಿಗಳೂ ಮನುಷ್ಯರ ಗಂಟಲು ಮುರಿಯುವುದು ವಿರಳ. ಹಾಗಿರುವಾಗ, ಹುಲಿಗಳಿಗಿಂತಲೂ ಕಡೆಯಾಗಿ ಹೊಟ್ಟೆಯ ಹೆಸರಿನಿಂದ ನೀವು ಮನುಷ್ಯತ್ವವನ್ನೇ ಕಳೆದುಕೊಂಡಿರಲ್ಲ!'

ಪೋಲೀಸರ ಮೋರೆ ಚಿಕ್ಕದಾದುವು!

ಗೋವಿಂದರಾಯರು ಅಲ್ಲಿಗೇ ನಿಲ್ಲಸಲಿಲ್ಲ– 'ಮನುಷ್ಯತ್ವ ಕಳೆದುಕೊಂಡವನು ಏನನ್ನೂ ಮಾಡುತ್ತಾನೆ. ಯಾವ ಪಾಪಕೃತ್ಯಕ್ಕೂ ಅವನು ಹೇಸುವು

ದಿಲ್ಲ. ಈ ಹೊತ್ತು ಮಂದಿಯ ಮಕ್ಕಳ ತಲೆ ಒಡೆಯುತ್ತೀರಿ. ಎಷ್ಟೋ ತಾಯಂದಿರು ಮಕ್ಕಳ ಸಾವಿನಿಂದ ಕೊನೆಯ ವರೆಗೂ ರೋದಿಸುವಂತೆ ಮಾಡಿದಿರಿ. ಮನೆಯಿಂದ ಹೊರಟವರು ಮತ್ತೊಮ್ಮೆ ಬಂದು ಹೆತ್ತವರ ಮೊಗ ನೋಡಲಿಲ್ಲ. ಗಂಡಂದಿರನ್ನು ಕಳೆದುಕೊಂಡ ಸತಿಯರೆಷ್ಟೋ? ಸೆರೆಮನೆಗಳಲ್ಲಿ ಇನ್ನೂ ಸಾವಿನ ಬದುಕು ದೂಡುತ್ತಿರುವ ಭಕ್ತಬಂಧಿಗಳೂ ಬಹಳ ಜನ ಇದ್ದಾರೆ. ಇಷ್ಟೂ ನಿಮ್ಮ ಕೈಯಿಂದಾಯಿತು. ನೀವು ಮನುಷ್ಯರಲ್ಲ, ಈ ಕಲಿಯುಗದ ದಾನವರು.'

ಪೋಲೀಸರು ತುಟಿ ಬಿಚ್ಚಲಿಲ್ಲ.

'ದಾನವರನ್ನೂ ದಹಿಸುವ ಅನಂತ ಶಾಶ್ವತ ಶಕ್ತಿಯೊಂದಿದೆ ಎಂಬುದನ್ನು ಮರೆಯದಿರಿ. ಅದಕ್ಕೆ ಈ ತಾಮಸಿಕ ಶಕ್ತಿಯನ್ನು ನಿರ್ನಾಮ ಮಾಡುವ ಪ್ರಚಂಡ ಬಲವಿದೆ. ಅದು ಭೂಕಂಪದಷ್ಟು ಆಕಸ್ಮಿಕ, ಸಿಡಿಲಿನಂತೆ ಭೀಕರ, ಗಾಳಿಯಷ್ಟು ವ್ಯಾಪಕ, ಮಿಂಚಿನಷ್ಟು ವೇಗವುಳ್ಳದ್ದು. ನಿಮ್ಮ ಬಾಣ, ಬಂದೂಕು, ಬಾಂಬು ಯಾವುದೂ ಈಡಲ್ಲ ಅದಕ್ಕೆ. ಮನುಷ್ಯರು ಅಳಿದರೂ ಆ ಶಕ್ತಿಗೆ ಅಳಿವಿಲ್ಲ. ಅಳಿದವರ ಜಡದೇಹಗಳು ಮಣ್ಣುಪಾಲಾದುವು ಎಂದು ನೀವು ತಿಳಿದಿರಬಹುದು. ಆದರೆ ಮಹಾಪುರುಷರ ಮೈಮಣ್ಣೇ ಹೊಸ ಧಾನ್ಯಗಳಿಗೆ ಸಾರಸರ್ವಸ್ವವನ್ನು ನೀಡುತ್ತದೆ. ಅದನ್ನು ತಿಂದ ಜನ ಹೊಸ ಚೈತನ್ಯದಿಂದ ಮುಂದೆ ಬರುವರು. ಆಕಾಶದಲ್ಲಿ ಚಲಿಸುತ್ತಿರುವ ನಮ್ಮ ಮಹಾಪುರುಷರ ಮಹಾ ಆತ್ಮಗಳು ಹಕ್ಕಿಗಳ ಸವಿಗೊರಲಿನ ಮೂಲಕ ನಿದ್ದೆಹೋದವರನ್ನು ಬಡಿದೆಬ್ಬಿಸುವುವು. ಅವರ ಮಾತು ಗಾಳಿಯಲ್ಲಿ ಅಲೆ ಅಲೆಯಾಗಿ ತೇಲಿ ಬಂದು ನಮ್ಮ ಜನರನ್ನು ಪ್ರೇರೇಪಿಸುವುದು. ಸೂರ್ಯನ ಪ್ರಚಂಡ ಶಕ್ತಿ ನಮ್ಮ ಜನರ ರಕುತವನ್ನು ಒಮ್ಮೊಮ್ಮೆ ಕುದಿಸದೇ ಇರಲಾರದು. ಆಗ ನೀವು ಒಬ್ಬನನ್ನು ಕೊಂದರೆ ಮತ್ತೊಬ್ಬ ಎದೆಗೊಡುವ. ನನ್ನನ್ನು ನೀವು ಹಿಡಿದರೆ ನನ್ನ ಮಕ್ಕಳು ಬಿಡಲಾರರು. ಒಂದು ತಲೆಗಲ್ಲ ಈ ಹೋರಾಟ. ಸ್ವರಾಜ್ಯದೊರೆಯದಿದ್ದರೆ ತಲೆತಲಾಂತರಗಳ ವರೆಗೆ ಸಾಗುವುದು ನಿಶ್ಚಯ. ತಲೆತಲಾಂತರಗಳಿಂದಲೂ ಇದು ನಡೆಯುತ್ತ ಬಂದಿದೆ. ಗಾಂಧೀ ತಲೆ ಇದ್ದಾಗಲೇ ಸ್ವಾತಂತ್ರ್ಯ ಲಭಿಸಿದರೆ ಪುಣ್ಯ. ಇಲ್ಲದಿದ್ದರೆ ಅದು ಅಲ್ಲಿಗೇ ನಿಲ್ಲುವುದಿಲ್ಲ; ದೊರೆಯುವಾಗಲೇ ನಿಲ್ಲುವುದು. ಆಗಲಾದರೂ ನಮ್ಮ ಕಂಬನಿ ಸುರಿದಲ್ಲಿ ಹೂಗಳ ಗಿಡಗಳೇ ಚಿಗುರುವುವು. ಬಾಗಿದ ತಲೆಗಳು ಆಗ ತಲೆ ಎತ್ತಿ ನಿಲ್ಲುವುವು. ನಮ್ಮ

ದೇಶದ ಶೀಲಕ್ಕೆ ಬಾದ ಕುಂದು ಮಾಯುವಾಗುವುದು. ನಾವು ಮಕ್ಕಳಿದ್ದಾಗ, ಯುವಕರಿದ್ದಾಗ, ಪುರುಷರಾದಾಗ, ಹಣ್ಣು ಹಣ್ಣು ಮುದುಕರಾದಾಗ ಸಹಿಸಿದ ಅನಂತ ಕಷ್ಟಗಳು ನಮ್ಮ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳಿಗೆ ಇದಿರಾಗಲಿಕ್ಕಿಲ್ಲ. ಆಗ ನೀವೆಲ್ಲಿರುತ್ತೀರಿ? ನಿಮ್ಮ ಮಕ್ಕಳೆಲ್ಲಿರುತ್ತಾರೆ? ಈಗ ನಿಮಗೆ ಹೊಟ್ಟೆಗೆ ಕೊಡುತ್ತಿರುವ ಬ್ರಿಟಿಷರ ಗತಿಯೇನಾಗುತ್ತದೆ?'

ಪೋಲೀಸರೊಬ್ಬರೂ ಉಸಿರೆತ್ತಲಿಲ್ಲ.

"ಬ್ರಿಟಿಷರು ಗಂಟು ಮೂಟೆ ಕಟ್ಟಿ ಹೊರಡಲೇ ಬೇಕು. ಆಗ ನಿಮ್ಮ ಗತಿ ಏನು? ನಿಮ್ಮ ಹೆಂಡತಿ ಮಕ್ಕಳ ಸ್ಥಿತಿ ಏನು? 'ಅವರ ತಲೆಯನ್ನು ಒಡೆಯಿರಿ. ಅವರ ಮಕ್ಕಳ ಕರುಳು ಬಗೆಯಿರಿ! ಅವರ ಸ್ತ್ರೀಯರನ್ನು ಎಳೆಯಿರಿ! ಅವರ ಮನೆಗಳನ್ನು ಸುಡಿರಿ. ಇವನೇ ನನ್ನ ಕಾಲುಮುರಿದವನು! ಇವನ ಕಾಲು ಕಡಿಯಿರಿ! ಇವನು ನನ್ನ ತಲೆಗೂದಲು ಕಿತ್ತಿದವನು! ಇವನ ಕುತ್ತಿಗೆ ಹಿಚುಕಿರಿ. ಸತ್ತ ಅವರ ವಿರೂಪ ಹೆಣಗಳನ್ನು ಅರಬೀ ಸಮುದ್ರಕ್ಕೆ ಎಸೆಯಿರಿ! ಅವರನ್ನು ನಂಬಿದವರ ಕಳೇಬರಗಳ ಮೇಲೆ ಹೆಜ್ಜೆಗಳನಿಟ್ಟು ಕೊಂಡು ಬ್ರಿಟಿಷರು ಅರಬ್ಬೀ ಸಮುದ್ರ ದಾಟಿ ಹೋಗಲಿ!' ಎಂದು ಉದ್ರಿಕ್ತ ವಾದ ನಮ್ಮ ಜನಾಂಗ ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳಲೆತ್ನಿಸಿದರೆ ನೀವು ಮಾಡುವುದಾದರೂ ಏನು? ಯಾರು ರಕ್ಷಿಸುವವರು ನಿಮ್ಮನ್ನು? ಈ ಒಣ ಕಟ್ಟಿಗೆ ಈ ಕಬ್ಬಿಣದ ತುಂಡು ನಿಮ್ಮನ್ನು ಪಾಲಿಸುತ್ತದೆಯೆಂದು ತಿಳಿದಿರಾ?"

ಪೋಲೀಸರು ಅತ್ಯಂತ ಆಶ್ಚರ್ಯದಿಂದಲೂ ಗಾಬರಿಯಿಂದಲೂ ಅವರನ್ನು ನೋಡತೊಡಗಿದರು. ಗೋವಿಂದರಾಯರು ಒಂದು ಚಿಟಿಕೆ ನಸ್ಯ ಏರಿಸಿ ನುಡಿದರು—

'ಪರದೇಶಗಳಲ್ಲಾದರೆ ಆ ರೀತಿ ಮಾಡದೆ ಬಿಡಲಾರರು. ನಿಮ್ಮನ್ನೆಲ್ಲ ಜೀವಂತ ಸುಟ್ಟಾರು. ಆದರೆ ಆ ಮುಯ್ಯಿ ತೀರಿಸಿಕೊಳ್ಳುವ ಕಾಲ ನಮ್ಮ ದೇಶಕ್ಕೆ ಬರುವುದು ಬೇಡ. ನಮ್ಮ ಜನರ ಸಂಸ್ಕೃತಿಗೆ ಅದು ಹೇಳಿದುದಲ್ಲ. ಅನ್ಯಾಯ ಬಗೆದವರಿಗೆ ಕೇಡು ಮಾಡುವುದು ನಮ್ಮ ಧರ್ಮವಲ್ಲ. ಗಾಂಧಿ ಮಹಾರಾಯ ಅದನ್ನೇ ಹೇಳುತ್ತಿದ್ದಾನೆ. ಗಾಂಧಿ ಜವಾಹರಲಾಲರಂತಹ ಮಹಾ ಪುರುಷರು ಬದುಕಿರುವುದರಿಂದಲೇ ನೀವು ಬದುಕಿರುವಿರಿ. ಅವರು ಬದುಕಿರುವಾಗಲೇ ನಮ್ಮ ಬದುಕು ನಮ್ಮ ಕೈಗೆ ಬಂದರೆ ನೀವೂ ಬದುಕಿದಿರಿ. ಸ್ವರಾಜ್ಯ ಲಭಿಸಿದರೂ ನಿಮ್ಮ ಒಂದು ಕೂದಲನ್ನು ಕೊಂಕಿಸಲು ಅವರು

ಬಿಡಲಿಕ್ಕಿಲ್ಲ. ಆದುದರಿಂದ ಈ ಕ್ಷಣಿಕ ಹೊಟ್ಟೆತೃಪ್ತಿಗಾಗಿ ಮಾಡಬಾರದು ದನ್ನು ಮಾಡುವುದು ತರವಲ್ಲ. ಅಹಂಕಾರ, ದರ್ಪ ಇವೆಲ್ಲ ಎಷ್ಟು ದಿನದ ಬಾಳ್ವೆಗೆ ?'

ಅವರು ಮಾತು ನಿಲ್ಲಿಸಿದ ಮೇಲೆ ಮುದುಕ ಪೋಲೀಸಿನವನೊಬ್ಬ ಕೈ ಜೋಡಿಸಿದ-'ಸ್ವಾಮಿ, ತಪ್ಪಾಯಿತು. ನೀವು ದೊಡ್ಡವರು. ತಿಳಿಯದೆ ಮಾತನಾಡಿದೆವು. ನಮಗೂ ಈ ಚಾಕರಿ ಸಾಕಾಗಿದೆ. ಏನಾದರೂ ಕೆಲಸ ತೋರಿಸದಿದ್ದರೆ ನಮ್ಮ ಮೇಲೆ ಗುರ್ ಗುರ್ ಮಾಡುತ್ತಾರೆ. ಅದಕ್ಕೆ ಬಂದೆವು. ನಿಮ್ಮ ಮಗ ಎಲ್ಲೋ ಹೊರಟುಹೋಗಿದ್ದಾರೆಂದು ರಿಪೋರ್ಟುಮಾಡುತ್ತೇವೆ. ಅವರನ್ನು ಹಿಡಿದು ನಮಗೇನಾಗಬೇಕು ?'

ಅವರೆಲ್ಲ ಕೆಂಪು ಮುಂಡಾಸನ್ನು ತೆಗೆದು ಕೆಳಗೆ ಇಟ್ಟದ್ದರಿಂದ, 'ನಿಮ್ಮ ಊಟ ಆಗಿದೆಯಾ ?' ಎಂದು ಕೇಳಿದರು ಗೋವಿಂದರಾಯರು.

'ಇಲ್ಲ ಸ್ವಾಮಿ.'

'ಹಾ, ಆಗಲೇ ಹೇಳಬಹುದಿತ್ತಲ್ಲ ? ಊಟವಾದ ಮೇಲೆಯೇ ಮಾತ ನಾಡುತ್ತ ಕುಳಿತುಕೊಳ್ಳಬಹುದಿತ್ತು. ನನಗೂ ಯಾರಾದರೂ ಬೇಕು' ಎಂದ ಗೋವಿಂದರಾಯರು ಅಡಿಗೆಮನೆಗೆ ತೆರಳಿದರು. ಸೀತಮ್ಮನವರು ಅಳುತ್ತ ಕುಳಿತಿದ್ದರು. 'ನೀವು ಆ ಘಟಿಂಗರೊಡನೆ ಯಾಕೆ ಆ ರೀತಿ ಮಾತನಾಡುತ್ತೀರಿ ? ಎಲ್ಲಾದರೂ ಕೋವಿಯಿಂದ ಒಂದು ಹೊಡೆದರೆ ನಿಮಗಷ್ಟೇ ಸಾಕು' ಎಂದು ಅವರು ತಲೆಗೆ ಕೈಯಿಟ್ಟುಕೊಂಡರು.

'ಅದೇನು ಅಮಟೆಕಾಯಿ ಗೊರಟಾ ? ಬಿಟ್ಟುಬಿಡು ಅದೆಲ್ಲ. ಒಂದಿಷ್ಟು ಅನ್ನಮಾಡು. ಬಿಸಿಲಿಗೆ ಬಂದಿದ್ದಾರೆ. ಊಟವನ್ನೇ ಮಾಡಿಲ್ಲವಂತೆ!'

'ನಾನವರಿಗೆ ಈಗ ಅನ್ನಮಾಡಿ ಹಾಕುತ್ತೇನೆ! ಪಾಯಸವನ್ನು ಮಾಡಲೇನು ?' ಎಂದು ಸೀತಮ್ಮನವರು ವ್ಯಂಗ್ಯಧ್ವನಿ ತೆಗೆದರು.

'ಛೇ, ಛೆ. ಹಾಗೆಂದರೆ ಹೇಗೆ ? ಮನೆಗೆ ಬಂದವನು ಪೋಲೀಸನಿರಲಿ ನಮ್ಮ ದಾಯಾದಿ ಇರಲಿ, ಪಂಡಿತನಿರಲಿ ಘಟಿಂಗನಿರಲಿ, ಊಟದ ಹೊತ್ತಿಗೆ ಒಂದು ಹಿಡಿ ಹಾಕುವುದು ನಮ್ಮ ಧರ್ಮ. ಹಾಗೆಲ್ಲ ಮರುಳುತನ ಮಾಡಬೇಡ! ಏಳು' ಎಂದು ಬೋಧಿಸಿ ಅನ್ನಕ್ಕೆ ನೀರಿಡಿಸಿದರು.

ಕಾಲದ ಪಕ್ಷಿ ಗರಿಗೆದರಿ ಹಾರಿತು. ಕಾಲಭೈರವ ಲೀಲೆ ಆಡಿದ. ಅವನ ಕುಣಿತಕ್ಕೆ, ಮೈ ಮಣಿತಕ್ಕೆ, ಕಾಲಿನ ತುಳಿತಕ್ಕೆ ಸರಿಯಾಗಿ ಹಿಟ್ಲರ್, ಮುಸ್ಸೋಲಿನಿ, ಟೋಜೋ, ಚರ್ಚಿಲ್, ರೂಜ್‌ವೆಲ್ಟ್, ಸ್ಟಾಲಿನ್ನರು ಹೆಜ್ಜೆ ಇಕ್ಕಿದರು. ಇಳೆಯಲ್ಲಿ ರಣಕಹಳೆ ಮೊಳಗಿತು. ಸಾಗರದ ತೆರೆಗಳೇ ಮೈ ತಾಳಿದಂತೆ ಇತ್ತಂಡದವರ ಯುದ್ಧ ಹಡಗುಗಳು ಸಮುದ್ರಮಥನದಲ್ಲಿ ಪಾಲುಗೊಂಡವು. ಜಲಾಂತರ್ಗಾಮಿಗಳು ಸಪ್ತ ಸಮುದ್ರಗಳಲ್ಲಿ ಸುಳಿದವು. ವಿಮಾನಗಳಿಂದ ಆಕಾಶ ಮುಚ್ಚಿಹೋಯ್ತು. ಅವು ಸುರಿಸಿದ ಸಿಡಿಲಿನ ಮಳೆಗೆ ಒಂದೊಂದೇ ಗುಡಿ ಗೋಪುರಗಳು ಜರಿದುವು. ಸಾವಿರಾರು ಟ್ಯಾಂಕುಗಳ ಓಡಾಟದಿಂದ ಹೊಲ ನೆಲಸಮವಾಯಿತು. ತೋಪುಗಳ ಗರ್ಜನೆಗೆ ಭೂಮಿ ಕಂಪಿಸಿತು. ಲಕ್ಷೋಪಲಕ್ಷ ಸೈನಿಕರು ಬರ್ಬರನಿಗಿಂತಲೂ ಬರ್ಬರತನದಿಂದ ಕಾದಾಡಿದರು. ಕೋಟಿ ಕೊತ್ತಲಗಳು ಪುಡಿಯಾದವು. ಪೇಟೆ ಪಟ್ಟಣಗಳು ಹುಡಿಗೊಂಡವು. ಆಬಾಲವೃದ್ಧರು ಬಲಿಯಾದರು. ಮೊದಮೊದಲು ಈ ಸಂಹಾರದಲ್ಲಿ ಹಿಟ್ಲರನದೇ ಮೇಲುಗೈಯಾಗಿತ್ತು. ಆ ಮೇಲೆ ರಶಿಯ, ಬ್ರಿಟನ್ ಮತ್ತು ಅಮೇರಿಕೆಗಳ ಕೈಮೇಲಾಯಿತು. ಸಬ್ ಮರೀನ್, ರೆಕ್ಕೆ ಬಾಂಬು, ಆಕಾಶಬಾಣ ಮೊದಲಾದ ಯಾವ ಶಸ್ತ್ರಾಸ್ತ್ರಗಳಿಂದಲೂ ಅವರನ್ನು ತಡೆಯಲಾಗಲಿಲ್ಲ. ನಾಲ್ಕೂ ಕಡೆಗಳಿಂದ ಅವರು ಮುತ್ತಿ ಜರ್ಮನಿಯನ್ನು ತಿವಿದರು. ಜರ್ಮನಿ ನಿರ್ನಾಮವಾಯ್ತು. 'ಅಪ್ಪಯ್ಯ, ಜರ್ಮನಿ ಬಿತ್ತು. ಜರ್ಮನಿ ಹಾಳಾಯ್ತು. ಜರ್ಮನಿ ದೇಹೀ ಎಂದಿತು' ಎಂದು ರಾಜ ಬಂದು ತಿಳಿಸಿದಾಗ ಗೋವಿಂದರಾಯರ ಕಣ್ಣು ತೊಯ್ದವು.

'ಹಿಟ್ಲರ್ ಏನಾದ?' ಎಂದು ಅವರು ಮೆಲುದನಿಯಲ್ಲಿ ಕೇಳಿದರು.

'ಹಿಟ್ಲರನ ಕಥೆ ದೊಡ್ಡದು. ಆತ್ಮಹತ್ಯೆಮಾಡಿಕೊಂಡನೆಂದು ಹೇಳುತ್ತಿದ್ದಾರೆ. ಎಷ್ಟು ನಿಜವೋ, ಎಷ್ಟು ಸುಳ್ಳೋ? ಅವರ ಕೈಗೆ ಸಿಕ್ಕಿದ್ದರೆ ಅವರೇ ಗುಂಡು ಹೊಡೆದಿರಲೂ ಬಹುದು. ಇಲ್ಲದಿದ್ದರೆ ನೆಪೋಲಿಯನ್ನನನ್ನು ಸೈಂಟ್‌ಹೆಲಿನಾಕ್ಕೆ ಕಳಿಸಿದಂತೆ ಇವನನ್ನೂ ಗುಟ್ಟಿನಿಂದ ಎಲ್ಲಾದರೂ ಕಳಿಸಿರಲೂ ಸಾಕು. ಅಥವಾ ಹಿಟ್ಲರ್ ಸ್ಪೈಯಿನ್ ಅರ್ಜೆಂಟೀನುಗಳಿಗೆ ಓಡಿ ಹೋದನೋ? ಅಂತೂ ಇದೊಂದು ದೊಡ್ಡ ಗೂಢ.'

‘ಇನ್ನು ಜಪಾನ್ ಬಹಳ ದಿನ ಬದುಕಲಿಕ್ಕಿಲ್ಲ’ ಎಂದು ತಂದೆ ಉದ್ಗರಿಸಿದರು.

ಅವರ ಭವಿಷ್ಯ ಸುಳ್ಳಾಗಲಿಲ್ಲ. ಅಮೇರಿಕನ್ನರು ಹಿರೊಶಿಮಾ ನಾಗಸಾಕಿ ನಗರಗಳ ಮೇಲೆ ಆಟಂ ಬಾಂಬುಗಳನ್ನೆಸೆದರು. ಎರಡೂವರೆ ಲಕ್ಷ ಜನರಿಂದ ತುಂಬಿದ್ದ ಹಿರೊಶಿಮಾ ಪಟ್ಟಣ ಅರೆಕ್ಷಣದಲ್ಲಿ ಮರುಭೂಮಿಯಾಗಿ ಪರಿಣಮಿಸಿತು. ಅಳಿದುಳಿದವರೇ ವಿರಳ. ಉಳಿದವರೂ ಚಿಂತ್ರಹಿಂಸೆಗೆ ಒಳಗಾಗಿದ್ದರು. ಒಂದು ಕಟ್ಟಡವೂ ಉಳಿಯಲಿಲ್ಲ. ಅದರ ಕರುಣಕಥೆಯನ್ನು ರಾಜ ತಂದೆಯ ಮುಂದೆ ಬಂದು ವಿವರಿಸಿದಾಗ ನೀರು ಧಾರಾಕಾರವಾಗಿ ಸುರಿಯಿತು ಅವರ ಕಣ್ಣುಗಳಿಂದ.

ರಾಜ ಬೆರಗಾಗಿ ಕೇಳಿದ: ‘ಯಾಕೆ ಅಪ್ಪಯ್ಯ? ಹಿಟ್ಲರನ ಅವತಾರ ಮುಗಿಯಿತೆಂದು ನಾನು ಹೇಳಿದಾಗಲೂ ನಿಮಗೆ ದುಃಖವಾಯ್ತು. ಈಗ ಜಪಾನಿನ ಬಗೆಗೆ ಕೂಡಾ ಕನಿಕರ ಪಡುತ್ತಿದ್ದೀರಿ. ಈ ನಾಝಿಗಳು ಮತ್ತು ಫ್ಯಾಸಿಸ್ಟರು ಮಾಡಿದ ಅನ್ಯಾಯ ಅತ್ಯಾಚಾರಗಳು ಅಷ್ಟಿಷ್ಟಲ್ಲ. ಪಾಪಿಗಳಿಗೆ ತಕ್ಕ ಪ್ರಾಯಶ್ಚಿತ್ತವಾಯಿತಲ್ಲ!’

ಅವರು ಗದ್ಗದಿತ ಕಂಠದಿಂದಲೇ ಉತ್ತರ ಕೊಟ್ಟರು: ‘ಯಾರು ಪಾಪಿಗಳು? ಯಾರು ಪುಣ್ಯವಂತರು? ಜರ್ಮನರೂ ಜಪಾನರೂ ಅನ್ಯಾಯ ಬಗೆದರು ನಿಜ. ಆದರೆ ಆಂಗ್ಲೋ–ಅಮೇರಿಕನ್ನರು ಮಾಡಿದ ಮಹಾ ಪುಣ್ಯ ಕಾರ್ಯ ಎಂಥಾದ್ದು? ಹಿರೊಶಿಮಾ ನಗರದ ನಾಶ ಅವರ ಪುಣ್ಯಕಾರ್ಯವಾ? ಎಲ್ಲ ರಾಕ್ಷಸ ಕುಲ. ಬಲಾಚ ಪೃಥಿವೀ. ಜರ್ಮನಿ, ಜಪಾನುಗಳು ಬಿದ್ದುವು. ಅವರು ಅತ್ಯಾಚಾರಿಗಳು, ಪಾಪಿಗಳು, ಬರ್ಬರರು ಎಂದೆನ್ನುತ್ತಾರೆ. ಅವರು ವಿಜಯಿಗಳಾಗುತ್ತಿದ್ದರೆ ಇವರಿಗೂ ಅವೇ ಹೆಸರುಗಳನ್ನಿಡುತ್ತಿದ್ದರು. ರಣಹದ್ದುಗಳ ಬಣ್ಣ ಎಲ್ಲ ಒಂದೇ. ಅದಕ್ಕಾಗಿ ನಾನು ದುಃಖಪಡುವುದಿಲ್ಲ. ಆದರೆ, ಜರ್ಮನಿ ಮತ್ತು ಜಪಾನ್‌ಗಳಿಗೆ ದಾಸ್ಯದ ನೊಗಗಳು ಬಂದುವಲ್ಲಾ ಎಂದು ನನಗೆ ತಾಪ. ಸಾವು ಬೇಕು, ಪರರ ಗುಲಾಮಗಿರಿಯಲ್ಲ. ಸ್ವಾತಂತ್ರ್ಯ ಕಳೆದುಕೊಂಡ ಒಂದು ಜನಾಂಗದ ಗತಿ ಏನಾಗುತ್ತದೆ? ನಮ್ಮ ಸ್ಥಿತಿಯೇ ಅದಕ್ಕೊಂದು ಉದಾಹರಣೆ! ನಮಗೆ ಸ್ವಾತಂತ್ರ್ಯವಿದೆಯಾ?’

“ಇನ್ನು ನಮಗೆ ಸ್ವಾತಂತ್ರ್ಯ ಕೊಡದೆ ಬೇರೆ ಮಾರ್ಗವಿಲ್ಲ ಬ್ರಿಟಿಷರಿಗೆ. ಯುದ್ಧದಿಂದ ನಿರ್ವೀರ್ಯರಾಗಿದ್ದಾರೆ ಅವರು. ಸಾಲ ಕುತ್ತಿಗೆಯವರೆಗೆ

ಬಂದಿದೆ. ಗಾಂಧೀ ಜವಾಹರಲಾಲರನ್ನೆಲ್ಲ ಬಿಡುಗಡೆ ಮಾಡಿದ್ದಾರೆ ಆಗಲೇ. ಇನ್ನೊಮ್ಮೆ ಅವರು ಹೋರಾಟ ಹೂಡಿದರೆ ೧೯೪೨ ರ ನೂರ್ಮಡಿ ಆದೀತು. 'ಸ್ವಾತಂತ್ರ್ಯ ಕೊಡಿ ಭಾರತಕ್ಕೆ' ಎಂದು ಇಂಗ್ಲಂಡು, ಅಮೇರಿಕ, ರಶಿಯ ಗಳಲ್ಲೂ ಅನೇಕರು ಒತ್ತಾಯ ಮಾಡುತ್ತಿದ್ದಾರೆ. ಇನ್ನು ಹೋದಷ್ಟು ಕಾಲ ಹೋಗಲಿಕ್ಕಿಲ್ಲ."

"ಹೌದು. ಅಷ್ಟು ಕಾಲ ಕಳೆಯಲಿಕ್ಕಿಲ್ಲ. ನನ್ನ ಕಾಲದಲ್ಲೇ ಅದು ಲಭಿಸಿ ದರೆ ಅದೂ ಒಂದು ಮಹಾ ಭಾಗ್ಯವೇ. 'ಸ್ವಾತಂತ್ರ್ಯ' ಎಂಬ ಶಬ್ದ ನನ್ನ ಕಿವಿಗೆ ಬಿದ್ದರೆ ಸಾಕು, ಅಲ್ಲೇ ನನ್ನ ಪ್ರಾಣ ಹಾರಿ ಹೋದರೂ ಅಡ್ಡಿಯಿಲ್ಲ."

'ಅಪ್ಪಯ್ಯ, ಹಾಗೆ ಮಾತನಾಡಬೇಡಿ.'

'ಹಾಂ, ಮತ್ತೇನಾಗಬೇಕು ನನಗೆ? ಅಶ್ವತ್ಥಾಮ, ಬಲಿ, ವ್ಯಾಸ, ಹನುಮಂತ, ವಿಭೀಷಣರು ಚಿರಂಜೀವಿಗಳು. ಅವರಂತೆ ನಾನೂ ಚಿರಂಜೀವಿಯೆಂದು ತಿಳಿದುಕೊಂಡಿದ್ದೀಯಾ ಏನು? ತೋಟದಲ್ಲಿ ಪೂರ್ಣ ಬೆಳೆ ಎಂದು ಬಂದೀತು ಎಂದು ದಾರಿ ನೋಡುತ್ತಿದ್ದೇನೆ ನಾನು. ಗಿಡಗಳಲ್ಲಿ ಫಲ ಸಮೃದ್ಧಿಯಾಗಿ ಬಂದಾಗ ನಿನಗೆ ಸ್ವಾತಂತ್ರ್ಯ ಬಂದ ಹಾಗೆ. ನನ್ನ ಜೀವಕ್ಕೆ ಮತ್ತೆ ಸ್ವಾತಂತ್ರ್ಯವೇ. ನಾನಿದ್ದರೆ ಇದ್ದೆ, ಇಲ್ಲದಿದ್ದರೆ ಇಲ್ಲ.'

'ಅವರಿಗೆ ಎಪ್ಪತ್ತರ ಮರುಳು. ನಿನಗೂ ಮರುಳಾ ರಾಜಾ? ಬೇರೇನೂ ಕೆಲಸ ಇಲ್ವಾ ನಿನಗೆ?' ಎಂದು ಸೀತಮ್ಮ ನುಡಿದುದರಿಂದ ರಾಜ ಎದ್ದ.

ಹೌದು. ಗೋವಿಂದರಾಯರು ಸ್ವಲ್ಪ ಮರುಳರಂತೆಯೇ ಕಾಣು ತ್ತಿದ್ದಾರೆ ಸೀತಮ್ಮನವರ ಕಣ್ಣಿಗೆ. ಒಂದೊಂದು ಸಲ ಸೊಂಟದ ಬೈರಾಸ್ ಬಿಚ್ಚಿದ್ದರೂ ಅವರಿಗೆ ಗೊತ್ತಾಗುವುದಿಲ್ಲ. ಮೊದಲು ಬೆಳಿಗ್ಗೆ ಸ್ನಾನ ಮಾಡದೆ ಏನನ್ನೂ ಬಾಯಿಗೆ ಹಾಕಿಕೊಳ್ಳುತ್ತಿದ್ದಿಲ್ಲ. ಈಗ ಸ್ನಾನ ಒತ್ತಟ್ಟಿಗಿರಲಿ ಗೇರು, ಮಾವಿನ ಎಲೆಗಳಿಂದ ಹಲ್ಲುಜ್ಜಿಕೊಳ್ಳಲೂ ಇಷ್ಟವಿಲ್ಲ. ಹಾಗೆ ಬಾಯಿ ಮುಕ್ಕುಳಿಸಿ, ಕೈ ಮೈ ಬಿಸಿಮಾಡುವ ನೆವದಿಂದ ಒಲೆಯ ಮುಂದೆಯೇ ಬಂದು ಬಿಡುವರು. ಕಾಫಿ ಹೊಟ್ಟೆಗೆ ಬಿದ್ದ ಮೇಲೆಯೇ ಅಲ್ಲಿಂದ ಏಳುವರು. ಅಲ್ಲಿಂದೆದ್ದು ಮತ್ತೊಂದೆಡೆ ಕುಳಿತವರು ಗಂಟೆಗಟ್ಟಲೆ ಕುಳಿತು ಬಿಡುವರು. 'ಸ್ನಾನಕ್ಕಾಯಿತು. ಏಳಿ' ಎಂದು ಸೀತಮ್ಮನವರು ಕರೆದಾಗ, 'ಹೌದಾ? ಆಯ್ತಾ? ಊಟಕ್ಕೆ ಆಯ್ತಾ?' ಎಂದು ನುಡಿದು ಏಳುವರು. ಸ್ನಾನಕ್ಕಾಗಿ ಕೊಟ್ಟಗೆಯ ವರೆಗೆ ಸೀತಮ್ಮನವರು ಹಿಂಬಾಲಿಸಬೇಕು. ಅವರ ತಲೆಯ

ಮೇಲೆ ತಪ್ಪಲೆ ತಪ್ಪಲೆ ಬಿಸಿ ನೀರು ಸೀತಮ್ಮನವರೇ ಸುರಿಯಬೇಕು. ಎಷ್ಟು ಬಿಸಿ ಇದ್ದರೂ ಅವರಿಗೆ ತೃಪ್ತಿಯಿಲ್ಲ. ಮೈಯಿಂದ ಆವಿ ಏಳುವಂತಹ ಸುಡು ಸುಡು ನೀರನ್ನೇ ಬಯಸುತ್ತಾರೆ. 'ಬೆನ್ನು ತಿಕ್ಕು' ಎಂದು ಬಯಸಿ ನುಡಿಯುತ್ತಾರೆ. 'ನೀವು ತೇಟ್ ಮಗುವಿನಂತೆ ಮಾಡುತ್ತೀರಿ' ಎಂದು ಸೀತಮ್ಮನವರೆಂದರೆ, 'ಹೌದು. ನಿನಗೇನು ನಾಚಿಕೆಯಾಗುತ್ತದಾ?' ಎಂದು ಕೇಳುವರು.

ಸ್ನಾನ ತೀರಿಸಿ ಬಂದು ಬಾಳೆಯ ಎಲೆಯ ಮುಂದೆ ಕುಳಿತುಬಿಡುವರು. ಜಪತಪ ಎಲ್ಲ ಅಲ್ಲೇ. ಒಂದು ಚಿಟಿಕೆ ಹಾಕುವುದರೊಳಗೆ ಎಲ್ಲ ಮುಗಿದು ಬಿಡುತ್ತದೆ ಈಗ. ಮೊದಲು ಗಂಟೆಗಟ್ಟಲೆ ಬೇಕಾಗುತ್ತಿತ್ತು. ತೋಟದಲ್ಲಿ ನೆಟ್ಟ ಹೂ ತುಳಸಿಗಳನ್ನೆಲ್ಲ ಹರಿವಾಣದಲ್ಲಿ ತುಂಬಿಸಿ ಬೆಳಿಗ್ಗೆಯೇ ದೇವರ ಪೆಟ್ಟಿಗೆಯ ಮುಂದಿಡುತ್ತಿದ್ದುದು ನಿತ್ಯಕರ್ಮ. ಪೂಜೆಗೆ ಕುಳಿತವರ ದಾರಿ ನೋಡಿ ನೋಡಿ ಬೇಸರವಾಗುತ್ತಿತ್ತು ಸೀತಮ್ಮನವರಿಗೆ. 'ಬಂದೆನೇ ಬಂದೆ. ನಿನಗೇನಷ್ಟು ಅವಸರ?' ಎಂದು ಅಲ್ಲಿಂದಲೇ ಗದರಿಸುತ್ತಿದ್ದರು. ವರುಷಗಳು ಕಳೆದಂತೆ ಪೂಜಾ ಸಮಯ ಕಡಿಮೆಯಾಗುತ್ತಾ ಬಂದಿತು. ಮಕ್ಕಳು ಮರಿ ಬಂದಾಗ ಬೆಳಿಗ್ಗೆ ಪೂಜೆಯ ಶಾಸ್ತ್ರ ಮುಗಿಸಿ ಸಂಜೆ ತಾಳ ತೆಗೆದುಕೊಂಡು, 'ರಾಮನ ಬಂಟ ಹನುಮಂತ। ತಿರುಪತಿ ಎಂಬುದು ವೈಕುಂಠ। ತಾಳ ತಂಬೂರಿ ಕೈಯೊಳಗೆ। ರಾಮನ ಧ್ಯಾನವು ಮನದೊಳಗೆ॥' ಎಂದು ಭಜನೆಗೆ ಕುಳಿತುಬಿಡುತ್ತಿದ್ದರು. ಈ ಭಜನೆಯ ಹುಚ್ಚೂ ಬಹಳ ಸಮಯ ಉಳಿದಿತ್ತು. ಈಗ ಅದೊಂದೂ ಇಲ್ಲ. 'ಎಲ್ಲ ಗಟ್ಟಿ ಹತ್ತಿತು. ಸುಮ್ಮ ಸುಮ್ಮಗೆ ಮಕ್ಕಳಿಗೆ ಅನ್ನುತ್ತಿದ್ದಿರಲ್ಲ—ಒಂದು ಜಪವಿಲ್ಲ, ಆಹ್ನಿಕವಿಲ್ಲ ಎಂದು? ನೀವು ಏನು ಮಾಡುತ್ತಿದ್ದೀರಿ ಈಗ?' ಎಂದು ಒಮ್ಮೊಮ್ಮೆ ಸೀತಮ್ಮನವರು ಕೇಳುವುದುಂಟು.

'ನಾನೆಲ್ಲಿ ಬಿಟ್ಟಿದ್ದೇನೆ? ಸದಾ ಅವನದೇ ಚಿಂತೆಯಾಗಿದೆ ನನಗೆ. ಅದಕ್ಕೆ ಈಗ ಮಂತ್ರ ತಂತ್ರ ಬೇಕಾ? ಮನೆಯೇ ಆಗಬೇಕಾ? ಪತ್ರ ಫಲ ಪುಷ್ಪಗಳನ್ನು ಗಿಡಗಳಿಂದ ಕೊಯ್ಯಬೇಕಾ? ಎಲ್ಲ ಅವನವನ ಭ್ರಮೆ. ಅವನೊಂದು ಮಾಯೆ. ಅವನು ಸಾಕಾರ; ಅವನು ನಿರಾಕಾರ. ಇಡೀ ವಿಶ್ವವೇ ಅವನ ಮನೆ. ಅವನು ಅಣುರೇಣು ತೃಣಕಾಷ್ಟಗಳಲ್ಲಿದ್ದಾನೆ. ಈ ಪಂಚಭೂತಾತ್ಮಕವಾದ ದೇಹದಲ್ಲೂ ಇದ್ದಾನೆ. ಇದೂ ಒಂದು ಅವನ ದೇಗುಲ.

ಅವನು ಭಾವಾಕಾರ. ಮನಸ್ಸೇ ಅವನನ್ನು ಪೂಜಿಸುವ ಸಾಧನ. ಜ್ಞಾನವೇ ಅರ್ಪಿಸುವ ಮಲ್ಲಿಗೆ ಪುಷ್ಪ. ನಾನು ಎಲ್ಲಿ ಕುಳಿತಿರುತ್ತೇನೋ ಅಲ್ಲೇ ಮುಗಿಸಿ ಬಿಡುತ್ತೇನೆ ಅವನ ಪೂಜೆ. ಆದಕ್ಕೆ ಮನೆಯಾದರೂ ಅಷ್ಟೆ, ತೋಟವಾದರೂ ಅಷ್ಟೆ.'

ಆದರೆ, ಮನೆಯಲ್ಲಿ ಅವರು ಕುಳಿತಿರುವುದೇ ಕಡಿಮೆ. ತೋಟಕ್ಕೆ ಬಂದು ತಾಳೆಗೊರಗುವರು. ತೆಂಗು ಕಂಗುಗಳ ಮಡಲು ಬಿದ್ದಾಗ ಅವರಿಗೆ ಹರ್ಷ. ಇನ್ನೂ ಕೆಲವು ಸೋಗೆಗಳು ಬಿದ್ದಾಗ ಮರ ಎತ್ತರವಾಗಿ ಫಲ ಬರಬಹುದೆಂದು ಅವರ ನಂಬಿಗೆ. ಒಮ್ಮೊಮ್ಮೆ ಕಂಗಿನ ಸಿಂಗಾರ ಹೂ, ತೆಂಗಿನ ಹೂ, ಅವರ ತಲೆಯ ಮೇಲೆ ಉದುರುತ್ತದೆ. ಬಂಗಾರದ ಸರಿಗೆಗಳಲ್ಲಿ ಕಟ್ಟಿದಂತೆ ಅವು ತಲೆಗೂದಲಿನಲ್ಲಿ ತೂಗುವುವು. ಅವನ್ನು ಹೆಕ್ಕಿ ತೆಂಗು ಕಂಗುಗಳನ್ನು ದಿಟ್ಟಿಸುವರು. 'ಹಾಂ, ಈ ಮರ ಹೂ ಬಿಟ್ಟಿತು. ಈ ಮರಕ್ಕೆ ತೆಂಗಿನ ಕೈಗಳೆಷ್ಟೆಂದು ನೋಡಬೇಕು' ಎಂದು ಮನಸ್ಸಿನೊಳಗೇ ಹೇಳಿಕೊಳ್ಳುವರು. ಯೋಚನೆಯಲ್ಲೇ ಕಣ್ಮುಚ್ಚಿ ತಲ್ಲೀನರಾಗುವರು. ಸೀತಮ್ಮನವರು ಬಂದು ಕೈ ಹಿಡಿದು ಕರೆದಾಗ ನಿದ್ದೆಯಿಂದೆದ್ದವರಂತೆ ಏಳುವರು.

ಈ ಸಲ ಕರೆಯಲು ಬಂದ ಸೀತಮ್ಮನವರು ಕಣ್ಣೀರು ಸುರಿಸುತ್ತಲೇ ಬಂದರು. 'ಏ ಮರುಳೇ, ಯಾಕೆ ಹೀಗೆ ಸದಾ ಕಣ್ಣೀರು ತೆಗೆಯುತ್ತೀ? ನಿನ್ನ ಕಣ್ಣೀರಿನ ನೀರೇ ಸಾಕು ಈ ತೋಟಗಳಿಗೆ. ಮುಂದಿನ ವರುಷ ನಾನು ನೇತ್ರಾವತಿಗೆ ಕಟ್ಟವನ್ನೇ ಕಟ್ಟುವುದಿಲ್ಲ ನೋಡು' ಎಂದು ಸಿಟ್ಟಾದರು ಗೋವಿಂದರಾಯರು.

ಸೀತಮ್ಮನವರು ಅವರ ಇದಿರಿಗೆ ಬಂದು 'ಮೋಹನನಿಗೆ ಮದುವೆ ಯಾಯಿತಂತೆ!' ಎಂದು ತಿಳಿಸಿದರು.

'ಮದುವೆಯಾದರೆ ಕಣ್ಣೀರು ಸುರಿಸಬೇಕಾ ಮರುಳೇ? ಸಂತೋಷ ಪಡಬೇಕಾದ ಸುದ್ದಿ.'

'ಎಲ್ಲಿಯ ಸಂತೋಷ? ಬಾಲವಿಧವೆಯನ್ನೇ ಮಾಡಿಕೊಂಡನಂತೆ!'

'ಯಾರು ಹೇಳಿದರು ನಿನಗೆ?'

'ರಾಜ, ರಾಜ ಬಂದಿದ್ದಾನೆ.'

'ಹೌದಾ?' ಎಂದು ಕೇಳುತ್ತ ಸೀತಮ್ಮನವರ ಕೈಹಿಡಿದು ಗೋವಿಂದ ರಾಯರು ಎದ್ದು ಹೊರಟರು. ಬಿಸಿನೀರಿನ ಕೊಟ್ಟಿಗೆಯ ಬಳಿ ಹರಿವ

ತೋಡು ದಾಟಲು ಮತ್ತೆ ಸೀತಮ್ಮನವರೇ ಕೈಹಿಡಿಯಬೇಕಾಯ್ತು. ರಾಜ ಅನ್ಯ ಮನಸ್ಕನಾಗಿ ಮುಖಮಂಟಪದಲ್ಲಿ ಕುಳಿತಿದ್ದ. ಹೌದು, ಸೀತಮ್ಮನವರು ತಿಳಿಸಿದ ಸುದ್ದಿ ನಿಜ. ಮೈಸೂರಿನ ಒಬ್ಬ ಹೋಟ್ಲು ಮಾಲಿಕರ ಮಗಳು ಸಾವಿತ್ರಿಯನ್ನು ಮೋಹನ ಮದುವೆ ಮಾಡಿಕೊಂಡಿದ್ದ. ರಾಜ ಕಾಗದ ಓದಿ ಹೇಳಿದ.

ಕಾಗದ ಕೇಳಿದ ಸೀತಮ್ಮನವರು ಮತ್ತೆ ಕಣ್ಣೀರ್ಗರೆದರು—'ರಾಜನಿಗೆ ಮದುವೆ ಮಾಡಿದಾಗ ಸುಭಾಷಿಣಿ ಪುಷ್ಪವತಿ ಕೂಡಾ ಆಗಿರಲಿಲ್ಲ. ಮನೆತನ ನೋಡಿ, ಜಾತಕ ನೋಡಿ, ಹುಡುಗಿ ನೋಡಿ ಹೆಣ್ಣು ತಂದೆವು. ಶಿವರಾಯನಿಗೆ ತಾವೇ ಹೆಣ್ಣು ಕೊಡುತ್ತೇವೆಂದು ಸುಗುಣಳ ತಂದೆ ಮೂಲ್ಕಿಯಿಂದ ಕೇಳಿಕೊಂಡು ಬಂದರು. ಹರಿ ಒಂದು ಮಾತು ಕೇಳಿದ. ಮೋಹನ ಒಂದು ಸುದ್ದಿಯನ್ನೂ ಹೇಳಲಿಲ್ಲ. ತಾಯಿ ತಂದೆ ಜೀವಂತವಿರುವಾಗಲೇ ಅವರನ್ನು ಬಿಟ್ಟು ಮಾಡಿಕೊಂಡನಲ್ಲಾ? ಅಬ್ಬಾ ಮಕ್ಕಳ ಮನಸ್ಸೇ!'

ಅದನ್ನು ಕೇಳಿದ ಗೋವಿಂದರಾಯರು ಹೆಂಡತಿ ಕಡೆ ಮೋರೆ ಹೊರಳಿಸಿ ನುಡಿದರು—'ಏ, ನೀನು ಎದೆ ನೊಂದು ಏನೇನು ಹೇಳಬೇಡ. ಅದು ಒಳ್ಳೆಯದಲ್ಲ. ಎಳೆ ಮಕ್ಕಳಿಗಾದರೆ ಬುದ್ಧಿ ಇಲ್ಲ. ಅವರಿಗೆ ಹೇಳುವುದು ನಮ್ಮ ಕರ್ತವ್ಯ. ಬೆಳೆದು ದೊಡ್ಡವರಾದ ಬಳಿಕ ಅವರವರ ಸ್ವಬುದ್ಧಿಗೆ ತೋಚಿದುದನ್ನು ಮಾಡುವುದೇ ಹಿತಕರ. ಮನೆಬಿಟ್ಟು ಊರೂರು ತಿರುಗಿ ಹೆಣ್ಣು ನೋಡಿ ಮದುವೆ ಮಾಡಿಸುವ ದೇಹಸಾಮರ್ಥ್ಯ ನನಗುಂಟಾ? ಇಲ್ಲಿಂದ ಮುಂಡಾಜೆಯವರೆಗೆ ನಡೆಯಲೂ ಅಸಮರ್ಥ. ನನ್ನ ಕೈ ಕಾಲು ಬಿತ್ತು. ನನ್ನ ಕಾಲವಾಯ್ತು. ನಾವು ಜೀವಂತವಿರುವಾಗಲೇ ಮದುವೆಯಾದ ಸುದ್ದಿ ಕೇಳಿದೆವಲ್ಲ! ಅಷ್ಟರಿಂದಲೇ ಸಂತೋಷಪಡೋಣ. ನಮಗಿನ್ನು ಏನಾಗಬೇಕು?'

'ನಮಗಿನ್ನು ಏನೂ ಬೇಡ. ಆದರೆ, ಬೇರೆ ಹುಡುಗಿಯರೇ ಇರಲಿಲ್ವಾ ಊರಿನಲ್ಲಿ? ಅದೇ ಹೆಣ್ಣಾಗಬೇಕಿತ್ತಾ? ಜಾತಿ ಬಾಂಧವರು ಏನೆಂದಾರು?'

"ಏನೆನ್ನುತ್ತಾರೆ? ಯಾರವರು ಎನ್ನುವವರು? ಹೇಳುವ ಶಾಸ್ತ್ರಿ ಪುರೋಹಿತರನ್ನು, ಆ ಮಠ ಈ ಮಠ ಗಂಜಿ ಮಠದ ಸ್ವಾಮಿಗಳನ್ನು ಕರೆದು ಕೊಂಡು ಬಾ. ಅವರ ಜಾತಿ ಯಾವುದು ಎಂದು ಕೇಳುತ್ತೇನೆ. ಅವರು ಎಲ್ಲಿಂದ ಬಂದರು? ಎಲ್ಲಿಂದ ಹುಟ್ಟಿದರು? ಹುಟ್ಟಿದಾಗಲೇ ಅಡ್ಡ ನಾಮ,

ಉದ್ದ ನಾವು, ಮೂರು ರಸ್ತೆ ಹಣೆಗೆ ಬಳಿದುಕೊಂಡು ಬಂದಿದ್ದರೋ ಎಂದು ಕೇಳೋಣ. ಹೇಳುವುದು ಶಾಸ್ತ್ರ ಇಕ್ಕುವುದು ಗಾಳ. ಉಡುಪಿಯಲ್ಲಿ ವೇಶ್ಯೆಯರ ಒಂದೊಂದು ಮನೆ ಒಂದೊಂದು ಅರಮನೆಯಂತಿದೆ. ಯಾರು ಕಟ್ಟಿಸಿಕೊಟ್ಟರು ಅವರಿಗೆ ? ಜಾತಿ ! ಜಾತಿ ! ದೇವರು ಯಾವ ಜಾತಿ ? ಜಾತಿ ಸುಟ್ಟಿತು ! ಜಾತಿ ಜಾತಿಯೆಂದೇ ನಮ್ಮ ಜನಾಂಗಕ್ಕೆ ಅಧೋಗತಿ ಬಂತು. ಒಂದನ್ನು ಕಂಡರೆ ಇನ್ನೊಂದಕ್ಕೆ ವೈರ ! ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಸಹನೆಯಿಲ್ಲ. ಒಂದೊಂದು ಮನೆಗೆ ಕಂಪೌಂಡಿದ್ದಂತೆ ಒಂದೊಂದು ಜಾತಿಯ ಸುತ್ತಲೂ ಒಂದೊಂದು ಗೋಡೆ ! ಈ ಗೋಡೆ ಒಡೆ. ಅದು ಪುಡಿಯಾಗಲಿ. ಕುಸಿದು ಬೀಳಲಿ ಆ ಕಲ್ಲುಗಳು. ಆಚೆಯವನು ಈಚೆಯವನನ್ನು ನೋಡಲಿ. ಕೈಕೊಡಲಿ, ಕೂಡಿಕೊಳ್ಳಲಿ. ಗಾಂಧಿ ಹೇಳುವುದೇನು ಮತ್ತೆ ? 'ನಾವೆಲ್ಲರೂ ಒಂದು. ನಾವೆಲ್ಲರೂ ಮಾನವ ಜಾತಿ !' ಎಂದ ಗಾಂಧೀ ಮಂತ್ರದ ಅರ್ಥವೇನು ? ಹೇಳುವುದೊಂದು ಮಾಡುವುದೊಂದಲ್ಲ. ಮಾತಿನಂತೆ ಕೃತಿ ಬೇಕು. ನೀತಿ ಬೇಕು. ನೀತಿಯೇ ಮನುಷ್ಯ ಜಾತಿಯ ನೆಲೆಗಟ್ಟು. ಅದರ ತಳಹದಿಯ ಮೇಲೆ ಸ್ವರಾಜ್ಯ ಕಟ್ಟಲು ಗಾಂಧೀ ಮಹಾತ್ಮನ ಯತ್ನ. ಅದು ಯಶಸ್ವಿಯಾದರೆ ಗಾಂಧೀ ರಾಜ್ಯ ರಾಮರಾಜ್ಯವಾದೀತು. ಗಾಂಧೀ ಮಾತನ್ನು ಗಾಳಿಗೆ ತೂರಿ ಜಾತಿ ಜಾತಿಯೆಂದು ಕೋತಿಗಳ ಬುದ್ಧಿ ತೋರಿಸಿದರೆ ಅದೇ ರಾವಣನ ರಾಜ್ಯವಾಗದೆ ಇರಲಿಕಿಲ್ಲ. ಜಾತಿ ಎಂದರೆ ನಮ್ಮ ದೇಶಕ್ಕೆ ಅಳಿಗಾಲ ! ಪರಸ್ಪರ ಪ್ರೀತಿ ಎಂದರೆ ಉಳಿಗಾಲ ! ಆದುದರಿಂದ ಇನ್ನೊಮ್ಮೆ ನನ್ನೆದುರು ಹೇಳಬೇಡ ಇದನ್ನು."

'ಹೇಳಿದಂತೆ ದೇವರು ಮಾಡುವುದೂ ಇಲ್ಲ ಮಾರಾಯರೇ. ನಿಮ್ಮ ಕಣ್ಣೆದುರಿಗೇ ನನ್ನ ಪ್ರಾಣ ಹೋದರೆ ನನಗೆ ಮೋಕ್ಷ ಪ್ರಾಪ್ತಿ' ಎಂದು ಸೀತಮ್ಮನವರು ಕಣ್ಣುಗಳನ್ನೊರಸಿಕೊಂಡರು.

'ಅಮ್ಮ, ನೀನು ಸುಮ್ಮಗಿರು' ಎಂದು ರಾಜ ಹೇಳಿದುದರಿಂದ ಅವರು ಒಳಗೆ ಹೊರಟು ಹೋದರು.

ಸೀತಮ್ಮನವರು ಒಳಗೆ ತೆರಳಿದ ಬಳಿಕ ಗೋವಿಂದರಾಯರು ಮಗನನ್ನುದ್ದೇಶಿಸಿ ಹೇಳಿದರು—'ರಾಜಾ, ನಾನಿನ್ನು ಬಹಳ ಕಾಲ ಬದುಕುವುದಿಲ್ಲ. ನಿನಗೆ ಒಂದು ವಿಷಯ ತಿಳಿಸಬೇಕೆಂದು ಮನಸ್ಸಾಗಿದೆ. ಮತ್ತೇನಿಲ್ಲ. ನಿಮಗೆಲ್ಲರಿಗೂ ಅಲ್ಪಸ್ವಲ್ಪ ವಿದ್ಯೆ ಕಲಿಸಿದೆ. ನೀನು ದೊಡ್ಡವನಾದ ಮೇಲೆ ನೀನೂ

ತಮ್ಮಂದಿರಿಗೆ ಕಲಿಸಿದೆ. ಸಂಸಾರಭಾರಕ್ಕೂ ಹೆಗಲು ಕೊಟ್ಟವನು ನೀನೇ. ಶಿವರಾಯನ ಲಗ್ನಕ್ಕೆ, ಕಮಲೆಯ ಮದುವೆಗೆ ನಿನ್ನಿಂದಲೇ ಹಣ ಪಡೆದು ಕೊಂಡೆ. ಅದನ್ನೇ ನಿನಗೆ ಮೊನ್ನೆ ಮರಳಿ ಕೊಟ್ಟುಬಿಟ್ಟೆ. ಆದರಿಂದ ನಿನ್ನ ಸಾಲದ ಶೂಲ ತಪ್ಪಿತು. ಆದುದರಿಂದ 'ಫಂಡಿನ ಹಣ ನಮಗೇಕೆ ಕೊಡಲಿಲ್ಲ?' ಎಂದು ಯಾರೂ ಕೇಳಲು ಹಕ್ಕಿಲ್ಲ. ಆದರೆ ಒಂದು ಮಾತಿದೆ. ಮೋಹನನಿಗೆ ಮಾತ್ರ ನನ್ನಿಂದ ಏನೂ ಸಹಾಯವಾಗಲಿಲ್ಲ. ಅದಕ್ಕೆ ಒಂದು ವಿಚಾರ ಬಂದಿದೆ ನನಗೆ. ನಾನು ಕಣ್ಮುಚ್ಚಿದ ಮೇಲೆ ನಾನು ಮಾಡಿದ್ದ ಪಾತ್ರೆ ಪಡಗ ಇದ್ದ ಬಿದ್ದ ಬಂಗಾರವನ್ನೆಲ್ಲ ಅವನಿಗೆ ಮುಟ್ಟಿಸಿಬಿಡು. ಇದೇ ನನ್ನ ಆಶೆ. ಬೇರೆನಿಲ್ಲ.'

'ಅಪ್ಪಯ್ಯ, ನೀವು ಹೀಗೆಲ್ಲ ಮಾತನಾಡಬೇಡಿ' ಎಂದು ಹೇಳಿ ರಾಜ ಚಿಕ್ಕ ಮೋರೆ ಮಾಡಿಕೊಂಡ.

'ಏನು ನಾನು ಹಾಸಿಗೆಯಲ್ಲಿ ಬಿದ್ದು ಹೊರಳಿ ನರಳಿ ಸಾಯುವ ವರೆಗೆ ಬದುಕಬೇಕೆನ್ನುವೆಯಾ? ಥೂ, ಹಾಗೆ ಬದುಕಿರಬಾರದು. ನಗುತ್ತ ನಗುತ್ತ ಪ್ರಾಣ ಬಿಡಬೇಕು. ಎಂದರೆ ಸುಖಮರಣ. ಮಹಾತ್ಮರ ಮರಣವೇ ಹಾಗೆ. ಆದರೆ ನನ್ನನ್ನು ಹೇಗೆ ಎಳೆದೊಯ್ಯುತ್ತಾನೋ, ಆ ಸಚ್ಚಿದಾನಂದ ಸ್ವರೂಪನಿಗೇ ಗೊತ್ತು.'

ರಾಜ ಬೇಸರದಿಂದ ಎದ್ದು ತೋಟದ ಕಡೆ ನಡೆದ. ಸ್ವಲ್ಪ ಹೊತ್ತಿನ ಮೇಲೆ ಗೋವಿಂದರಾಯರೂ ಅಲ್ಲಿಗೆ ಬಂದರು. ತೆಂಗಿನ ಸಸಿ ನೆಡಲು ಅವನು ಹಾರೆಯಿಂದ ಮಣ್ಣನ್ನಗೆಯುತ್ತಿದ್ದ. ಗದ್ದೆಯ ಹುಣಿಯಲ್ಲಿ ಒಂದು ತಾಳಿಗೆ ಒರಗಿ ಕುಳಿತ ಗೋವಿಂದರಾಯರು, 'ರಾಜ, ಇನ್ನೂ ಆಗೆ. ಅಲ್ಲಿ ಕೊಪ್ಪರಿಗೆ ಯಿದೆ' ಎಂದು ನುಡಿದರು.

ರಾಜ ಹಾರೆಯನ್ನು ಕೆಳಗಿಟ್ಟು ತಲೆ ಎತ್ತಿ ತಂದೆಯನ್ನು ವಿಸ್ಮಿತನೇತ್ರ ಗಳಿಂದ ನೋಡಿದ. ಹೀಗೆ ವಿಚಿತ್ರವಾಗಿ ಏಕೆ ವರ್ತಿಸುತ್ತಿದ್ದಾರೆಂದು ಅವನಿಗೆ ಅರ್ಥವೇ ಆಗಲೊಲ್ಲದು. 'ಈ ಗದ್ದೆಯ ಹುಣಿಯಲ್ಲಿ ಕೊಪ್ಪರಿಗೆಯುಂಟಾ? ಅಮ್ಮ ಹೇಳಿದಂತೆ ಅಪ್ಪಯ್ಯನಿಗೆ ಸಂಪೂರ್ಣ ಎಪ್ಪತ್ತರ ಮರುಳು ಹಿಡಿಯಿತಾ ಹೇಗೆ?' ಎಂಬ ಆಶ್ಚರ್ಯದ ಭಾವ ಅವನ ಮೋರೆಯ ಮೇಲೆ ಎದ್ದು ಕಾಣುತ್ತಿತ್ತು.

'ಏನು, ನನ್ನ ಮಾತಿನಲ್ಲಿ ನಂಬಿಗೆಯಿಲ್ವಾ ನಿನಗೆ? ನಾನು ತೋರಿಸು ತ್ತೇನೆ ಚಿನ್ನ' ಎಂದು ಹೇಳುತ್ತ ಅವರು ಆ ಹೊಂಡದ ಕಡೆ ಬಂದರು. ರಾಜ

ಆಗೆದಿದ್ದ ಒಂದು ಹಿಡಿ ಮಣ್ಣನ್ನು ಕೈಯಲ್ಲಿ ಹಿಡಿದು, 'ಹಿಡಿ ಹಿಡಿ. ಇಕೋ ಹಿಡಿ. ಇದೇ ಕೊಪ್ಪರಿಗೆ. ಇದೇ ಚಿನ್ನ' ಎಂದು ಅವನ ಕೈಗೆ ಸುರಿದರು. ಮಣ್ಣಿನ ಅಣು ಕಣಗಳು ಉದುರಿದವು.

ಅವರು ಮಗನನ್ನು ಕಣ್ತುಂಬ ನೋಡಿ ನುಡಿದರು—'ಮಗನೇ, ಇದು ಮಣ್ಣಲ್ಲ. ಇದೇ ಚಿನ್ನ. ಈ ಮಣ್ಣಿನಲ್ಲೇ ತೆಂಗು ಕಂಗು ಬತ್ತಗಳ ಚಿನ್ನದ ಸರಿಗೆಗಳಂತಹ ಬೇರುಗಳು ಪಸರಿಸಿದುವು. ಆ ಬೇರುಗಳೇ ಪುಷ್ಪ ಫಲಗಳನ್ನೆಲ್ಲ ಮಣ್ಣಿನಿಂದ ಎತ್ತಿಕೊಂಡು ಮರಕ್ಕೆ ಮುಡಿಸಿವೆ. ಆ ಕಾಯಿಗಳನ್ನು ಮಾರಿ ಬಂದಾಗಲೇ ನಿನ್ನ ಕೈಗೆ ಹಣ. ಆದುದರಿಂದ ಮಣ್ಣಿನಿಂದಲೇ ಹೊನ್ನು. ಇದು ಬಂಗಾರ ಭೂಮಿ, ಇದರಲ್ಲಿ ಚಿನ್ನವಿದೆ, ಇದರಲ್ಲಿ ಕೊಪ್ಪರಿಗೆ ಇದೆ ಎಂದು ನಾನು ಹಿಂದೆ ಹೇಳಿದ್ದುದು ಸುಳ್ಳಾ? ಅಕೋ, ಆ ತೆಂಗು ಕಂಗುಗಳನ್ನು ನೋಡು. ಆ ಒಂದೊಂದು ಗೊನೆ, ಒಂದೊಂದು ಗೊಂಚಲು, ಕೊಪ್ಪರಿಗೆಯ ಮದನ ಕೈಗಳು!'

ಅಷ್ಟು ಹೇಳಿ ತಂದೆ ಮನೆಯ ಕಡೆ ಹೊರಟರು. ತಬ್ಬಿಬ್ಬಾದ ರಾಜ ಅವರ ಬೆನ್ನು ಕಾಣುವ ವರೆಗೂ ಅಲ್ಲೇ ಎವೆಯಿಕ್ಕದೆ ನಿಂತು ನೋಡಿದ. 'ಯಾರಿಗೆ ಮರುಳು! ಅವರಿಗೋ ನನಗೋ?' ಎಂದು ಅವನು ಭಾವಿಸಿ, ತಂದೆ ತನ್ನ ಕೈಮೇಲೆ ಸುರಿದ ಹಿಡಿ ಮಣ್ಣನ್ನು ತಲೆಯ ಮೇಲೆ ಚಲ್ಲಿಕೊಂಡ.

ಮತ್ತೊಂದು ಆದಿತ್ಯವಾರ ಮಂಗಳೂರಿನಿಂದ ಬಂದ ರಾಜ ಮನೆ ಮೆಟ್ಟಿಲು ಏರುವಾಗಲೇ, 'ಅಪ್ಪಯ್ಯ, ಅಪ್ಪಯ್ಯ' ಎಂದು ಗಟ್ಟಿಯಾಗಿ ಕರೆಯುತ್ತ ಬಂದ. ಕಾಲುಗಳಿಗೆ ಎಣ್ಣೆ ತಿಕ್ಕಿಕೊಂಡು ಕೊಟ್ಟಿಗೆಯ ಒಲೆಯ ಮುಂದೆ ಕುಳಿತಿದ್ದ ಗೋವಿಂದರಾಯರು ಗಾಬರಿಯಾಗಿ ಮುಖಮಂಟಪಕ್ಕೆ ಆಗಮಿಸಿದರು.

'ಅಪ್ಪಯ್ಯ, ಬ್ರಿಟಿಷರು ನಮಗೆ ಸ್ವರಾಜ್ಯ ಕೊಡುವರಂತೆ. ಬ್ರಿಟಿಷ್ ಸರಕಾರ ಘೋಷಣೆ ಹೊರಡಿಸಿದೆ. ಸ್ವಾತಂತ್ರ್ಯ ಬಂತು, ಬಂತು' ಎಂದು ಪೆಪ್ಪರ್‌ಮಿಂಟ್ ದೊರೆತ ಮಕ್ಕಳಂತೆ ಹರ್ಷಪಟ್ಟ.

'ಹೌದಾ ಮಗನೇ?'

'ಹೌದು.'

'ಆಗಲಿ, ದೇವರು ದಯದೋರಿದ' ಎಂದು ಗೋವಿಂದರಾಯರು ಆನಂದ ಬಾಷ್ಪಗಳನ್ನು ಸುರಿಸಿದರು. 'ಹೆಣ್ಣು ಕೊಡುತ್ತೇವೆಂದು ಒಪ್ಪಿಕೊಂಡ

ಮೇಲೆ ಲಗ್ನವಾಗಲು ಇನ್ನು ಬಹಳ ಸಮಯ ಹಿಡಿಯಲಿಕ್ಕಿಲ್ಲ. ಸ್ವಾತಂತ್ರ್ಯ ದೊರೆತೇ ತೊರೆಯುವುದು. ಹಿಟ್ಲರನ ಪಾಶವೀ ಶಕ್ತಿಗೂ ಬಗ್ಗದ ಬ್ರಿಟಿಷರು ಮಹಾತ್ಮನ ಆತ್ಮಬಲಕ್ಕೆ ಬಗ್ಗಿದರಲ್ಲ! ಆಹಾ, ಆತ್ಮ ಬಲಂ ಬಲಂ. ಗಾಂಧೀ ಬರಿಯ ಮಹಾತ್ಮನಲ್ಲ. ಅವನು ಸಾಕ್ಷಾತ್ ಪರಮಾತ್ಮ' ಎಂದು ಉದ್ಗರಿಸಿದ ಗೋವಿಂದರಾಯರು ಸೀತಮ್ಮನವರನ್ನು ಕರೆದರು—

'ಏ, ನಮ್ಮ ಮಾಣಿ ಗಾಂಧೀ ಪಾರ್ಟಿಗೆ ಸೇರಿದಾಗ ಅಳುತ್ತಿದ್ದೆಯಲ್ಲ, ಈಗ ನೋಡು ಏನಾಯ್ತು? ನಮಗೆ ಸ್ವಾತಂತ್ರ್ಯ ಬಂತು. ಇನ್ನು ಮುಂದೆ ಹಾಗೆಲ್ಲ ಮಾತನಾಡಬೇಡ. ರಾಷ್ಟ್ರ ಸೇವೆಗೆ ಹೊರಟವರನ್ನು ತಡೆಯುವುದು ಪಾಪ; ಅವರಿಗೆ ಆಡುವುದು ಮಹಾ ಪಾಪ. ಅವರ ಬಗೆಗೆ ಮನಸ್ಸಿನಲ್ಲಿ ಶಂಕೆಪಡುವುದು ಇನ್ನೂ ಹೆಚ್ಚಿನ ಪಾಪ! ತಪ್ಪಾಯಿತು ಅನ್ನು.'

'ತಪ್ಪಾಯ್ತು ಮಾರಾಯರೆ' ಎಂದು ಸೀತಮ್ಮನವರು ನಗುತ್ತ ಸಾಷ್ಟಾಂಗ ನಮಸ್ಕಾರ ಹಾಕಿದರು.

ಗೋವಿಂದರಾಯರು ಮಗನಿಗೆ ಹೇಳಿದರು—'ರಾಜ, ನಾಲ್ಕು ಸಿಂಯಾಳ ಕ್ಕೊ. ಕ್ಕೊ ನಾಲ್ಕು ಗೆಂಧಾಳಿ ಸಿಂಯಾಳ. ಎರಡು ದೇವರಿಗಾಯ್ತು, ಎರಡು ನಮಗೆ. ಇಂದು ಕಡಿದುಬಿಡೋಣ. ನನ್ನ ಮನಸ್ಸಿಗೆ ಅತ್ಯಾನಂದ ವಾಗಿದೆ. ಹುಟ್ಟಿದಂದಿನಿಂದ ಇಷ್ಟರವರೆಗೆ ಇಂಥ ಆನಂದವನ್ನು ನಾನು ಅನು ಭವಿಸಿರಲಿಲ್ಲ. ಇವಳನ್ನು ಲಗ್ನವಾದಾಗ ಸಂತೋಷವಾಯ್ತು. ನೀನು ಹುಟ್ಟಿದಾಗ ಪುತ್ರಜನನದ ಹರ್ಷವಾಯಿತು. ಈ ಮಣ್ಣಿನಲ್ಲಿ ನೆಟ್ಟ ಗಿಡಗಳಲ್ಲಿ ಹೂ ಹೋಗಿ ಕಾಯಿ ಬಂದಾಗ ಮತ್ತೊಮ್ಮೆ ಆನಂದವಾಯ್ತು. ಆದರೆ ಇಂದಿನ ಈ ಸುಖ ಎಲ್ಲಕ್ಕಿಂತಲೂ ಹೆಚ್ಚಾದುದು. ನನ್ನ ಆತ್ಮ ಥೈ ಥೈ ಕುಣಿಯಲಾರಂಭಿಸಿದೆ. ತಾ. ತಾ. ಸಿಂಯ್ಯಾಳ ತಾ.'

ತಂದೆ ವಿಚಿತ್ರವಾಗಿ ತೋರಿದರು ರಾಜನಿಗೆ. ಯಾಕೆ ಹೀಗೆ ಮಾತಾ ಡುತ್ತಿದ್ದಾರೆಂಬುದೇ ಅವನಿಗೆ ಅರ್ಥವಾಗಲಿಲ್ಲ. ಎಂದಿನಂತೆಯೇ ಇಂದೂ ಮರುಳುಬುದ್ಧಿ ಇರಬೇಕೆಂದು ಭಾವಿಸಿದ. ಸಿಂಯ್ಯಾಳ ಕುಡಿದರೆ ಶೀತವಾದೀ ತೆಂದು ಸೀತಮ್ಮನವರು ತಡೆದರೂ ಅವರು ಕೇಳಲಿಲ್ಲ. ಗೆಂಧಾಳಿ ಸಿಂಯ್ಯಾ ಳಕ್ಕೇ ಬಾಯಿ ಕೊಟ್ಟರು. 'ಆಹಾ, ಇದು ಎಷ್ಟು ಸವಿ? ಇದರೊಳಗೆ ದೇವರು ಸಕ್ಕರೆ ಸುರಿದನಾ ಹೇಗೆ? ಅಥವಾ ಮಣ್ಣಿನಲ್ಲೇ ಬೆಲ್ಲ ಬೆರಸಿದನಾ? ಇದು ಅಮೃತ, ಅಮೃತ' ಎಂದು ಪೂರಾ ಕುಡಿದು ಬಿಟ್ಟರು.

ಸೀತಮ್ಮನವರು ಮೊದಲೇ ಎಚ್ಚರಿಕೆ ಕೊಟ್ಟದ್ದು ಸತ್ಯವಾಯ್ತು. ಸಿಂಯ್ಯಾಳದ ನೀರು ಗೋವಿಂದರಾಯರಿಗೆ ಹಿಡಿಯಲಿಲ್ಲ. ಸಂಜೆ 'ಚಳಿ, ಚಳಿ' ಎಂದು ಕಂಬಳಿ ಹೊದೆದು ಮಲಗಿಕೊಂಡರು. 'ಅಮ್ಮಾ, ಒಂದು ಕಪ್ ಸ್ಟ್ರಾಂಗ್ ಕಾಫಿ ಮಾಡು. ಅದರೊಂದಿಗೆ ಕ್ವಿನಿನ್ ಗುಳಿಗೆ ನುಂಗಲಿ ಅವರು' ಎಂದು ರಾಜ ತಿಳಿಸಿದ. 'ಕಾಫಿಯಾದರೆ ಒಂದು ಕಪ್ ಏಕೆ? ಒಂದು ತಂಬಿಗೆ ಕೊಡು. ಅಮೃತ ಕುಡಿದು ಸವಿಯಾದ ಈ ನಾಲಿಗೆಯನ್ನು ಕ್ವಿನಿನ್ ವಿಷದಿಂದ ಕಹಿ ಮಾಡಬೇಡ' ಎಂದು ತಂದೆ ನುಡಿದರು. 'ಆಗಲಿ, ಆಗಲಿ. ಕಾಫಿ ಆಗಲಿ' ಎಂದು ಅವನು ಸಂತೈಸಿದ. ಕಾಫಿಗೆ ಹಾಲು ಕರೆಯಲು ಸೀತಮ್ಮನವರು ಮುಚ್ಚಂಜೆಗೆ ಹಟ್ಟಿಗೆ ತೆರಳಿದರು. ಹಟ್ಟಿಗೆ ಇಳಿದಾಗ ಭಾಗೀರಥಿಯ ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಸುರಿಯುತ್ತಿದ್ದುದನ್ನು ಅವರು ಕಂಡರು. 'ನಿನಗೇನಾಗಿದೆ ಭಾಗೀರಥಿ? ಯಾಕೆ ಅಳುತ್ತಿದ್ದಿ?' ಎಂದು ಕೇಳುತ್ತ ಅವರು ಅದರ ಹಣೆ, ಕೆನ್ನೆ, ಕುತ್ತಿಗೆಯ ನಿರಿಗಳನ್ನು ಕೈಗಳಿಂದ ತೀವಿದರು. ಹಾಗೆ ಸೀತಮ್ಮನವರು ಬಗ್ಗಿದಾಗ ಭಾಗೀರಥಿ ಅವರ ಕೈ ಮೈ ನೆಕ್ಕಿ ಹಣೆಯಲ್ಲಿದ್ದ ಕುಂಕುಮವನ್ನೂ ನೆಕ್ಕಿತು. 'ಆಂ' ಎಂದು ಹಿಂದೆ ಸರಿದರು ಸೀತಮ್ಮ. ಅವರ ಎದೆಯಲ್ಲಿ ಬಿರುಗಾಳಿಗೆದ್ದ ಅನಂತ ತೆರೆಗಳಂತೆ ಹೊಯ್ದಾಟ ನಡೆಯಿತು. ಕಣ್ಣುಗಳಿಂದ ಅಶ್ರುಧಾರೆ ಸುರಿಯಿತು. ಅಲ್ಲೇ ಬೈಪಣೆಯಲ್ಲಿ ಸ್ವಲ್ಪ ಸಮಯ ತಲೆಗೆ ಎರಡೂ ಕೈಗಳನ್ನಿಟ್ಟುಕೊಂಡು ಅವರು ಮೌನವಾಗಿ ರೋದಿಸಿದರು. 'ಹಟ್ಟಿಗೆ ಹೋದವಳು ಅಲ್ಲೇ ಮುಳುಗಿದಳಾ?' ಎಂದು ಗೋವಿಂದರಾಯರು ಆಡಿದುದು ಕಿವಿಗೆ ಬಿದ್ದುದರಿಂದ ಮತ್ತೆ ಎದ್ದು ತಂಬಿಗೆಯಿಂದಲೇ ಭಾಗೀರಥಿಯ ಬೆನ್ನಿಗೆ ಗುದ್ದಿದರು. ಕಾಫಿ ಕೊಡಲು ಬಂದಾಗ ಗಂಡನನ್ನೇ ಬಹಳ ಹೊತ್ತು ದಿಟ್ಟಿಸಿದರು. ದುಂಡಗಾದ ಆ ತಲೆಯಲ್ಲಿ ಬೆಳ್ಳಿ ಬಂಗಾರದ ಸರಿಗೆಗಳಂತೆ ಕೆಲವು ಕೂದಲುಗಳಿದ್ದುವು. ಉನ್ನತವಾದ ನೊಸಲು. ಹುಬ್ಬು ಹಣ್ಣಾಗಿದೆ. ಕಣ್ಣುಗಳು ಆಳವಿದ್ದರೂ ಮಕ್ಕಳಂತಹ ನಗುವಿನ ನೋಟ. ಎಪ್ಪತ್ತು ವರುಷಗಳಾಗಿದ್ದರೂ ಕೆನ್ನೆಗಳಲ್ಲಿ ಹೊಂಡ ಬಿದ್ದಿಲ್ಲ. ಉದ್ದವಾದ ಕೈಕಾಲುಗಳು. ವಿಶಾಲವಾದ ಎದೆ. ವಯೋವೃದ್ಧರಾದರೂ ಬಂಗಾರದಂತೆ ಹೊಳೆಯುತ್ತಿದೆ ಮೈಬಣ್ಣ. ಒಂದೊಂದೇ ಅಂಗ ಸರ್ವಾಂಗ ನೋಡಿದರು ಸೀತಮ್ಮ. ಅವರು ತೆರಳದೇ ಇದ್ದುದರಿಂದ ಗೋವಿಂದರಾಯರ ದೃಷ್ಟಿ ಹೆಂಡತಿಯ ಕಡೆ

ಹೊರಳಿತು. ಆಶ್ಚರ್ಯವಾಯಿತು ಅವರಿಗೆ—

'ಯಾಕೆ? ನಿನಗೇನಾಗಿದೆ ಈ ಹೊತ್ತು? ಎಂದಿನಂತಿಲ್ಲ ನೀನು. ಇಂದಿನ ರೀತಿಯೇ ಬೇರೆ. ಗುಂಡಿನ ಪೆಟ್ಟು ತಾಗಿ ಬಿದ್ದು ಒದ್ದಾಡುವ ಹರಿಣದ ನೇತ್ರಗಳಂತೆ ನನ್ನನ್ನು ನೋಡುತ್ತಿದ್ದಿಯಲ್ಲ! ಯಾಕೆ ಹಾಗೆ ನೋಡುತ್ತಿದ್ದೀ? ನನ್ನನ್ನು ನೀನು ನೋಡಿಯೇ ಇಲ್ಲವೇ? ನಿನಗೇನಾಗಿದೆ? ನಿನ್ನ ಮೋರೆಯ ಮೇಲೆ ಜೀವಕಳೆಯೇ ಇಲ್ಲ!'

'ಜೀವವೇ ಇಲ್ಲ. ಮತ್ತೆ ಜೀವಕಳೆ ಎಲ್ಲಿಂದ ಬರಬೇಕು? ನನಗೆ ದಿನ ಬರಲಿಲ್ಲ. ದೇವರು ಇನ್ನೂ ಬರೆದಿದ್ದಾನೆ ಹಣೆಯಲ್ಲಿ' ಎಂದು ಗೊಣ ಗುಟ್ಟುತ್ತಾ ಅವರು ಎದ್ದು ಹೋದರು.

'ನಿನಗೆ ಮರುಳು! ಮರುಳು!' ಎಂದು ಗೋವಿಂದರಾಯರು ಕಂಬಳಿ ಹೊದೆದುಕೊಂಡರು.

ರಾತ್ರಿ ಗೋವಿಂದರಾಯರ ಮೈಗೆ ಕೈ ಇಡುವಂತಿರಲಿಲ್ಲ. ಕಾಲುಗಳನ್ನು ಒತ್ತುತ್ತಿದ್ದಾಗಲೇ ಸೀತಮ್ಮನವರ ಎದೆ ಜುಂ, ಜುಂ ಎಂದಿತು. ರಾತ್ರಿ ಅವರಿಗೆ ವಿಶೇಷ ನಿದ್ದೆಯೂ ಬರಲಿಲ್ಲ. ಬೆಳಗಿನ ಜಾವಕ್ಕೆ ತೂಕಡಿಸಿದರು. 'ಹೋಯ್, ಹೋಗಬೇಡಿ. ನಿಲ್ಲಿ, ನಿಲ್ಲಿ. ಕಾಫಿ ಕುಡಿದು ಹೋಗಿ' ಎಂದು ಗೋವಿಂದರಾಯರು ಬಡಬಡಿಸಿದರು. ಸೀತಮ್ಮನವರು ದೀಪ ಬೆಳಗಿಸಿ ಗಂಡನ ಮೈಯನ್ನು ಹಿಡಿದು ಮುಟ್ಟೆ 'ಏನದು? ಚಿಕ್ಕ ಮಕ್ಕಳ ಹಾಗೆ ಬಡಬಡಿಸುತ್ತಿದ್ದೀರಲ್ಲಾ' ಎಂದು ಮಾತಾಡಿಸಿದರು. ರಾಜನಿಗೂ ಎಚ್ಚರ ವಾದುದರಿಂದ ಅವನು ಎದ್ದು ಹಾಸಿಗೆಯ ಮೇಲೆ ಕುಳಿತ. ಗೋವಿಂದರಾಯರು ಗೋಡೆಗೊರಗಿ ಕುಳಿತು, "ಘಟ್ಟಕ್ಕೆ ತೆರಳುವ ನಾಲ್ಕು ಜನ ಬ್ರಾಹ್ಮಣರು ಬಂದಿದ್ದರು. ಕಾಫಿ ಕುಡಿದು ಹೋಗಿ ಎಂದರೆ, 'ಇಲ್ಲ, ಇಲ್ಲ' ಎಂದು ಹೊರಟರು. ಅದಕ್ಕೇ ಅವರನ್ನು ಕರೆದು ನಿಲ್ಲಿಸಿದೆ" ಎಂದು ಕನಸನ್ನು ವಿವರಿಸಿದರು.

'ಎಂಥದು ಅಪ್ಪಯ್ಯ? ನೀವು ಹೀಗೆ ಮಾತಾಡಿದರೆ ಹೇಗೆ?' ಎಂದು ರಾಜ ದೈನ್ಯಭಾವದಿಂದ ನುಡಿದ.

'ಬಿಡು, ಬಿಡು. ಒಂದು ಉದಯರಾಗ ಹಾಡಿಬಿಡುತ್ತೇನೆ. ನೊಂದೆ ಕೃಪೆ ಮಾಡು ಎನಗೆ। ನೊಂದೆ ನಾ ಸತ್ತು ಹುಟ್ಟುವ ಕೋಟಲೆಗಳಿಂದ। ನೊಂದೆ ನಾ ಪಂಚೇಂದ್ರಿಯಗಳ ಬಾಧೆಗಳಿಂದ। ನೊಂದೆ ನಾ ಷಡ್ವರ್ಗ ಅಂಗಳಟ್ಟುಳಿಯಿಂದ। ನೊಂದೆ ನಾ ಹರಿ ಎನ್ನದೆ ಕೃಷ್ಣಾ।....' ಎಂದು

ಬೆಳಗಾಗುವವರೆಗೂ 'ಕೃಷ್ಣಾ, ಕೃಷ್ಣಾ' ಎಂದು ಅನೇಕ ಸಲ ರಾಗ ಎಳೆದರು. ಬೆಳಗಾದ ಮೇಲೆ ಏಳುವ ಬದಲು ಮತ್ತೆ ಚಾಪೆಯ ಮೇಲೆಯೇ ಮಲಗಿಕೊಂಡರು. ಕಾಫಿ ಕೊಡಲು ಬಂದ ಸೀತಮ್ಮನವರು 'ಇನ್ನೂ ಮಲಗಿದ್ದೀರಲ್ಲ? ಬೆಳಗಾಯ್ತು. ಎದ್ದು ಕುಳಿತುಕೊಳ್ಳಿ. ಕಾಫಿ ತಂದಿದ್ದೇನೆ' ಎಂದರು.

'ನೀನೇ ಬಾಯಿಗೆ ಹೊಯ್ದುಬಿಡು. ಏಳಲು ಆಗುವುದಿಲ್ಲ. ಕಾಲುಗಳಲ್ಲಿ ಬಲವಿಲ್ಲ.'

ಕಾಲುಗಳನ್ನು ಮುಟ್ಟಿದ ಸೀತಮ್ಮನವರು ಹೌಹಾರಿದರು. ಮುಖಮಂಟಪಕ್ಕೆ ಬಂದು, 'ರಾಜಾ, ರಾಜಾ, ರಾಜಾ, ರಾಜಾ' ಎಂದು ಮೇಲಿಂದ ಮೇಲೆ ಗಟ್ಟಿಯಾಗಿ ಬೊಬ್ಬಿಟ್ಟರು. 'ಏನಮ್ಮಾ, ಏನದು?' ಎಂದು ಅವನು ಓಡುತ್ತಾ ಬಂದ. ತಲೆ ಬಗ್ಗಿಸಿಕೊಂಡು, ಸೀತಮ್ಮನವರು ಗಂಡನ ಅಂಗಾಲುಗಳಿಗೆ ಬೂದಿ ತಿಕ್ಕುತ್ತಿದ್ದರು. ರಾಜ ತಂದೆಯ ಬಳಿಯಲ್ಲೇ ಕುಳಿತು 'ಏನಾಗುತ್ತದಪ್ಪಯ್ಯ?' ಎಂದು ಕೇಳಿದ.

'ಏನಿಲ್ಲ. ಸ್ವಲ್ಪ ತುಳಸಿ ನೀರು ತಾ.'

'ಯಾಕೆ ನೀವು ನಮ್ಮನ್ನು ಹೆದರಿಸುತ್ತಿದ್ದೀರಿ?'

'ಹೆದರಿಸುತ್ತಿದ್ದೇನಾ? ಅಯ್ಯೋ ಮರುಳಾ. ಸತ್ಯ ಸಂಗತಿ ಹೇಳುತ್ತಿದ್ದೇನೆ. ನೋಡು, ಕಾಲು ತಣ್ಣಗಾಯ್ತು. ಸೊಂಟದ ವರೆಗೆ ಬಂತು. ಇನ್ನು ಬಹಳ ಹೊತ್ತಿಲ್ಲ. ತಾ.'

ಮುಟ್ಟಿ ನೋಡಿದ ರಾಜ ಮರುಮಾತಾಡದೆ ಅಂಗಳಕ್ಕೆ ಬಂದು ತುಳಸಿಕಟ್ಟೆಯ ಗಿಡದಿಂದ ಕೆಲವು ಕುಡಿಗಳನ್ನು ಹರಿದು ಒಂದು ಲೋಟ ನೀರು ತಂದ. 'ಹತ್ತಿರ ಕುಳಿತುಕೋ' ಎಂದು ಕೈಯೆತ್ತಿ ತಂದೆ ಕರೆದರು.

ಮೆಲುದನಿಯಲ್ಲೇ ಅವರು ಹೇಳಿದರು—"ರಾಜಾ, ನಾನಿನ್ನು ಬದುಕುವುದಿಲ್ಲ. ಬದುಕಬೇಕೆಂದು ಆಶೆಯೂ ಇಲ್ಲ. ಸ್ವರಾಜ್ಯದ ಸುದ್ದಿ ಕೇಳಿದಾಗಲೇ ಆ ಆಶೆ ಮುಗಿಯಿತು. ಆನಂದ ಲಹರಿಯಲ್ಲೇ ಪ್ರಾಣ ಬಿಡುವುದು ಒಳ್ಳೇಯದು. ಏಕೆಂದರೆ ಸ್ವರಾಜ್ಯ ಕೈಗೆ ಬಂದಾಗ, ಬಂದ ಮೇಲೆ ಏನೇನು ಅನರ್ಥ ಪರಂಪರೆಗಳು ನಡೆಯುತ್ತದೋ? ಎಷ್ಟು ರಕ್ತಪಾತವಾಗುತ್ತದೋ? 'ದುರ್ದಿನಗಳೂ ಬರಲಿವೆ ಸ್ವಲ್ಪ ಕಾಲದ ವರೆಗೆ' ಎಂದು ಹರಿ ಒಮ್ಮೆ ಹೇಳಿದ್ದ. ಒಂದು ವೇಳೆ ಹಾಗಾದರೆ ಅದನ್ನು ಕೇಳಿ ಬದುಕಲಾರೆ. ದುಃಖ

ದಿಂದ ಎದೆಯೊಡೆದೀತು. ಅದಕ್ಕಿಂತ ಈಗ ಮರಣ ಬಂದುದೇ ಲೇಸು. ನೀನು ಅವಳನ್ನು ಬಿಟ್ಟುಹಾಕಬೇಡ" ಎಂದು ಸೀತಮ್ಮನವರ ಕಡೆ ಕೈ ತೋರಿಸಿದರು. ಆ ಮೇಲೆ 'ತೀರ್ಥ ಹ್ಯೊ' ಎಂದು ಸಂಜ್ಞೆಮಾಡಿದರು. ನಡುವೆ ತಡೆದು 'ಮಕ್ಕಳಿಗೆಲ್ಲ ನನ್ನ ಆಶೀರ್ವಾದ ತಿಳಿಸು' ಎಂದು ಹರಸುವವರಂತೆ ಕೈ ಎತ್ತಿದರು. ಮತ್ತೂ ಸ್ವಲ್ಪ ತೀರ್ಥ ಬಿಟ್ಟ ಮೇಲೆ, 'ಸಾಕು, ನಾನು ಮುದುಕನಲ್ವ? ಶೀತ ಆದೀತು' ಎಂದರು. 'ರಾಮ ರಾಮ ಸೀತಾ.......' ಎಂಬುದೇ ಅವರ ಕೊನೆಯ ಉಚ್ಚಾರವಾಯಿತು. ಮತ್ತೆ ಮೌನ.

ರಾಜ ಬಿಕ್ಕಿ ಬಿಕ್ಕಿ ಅಳುತ್ತ ಮುಖಮಂಟಪಕ್ಕೆ ಬಂದ. 'ರೊಂಯ್ ರೊಂಯ್' ಎಂದು ಗಾಳಿ ಬೀಸಿತು. ಒಣಗಿದ ತೆಂಗಿನ ಮಡಲು ಬಡ ಬಡ ಬಿದ್ದುವು. ತೆಂಗಿನ ಮರಕ್ಕೆ ಹಗ್ಗ ಕಟ್ಟಿ ಬಿಗಿದಿದ್ದ ಭಾಗೀರಥಿ, 'ಬೇ ಬೇ' ಎಂದು ಬೊಬ್ಬೆ ಹಾಕಿತು. ಎಲ್ಲಿಂದಲೋ ದೂರದಿಂದ ಹಾರಿ ಬಂದ ಕಾಗೆ ತೆಂಗಿನ ಗರಿಯ ಮೇಲೆ ಕುಳಿತು, 'ಕಾ, ಕಾ, ಕಾ, ಕಾ' ಎಂದು ಕೂಗಿತು. 'ಕಾ, ಕಾ, ಕಾ, ಕಾ' ಅಪಸ್ವರ!

'ಓ, ರಾಯರೇ, ಓಯ್' ಎಂದು ಕರೆಯುತ್ತ ಮುಂಡಾಜೆಯಿಂದ ಎಳ್ನೀರ್ ಘಟ್ಟಕ್ಕೆ ಹೊರಟಿದ್ದ ನಾಲ್ವರು ಬ್ರಾಹ್ಮಣರು ಅಗಳು ದಾಟಿ ಮುಖಮಂಟಪಕ್ಕೆ ಏರಿ ಬಂದರು.

ಪ್ರಾದೇಶಿಕ ಶಬ್ದಕೋಶ

[ಸೂಚನೆ: ಈ ಕಾದಂಬರಿಯಲ್ಲಿ ಅನೇಕ ಕಡೆ ಬಂದ ನಾನಾ ಹೂ, ಗಿಡ, ಮರ, ಬಳ್ಳಿ, ಪಶುಪಕ್ಷಿ ಮತ್ತು ಭಕ್ಷ್ಯ ಭೋಜ್ಯಗಳ ಹೆಸರುಗಳ ಅರ್ಥವು ಸಂದರ್ಭಕ್ಕನುಸರಿಸಿ ಗೊತ್ತಾಗುವುದರಿಂದ ಅದನ್ನು ಈ ಪಟ್ಟಿಯಲ್ಲಿ ಸೇರಿಸಿಲ್ಲ. ಶಬ್ದಾರ್ಥವನ್ನು ಅಕ್ಷರಾನುಕ್ರಮವಾಗಿ ಕೊಟ್ಟಿದೆ.]

ಅಕ್ಕಚ್ಚು: ಕಲ್ಗಚ್ಚು, ಅನ್ನದ ಗಂಜಿ-ನೀರು
ಅಕ್ಕಿಯ ಬಂದ: ಅಕ್ಕಿ ರುಬ್ಬಿದ ಹಿಟ್ಟು
ಅಗತೆ: ಪಾತಿ, ಮಡಿ
ಅಗಳು: ದಂಡೆ, ದರೆ
ಅಂಕು ಡೊಂಕು ಸಂಕಪಾಲ: ಓರೆ ಕೋರೆ ಸೂಚಕ ಗಾದೆ
ಅಜ್ಜರ್ ಕಾಡು: ಉಡುಪಿಯ ಒಂದು ಸ್ಥಳ
ಅಡರು: ಚಿಕ್ಕ ರೆಂಬೆಗಳು
ಅಡ್ಡಗಲ್ಲು: ಕಲ್ಲು ಒತ್ತು
ಅವ್ವಲ್: ಶ್ರೇಷ್ಠ, ಉತ್ತಮ
ಆನ್: ನಾನು
ಆರಣೆ: ಹಾವುರಾಣಿ
ಇಪ್ಪೊತ್ತು: ಎರಡು ಹೊತ್ತು
ಇಬ್ಬಳ್ಳಿ: ಸಿಹಿ ಸೌತೆ
ಇರ್ವಳ: ಎರಡು ಸಾಲು
ಈಟ್: ಸತ್ವ
ಈಡಿಡು: ಗುರಿ ಇಡು
ಉಂಡ್ಲುಕ: ಎಣ್ಣೆಯಲ್ಲಿ ಕರೆದ ಅಕ್ಕಿ-ಹಿಟ್ಟಿನ ಗುಳಿಗೆ
ಉಳೆ: ಜಿಂಕೆ, ಚಿಗರೆ
ಉಳೆ ಕೊಂಬು: ಜಿಂಕೆಯ ಕೋಡು
ಊದುಗಂಬ: ಆಧಾರ
ಏತ: ಯಾತ
ಒಕ್ಕಣೆ: ಪತ್ರ ವೈಖರಿ
ಒಕ್ಕಲು: ಲಾವಣಿದಾರ, ರೈತ
ಒಕ್ಕು: ಕೆದರು
ಒದಗು: ಸಹಾಯಕನಾಗಿ ಬಾ
ಒಂದೆಲಗ: ಬ್ರಾಹ್ಮಿ ಸೊಪ್ಪು
ಒಯ್ಲು: ಸೆಳವು
ಒರತೆ: ಸೆಲೆ
ಒರೆಮಣೆ: ಮಸೆಯುವ ಮಣೆ
ಒರ್ವಾರ: ಅವಶ್ಯವಿದ್ದಷ್ಟು, ಸರ್ವಸಾಧಾರಣವಾಗಿ ಎಲ್ಲ
ಒರ್ವಳ: ಒಂದು ಸಾಲು
ಒಲಿ: ಗರಿ
ಒಳ್ಳೆಮೆಣಸು: ಕಾಳು ಮೆಣಸು, ಮೆಣಸು
ಓಟೆ ಹುಳಿ: ಒಂದು ಜಾತಿಯ ಆಮ್‌ಸೋಲು
ಓಲೆ ಬೆಲ್ಲ: ಚಕ್ರಾಕಾರವಾಗಿ ತಯಾರಿಸಿದ ತಾಳೆಬೆಲ್ಲ
ಕಂಗು: ಅಡಿಕೆ ಮರ
ಕಟ್ಟ: ಒಡ್ಡು
ಕಡಸು ಕರು: ಪ್ರಾಯಕ್ಕೆ ಬಂದ ಆಕಳು

ಕಡೆ: ರುಬ್ಬು
ಕಣೆತೊಡು: ಬಿದಿರಿನ ಚಿಗಿತ ಬಾಣದಂತಹ ಕವಲು
ಕದಳಿ: ಒಂದು ಜಾತಿಯ ಬಾಳೆ
ಕರಿದಂಟು: ನಸ್ಯ ಮಾಡಿದ ಮೇಲೆ ಉಳಿಯುವ ಹೊಗೆಸೊಪ್ಪಿನ ಬರಿಯ ದಂಟು
ಕರಿ ಬಳಿ: ತೆಂಗಿನ ಸುಟ್ಟ ಸಿಪ್ಪೆಯ ಕರಿಯನ್ನು ಸೆಗಣಿಯೊಂದಿಗೆ ಬೆರಸಿ ಸಾರಿಸುವುದು
ಕರೆ: ಅಂಚು, ಬದಿ
ಕಲಡಿಸು: ಕಲಕು, ಬೆರಸು
ಕಳ: ಕಣ
ಕಳಸೆ: ಸ್ಥಾನಿಕ ಹದಿನಾಲ್ಕು ಸೇರಿನ ಒಂದು ಅಳತೆ
ಕಾಟುಮಾವು: ಕಾಡು ಮಾವು
ಕಾಪು ಮಾರಿಯಮ್ಮ: ಕಾಪು ಊರಿನ ದೇವಿ
ಕಿಣಕು: ಚಿವುಟು
ಕಿತೆಂ, ತೂಂ ಕಸಲೆ ಉಲೈತಾಂ? : ಏನು, ನೀನು ಏನು ಹೇಳುತ್ತಿ ?
ಕಿಲ್ಬಿಷ: ಕೆಟ್ಟ ವಿಷ
ಕಿಸು ಭಾಗ್ಯ: ಮಹಾಭಾಗ್ಯ
ಕುಕ್ಕೆ: ಬುಟ್ಟಿ
ಕುಟ್ಟ: ಮಲಬಾರಿನ ಮಾಪಿಳ್ಳೆಗಳನ್ನು ಕರೆಯುವ ಒಂದು ರೂಢಿ
ಕುಡಿಯಾಲ: ಮಂಗಳೂರು
ಕುತ್ತಿ ಕಂಬ: ಮನೆಯ ಮಾಡಿಗೆ ಕೊಡುವ ಮುಖ್ಯ ಆಧಾರಕಂಬ
ಕುದುರು: ಹೊಳೆಯ ನಡುಗಡ್ಡೆ
ಕುಪ್ಪೆ: ರಾಶಿ
ಕುರಿಚಲು: ಚಿಕ್ಕಪುಟ್ಟ
ಕುರ್ಸಾನ್ ಎಣ್ಣೆ: ಕುಸಿಬೆ ಎಣ್ಣೆ
ಕುವರು: ಮುಚ್ಚು, ತುಂಬು
ಕುಶಾಲು: ಹುಡುಗಾಟ
ಕೂಲಿ ಕುಂಬಳ: ಬಿಟ್ಟಿ ಬೇಗಾರಿ
ಕೆಡೆ: ಒಗೆ
ಕೆಂಪು ಮುಂಡಾಸು: ಮದ್ರಾಸ್ ಪೋಲೀಸ್ (ಅಲ್ಲಿಯ ಪೋಲೀಸರಿಗೆ ಕೆಂಪು ರುಮಾಲಿನಂತಹ ಟೊಪ್ಪಿಗೆ ಇರುವುದರಿಂದ)
ಕೆಸರು ಮಜಲು: ಕೆಸರಿನ ಗದ್ದೆ
ಕೇಪಳ ಹೂ: ಕೆಂಪು ಕಿಸ್ಕಾರ ಹೂ
ಕೈ ಕತ್ತಿ: ಕೈಯಲ್ಲಿ ಹಿಡಿಯುವ ಚಿಕ್ಕ ಕತ್ತಿ
ಕೈಯಿ: ತೆನೆ ಸಹಿತ ಬತ್ತದ ದಂಟು
ಕೊಟ್ಟಾರಿ ಭಂಡಾರಿ: ಮಠದ ಅಧಿಕಾರಿಗಳು
ಕೊಪ್ಪು: ಕಿವಿಯ ಒಂದು ಆಭರಣ
ಕೊಂಬು ಬಾ: ಕೊಂಬಿನ ಆಕಾರದ ಹೂ ಬಿಡು
ಕೊಯ್ಲು: ಸುಗ್ಗಿ
ಕೊರಗರು: ಹರಿಜನರ ಒಂದು ಒಳ ಪಂಗಡ
ಕೊರ್ಳು: ತೆನೆ
ಕೊಳಕೆ: ವರ್ಷದೊಳಗಿನ ಮೂರನೆಯ ಬೆಳೆ
ಕೊಳ್ಳಿ: ಸುಡುಗಾಡಿನ ಬೆಂಕಿ
ಕೋಡುಕಾಯಿ: ಬೀಜ ಸುಲಿಯಲು ಬರುವ ಉದ್ದ ಕಾಯಿ
ಕೋರ್ಜಿ: ನಾಲ್ವತ್ತೆರಡು ಮುಡಿ
ಕೌಳಿಗೆ: ಲೋಟ
ಗಂಗೋದಕ: ನೀರು
ಗಂಜಿನೊರೆ: ಗಂಜಿಯ ನೀರು

ಗಟ್ಟಿ : ಕಡುಬು
ಗದ್ದೆಪುಡಿಮಾಡು : ನೇಗಿಲು ಹೊಡೆ
ಗಾಳಿ : ಸರ್ವೆ ಮರ
ಗಿಂಬಳ : ಸರಕಾರಿ ನೌಕರರು ವಾಮ ಮಾರ್ಗದಿಂದ ಪಡೆಯುವ ಸಂಪತ್ತು
ಗುಡಾಣ : ಹಂಡೆ
ಗುಡ್ಡ : ಗಂಡು ಆಡು, ಹೋತ
ಗುತ್ತಿ : ಚಿಕ್ಕ ಗಿಡಗಳನ್ನು ಕೊಯ್ದ ಮೇಲೆ ಉಳಿಯುವ ಬುಡ
ಗುತ್ತು : ಜಮೀನುದಾರರ ವಾಸಸ್ಥಳ
ಗುದಿಗೆ ಶಾಸ್ತ್ರ : ದಂಡ ನೀತಿ
ಗುಪ್ಪೆ : ಗುಂಪು, ರಾಶಿ
ಗುಳಿ : ಹೊಂಡ
ಗುಳಿಸೇರು : ತಗ್ಗು ಜೀಳು
ಗೂರು : ಕಟ್ಟು
ಗೆಂಧಾಳಿ : ಕೆಂಪು ಜಾತಿಯ ಎಳನೀರು
ಗೆರಟೆ : ತೆಂಗಿನ ಚಿಪ್ಪು
ಗೇರುಹಣ್ಣು : ಗೋಡಂಬೆ ಹಣ್ಣು
ಗೊರಬು : ಮಳೆಗಾಲದಲ್ಲಿ ಕರಾವಳಿಯಲ್ಲಿ ಉಪಯೋಗಿಸುವ ಬಿದಿರು ಮತ್ತು ಎಲೆಗಳಿಂದ ಮಾಡಿದ ಗೊಂಗಡಿ
ಗೋರಟೆ : ಒಂದು ಜಾತಿಯ ಹೂ
ಗೋರು : ಎತ್ತಿ ತುಂಬಿಸು
ಗೋಳಿಮರ : ಆಲದ ಮರ
ಚಡಿ : ಗುರುತು
ಚಪ್ಪೆ : ಸಪ್ಪೆ
ಚಲನ್ : ಪ್ರತಿದಿನದ ಸ್ಟೇಟ್‌ಮೆಂಟ್
ಚಳ್ಳೆಂಗಾಯಿ : ಬೊಂಕೆ ಕಾಯಿ
ಚಾಲುಗೇಣಿ : ಒಂದೇ ವರುಷದ ಮಟ್ಟಿಗೆ ಲಾವಣಿ ಹಿಡಿಯುವುದು
ಚಿಟ್ಟೆಹುಲಿ : ಚಿರ್ತೆ
ಚಿತ್ಪಾವನ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕೊಂಕಣಸ್ಥ ಬ್ರಾಹ್ಮಣರು
ಚೂಪು : ತುದಿ
ಚೋಕು : ಚಪ್ಪಟೆ
ಜಿರಾವರ್ತಿ : ಜೋರು ಮಳೆ
ಡಬ್ಬ : ಚಿಮಣಿ ಎಣ್ಣೆಯ ಡಬ್ಬ
ಡೇಗೆಗಣ್ಣು : ತೀಕ್ಷ್ಣ ದೃಷ್ಟಿ
ತಟ್ಟೀರಾಯ : ಬೆದರು, ಗುಮ್ಮ
ತಂಬ್ಳಿ : ನೀರ್ಗೊಜ್ಜು
ತಳಿಂಬರಂ : ಒಂದು ಕಸಿಮಾಪಿನ ಜಾತಿ
ತಳಿ : ಸವೆ
ತಾರ್‌ಪೂರ್ : ಬೈಗಳಿಲ್ಲದ ಬೆದರಿಕೆ
ತಾಳಮದ್ದಳೆ : ಒಂದು ಬಗೆಯ ಯಕ್ಷಗಾನ
ತಿಮರೆ : ಒಂದೆಲೆಗ
ತಿರಿ : ದುಂಡಗೆ ಚಿಗುರುವುದು
ತಿರುಪು : ಮುಡಿಯ ಒಂದು ಆಭರಣ
ತೀವು : ಪೂಸು, ಮೃದುವಾಗಿ ತಿಕ್ಕು
ತುಪ್ಪಗೆಣಸು : ಬಳ್ಳಿಯ ಮೇಲೆ ಹುಟ್ಟುವ ಒಂದು ಜಾತಿಯ ಗೆಣಸು
ತೆಂಗಿನ ಕೈ : ತೆಂಗಿನ ಗೊನೆ
ತೆಂಗಿನ ಹೂ : ಹೆರೆದ ಕೊಬ್ಬರೆಯತುದಿ
ತೆಳಿ : ಗಂಜಿಯ ನೀರು
ತೇಗು : ಸಾಗುವಾನಿ ಮರ
ತೇಟ್ : ಸಾಕ್ಷಾತ್
ತೇಪು : ಎರಚು
ತೊಟ್ಟೆ : ಪೊಟ್ಟಣ, ಚೀಲ
ತೊಟ್ಟೆ ಕುತ್ತು : ಚೀಲ ಹೊಲಿ
ತೋಡು : ನೀರಿನ ಹರಿ
ದರೆ : ದಂಡೆ
ದಾನೆ ಪಣ್ಕೆ : ಏನು ಹೇಳಲಿ?
ದಾರ್ನೀರು : ಧಾರೆಯಾಗಿ ಹರಿಯುವ ನೀರು

ದಿಗ್‌ಡ್ ದಿಮ್ಮಿ: ಸೊಕ್ಕಿದವಳು, ಕೊಬ್ಬಿದವಳು
ದುಸ್ತು: ಉಡುಪು
ದೆಂಜಿ: ಏಡಿ
ದೌಡು ಬಾ: ಬೇಗ ಬಾ
ನಂಜ: ನೀರಾವರಿ ಭೂಮಿ
ನಾಗ ದರ್ಶನ: ನಾಗಪೂಜಾ ವಿಧಿ
ನಾಗ ಮಂಡಲ: ನಾಗಪೂಜೆಯ ವಿಶಿಷ್ಟ ವಿಧಿ
ನಾಚಿಕೆ ಮುಳ್ಳು: ಮುಟ್ಟಲು ಮುರಿಕೆ ಹುಲ್ಲು
ನಾಯಿ ಹುಲಿ: ನಾಯಿಯ ಹೊರತು ಏನನ್ನೂ ತಿನ್ನದ ಹುಲಿ
ನೀಟ: ನೇರವಾಗಿ ನಿಂತ
ನೇಜಿ: ಬತ್ತದ ಸಸಿ
ಪಕ್ಕಿ ಪರಣೆ: ಹಕ್ಕಿ ಪಕ್ಕಿ
ಪಂಜು: ದೀವಟಿಗೆ, ಸೂಟಿ
ಪಡಿ: ಊಟದ ಸಾಮಗ್ರಿ
ಪಡ್ಚ: ಖಲಾಸ್, ನಿಖಾಲಿ
ಪಡ್ಪೋಶಿ: ನಿರುಪಯೋಗಿ
ಪಣೆಯೆ: ಬಾಳೆಯ ಹಣೆಗೆ
ಪತ್ರೊಡೆ: ಕೆಸುವಿನ ಎಲೆಯಿಂದ ಮಾಡಿದ ಕಡುಬು
ಪಲ್ಪಿ ಹೊಡೆ: ಲಾಗ ಹಾಕು
ಪಸಂದು: ಚನ್ನಾದದ್ದು, ಸರಿಯಾದದ್ದು
ಪಸೆ: ತೇವ
ಪಾಡ್ದನ: ತುಳು ಜನಪದ
ಪಾಳೆಯ ಕಡ್ಡಿ: ನೆಲ ಸಾರಿಸಲು ಉಪಯೋಗಿಸುವ ಅಡಿಕೆಯ ಹಾಳೆಯ ತುಂಡು
ಪಿಕ್ಕಾಸು: ಗುದ್ದಲಿ
ಪಿಂಗಾರ: ಅಡಿಕೆ ಹೂ
ಪಿಲಿಕಾಂದೋಡಿ: ದೊಡ್ಡ ಜಾತಿಯ ಕನ್ನಡಿ ಹಾವು
ಪುಂಜ: ನೀರಿನ ಆಶ್ರಯವಿಲ್ಲದ ಭೂಮಿ
ಪುಳ್ಕೊಟ್ಟೆ: ಹುರಿದ ಹುಣಿಸೆ ಬೀಜ
ಪೂಂಬೆ: ಬಾಳೆಯ ಹೂ
ಪೊಕ್ಕೆ: ಬೆಂಕಿಯ ಗುಳ್ಳೆ
ಪೊಟರೆ: ತೂತು, ಎಡೆ
ಪೊಟ್ಟು: ತೊದಲು, ಜೊಳ್ಳು
ಪೊಡಸು: ತುಂಡರಸು
ಪೊಲ್ಲಕ್ಕ: ಚಲುವೆ
ಪೌಳಿ: ದೇವಸ್ಥಾನದ ಜಗುಲಿ
ಬಚ್ಚು: ಹಾಲು ಕೊಡುವುದನ್ನು ನಿಲ್ಲಿಸು
ಬಡವಾಗು: ಸೊರಗು
ಬತ್ತೇರಿ: ಕೋಟೆ
ಬದನಿಕೆ: ಮರದ ಮೇಲೆ ಹುಟ್ಟತಕ್ಕ ಇನ್ನೊಂದು ತರದ ಸಸ್ಯ ಜಾತಿ
ಬನ: ನಾಗ ವನ
ಬಂಧದ ಕಾಯಿ: ಅಂಟು ಬರುವ ಒಂದು ಜಾತಿಯ ಕಾಯಿ
ಬಂಬೂಚು: ಕಾಯಿಪಲ್ಯಗಳಿಗೆ ತಗಲುವ ಒಂದು ಜಾತಿಯ ಹುಳು
ಬಯ್ಯಮಲ್ಲಿಗೆ: ಸಂಜೆ ಮಲ್ಲಿಗೆ
ಬರ್ಕತು: ಸುಖ, ಉಳಿಗಾಲ
ಬರ್ಬರ: ಕ್ರೂರ
ಬಲಿಪ: ಹೆಬ್ಬುಲಿ
ಬಲ್ಲೆ: ಹಲವು ಗಿಡಬಳ್ಳಿಗಳು ಸೇರಿ ಉಂಟಾದ ತೊಡಕು
ಬಳ: ನೆಲುವು
ಬಸಳೆ: ಕಾಯಿಪಲ್ಯದ ಒಂದು ಬಳ್ಳಿ
ಬಾಂದ್: ತೂತು, ಕಿಂಡಿ
ಬಿಟ್ಟಿ ಬೇಗಾರಿ: ಪುಕ್ಕಟೆಯಾಗಿ ಮಾಡಬೇಕಾದ ಕೆಲಸ

ಬಿಸಿ ನೀರಿನ ಕೊಟ್ಟಿಗೆ: ಪ್ರತ್ಯೇಕವಾದ ಸ್ನಾನದ ಮನೆ
ಬೀಳು: ಹಗ್ಗದಂತೆ ಉಪಯೋಗಿಸ ಬಹುದಾದ ಬಳ್ಳಿ
ಬೂರುಗ: ಒಂದು ಜಾತಿಯ ಮರ
ಬೆಜಕ್ರೆ: ತರಗೆಲೆ
ಬೆಟ್ಟು ಗದ್ದೆ: ಮಳೆ ನೀರಿನ ಆಶ್ರಯದಿಂದ ಮಾತ್ರ ಬೆಳೆ ಬರುವ ಗದ್ದೆ
ಬೆಳ್ತಿಗೆ ಅಕ್ಕಿ: ಬತ್ತ ಬೇಯಿಸದೆ ತಯಾರಿಸಿದ ಅಕ್ಕಿ
ಬೈದ್ಯೆತಿ: ಬಿಲ್ಲವ ಜಾತಿಯವನ ಹೆಂಡತಿ
ಬೈಪಣೆ: ಹುಲ್ಲು ತಿನ್ನಲು ಹಟ್ಟಿಯಲ್ಲಿ ದನಗಳ ಎದುರು ಕಟ್ಟಿದ ಎತ್ತರ ಸ್ಥಳ
ಬೈರಾಸು: ಟಾವೆಲ್, ಸ್ನಾನದ ಪಂಚೆ
ಬೈಲುಗದ್ದೆ: ಎರಡು ಬೆಳೆ ಬರುವ ನೀರಾವರಿ ಗದ್ದೆ
ಬೈ ಹುಲ್ಲು: ಬತ್ತದ ಒಣಹುಲ್ಲು
ಬೊಗ್ಗು ಎದುರಾಗು: ಶನೀಶ್ವರ ಎದುರು ಬರು
ಬೊಳ್ಳಮರ: ಪೊಳ್ಳುಮರ
ಬೋಗರ ದುಃಖ: ಹುಸಿ ದುಃಖ
ಬ್ಯಾರಿ: ಮಲೆಯಾಳದ ಮುಸುಲಮಾನ ಎಂದರೆ ಮಾಪಿಳ್ಳೆ
ಬ್ರಹ್ಮರಥ: ಉಡುಪಿಯ ದೊಡ್ಡ ರಥ
ಭೋಗವಿಲ್ಲದವರು: ಋಣ ಇಲ್ಲದವರು
ಭೋಜನ ಶಾಲೆ: ಉಡುಪಿಯ ಅಷ್ಟ-ಮಠದ ಧರ್ಮಛತ್ರ
ಮಂಗು ಮದಿಮಾಳ್: ಬೆಕ್ಕಿನ ಮದುವೆ
ಮಜಲು: ಎರಡು ಬೆಳೆ ಬರುವ ಗದ್ದೆ
ಮಟ್ಟಿ ಕಾಗೆ: ಒಂದು ಜಾತಿಯ ಚಿಕ್ಕ ಕಾಗೆ
ಮಟ್ಟಿ ಗುಳ್ಳ: ಒಂದು ಜಾತಿಯ ಬದನೆಕಾಯಿ
ಮಡಲು: ತೆಂಗಿನ ಸೋಗೆ
ಮಡು: ಕೊಡಲಿ
ಮಂಡೆ ಮಾರಿ: ಬೇನೆ, ರೋಗ
ಮದನ ಕೈ: ಕೊಪ್ಪರಿಗೆಯನ್ನು ಸೂಚಿಸುವ ಮರದ ಗೆಲ್ಲು
ಮದಿಮಾಳ್ ಪಕ್ಕಿ: ದಕ್ಷಿಣ ಕನ್ನಡ ಜಿಲ್ಲೆಯ ಬಹು ಸುಂದರವಾದ ಒಂದು ಹಕ್ಕಿ
ಮದ್ದಲೆ: ಮೃದಂಗ
ಮರ ಮಟ್ಟು: ಮರ ಗಿಡ
ಮರಸಣಿಗೆ: ಗಡ್ಡೆಯಾಗುವ ಒಂದು ದೊಡ್ಡ ಕೆಸುವು
ಮರಾಯಿ: ದನಗಳ ಕಲ್ಗಚ್ಚಿಗಾಗಿ ಉಪಯೋಗಿಸುವ ಮರದ ಇಲ್ಲವೆ ಮಣ್ಣಿನ ಪಾತ್ರೆ
ಮಲೆ: ಘೋರಾರಣ್ಯ
ಮಹಿಮೆನ್: ಮಹಿಮೆಯನ್ನು
ಮಾಣಿ: ಹುಡುಗ, ಪೋರ
ಮಾಪಿಳ್ಳೆ: ಮಲೆಯಾಳದ ಮುಸ-ಲ್ಮಾನ ಜಾತಿ
ಮಾಂಬಳ: ಮಾವಿನ ಚಟ್ಟು
ಮಿಳ್ಳಿ: ಗಡ್ಡೆ
ಮುಕ್ಕಾಲು: ಕಾಲಾಣೆ, ಮೂರು ಪೈ
ಮುಖ ಮಂಟಪ: ಮಂಟಪಾಕಾರದ ಮನೆಯ ಮುಂಭಾಗ
ಮುಜ್ಜು: ಮುಸು, ಕಪ್ಪುಮೋತಿಯ ಮಂಗ
ಮುಟ್ಟಲೆ: ಅಡಿಕೆ ಹಾಳೆಯ ಟೋಪಿ
ಮುಡಿ: ನಾಲ್ವತ್ತೆರಡು ಸೇರು ಅಕ್ಕಿಯನ್ನು ಬೈಹುಲಿನಿಂದ ಕಟ್ಟಿದ ಮೂಟೆ

ಮುಂಡಗೆ : ಕೇದಗೆ ಜಾತಿಯ ಒಂದು ಗಿಡ
ಮುರುಟುಗಟ್ಟು : ಸುಕ್ಕಾಗು
ಮುಳಿ ಹುಲ್ಲು : ಮನೆಯ ಮಾಡಿಗೆ ಹೊದ್ದಿಸಲು ಉಪಯೋಗಿಸುವ ಗುಡ್ಡದ ಹುಲ್ಲು
ರವಕೆ : ಕುಪ್ಪಸ
ರಾವು : ದೆವ್ವ
ರೂಪು : ಸ್ವರೂಪ
ಸಿಗಿ : ಸೀಳು
ಸಿಂಗಾರ ಹೂ : ಅಡಿಕೆ ಹೂ
ಸಿಂಯಾಳ : ಎಳೆ ನೀರು
ಸಿಮು : ತಂಪು
ಸುಡುಮಣ್ಣು : ಗೊಬ್ಬರಕ್ಕಾಗಿ ಸುಟ್ಟ ಮಣ್ಣು
ಸುಬ್ರಮಣ್ಯ : ನಾಗದೇವರು
ಸೂಡಿ : ಕಟ್ಟು
ಸೋಗೆ : ತೆಂಗಿನ ಮಡಲು
ಸೋಗೆಯ ದಂಡು : ತೆಂಗಿನ ಮಡಲಿನ ನಡುವಿನ ದಂಡು
ಸೋಳೆ : ಹಲಸಿನ ತೊಳೆ
ಸೌದೆ : ಕಟ್ಟಿಗೆ
ಹಟ್ಟಿ : ದನ ಕರುಗಳನ್ನು ಕಟ್ಟುವ ಕೊಟ್ಟಿಗೆ
ಹಟ್ಟಿ ಗೊಬ್ಬರ : ದನಗಳ ಗೊಬ್ಬರ
ಹಂದಾಡು : ಅಲುಗಾಡು
ಹರವು : ಬಿತ್ತು
ಹಲಿಗೆ ಹಾಕು : ಬಿತ್ತುವ ಮೊದಲು ಗದ್ದೆಯನ್ನು ಸಮತಟ್ಟು ಮಾಡುವ ಹಲಿಗೆ ನೇಗಿಲು
ಹಾತೆ : ಎಲ್ಲ ಜಾತಿಯ ಚಿಟ್ಟೆಹುಳು
ಹಿಂಡಲು : ಮೆಳೆ
ಹುಣಿ : ಗದ್ದೆಯ ಸುತ್ತೂ ಇರುವ ಒಡ್ಡು
ಹೂಡು : ಉಳು, ನೇಗಿಲು ಹೊಡೆ
ಹೆಬ್ಬಲಸು : ಒಂದು ಜಾತಿಯ ಚಿಕ್ಕ ತೊಳೆಯ ಹಲಸು
ಹೆಬ್ಬಾರರು : ಹಿಂದಿನ ದೊಡ್ಡ ಮನೆತನದ ಹೆಸರು
ಹೆರೆಹೆರೆಯಾಗು : ಬಿಡಿ ಬಿಡಿಯಾಗು
ಹೊಗೆಸೊಪ್ಪು : ತಂಬಾಕು
ಹೊಡೆಮಂಚ : ಸೂಡಿಯಿಂದ ಬತ್ತವನ್ನು ಪ್ರತ್ಯೇಕಿಸಲು ಹೊಡೆಯುವ ಮಂಚ
ಹೊನ್ನೆಣ್ಣೆ : ಹೊನ್ನೆಕಾಯಿ ಎಣ್ಣೆ

ಬಾಳಿನ ಗಿಡ

ಕೆಲವು ಅಭಿಪ್ರಾಯಗಳು

"ಮಲೆನಾಡಿನ ಹಳ್ಳಿಗಳ ನೈಜ ಚಿತ್ರಣ ಈ ಕಾದಂಬರಿಯ ಕಥಾವಸ್ತುವಿನ ಹಿನ್ನೆಲೆಯಾಗಿದೆ."

—ರಾಷ್ಟ್ರಬಂಧು, ಮಂಗಳೂರು

"ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಹುಟ್ಟಿ ಬೆಳೆದು ಮಾಸ್ತರಿಕೆ ಮಾಡಿ ೫೫ ರ ವಯಸ್ಸಿನಲ್ಲಿ ನೌಕರಿಯಿಂದ ಒತ್ತಾಯದ ವಿರಾಮ ಹೊಂದಿದ ಶ್ರೀ ಗೋವಿಂದರಾಯರು ಹಿರಿಮಗನ ಅಪೇಕ್ಷೆಯಂತೆ ಮಲೆನಾಡಿನ ಸೀಮೆಗೆ ವಲಸೆ ಹೋಗಿ, ಅರಣ್ಯವನ್ನು ಸದೆದು, ಭೂಮಿಯನ್ನು ಕೃಷಿಮಾಡಿ ಪ್ರಾಣೋತ್ಕ್ರಮಣವಾಗುವ ವರೆಗೂ ಭೂಮಿತಾಯಿಯ ಚಿನ್ನದಂತಹ ಮಣ್ಣಿನಲ್ಲಿ ಬಾಳಿನ ಗಿಡವನ್ನು ಬೆಳೆಯುವ ಸಾಹಸ ಮಾಡಿದುದೇ ಈ ಕಥೆ. ಕರಾವಳಿಯ ಗೌಣವಾದ ಮತ್ತು ಮಲೆನಾಡಿನ ಸ್ಫುಟವಾದ ಚಿತ್ರವನ್ನು ಕಣ್ಣಿಗೆ ಕಟ್ಟಿದಂತೆ ಮಾಡುವುದರಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ........ ಸಾಮಾನ್ಯವನ್ನು ಉದಾತ್ತೀಕರಿಸುವುದರಲ್ಲಿ ಸಫಲರಾಗಿದ್ದಾರೆ."

—ಕರ್ಮವೀರ, ಹುಬ್ಬಳ್ಳಿ

"ಲೇಖಕರು ನಿಸರ್ಗವನ್ನು ಹೊಂದಿಕೊಂಡ ಬಾಳ್ವೆಯ ಒಂದು ಚಿತ್ರವನ್ನು ಮುಂದಿಟ್ಟಿದ್ದಾರೆ. ಗೋವಿಂದರಾಯರ ಅಂತ್ಯದೊಡನೆ ಕಥೆ ಮುಕ್ತಾಯವಾಗುತ್ತದೆ. 'ಅಯ್ಯೋ, ಅವರ ಜೀವನ ಮುಗಿಯಿತೇ'? ಎನ್ನಿಸುತ್ತದೆ. ಕತೆಗಾರಿಕೆ ಸಫಲವಾಗಿದೆ ಎನ್ನುವುದಕ್ಕೆ ಇದು ನಿದರ್ಶನ."

—ಕನ್ನಡನುಡಿ, ಬೆಂಗಳೂರು

"ಇಂತಹದೊಂದು ಕಥಾವಸ್ತು ನಿಜವಾಗಿಯೂ ಕಾದಂಬರಿಗೆ ಅತಿ ಹೊಸದಾಗಿದೆ, ಬಹು ತಕ್ಕದಾಗಿದೆ. ಶಾಲಾ ಉಪಾಧ್ಯಾಯರೊಬ್ಬರ ಜೀವನದ ಉತ್ತರಾರ್ಧವಿದು. ಅವರ ಬಾಳಿನ ಗಿಡಕ್ಕೆ ನಾಲ್ಕು ಟೊಂಗೆಗಳು. ಆ ನಾಲ್ಕು ಮಕ್ಕಳ ದಾರಿ ನಾಲ್ಕು. ಇಬ್ಬರು ಹೆಣ್ಣುಮಕ್ಕಳಲ್ಲಿ ಒಬ್ಬೊಬ್ಬರ ಗುಣ ಪ್ರಾಧಾನ್ಯದ ಭಿನ್ನತೆ. ಇವರೆಲ್ಲರನ್ನು ಸರಿತೂಗಿಸಿಕೊಂಡು ಬಾಳಿದೆ ಒಂದು ಜೀವ. ಬೇವನ್ನು ಅಗೆದು ಸತಿಯೊಡನೆ ಸರಸವಾಡಿ ಕಹಿಯನ್ನು ನುಂಗುವ ಕಷ್ಟಜೀವ ನಾಯಕನದು. ....ಕರ್ಮಯೋಗಿ ಕಾಲನೊಡನೆ ಕೃತಕೃತ್ಯತೆಯನ್ನು ಪಡೆದ ಒಂದು ಹೆಣ್ಣುಜೀವನದ ಈ ಕಥೆ ಚಲನಚಿತ್ರದ ವಿವಿಧ ದೃಶ್ಯಗಳಂತೆ ಕಣ್ಣುಮುಂದೆ ಸಜೀವವಾಗಿ ಹಾಯುತ್ತಿದೆ............ ಓದಲೇಬೇಕಾದ ಕಥಾವಸ್ತು, ಅನುಸರಿಸಬೇಕಾದ ನೀತಿ. ಇದು ಭಾರತೀಯರ ಬದುಕಿಗೆ ಬೆಳಕು ಬೀರುವಂತಹದು. ಲೇಖಕರ ಶ್ರಮ ಸಾರ್ಥಕವಾಗಿದೆ."

—**ನವಯುಗ, ಹುಬ್ಬಳ್ಳಿ**

"ಕನ್ನಡದ ಕೆಲವೇ ಸುಂದರ ಕಾದಂಬರಿಗಳಲ್ಲಿ 'ಬಾಳಿನ ಗಿಡ' ಒಂದು. ....ಓದುಗನನ್ನು ಯಾವ ರೀತಿಯಲ್ಲೂ ನಿರಾಶೆಗೊಳಿಸದೆ ಪುಸ್ತಕ ಮುಗಿಸುವವರೆಗೂ ಕುತೂಹಲ ಕೆರಳಿಸುತ್ತದೆ........ ಈ ಕಾದಂಬರಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಚಿರಂತನ ಪ್ರಕೃತಿಸೌಂದರ್ಯದ ಮನೋಹರ ಚಿತ್ರಣವಿದೆ. ....ಕಟ್ಟುಕತೆಯಲ್ಲ, ಸತ್ಯಕತೆ ಎನ್ನುವಷ್ಟರ ಮಟ್ಟಿಗೆ ವ್ಯಕ್ತಿ ಸನ್ನಿವೇಶಗಳ ಜೀವಂತ ಚಿತ್ರಣದಿಂದ ಕೂಡಿದೆ 'ಬಾಳಿನ ಗಿಡ.' ಕನ್ನಡ ಉತ್ತಮ ಕಾದಂಬರಿಗಳ ಮಟ್ಟಕ್ಕೆ ಬಂದಿರುವ ಈ ಕೃತಿಯನ್ನು ಕನ್ನಡಿಗರು ಪ್ರೀತಿಯಿಂದ ಆದರಿಸಲಿ."

—**ಚಿತ್ರಗುಪ್ತ, ಬೆಂಗಳೂರು**

"ಇದೊಂದು ಸ್ವತಂತ್ರ ಸುಂದರ ಕೃತಿ. ....ದಕ್ಷಿಣ ಕನ್ನಡದ ಗ್ರಾಮ ಜೀವನದ ಸೌಂದರ್ಯವನ್ನೂ ಕುಟುಂಬಜೀವನದ ವೈಶಿಷ್ಟ್ಯವನ್ನೂ ಈ ಕಾದಂಬರಿಯಲ್ಲಿ ಆದಿಯಿಂದ ಅಂತ್ಯದ ವರೆಗೂ ಕಾಣಬಹುದು. ಓದಲೇ ಬೇಕಾದ ಉತ್ತಮ ಕಾದಂಬರಿ."

—**ನುಡಿ, ಮುಂಬಯಿ**

"ಕಾದಂಬರಿ ಬಹಳ ರಮ್ಯವಾಗಿದೆ. ಗೋವಿಂದರಾಯರು, ಅವರ ಹೆಂಡತಿ ಸೀತಮ್ಮ, ಕಥೆಯ ನಾಯಕ ನಾಯಕಿಯರು. ಗೌಣಪಾತ್ರಗಳಲ್ಲಿ ಅವರ ಮಕ್ಕಳೂ ಸೊಸೆಯಂದಿರೂ ಇದ್ದಾರೆ. ಇದು ಮಲೆನಾಡಿನ ಒಂದು ದಿವ್ಯ ಚಿತ್ರ. ಆದರ ವರ್ಣನೆಯಂತೂ ನಮ್ಮ ಹೃದಯವನ್ನು ಸೂರೆಗೊಳ್ಳುತ್ತದೆ. 'ಹೆಚ್ಚು ಆಹಾರ ಬೆಳೆಯಿರಿ, ಹಳ್ಳಿಗಳಿಗೆ ಹಿಂತಿರುಗಿರಿ' ಮುಂತಾದ ಪಲ್ಲವಿಗಳಿಗೆ ಈ ಕಾದಂಬರಿ ಸತ್ವವಾದ ಪುಷ್ಟಿಕೊಡುತ್ತದೆ. ನಮ್ಮ ದೇಶದಲ್ಲಿ ಜನ ಇದೆ, ನೆಲ ಇದೆ, ಮಾಡುವವರಿಲ್ಲ. ಮಾಡಿದರೆ ಮಣ್ಣು ಹೊನ್ನಾಗುತ್ತದೆ. ಇದು ಈ ಕಾದಂಬರಿಯ ಗಾಯತ್ರಿ. ಇದೊಂದು ಶ್ರೇಷ್ಠವರ್ಗದ ಕಾದಂಬರಿ........"

—ಪ್ರಜಾಮತ, ಬೆಂಗಳೂರು

"ನಿಬಿಡಾರಣ್ಯದ ನಡುವೆ ನೆಲೆ ನಿಂತ ನಿವೃತ್ತ ಶಿಕ್ಷಕನ ಸಂಸಾರದ ಆಗು-ಹೋಗುಗಳು, ಏಳು-ಬೀಳುಗಳು, ತಿಕ್ಕಾಟ ತಾಪತ್ರಯಗಳು ಇವುಗಳ ಕರುಣಕತೆಯನ್ನು ಬರಹಗಾರರು ತಮ್ಮ ಶಕ್ತಿಯುತವಾದ ಶೈಲಿಯಲ್ಲಿ ಚನ್ನಾಗಿ ಚಿತ್ರಿಸಿದ್ದಾರೆ. ....ಕುಟುಂಬದ ಕಷ್ಟ ಕೋಟಲೆಗಳನ್ನು, ಸಾಹಸ ಸಂಭ್ರಮಗಳನ್ನು, ಓದುಗರೆದುರು ಹಲವು ಸನ್ನಿವೇಶಗಳಲ್ಲಿ ತೆರೆದಿಟ್ಟು ಬಡ ಬಾಳಿನ ಒಳದನಿಯನ್ನು ಎಲ್ಲೆಲ್ಲಿಯೂ ಕೇಳಿಸುವಂತೆ ಮಾಡಿದ ಹರಿದಾಸ ರಾಯರ ಮಾತಿನ ಮೋಡಿಯು ಸಫಲವಾಗಿದೆ ....ಕಾದಂಬರಿಯ ಪಾತ್ರ ಪೋಷಣೆ ಸೊಗಸಾಗಿದೆ.....ಕತೆಯು ಬೆಳಗೆ ನಿರರ್ಗಲವಾಗಿದೆ. ಇಲ್ಲಿ ಮಿಂಚುವ ವಿಚಾರಧಾರೆ ಕ್ರಾಂತಿಗಿರಿ. ಇಂದಿನ ಅಧಿಕಾರವರ್ಗ, ಕಾಂಗ್ರೆಸ್ ಕಾರ್ಯಕರ್ತರು, ವರ್ತಕರು, ಅದರಂತೆ ಸಾಮಾನ್ಯ ಜನತೆ ಸಹ ವಂಚನೆ, ಲಾಭ ಲಾಲಸೆಗಳಿಂದ ನೀತಿಗೇಡಿಯಾಗಿರುವುದರಿಂದ ಸಮಾಜದ ಅಧಃಪಾತವು ಹೇಗಾಗುತ್ತಿದೆಯೆಂಬುದರ ಸುಂದರ ನಿರೂಪಣವು ಈ ಕಾದಂಬರಿಯಲ್ಲಿದೆ. ಬಾಳಬೇಸರಿಕೆಯಲ್ಲಿಯೂ ಭಾಗ್ಯವರಸುವ ಹಟವಿದೆ, ಹೊಸ ಹುಟ್ಟಿನ ನೋಟವಿದೆ."

—ನಿರೀಕ್ಷಕ, ಧಾರವಾಡ

ಇದೇ ಲೇಖಕರ ಇತರ ಕೃತಿಗಳು

ಕಥೆಗಳು

೧ ಕ್ರಿಸ್ಮಸ್ ಕಾಣಿಕೆ ಮತ್ತು ಇತರ ಕಥೆಗಳು	೧—೦—೦

ಕಾದಂಬರಿಗಳು

೨ ಬದುಕಿನ ದಾರಿ	೧—೮—೦
೩ ಬಾಳಿನ ಗಿಡ	೨—೮—೦
೪ ಧಾರವಾಡದ ಹುಡುಗಿ	೧—೮—೦
೫ ಹುಚ್ಚರ ಮನೆ	೧—೮—೦
೬ ಹಸಿದ ಹಂಬಲು	೧—೮—೦
೭ ಕೈಹಿಡಿದ ಕಾವೇರಿ	೨—೪—೦
೮ ಉಳ್ಳಯ್ಯ	(ಅಚ್ಚಿನಲ್ಲಿ)

ರಾಜಕೀಯ

೯ ಎಚ್ಚೆತ್ತ ಆಗ್ನೇಯ ಏಶಿಯಾ	೧—೮—೦
೧೦ ಮರುಭೂಮಿಯ ಅರಬರು	೧—೮—೦
೧೧ ಉಕ್ಕಿನ ಮನುಷ್ಯ-ಸ್ಟ್ಯಾಲಿನ್	೨—೦—೦
೧೨ ಇಂದಿನ ಪಿಲಿಪ್ಪೈನ್ಸ್	೦—೩—೦
೧೩ ದ್ವಿತೀಯ ಮಹಾಯುದ್ಧ	೧—೦—೦

ಇತರ

೧೪ ಸಿರಿಗನ್ನಡ ಮಹಾಭಾರತ (ಗದ್ಯ)	೩—೦—೦
೧೫ ಸಚಿತ್ರ ಕಾಮಸೂತ್ರ	೧—೮—೦

ದೊರೆಯುವ ಸ್ಥಳ:

ಸಾಹಿತ್ಯ ಭಂಡಾರ, ಹುಬ್ಬಳ್ಳಿ



ಶ್ರೀ. ಎಂ. ಗಿರಿವಾಸರಾಯರು ದಕ್ಷಿಣ ಕನ್ನಡ ಜಿಲ್ಲೆಯವರು. ಹದಿನಾರು ವರುಷಗಳಿಂದ ಉತ್ತರಕನ್ನಡ ಜಿಲ್ಲೆಯ ನಿವಾಸಿಗಳು.

ಪತ್ರಿಕೋದ್ಯಮಿ, ಸಾಹಿತಿ, ವಾಗ್ಮಿಗಳಾದ ಇವರು ಕನ್ನಡ ನಾಡುನುಡಿಯ ಸೇವೆಗಾಗಿ ತಮ್ಮ ಜೀವ, ಜೀವನವನ್ನೇ ಮುಡಿಪಾಗಿಟ್ಟಿರುವರು. ಎಳೆ ವಯಸ್ಸಿನಿಂದಲೂ ದೇಶಸೇವೆಯಲ್ಲಿ ತೊಡಗಿ 1942ರಲ್ಲಿ ಒಂದು ವರುಷ ಸೆರೆಮನೆಯನ್ನು ಕಂಡಿದ್ದಾರೆ.

ಇಷ್ಟರ ವರೆಗೆ ಸಾಧಾರಣ ಇಪ್ಪತ್ತಕ್ಕಿಂತಲೂ ಹೆಚ್ಚು ಕಥೆ, ಕಾದಂಬರಿ, ರಾಷ್ಟ್ರೀಯ ಗ್ರಂಥಗಳನ್ನು ಬರೆದಿರುವರಲ್ಲದೆ ಪತ್ರಿಕೆಗಳಿಗೂ ತುಂಬಾ ಆಹಾರವನ್ನೊದಗಿಸುತ್ತಿರುವರು.

ಇವರು ಬರೆದ “ಉಕ್ಕಿನ ಮನುಷ್ಯ” ಮತ್ತು “ಬಾಳಿನ ಗಿಡ” ಗ್ರಂಥಗಳಿಗೆ ಮದ್ರಾಸು ಸಾಹಿತ್ಯ ಸಂಘದಿಂದ ಮತ್ತು ಧಾರವಾಡದ ವಿದ್ಯಾವರ್ಧಕ ಸಂಘದಿಂದ ಪಾರಿತೋಷಕಗಳು ದೊರೆತಿವೆ.

ಈಗ ಆರು ವರುಷಗಳಿಂದ ಹುಬ್ಬಳ್ಳಿಯಲ್ಲಿ ‘ಸರ್ವೋದಯ ಸಾಹಿತ್ಯ ಮಾಲೆ’ಯನ್ನು ನಡೆಸಿಕೊಂಡು ಬರುತ್ತಿದ್ದಾರೆ.